"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಕರ್ನಾಟಕ ವಿಧಾನ ಪರಿಷತ್ತು**

ದಿನಾಂಕ 23ನೇ ಫೆಬ್ರವರಿ 2018
ಶುಕ್ರವಾರ

**ವಿಷಯಾನುಕ್ರಮಣಿಕೆ**

1. **ಪ್ರಕಟಣೆ**

2. **ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

932 – **ಎಸ್.ಡಿ.ಎಂ.ಸಿ. ರಚನೆಯಾಗದೆ ಇರುವ ಶಾಲೆಗಳ ಬಗ್ಗೆ**
– ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್)

1158 – **ಪದವಿ ಪೂರ್ವ ಕಾಲೇಜು ಸ್ಥಾಪಿಸುವ ಬಗ್ಗೆ**
– ಶ್ರೀಮತಿ ಜಯಮ್ಮ

1095 – **ಸ್ನಾತಕೋತ್ತರ ಪದವಿ ಪಡೆದ ಸರ್ಕಾರಿ ಹಾಗೂ ಅನುದಾನಿತ ಪ್ರೌಢಶಾಲಾ ಸಹ ಶಿಕ್ಷಕರುಗಳ ಮುಂಬಡ್ತಿ ವಿಚಾರದಲ್ಲಿ 50:50 (ನೇರ ಬಡ್ತಿ) ಅನುಪಾತದಂತೆ ತಿದ್ದುಪಡಿ ತರುವ ಕುರಿತು**
– ಶ್ರೀ ರಾಮಚಂದ್ರಗೌಡ

1105 – **ಧಾರವಾಡ ನಗರದಿಂದ ವಿಶ್ವವಿದ್ಯಾಲಯಕ್ಕೆ ಹೋಗಲು ರೈಲ್ವೆ ಕ್ರಾಸ್ ಅಡ್ಡವಿದ್ದು ಇದರಿಂದ ಉಂಟಾಗುವ ತೊಂದರೆ ಬಗ್ಗೆ**
– ಕ್ಯಾಪ್ಟನ್ ಗಣೇಶ್ ಕಾರ್ಣಿಕ್**(ವಿರೋಧ ಪಕ್ಷದ ಮುಖ್ಯ ಸಚೇತಕರು)**

1091, 1092 – **BRC/CRC** ಗಳ ಸೇವೆಯನ್ನು ಮುಂದುವರೆಸುವ ಬಗ್ಗೆ
– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
– ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ

1154– **ಸರ್ಕಾರಿ ಪ್ರಾಯೋಜಿತ ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮೂಲಕ ಕಾಮಗಾರಿಗಳನ್ನು** ನಿರ್ವಹಿಸುವ ಬಗ್ಗೆ
– ಶ್ರೀ ಆರ್.ಪ್ರಸನ್ನಕುಮಾರ್

1147– **ವಿಶ್ವವಿದ್ಯಾಲಯಗಳ ಕುರಿತು**
– ಶ್ರೀ ರಮೇಶ್ ಬಾಬು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1086 – **ನೂತನ ಗ್ರಾಮ ಪಂಚಾಯತ್‌ಗಳ ಸ್ವಂತ ಕಟ್ಟಡ ಹಾಗೂ ಸ್ಥಳ ಮಂಜೂರಾತಿ ಬಗ್ಗೆ**

– ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ

1056 – **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಅನುದಾನದ ಬಗ್ಗೆ**

– ಶ್ರೀ ಭಾನುಪ್ರಕಾಶ

1111, 1101, 1102– **ವಾಹನಗಳಿಗೆ ಸ್ಪೀಡ್ ಗವರ್ನರ್ ಅಳವಡಿಕೆ ಬಗ್ಗೆ**

– ಶ್ರೀ ಪುಟ್ಟಣ್ಣ, ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ
ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ

1063 – **ಬೀದರ್ ಜಿಲ್ಲೆಗೆ ಮಂಜೂರಾದ ಶುದ್ಧ ಕುಡಿಯುವ ನೀರಿನ ಘಟಕದ ಬಗ್ಗೆ**

– ಶ್ರೀ ವಿಜಯಸಿಂಗ್

1073 – **ಪದವಿ ಕಾಲೇಜುಗಳಲ್ಲಿರುವ ಖಾಲಿ ಹುದ್ದೆ ಭರ್ತಿ**

– ಶ್ರೀ ಅರುಣ ಶಹಾಪುರ

303 – **ರಾಜ್ಯದ ಖಾಸಗಿ ಅನುದಾನಿತ/ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳ ಮಾನ್ಯತೆ ನವೀಕರಣ ಕುರಿತು**

– ಶ್ರೀ ಎಸ್.ವ್ಹಿ.ಸಂಕನೂರ

**ಆ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

3. **<u>ಸಭಾಪತಿಯವರ ಅನುಮತಿ ಮೇರೆಗೆ ಚರ್ಚಿಸಲ್ಪಟ್ಟ ವಿಷಯಗಳು.</u>**

ಅ) **ಕರ್ನಾಟಕ ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಸ್ಪೆಷಲ್ ಇನ್ಸೆಂಟೀವ್ ಯೋಜನೆ ಅಡಿಯಲ್ಲಿ ಷರತ್ತು ಸಡಿಲಿಸಿ 400 ಅರ್ಜಿದಾರರಿಗೆ ಯಾವುದೇ ಕ್ರಮ ಕೈಗೊಳ್ಳದಿರುವ ಬಗ್ಗೆ**

– ಶ್ರೀ ಪಿ.ಆರ್.ರಮೇಶ್

– ಶ್ರೀ ಎಂ.ಆರ್.ಸೀತಾರಾಂ (ಸಭಾ ನಾಯಕರು)

ಆ) **ದಿನಾಂಕ 8-2-2018ರಂದು ಮಂಡ್ಯ ಜಿಲ್ಲೆಯ ಅಂಗನವಾಡಿ ಕೇಂದ್ರದಲ್ಲಿ ಫೆಂಟಾ ಚುಚ್ಚುಮದ್ದು ಹಾಕಿಸಿದ್ದ ಎರಡು ಮಕ್ಕಳು ಮೃತರಾಗಿರುವ ಬಗ್ಗೆ**

– ಶ್ರೀ ಕೆ.ಟಿ.ಶ್ರೀಕಂಠೇಗೌಡ

– ಶ್ರೀ ಎಂ.ಆರ್.ಸೀತಾರಾಂ (ಸಭಾ ನಾಯಕರು)

ಇ) **ವಿಜಯಪುರ ನಗರ ವ್ಯಾಪ್ತಿಯಲ್ಲಿ ಬರುವ ನವರಸಪುರ ಬಡಾವಣೆ ಪ್ರದೇಶಗಳನ್ನು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರ್ಪಡೆಗೊಳಿಸುವ ಬಗ್ಗೆ**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

- ಶ್ರೀ ಬಸನಗೌಡ ಆರ್.ಪಾಟೀಲ್ ಯತ್ನಾಳ್
- ಶ್ರೀ ಎಂ.ಆರ್.ಸೀತಾರಾಂ (ಸಭಾ ನಾಯಕರು)

ಈ) **ಸರ್ಕಾರಿ ಹುದ್ದೆಗಳಿಗೆ ಗರಿಷ್ಠ ವಯೋಮಿತಿ ಹೆಚ್ಚಳ ಮಾಡುವ ಕುರಿತು**

- ಶ್ರೀ ಕೆ.ಬಿ.ಶಾಣಪ್ಪ
- ಶ್ರೀ ಎಂ.ಆರ್.ಸೀತಾರಾಂ (ಸಭಾ ನಾಯಕರು)

ಉ) **ಪಂಚಾಯತ್ ರಾಜ್ ವ್ಯವಸ್ಥೆಯ ಸಬಲೀಕರಣಕ್ಕಾಗಿ 3-ಎಫ್ ಗಳನ್ನು ವರ್ಗಾಯಿಸುವ ಬಗ್ಗೆ**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ
- ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು)

ಊ) **ಶಿಕ್ಷಕರೊಬ್ಬರು ದಯಾಮರಣ ಕೋರಿ ಅರ್ಜಿ ಸಲ್ಲಿಸಿರುವ ಬಗ್ಗೆ**

- ಶ್ರೀ ಪುಟ್ಟಣ್ಣ
- ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

4. **ಸಭಾಪತಿಯವರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳಿಗೆ ಸಂಬಂಧಪಟ್ಟ ಸಚಿವರುಗಳಿಂದ ಉತ್ತರ**

ಅ) **ತಲಶ್ಶೇರಿ ಮೈಸೂರು ರೈಲು ಮಾರ್ಗದ ಬಗ್ಗೆ-**

- ಶ್ರೀ ಎಂ.ಆರ್.ಸೀತಾರಾಂ (ಸಭಾ ನಾಯಕರು) (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರ ಪರವಾಗಿ)

ಆ) **ವಿಜಯಪುರ ಮಹಾನಗರ ಪಾಲಿಕೆಯ ದೀರ್ಘಾವಧಿ ಲೀಜ್ ಆಸ್ತಿಗಳನ್ನು ಗುತ್ತಿಗೆ ಹಾಕುವಲ್ಲಿ ವಿಳಂಬ ನೀತಿ ಆಗುತ್ತಿರುವ ಬಗ್ಗೆ**

- ಶ್ರೀ ಎಂ.ಆರ್.ಸೀತಾರಾಂ (ಸಭಾ ನಾಯಕರು) (ನಗರಾಭಿವೃದ್ಧಿ ಮತ್ತು ಹಜ್ ಸಚಿವರ ಪರವಾಗಿ)

5. **ಸಭೆಯ ಮುಂದಿಡಲಾದ ಕಾಗದ ಪತ್ರಗಳು**

6. **ವರದಿಗಳನ್ನೊಪ್ಪಿಸುವುದು**

7. **ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

ಅ) ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2018

- ಶ್ರೀ ಟಿ.ಬಿ.ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು)
- ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

– ಶ್ರೀ ವಿ.ಎಸ್.ಉಗ್ರಪ್ಪ
– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
– ಶ್ರೀ ಪುಟ್ಟಣ್ಣ
– ಶ್ರೀ ಪ್ರದೀಪ್ ಶೆಟ್ಟರ್
– ಶ್ರೀ ಶರಣಪ್ಪ ಮಟ್ಟೂರ
– ಶ್ರೀ ರಾಮಚಂದ್ರಗೌಡ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

ಆ) ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2018

– ಶ್ರೀ ಟಿ.ಬಿ.ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು)
– ಶ್ರೀ ರಾಮಚಂದ್ರಗೌಡ
– ಶ್ರೀ ಹೆಚ್.ಎಂ.ರೇವಣ್ಣ (ಸಾರಿಗೆ ಮಂತ್ರಿಗಳು)
– ಶ್ರೀ ವಿ.ಎಸ್.ಉಗ್ರಪ್ಪ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

8. ಸಭೆಯ ಮುಂದಿಡಲಾದ ಕಾಗದ ಪತ್ರಗಳು

9. ವರದಿಗಳನ್ನೊಪ್ಪಿಸುವುದು

10. ಶಾಸನ ರಚನೆ

ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

ಅ) ಅಂತರ್-ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ (ತಿದ್ದುಪಡಿ) ವಿಧೇಯಕ, 2018

– ಶ್ರೀ ಕೆ.ಆರ್.ರಮೇಶ್‌ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)
– ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು)
– ಶ್ರೀ ವಿ.ಎಸ್.ಉಗ್ರಪ್ಪ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

ಆ) ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2018

– ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು)
– ಶ್ರೀ ರಾಮಚಂದ್ರಗೌಡ
– ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
– ಶ್ರೀ ಐವನ್ ಡಿ'ಸೋಜಾ (ಸರ್ಕಾರಿ ಮುಖ್ಯ ಸಚೇತಕರು)
– ಶ್ರೀ ಕೆ.ಆರ್.ರಮೇಶ್‌ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)
– ಶ್ರೀ ವಿ.ಎಸ್.ಉಗ್ರಪ್ಪ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**–ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ**
**–ಶ್ರೀ ಕೋಟ ಶ್ರೀನಿವಾಸ ಪೂಜಾರಿ**
**–ಶ್ರೀಮತಿ ಮೋಟಮ್ಮ**

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಇ) ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2018**

**– ಶ್ರೀ ಎಂ.ಆರ್.ಸೀತಾರಾಂ (ಸಭಾ ನಾಯಕರು) (ಯೋಜನೆ, ಸಾಂಖ್ಯಿಕ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)**
**–ಶ್ರೀ ಗಣೇಶ್ ಕಾರ್ಣಿಕ್ (ವಿರೋಧ ಪಕ್ಷದ ಮುಖ್ಯ ಸಚೇತಕರು)**
**–ಶ್ರೀ ಐವನ್ ಡಿ'ಸೋಜಾ (ಸರ್ಕಾರಿ ಮುಖ್ಯ ಸಚೇತಕರು)**
**–ಶ್ರೀ ರಾಮಚಂದ್ರಗೌಡ**

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**11. ಪ್ರಕಟಣೆಗಳು**

**12. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**13. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**(ಅ) ಕರ್ನಾಟಕ ಧನ ವಿನಿಯೋಗ ವಿಧೇಯಕ, 2018**

–ಶ್ರೀ ಸಿದ್ಧರಾಮಯ್ಯ (ಮುಖ್ಯ ಮಂತ್ರಿಗಳು)
–ಶ್ರೀ ರಾಮಚಂದ್ರಗೌಡ
–ಶ್ರೀ ಪುಟ್ಟಣ್ಣ
–ಶ್ರೀ ಕೆ.ಟಿ.ಶ್ರೀಕಂಠೇಗೌಡ
–ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್)
–ಶ್ರೀ ಕೆ.ಜೆ.ಜಾರ್ಜ್ (ಬೆಂಗಳೂರು ನಗರಾಭಿವೃದ್ಧಿ ಸಚಿವರು)
–ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
–ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**(ಆ) ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, 2018**

–ಶ್ರೀ ಸಿದ್ಧರಾಮಯ್ಯ (ಮುಖ್ಯ ಮಂತ್ರಿಗಳು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**(ಇ) ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಿಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ, 2018**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

-ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿಗಳು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**14. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ, ನಿಯಮ 72ರ ಮತ್ತು ನಿಯಮ 330ರ ಸೂಚನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಮಂಡನೆ**

-ಶ್ರೀ ಎಂ.ಆರ್.ಸೀತಾರಾಂ (ಸಭಾ ನಾಯಕರು)

**15. ಸಭಾಪತಿಯವರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಉತ್ತರಗಳ ಮಂಡನೆ**

**ಅ) ಅನುಚ್ಛೇದ 371(ಜೆ) ಅಡಿಯಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ**

**-ಶ್ರೀ ಎಂ.ಆರ್.ಸೀತಾರಾಂ(ಸಭಾ ನಾಯಕರು, ಮುಖ್ಯಮಂತ್ರಿಗಳ ಪರವಾಗಿ)**

**ಆ) ಖಾಸಗಿ ಸಂಸ್ಥೆಗಳ ಜೊತೆಗೆ ದತ್ತಾಂಶ ಹಂಚಿಕೆ ಮಾಹಿತಿ ತಂತ್ರಜ್ಞಾನ ಕಾಯಿದೆ-2000ದ ಉಲ್ಲಂಘನೆ ಬಗ್ಗೆ.**

**-ಶ್ರೀ ಎಂ.ಆರ್.ಸೀತಾರಾಂ(ಸಭಾ ನಾಯಕರು,ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ)**

**16. ಕಾವೇರಿ ಹಾಗೂ ಮಹದಾಯಿ ನದಿ ನೀರಿನ ಹಂಚಿಕೆಯ ಬಗ್ಗೆ ಕೇಂದ್ರಕ್ಕೆ ಸರ್ವಪಕ್ಷಗಳ ನಿಯೋಗ ತೆಗೆದುಕೊಂಡು ಹೋಗುವ ಬಗ್ಗೆ**

-ಶ್ರೀ ಕೆ.ಟಿ.ಶ್ರೀಕಂಠೇಗೌಡ
-ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿಗಳು)
-ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್)
-ಶ್ರೀ ಟಿ.ಬಿ.ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರ ಮತ್ತು ಸಣ್ಣ ನೀರಾವರಿ ಸಚಿವರು)

**17. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**(ಅ) ಶ್ರೀ ಸತ್ಯ ಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯ ವಿಧೇಯಕ, 2018**
-ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**(ಆ) ಬೆಂಗಳೂರು ಡಾ:ಬಿ.ಆರ್.ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ವಿಧೇಯಕ, 2018**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

–ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**(ಇ) ಅಮಿಟಿ ವಿಶ್ವವಿದ್ಯಾಲಯ ವಿಧೇಯಕ, 2018**

–ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**(ಈ) ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2018**

–ಶ್ರೀ ಟಿ.ಬಿ.ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**(ಉ) ಬನವಾಸಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2018**

–ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**(ಊ) ನಾಡಪ್ರಭು ಕೆಂಪೇಗೌಡ ಪರಂಪರೆ ತಾಣದ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2018**

–ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**(ಋ) ಜಗತ್ ವಿಶ್ವವಿದ್ಯಾಲಯ ವಿಧೇಯಕ, 2018**

–ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**18. ಸಾರಾಂಶ**

****

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

237/23-02-2018/bkp-ak/10-10

**ಕರ್ನಾಟಕ ವಿಧಾನ ಪರಿಷತ್ತು**

**ಶುಕ್ರವಾರ, 23ನೇ ಫೆಬ್ರವರಿ 2018 ರಂದು ಸದನವು**

**ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಬೆಳಗ್ಗೆ 10 ಗಂಟೆ 9 ನಿಮಿಷಕ್ಕೆ**

**ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಹೆಚ್. ಶಂಕರಮೂರ್ತಿ) ಅವರು**

**ಪೀಠದಲ್ಲಿ ಉಪಸ್ಥಿತರಿದ್ದರು**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

1. **ಪ್ರಕಟಣೆ**

**ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರವರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 104 ರ ಮೇರೆಗೆ, ವಿಧಾನ ಸಭೆಯು ದಿನಾಂಕ: 22-02-2018 ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿತು ಎಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿಯನ್ನು ನೀಡಬೇಕೆಂದು ಕೋರಿರುತ್ತಾರೆ.

1. ಬೆಂಗಳೂರು ಡಾ|| ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿಶ್ವವಿದ್ಯಾಲಯ ವಿಧೇಯಕ, 2018
2. ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2018
3. ಶ್ರೀ ಸತ್ಯಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯ ವಿಧೇಯಕ, 2018
4. ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2018
5. ಅಮಿಟಿ ವಿಶ್ವವಿದ್ಯಾಲಯ ವಿಧೇಯಕ, 2018

**(238) 23.02.2018 10.20 ಎಸ್‌ವಿ-ಆರ್‌ಎನ್**

**ಸಭಾಪತಿಯವರು (ಮುಂದು):-**

ಈಗ ಪ್ರಶ್ನೋತ್ತರ ಅವಧಿಯನ್ನು ಪ್ರಾರಂಭ ಮಾಡೋಣ. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಸ್ವಲ್ಪ ಕಾಲಾವಕಾಶವನ್ನು ಕೇಳಿರುವುದರಿಂದ ಅವರಿಗೆ ಸಂಬಂಧಪಟ್ಟಂತಹ

ಪ್ರಶ್ನೆಗಳನ್ನು ನಂತರ ತೆಗೆದುಕೊಳ್ಳಲಾಗುವುದು. ಮೊದಲಿಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಪ್ರಶ್ನೆಯನ್ನು ಮುಗಿಸುತ್ತೇನೆ. ಈಗ ಮಾನ್ಯ ರಾಮಚಂದ್ರಗೌಡರು ತಮ್ಮ ಪ್ರಶ್ನೆಯನ್ನು ಕೇಳಬೇಕು.

**2. <u>ಪ್ರಶ್ನೋತ್ತರಗಳು</u>**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ : 1095**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನೀಡಿರುವ ಈ ಉತ್ತರದಿಂದ ಪದವೀಧರ ಶಿಕ್ಷಕರಿಗೆ ಬಹಳ ನಿರಾಶೆಯಾಗಿದೆ. ಪದವೀಧರ ಕ್ಷೇತ್ರದ ಎಲ್ಲಾ ಶಾಸಕರು ಒಟ್ಟಾಗಿ ಮಹಾತ್ಮ ಗಾಂಧಿ ಪ್ರತಿಮೆಯ ಮುಂದೆ ಕುಳಿತು ಒಂದು ಮುಷ್ಕರವನ್ನು ಮಾಡಿ ಮಾನ್ಯ ಮುಖ್ಯಮಂತ್ರಿಯವರಿಗೆ ಒಂದು ಮನವಿಯನ್ನು ಕೊಟ್ಟಿರುತ್ತಾರೆ. ಶಿಕ್ಷಕರ, ವಿದ್ಯಾರ್ಥಿಗಳ ಮತ್ತು ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳ ಸಮಸ್ಯೆಗಳ ಬಗ್ಗೆ ಆ ಮನವಿಯಲ್ಲಿ ವಿವರಿಸಲಾಗಿತ್ತು. ಆ ಪಟ್ಟಿಯ ಐದನೆಯ ಕ್ರಮ ಸಂಖ್ಯೆಯಲ್ಲಿ ಪ್ರೌಢಶಾಲಾ ಶಿಕ್ಷಕರನ್ನು ಪದವಿಪೂರ್ವ ಕಾಲೇಜಿಗೆ ಉಪನ್ಯಾಸಕರನ್ನಾಗಿ ಬಡ್ತಿ ನೀಡುವುದರ ಬಗ್ಗೆ ಮನವಿಯನ್ನು ಕೊಟ್ಟಿದ್ದೆವು. ಮಾನ್ಯ ಮರಿತಿಬ್ಬೇಗೌಡರು ಇದನ್ನು ಮಂಡನೆ ಮಾಡಿದ್ದರು. ಸ್ನಾತಕೋತ್ತರ ಪದವಿ ಪಡೆದ ಪ್ರೌಢಶಾಲಾ ಶಿಕ್ಷಕರಿಗೆ ಪದವಿಪೂರ್ವ ಕಾಲೇಜು ಉಪನ್ಯಾಸಕರಾಗಿ ಸುಮಾರು ಆರು ವರ್ಷಗಳಿಂದ ಮುಂಬಡ್ತಿ ನೀಡಿರುವುದಿಲ್ಲ. ಈಗ ಇರುವ ಅನುಪಾತ ನೇರ ನೇಮಕಾತಿ-75 : ಬಡ್ತಿ-25 ಅನ್ನು ರದ್ದುಪಡಿಸಿ 50:50ರ ಅನುಪಾತದಲ್ಲಿ ಈಗಿರುವ ನಿಯಮಗಳಿಗೆ ತಿದ್ದುಪಡಿ ತಂದು ಯಥಾವತ್ತಾಗಿ ಹಿಂದಿನ ನಿಯಮದನ್ವಯ ಕೂಡಲೇ ಮುಂಬಡ್ತಿಯನ್ನು ನೀಡಬೇಕೆಂದು ನಾವು ಮನವಿ ಮಾಡಿದ್ದೆವು. ಮಾನ್ಯ ಮುಖ್ಯಮಂತ್ರಿಗಳು ಅಧಿಕಾರಿಗಳ ಜೊತೆಯಲ್ಲಿ ಸಂಬಂಧಪಟ್ಟಂತಹ ಮಂತ್ರಿಗಳ ಜೊತೆಯಲ್ಲಿ ಚರ್ಚಿಸಿ ಮೂರು ತಿಂಗಳೊಳಗಾಗಿ ನಾವು ಮಾಡುತ್ತೇವೆಂದು ಭರವಸೆಯನ್ನು ಕೊಟ್ಟಿದ್ದರು. ಮಾನ್ಯ ಸಚಿವರು ಭರವಸೆಯನ್ನು ಕೊಟ್ಟಿರುವುದಿಲ್ಲವೆಂದು ಹೇಳಿರುತ್ತಾರೆ. ಆದರೆ ಮುಖ್ಯಮಂತ್ರಿಯವರು ಭರವಸೆಯನ್ನು ಕೊಟ್ಟಿದ್ದರು. ಈಗ ಬಡ್ತಿಯನ್ನು ಕೊಡಬೇಕಾದರೆ ಕನಿಷ್ಟ 50% ಇರಬೇಕು ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಅವರು ಈಗಾಗಲೇ ಕೆಲಸಕ್ಕೆ ಸೇರಿಕೊಂಡು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಾಗೂ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಆ 55% ಏಕೆ ಬೇಕು? ಒಂದು ಬಾರಿ ಶಿಕ್ಷಕರನ್ನು ಅರ್ಹರೆಂದು ತೆಗೆದುಕೊಂಡ ಮೇಲೆ ಶೇ.55 ಏಕೆ rider ಇಟ್ಟಿದ್ದಾರೆ? ಇದನ್ನು ಬದಲಾವಣೆ ಮಾಡಿಕೊಳ್ಳಬೇಕೆಂದು ನಾನು ನಿಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಈ 75:25ರ ಅನುಪಾತದ ಸಮಸ್ಯೆಯನ್ನು once for all ಬಗೆಹರಿಸಿಬಿಡಿ. ಯಾರೋ create ಮಾಡಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಿಟ್ಟಿದ್ದಾರೆ. ಯಾರು create ಮಾಡಿದರು, ಬಿಟ್ಟರು ಎಂಬುದು ಪ್ರಶ್ನೆಯಲ್ಲ. 2012ರಿಂದ ಇತ್ತೀಚಿನವರೆವಿಗೂ ಬಡ್ತಿಯನ್ನು ನೀಡಿರುವುದಿಲ್ಲ. Once for all you can solve this problem. ಸರ್ಕಾರಕ್ಕೆ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರೆಲ್ಲಾ ಹೊರಟು ಹೋಗುತ್ತಾರೆಂಬ ಭಯ. ಸರ್ಕಾರ call for ಮಾಡುವಾಗಲೇ middle school ನಲ್ಲಿ ಎಷ್ಟು vacancy ಆಗುತ್ತದೆ, ಪ್ರೌಢಶಾಲೆಯಲ್ಲಿ ಎಷ್ಟು vacancy ಆಗುತ್ತದೆ ಎಂಬುದನ್ನು ಲೆಕ್ಕ ಹಾಕಿ ನೇಮಕಾತಿಗೆ ಕರೆದು ಬಿಟ್ಟರೆ ಈ ಸಮಸ್ಯೆಯನ್ನು ಸಂಪೂರ್ಣವಾಗಿ ಬಗೆ ಹರಿಸಬಹುದು. ಆದುದರಿಂದ ಯಾವ ಪದವೀಧರರು ಎಂ.ಎಸ್.ಸಿ., ಬಿ.ಎಸ್.ಸಿ., ಬಿ.ಎ. ವ್ಯಾಸಂಗ ಮಾಡಿ ಕೆಲಸಕ್ಕೆ ಸೇರಿರುತ್ತಾರೆಯೋ, ಅವರಿಗೆ once for all, 50:50 ಅನುಪಾತದಲ್ಲಿ ಮುಂಬಡ್ತಿಯನ್ನು ನೀಡಬೇಕು. ಸರ್ಕಾರ ಶೇ.55 ಅಂಕಗಳನ್ನು ನಿಗದಿ ಪಡಿಸಿದೆ. ಅದನ್ನು ತೆಗೆಯಬೇಕು. ಅಷ್ಟು ಅಂಕಗಳು ಬೇಕಾಗಿರುವುದಿಲ್ಲ. ಬೇಕಾದರೆ ಶೇ.50 ಮಾಡಲಿ. ಏಕೆಂದರೆ ಅದು ದ್ವಿತೀಯ ದರ್ಜೆಯಾಗುತ್ತದೆ. ಶೇ.55 ಅನ್ನು ಯಾರೋ ಅಧಿಕಾರಿಗಳು ಕ್ಯಾತೆ ತೆಗೆಯುವುದಕ್ಕೋಸ್ಕರ ಮಾಡಿರುತ್ತಾರೆ. ಕೆಲವರನ್ನು avoid ಮಾಡುವುದಕ್ಕಾಗಿ ಮಾಡಿರುತ್ತಾರೆ. ಈ ರೀತಿಯ ಕ್ಯಾತೆಗಳನ್ನು ತೆಗೆಯಬಾರದು. ಮಾನ್ಯ ಸಚಿವರು ಬಹಳ straight ಆಗಿ ಕೆಲಸ ಮಾಡುತ್ತಿದ್ದಾರೆ. ನನಗೆ ನಂಬಿಕೆ ಇದೆ. ಬಹಳ ಜನ ಪದವೀಧರರು 20-30 ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದಿದ್ದಾರೆ. ಅವರೆಲ್ಲರ ಪರವಾಗಿ ಮಾನ್ಯ ಸಚಿವರನ್ನು ವಿನಂತಿಸುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ...

**ಸಭಾಪತಿಯವರು**:- ಮಾನ್ಯ ಶ್ರೀಕಂಠೇಗೌಡರೇ, ಮೊದಲು ಮಾನ್ಯ ಸಚಿವರು ಉತ್ತರವನ್ನು ಕೊಡಲಿ. ಅವರು ಉತ್ತರವನ್ನು ಕೊಡುವುದಕ್ಕೆ ಮುಂಚೆಯೇ ನೀವು ಮಾತನಾಡಲು ಎದ್ದು ನಿಂತರೆ ನಾನು ಪ್ರಶ್ನೋತ್ತರ ಅವಧಿಯನ್ನು ನಡೆಸಲು ಸಾಧ್ಯವಾಗುವುದಿಲ್ಲ.

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದಂತಹ ಶ್ರೀ ರಾಮಚಂದ್ರಗೌಡರು ಎತ್ತಿರುವ ಈ ಪ್ರಶ್ನೆಯಲ್ಲಿ ಕೇಳಿರುವ ಅಂಶಗಳ ಅನುಷ್ಠಾನದ ಕುರಿತು ಸರ್ಕಾರದ ಹಂತದಲ್ಲಿ ಬೇಗನೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿರುವುದು ಸರಿಯಷ್ಟೆ. ಹಿಂದಿನ ಸರ್ಕಾರ 2012ರಲ್ಲಿ ಆದೇಶವನ್ನು ಮಾಡಿ ಬಡ್ತಿ ನೀಡುವುದನ್ನು ನಿಷೇಧ ಮಾಡಲಾಗಿದೆ. ಇದಕ್ಕೆ ನಾನು ಮತ್ತೊಮ್ಮೆ ಚಾಲನೆಯನ್ನು ನೀಡಿರುತ್ತೇನೆ. ಅದರ ಜೊತೆಗೆ ನಿಯಮಾವಳಿಗಳನ್ನು ಸಡಿಲಗೊಳಿಸಿ ಎಂಬುದು ಬಹುಶಃ ಕೇಳದೆ ಇರುವಂತಹ ವಿಚಾರವಾಗುತ್ತದೆ. ಕೇಳಲೂ ಬಾರದು. ಏಕೆಂದರೆ ಪದವಿ ಪೂರ್ವ ಉಪನ್ಯಾಸಕರನ್ನು ನೇಮಕಾತಿ ಮಾಡಿಕೊಳ್ಳುವಂತಹ ಸಂದರ್ಭದಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಶೇ.55 ಕನಿಷ್ಟ ಅಂಕವನ್ನು ಕೇಳಲಾಗಿದೆ. ಅದರಲ್ಲಿ ಈ ವಿಚಾರ ಯಾರಿಗೂ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೊಂದರೆಯಾಗುವುದಿಲ್ಲ. ಬಂದಿರುವವರೆಲ್ಲಾ ಶೇ.55 ಅಂಕಗಳನ್ನು ಪಡೆದಿದ್ದಾರೆ. ಎರಡನೆಯದಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಶೇ.55 ಇದ್ದುದನ್ನು ಶೇ.50ಕ್ಕೆ ಇಳಿಸಲಾಗಿದೆ. ಮಿಕ್ಕಿದ್ದೆಲ್ಲವನ್ನೂ ಶೇ.55 ರಂತೆಯೇ ಉಳಿಸಿಕೊಳ್ಳಲಾಗಿದೆ. 2012ರಲ್ಲಿ ಯಾವ ಕಾರಣಕ್ಕಾಗಿ ನಿಷೇಧಿಸಲಾಯಿತು ಎಂಬುದನ್ನು ಹೇಳಿದರೆ ನಮ್ಮ cadre strength ಕಳುಹಿಸಿದಂತಹ ಸಂದರ್ಭದಲ್ಲಿ ಪಾಠ ಮಾಡುವುದು ಕಷ್ಟಸಾಧ್ಯ ಎಂಬುದನ್ನು ಪರಿಗಣಿಸಿ ಮಾಡಿರಬಹುದು. ಆದರೆ ನಾವು ಈಗ ಅದಕ್ಕೆ ಮತ್ತೊಮ್ಮೆ ಚಾಲನೆಯನ್ನು ಕೊಟ್ಟಿದ್ದೇವೆ. ಜೊತೆಯಲ್ಲಿ ಇಂದು ಇರುವಂತಹ ಪರಿಸ್ಥಿತಿಗೆ 52 ಹುದ್ದೆಗಳನ್ನು ಹೆಚ್ಚುವರಿಯಾಗಿ ಹಿಂದೆಯೇ ಕೊಡಲಾಗಿದೆ. ನಾನು ಮತ್ತೊಮ್ಮೆ ಇದನ್ನು ಪರಿಶೀಲನೆ ಮಾಡುತ್ತಿದ್ದೇನೆ.

1998ರಲ್ಲಿ 50:50 ಅನುಪಾತದಲ್ಲಿ ಮಾಡಲಾಗುತ್ತಿತ್ತು. 50% ನೇರ ನೇಮಕಾತಿಯಿಂದ ಹಾಗೂ 50% ಬಡ್ತಿಯಿಂದ. ತದನಂತರ ನಮ್ಮ cadre strength ನಲ್ಲಿ ಇಷ್ಟೆಲ್ಲಾ pumpin ಮಾಡಿದ ಕಾರಣ ಅಲ್ಲಿ accomodate ಮಾಡುವುದು ಕಷ್ಟವಾಯಿತು. ಈ ಕಾರಣಕ್ಕಾಗಿ 2009ರಲ್ಲಿ ಆದೇಶ ಸಂಖ್ಯೆ ಇಡಿ 35 ಡಿಜಿಒ 2009 ರ ಅನ್ವಯ 75:25 ಮಾಡಲಾಯಿತು. ಮಾನ್ಯ ಮುಖ್ಯಮಂತ್ರಿಯವರ ಸಮ್ಮುಖದಲ್ಲಿ ನಡೆದಂತಹ ಸಭೆಯಲ್ಲಿ ಕೂಡ ಪರಿಶೀಲಿಸಲಾಗುವುದು ಎಂದು ಮಾತ್ರ ಬರೆದಿದ್ದು, ಮೂರು ತಿಂಗಳು ಎರಡು ತಿಂಗಳು ಎಂದು ಬರೆದಿಲ್ಲ. ಈ ಕ್ರಮ ಈಗಾಗಲೇ ನನ್ನ ಇಲಾಖೆಯಲ್ಲಿ ಪರಿಶೀಲನೆಯಲ್ಲಿದೆ. ಅದು ತಿದ್ದುಪಡಿಯಾಗದೆ ನಾನು ಇಲ್ಲಿ ಉತ್ತರ ಕೊಡುವುದಕ್ಕೆ ಬರುವುದಿಲ್ಲ. ಮಾನ್ಯ ಸದಸ್ಯರು ಹೇಳಿರುವುದನ್ನು ಮತ್ತೊಮ್ಮೆ ಪರಿಶೀಲಿಸಲಾಗುವುದು. 50:50 ಅನುಪಾತ ಮಾಡಿದರೆ ಅನುಕೂಲವಾಗುತ್ತದೆಯೇ ಎಂಬುದನ್ನೂ ಸಹ ಪರಿಶೀಲಿಸಲಾಗುವುದು. ಕೇವಲ ಇಲಾಖೆಯಲ್ಲಿರುವ ಬೋಧಕ ವರ್ಗದವರಿಗೆ ಅನುಕೂಲ ಮಾಡುವುದಷ್ಟೇ ಅಲ್ಲ, ವಿದ್ಯಾರ್ಥಿಗಳಿಗೆ ಹಾಗೂ ಇಲಾಖೆಗೆ ಅನುಕೂಲವಾಗಬೇಕು. ಅದನ್ನು ಪರಿಶೀಲಿಸಿ ನಾನು ಕ್ರಮ ಕೈಗೊಳ್ಳುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಬಡ್ತಿಗೆ ಮುಖ್ಯ ಸಮಸ್ಯೆಯೇನೆಂದರೆ...

**ಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡರೆ, ಮಾನ್ಯ ಸಚಿವರು I am having an open mind, ನಾನು ಮತ್ತೊಮ್ಮೆ ಅದನ್ನು ಪರಿಶೀಲಿಸುತ್ತೇನೆ. ಏನು ಮಾಡಲು ಸಾಧ್ಯವೋ ಅದನ್ನು ಮಾಡುತ್ತೇನೆಂದು ಹೇಳುತ್ತಿದ್ದಾರಲ್ಲವೆ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಒಂದು technical clarification ಬೇಕು. ನೇರ ನೇಮಕಾತಿಗೆ ಶೇ.50 ಇರುವುದು ಸರಿಯಷ್ಟೆ. ಆದರೆ ಬಡ್ತಿ ನೀಡಲು ಪರೀಕ್ಷೆ ಏಕೆ? ಬೇರೆ ಯಾವ ಇಲಾಖೆಯಲ್ಲಿ ಈ ರೀತಿ ಬಡ್ತಿಗಾಗಿ ಪರೀಕ್ಷೆ ನಡೆಸಲಾಗುತ್ತಿದೆ? ಬಡ್ತಿ ಕೊಡುವವರಿಗೆ ದ್ವಿತೀಯ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದರ್ಜೆ ಎಂದು ಇತ್ತು. ಅದಷ್ಟೇ ಸಾಕಾಗಿತ್ತು. ಸರ್ಕಾರ ನೇರ ನೇಮಕಾತಿಗೂ, ಬಡ್ತಿಗೂ ಒಂದೇ ನಿಯಮವನ್ನು ಮಾಡುವುದಾದರೆ ಬಡ್ತಿಯ sanctity ಎಲ್ಲಿ ಉಳಿಯುತ್ತದೆ?

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ನಾನು ಮಸೂದೆಯನ್ನು ತಂದಾಗ ಇದೇ ಸದನದ ಎಲ್ಲಾ ಗೌರವಾನ್ವಿತ ಸದಸ್ಯರು ಒಪ್ಪಿಗೆಯನ್ನು ನೀಡಿರುತ್ತಾರೆ. ಅದನ್ನು ಒಂದು ಕಾನೂನಿನ ರೂಪದಲ್ಲಿ ತರಲಾಗಿದೆ. ಬೋಧಕ ವರ್ಗದವರು ಬೋಧನೆ ಮಾಡುವ ವಿಷಯವನ್ನು ಮತ್ತೊಮ್ಮೆ ಬರೆಯಲು ಸಾಧ್ಯವಿಲ್ಲ ಎಂದು ಹೇಳಬಾರದು. ತಮಗೆ ತಿಳಿದಿರುವಂತೆ ಒಂಬತ್ತನೆಯ ತರಗತಿಯಿಂದ ದ್ವಿತೀಯ ಪಿ.ಯು.ಸಿ.ಯವರೆವಿಗೂ NCERT (National Council of Educational Research and Training) ಪುಸ್ತಕವನ್ನು ತರಲಾಗಿದೆ. ಬದಲಾವಣೆ ಮಾಡುವ ಸಂದರ್ಭದಲ್ಲಿ ವಿದ್ಯಾರ್ಥಿಗಳಲ್ಲಿ ಗ್ರಹಿಸಿಕೊಳ್ಳುವ ಶಕ್ತಿಯಿದ್ದರೂ ಸಹ ಬೋಧನೆ ಮಾಡುವ ಶಕ್ತಿ ಬೋಧಕರಲ್ಲಿರಬೇಕು. ಮಾನ್ಯ ಶ್ರೀಕಂಠೇಗೌಡರು ಇದನ್ನು ಒಂದು ಒಳ್ಳೆಯ ಮನಸ್ಸಿನಿಂದ ತೆಗೆದುಕೊಳ್ಳಬೇಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು experience ಅನ್ನು ಫಿಕ್ಸ್ ಮಾಡಲಿ. ಶೇ.55 ಅಂಕಗಳು ಮತ್ತು ಪರೀಕ್ಷೆ ಇವೆರಡನ್ನೂ ತೆಗೆಯಬೇಕು. Second class is enough.

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, I am a person always with an open mind. ನಾವು ಇಲಾಖೆಯನ್ನು ಸುಧಾರಣೆ ಮಾಡುವ ನಿಟ್ಟಿನಲ್ಲಿ ಮಾನ್ಯ ಸದಸ್ಯರೆಲ್ಲರ ಸಹಕಾರ ಬೇಕಾಗುತ್ತದೆ. ಈ ವಿಷಯ ಈಗಾಗಲೇ ಪರಿಶೀಲನೆಯಲ್ಲಿದೆ. ಇದಕ್ಕೆ ಅಂತಿಮ ರೂಪ ಕೊಡುವಂತಹ ಸಮಯದಲ್ಲಿ ಮಾನ್ಯ ಸದಸ್ಯರ ಸಲಹೆಯನ್ನು ಪಡೆದುಕೊಳ್ಳುತ್ತೇನೆ.

(239) 23.02.2018 10.30 ಕೆಜಿ.ಆರ್‌ಎನ್

**ಪ್ರಶ್ನೆ ಸಂಖ್ಯೆ: 598**

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಘೋಟ್ನೇಕರ್ ಶ್ರೀಕಾಂತ್ ಲಕ್ಷ್ಮಣರವರು ಸದಸನದಲ್ಲಿ ಹಾಜರಿರಲಿಲ್ಲ)

ಪ್ರಶ್ನೆ ಸಂಖ್ಯೆ: 932

(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್)**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಅವರು ವಿಶೇಷವಾಗಿ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಯ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಲ್ಲಾ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಶಾಲೆಗಳಲ್ಲಿ ಎಸ್.ಡಿ.ಎಂ.ಸಿ ಸಮಿತಿಗಳನ್ನು ರಚನೆ ಮಾಡಿದ್ದೇವೆಂದು ಹೇಳಿದ್ದಾರೆ. ಆ ಶಾಲೆಯ ಪಕ್ಕದಲ್ಲಿರುವ ಹೊನ್ನೂಟಗಿ ಗ್ರಾಮ ನನ್ನ ಊರು. ಆ ಗ್ರಾಮದಲ್ಲಿ ಸುಮಾರು 8 ಸಾವಿರ ಜನಸಂಖ್ಯೆ ಇದೆ. ಆ ಊರಿನ ಶಾಲೆ ಶತಮಾನತ್ಸೋವವನ್ನು ಕಂಡಂತಹ ಶಾಲೆ, ಬಹಳ ವಿಜೃಂಭಣೆಯಿಂದ ಶತಮಾನತ್ಸೋವವನ್ನು ಸಹ ಆಚರಣೆ ಮಾಡಿದ್ದಾರೆ. ಆದರೆ, ಮಾನ್ಯ ಸಚಿವರು ಎಲ್ಲಾ ಕಡೆಯು ಎಸ್.ಡಿ.ಎಂ.ಸಿ ಸಮಿತಿಗಳನ್ನು ಮಾಡಿದ್ದೇವೆಂದು ಹೇಳಿದ್ದಾರೆ. ನನ್ನ ಮಾಹಿತಿ ಪ್ರಕಾರ, ಈ ಶಾಲೆಗೆ ಸುಮಾರು ಕಳೆದ 8 ವರ್ಷಗಳಿಂದ ಎಸ್.ಡಿ.ಎಂ.ಸಿ ಸಮಿತಿ ರಚನೆಯಾಗಿಲ್ಲ. ಆ ಊರಿನ ಹಿರಿಯ ಮುಖಂಡರು ಮತ್ತು ಗ್ರಾಮ ಪಂಚಾಯಿತಿ ಅಧ್ಯಕ್ಷರು ಆ ಶಾಲೆಯ ಮುಖ್ಯ ಗುರುಗಳಿಗೆ ಆ ಶಾಲೆ ಸರಿಯಾಗಿ ನಡೆಯುತ್ತಿಲ್ಲ ಮತ್ತು ಶಾಲೆಯ ಶಿಕ್ಷಕರು ಸರಿಯಾಗಿ ಬರುತ್ತಿಲ್ಲವೆಂದು ಗಂಭೀರವಾದಂತಹ ಆರೋಪವನ್ನು ಮಾಡಿದ್ದಾರೆ. ಈ ರೀತಿ complaint ಮಾಡಿದ್ದರೂ ಸಹ, ಆ ಶಾಲೆಯ ಮುಖ್ಯ ಗುರುಗಳು ಯಾರಿಗೂ ಸಹ ಕ್ಯಾರೆ ಅನ್ನುತ್ತಿಲ್ಲ. ಅಂದರೆ ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರ ಎಲ್ಲಾ ಶಾಲೆಗಳಲ್ಲಿ ಎಸ್.ಡಿ.ಎಂ.ಸಿ ಸಮಿತಿಗಳನ್ನು ಮಾಡಿದ್ದಾರೆ ಎನ್ನುವುದು ಸತ್ಯವೇ, ನಾನು ಆ ಶಾಲೆಯ ಪಕ್ಕದ ಊರಿನವನು ಆಗಿರುವುದರಿಂದ ಹೇಳುತ್ತಿದ್ದೇನೆ. ಈ ರೀತಿ ಕೆಲವೊಂದು ಕಾಗದದಲ್ಲಿಯೇ ಎಸ್.ಡಿ.ಎಂ.ಸಿ. ಸಮಿತಿಯನ್ನು ಮಾಡಿರುವುದು ಅಲ್ಲಿನ ಪಾಲಕರಿಗೂ ಸಹ ಅವರು ಎಸ್.ಡಿ.ಎಂ.ಸಿ ಸಮಿತಿಯಲ್ಲಿ ಇದ್ದೇವೆ ಎಂಬುದು ಗೊತ್ತಿರುವುದಿಲ್ಲ. ಹಾಗಾಗಿ ಈ ರೀತಿ ಆಗಿದೆ ಎನ್ನುವಂಥದ್ದನ್ನು ಮಾನ್ಯ ಸಚಿವರು ತನಿಖೆಯನ್ನು ಮಾಡುತ್ತಾರೆಯೇ ಎಂದು ತಮ್ಮ ಮೂಖಾಂತರ ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ಸರ್ಕಾರಿ ಶಾಲೆಗಳನ್ನು ಸಬಲೀಕರಣ ಮಾಡುವಂಥದ್ದಕ್ಕೆ ಶಾಲೆಯ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು ಮಾನ್ಯ ಸದಸ್ಯರು ಕೇಳಿರುವಂತಹ ರೀತಿಯಲ್ಲಿ ನನ್ನ ಮಾಹಿತಿ ಪ್ರಕಾರ ಎಲ್ಲಾ ಶಾಲೆಗಳಲ್ಲಿ ಎಸ್.ಡಿ.ಎಂ.ಸಿ ಸಮಿತಿ ಇದೆ ಎಂದು ಹೇಳಿದ್ದೇನೆ. ಪೋಷಕ ವರ್ಗದಿಂದ ಅಲ್ಲಿ ಆಯ್ಕೆ ಆಗಬೇಕಾಗಿರುವಂತಹ ಸಮಿತಿಗಳು. ಆ ಪೋಷಕ ವರ್ಗದಿಂದ ಆಯ್ಕೆ ಆಗಿರುವಂತಹ ಸಮಿತಿ ಅದರ ಅವಧಿಯನ್ನು ಮೂರು ವರ್ಷಗಳಿಗೆ ಕೊಟ್ಟಿದ್ದೇವೆ. ಎಸ್.ಡಿ.ಎಂ.ಸಿ. ಸಮಿತಿಯ ಜೊತೆ ಜೊತೆಯಾಗಿ ಹಳೆ ವಿದ್ಯಾರ್ಥಿಗಳ ಸಂಘಗಳನ್ನು ಸಹ ರಚನೆ ಮಾಡುವಂಥದ್ದಕ್ಕೆ ನಾವು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಮಾನ್ಯ ಸದಸ್ಯರು ಪ್ರತ್ಯೇಕವಾಗಿ ಆ ಶಾಲೆ ವಿಚಾರದಲ್ಲಿ ಏನು ಹೇಳಿದ್ದಾರೆ ನನಗೆ ಕೊಟ್ಟಿರುವಂತಹ ಮಾಹಿತಿ ಇಲಾಖೆಯಿಂದ ಸುಳ್ಳು ಆಗಿದ್ದರೆ, ಮಾನ್ಯ ಸದಸ್ಯರನ್ನು ಹೇಳಿರುವುದನ್ನು ನಾನು ಪರಿಶೀಲಿಸಿ ಖಂಡಿತವಾಗಿ ಕ್ರಮಜರುಗಿಸುತ್ತೇನೆ. ಎಲ್ಲೆಲ್ಲಿ ಎಸ್.ಡಿ.ಎಂ.ಸಿ. ಸಮಿತಿಗಳು ಇಲ್ಲ ಅಂತಹ ಕಡೆಗಳಲ್ಲಿ ಎಸ್.ಡಿ.ಎಂ.ಸಿ. ಸಮಿತಿಗಳನ್ನು ರಚನೆ ಮಾಡುವುದಕ್ಕೆ ಆದೇಶ ಮಾಡುತ್ತೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್)**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಈ ರೀತಿ ಕೆಲವೊಂದು ಶಾಲೆಗಳಲ್ಲಿ ಎಸ್.ಡಿ.ಎಂ.ಸಿ ಸಮಿತಿಗಳನ್ನು ರಚನೆ ಮಾಡದೆ ಕೇವಲ ಮುಖ್ಯ ಗುರುಗಳೇ ಅವರಿಗೆ ಬೇಕಾದಂತಹ ಮತ್ತು ಅವರ ಹಿತಾಸಕ್ತಿಯನ್ನು ಕಾಪಾಡುವಂತಹವರನ್ನು ಸೇರಿಸಿಕೊಂಡು ಎಸ್.ಡಿ.ಎಂ.ಸಿಯನ್ನು ರಚನೆ ಮಾಡಿಕೊಂಡು ಸಭೆಯನ್ನು ಕರೆಯುವುದಿಲ್ಲ ಮತ್ತು ಅದರ ಅಭಿವೃದ್ಧಿಯ ಬಗ್ಗೆ ಸಹ ಎಸ್.ಡಿ.ಎಂ.ಸಿ ಸದಸ್ಯರ ಸಹಕಾರವನ್ನು ತೆಗೆದುಕೊಳ್ಳದೇ ಇರುವುದರಿಂದ ಅನೇಕ ಕಡೆಗಳಲ್ಲಿ ಶಾಲೆಗಳ ಶಿಕ್ಷಣ ಗುಣಮಟ್ಟವಾಗಲಿ ಅಥವಾ ಶಾಲೆಗಳ ಮೂಲಸೌಲಭ್ಯಗಳಾದ ಶೌಚಾಲಯ ಮತ್ತು ಪೀಠೋಪಕರಣಗಳನ್ನು ಎಲ್ಲಾ ಜನರ ವಿಶ್ವಾಸವನ್ನು ತೆಗೆದುಕೊಂಡು ಮಾಡಿದಾಗ ಮಾತ್ರ ಸಾಧ್ಯವಾಗುತ್ತದೆ. ಇಂತಹ ಶಾಲೆಗಳು ಎಲ್ಲೆಲ್ಲಿವೆ ಎಂಬುದನ್ನು ಮಾನ್ಯ ಸಚಿವರು ಪರಿಶೀಲಿಸಿ ಇಂತಹ ಶಿಕ್ಷಕರ ವಿರುದ್ಧ ಕ್ರಮ ತೆಗೆದುಕೊಂಡರೆ ಮತ್ತು ಸಾರ್ವಜನಿಕವಾಗಿ ಇಂತಹವರನ್ನು ಆಯ್ಕೆ ಮಾಡಿದ್ದೇವೆಂದು ಗ್ರಾಮ ಪಂಚಾಯಿತಿಯ ಮಟ್ಟದಲ್ಲಿ ಪ್ರಕಟಿಸಿದರೆ ಅದು ಅಲ್ಲಿನ ಜನರಿಗೆ ತಿಳಿಯುತ್ತದೆ ಎಂಬ ಮಾತನ್ನು ಮಾನ್ಯ ಸಚಿವರಲ್ಲಿ ಹೇಳಬಯಸುತ್ತೇನೆ.

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ಎಸ್.ಡಿ.ಎಂ.ಸಿ ಸಮಿತಿಗಳನ್ನು ಇನ್ನಷ್ಟು ಚುರುಕುಗೊಳಿಸುವುದಕ್ಕೆ ನಾವು ಕಳೆದ ವರ್ಷದಿಂದ ವಿಭಾಗೀಯ ಮಟ್ಟದಲ್ಲಿ ಒಂದೊಂದು ಎಸ್.ಡಿ.ಎಂ.ಸಿ ಗಳಿಗೆ ಪ್ರಶಸ್ತಿಗಳನ್ನು ಕೊಟ್ಟಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರು ಈ ವರ್ಷದ ಆಯ್ಯವಯ್ಯದಲ್ಲಿ ಪ್ರತಿ ತಾಲ್ಲೂಕಿಗೆ ಒಂದು ಉತ್ತಮ ಎಸ್.ಡಿ.ಎಂ.ಸಿ ಪ್ರಶಸ್ತಿಯನ್ನು ಕೊಡಬೇಕೆಂದು ಘೋಷಣೆ ಮಾಡಿದ್ದಾರೆ. ಈಗ ನಾವು ಹೆಚ್ಚಾಗಿ ಎಸ್.ಡಿ.ಎಂ.ಸಿ ಗಳ ಜೊತೆಗೆ ಬಾಂದವ್ಯವನ್ನು ಮೂಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇದರ ಜೊತೆಗೆ ಎಲ್ಲಾ ಶಾಲೆಗಳಲ್ಲಿ ಮುಖ್ಯ ಗುರುಗಳ ಜೊತೆಗೆ ಅಧ್ಯಕ್ಷರ ಜಂಟಿ ಖಾತೆಯನ್ನು ಮಾಡಿರುವುದರಿಂದ ಎಲ್ಲಿಯೂ ಖಾಲಿ ಬಿಟ್ಟುಕೊಂಡಿರುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸದಸ್ಯರು ಹೇಳಿರುವುದನ್ನು ನಾನು ಪ್ರತ್ಯೇಕವಾಗಿ ಪರಿಶೀಲಿಸುತ್ತೇನೆ ಮತ್ತು ಇದಕ್ಕೆ ಮಾನ್ಯ ಸದಸ್ಯರ ಸಲಹೆಗಳನ್ನು ಸಹ ತೆಗೆದುಕೊಳ್ಳುತ್ತೇನೆ. ಮಾನ್ಯ ಸದಸ್ಯರು ಹೇಳಿರುವಂತಹ ಶಾಲೆಯಲ್ಲಿ ಎಸ್.ಡಿ.ಎಂ.ಸಿ ಸಮಿತಿ ಇದೆಯೋ ಅಥವಾ ಇಲ್ಲವೋ ಎಂಬುದನ್ನು ಅಧಿಕಾರಿಗಳಿಂದ ವರದಿ ತರಿಸಿಕೊಂಡು ಕೊಡುತ್ತೇನೆ.

**ಸಭಾಪತಿಯವರು**:- ಧನ್ಯವಾದಗಳು. ಈಗ ಒಂದು ಪ್ರಕಟಣೆ ಇದೆ.

**ಪ್ರಕಟಣೆ**

ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2018 ನೇ ಸಾಲಿನ ಕರ್ನಾಟಕ ಭೂಕಂದಾಯ ತಿದ್ದುಪಡಿ ವಿಧೇಯಕವನ್ನು ಕರ್ನಾಟಕ ವಿಧಾನಸಭೆಯ ಕಾರ್ಯ ವಿಧಾನ ಹಾಗೂ ನಡೆವಳಿಕೆಯ ನಿಯಮ 104 ಮೇರೆಗೆ ವಿಧಾನ ಸಭೆಯು ದಿನಾಂಕ 22.02.2018 ರಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಿದ್ದುಪಡಿಗಳೊಂದಿಗೆ ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೇಳರುತ್ತಾರೆ.

ಪ್ರಶ್ನೆ ಸಂಖ್ಯೆ: 1158

(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀಮತಿ ಜಯಮ್ಮ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. 2018-2019ನೇ ಸಾಲಿನಲ್ಲಿ ರಾಜ್ಯಾದ್ಯಂತ ಎಷ್ಟು ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ ಎಂಬುದಾಗಿ ಪ್ರಶ್ನೆಯನ್ನು ಕೇಳದ್ದೆ. ಅದಕ್ಕೆ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಸದ್ಯಕ್ಕೆ ಯಾವುದೇ ಪ್ರಸ್ತಾವ ಇರುವುದಿಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ನಾನು ನಮ್ಮ ಮಾನ್ಯ ಸಚಿವರು ಕಾಲೇಜುಗಳನ್ನು ಪ್ರಾರಂಭ ಮಾಡುತ್ತಾರೆಂದು ಬಹಳ ಆಸೆ ಇಟ್ಟುಕೊಂಡಿದ್ದೆ.

**ಸಭಾಪತಿಯವರು**:- ಮಾನ್ಯ ಸದಸ್ಯರಾದ ಶ್ರೀಮತಿ ಜಯಮ್ಮನವರು ಕೇಳುವುದೇ ಬಹಳ ಅಪರೂಪಕ್ಕೆ. ಮಾನ್ಯ ಸಚಿವರು ಅದು ಇಲ್ಲವೆಂದು ಹೇಳಬಿಟ್ಟಿದ್ದಾರೆಂದು ಅವರಿಗೆ ಬಹಳ ಬೇಜಾರಾಗುತ್ತಿದೆ.

**ಶ್ರೀಮತಿ ಜಯಮ್ಮ**:- ಮಾನ್ಯ ಸಭಾಪತಿಯವರೇ, ನನಗೆ ಇದರಿಂದ ಬಹಳ ಬೇಜಾರಾಗುತ್ತಿದೆ. ಏಕೆಂದರೆ, ಅದನ್ನು ಮಾಡಿದ್ದರೆ ಬಹಳ ಚೆನ್ನಾಗಿ ಇತ್ತು. ಗ್ರಾಮೀಣ ಭಾಗಗಳಲ್ಲಿ 18 ರಿಂದ 20 ಕಿಲೋ ಮೀಟರ್‌ಗಳ ದೂರದಲ್ಲಿರುವ ಕಾಲೇಜಿಗೆ ಹೋಗುವಂತಹ ಪರಿಸ್ಥಿತಿ ಇದೆ. ಹಾಗಾಗಿ, ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ವರ್ಷ ನಮ್ಮ ಭಾಗದ ಕಡೆ ತಾಂಡಕ್ಕೆ ಒಂದರಂತೆ ಎರಡು ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭ ಮಾಡುತ್ತಾರೆಂದು ನನಗೆ ಬಹಳ ಆಸೆ ಇತ್ತು. ಆದರೆ, ಆಸೆ ಇವತ್ತು ಬಹಳ ನಿರೀಕ್ಷೆಯಾಗಿದೆ.

**ಸಭಾಪತಿಯವರು**:- ಮಾನ್ಯ ಸದಸ್ಯರು ಉತ್ತರ ಕೊಡುತ್ತಾರೆ, ಅದನ್ನು ಕೇಳ.

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ಈಗಾಗಲೇ ನಮ್ಮ ಇಲಾಖೆಯಲ್ಲಿ ಶೈಕ್ಷಣಿಕ ಶಿಕ್ಷಣದ ಗುಣಮಟ್ಟಕ್ಕೆ ಮತ್ತು ಮುಂದುವರಿದ ಶಿಕ್ಷಣಕ್ಕೆ ಹೆಚ್ಚಿನ ಗಮನವನ್ನು ಕೊಡುತ್ತಿದ್ದೇವೆ. ನಾವು ಈಗಾಗಲೇ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ನಿವೇಶನ ಎಷ್ಟು ಇರಬೇಕು ಮತ್ತು ಆ ಶಾಲೆಗಳ ಮೂಲ ಸೌಕರ್ಯಗಳು ಯಾವ ರೀತಿ ಇರಬೇಕು ಎಂಬುದನ್ನು ಪ್ರಕಟಣೆ ಮಾಡಿದ್ದೇವೆ. ನಾವು ಇದುವರೆಗೂ ಅರ್ಜಿಯನ್ನು ಕರೆಯಬೇಕು ಎನ್ನುವಂತಹ ಉದ್ದೇಶವನ್ನು ಇಟ್ಟುಕೊಂಡಿರುವುದಿಲ್ಲ. ಅದರೆ, ರಾಜ್ಯಸರ್ಕಾರ ಕಳೆದ ವರ್ಷ 176 ಕ್ರೂಢೀಕೃತ ಶಾಲೆಗಳನ್ನು 01 ರಿಂದ 12ನೇ ತರಗತಿಗಳನ್ನು ಮಾಡುವುದಕ್ಕೆ ಘೋಷಣೆ ಮಾಡಿದ್ದೇವೆ. ಆ ಬಗ್ಗೆ ಸಿದ್ಧತೆಯೂ ಸಹ ಆಗಿರುತ್ತದೆ. ಈ ವರ್ಷ ಹೋಬಳಿಗೊಂದು ಕರ್ನಾಟಕ ಪಬ್ಲಿಕ್ ಶಾಲೆಯನ್ನು ಪ್ರಾರಂಭ ಮಾಡಬೇಕೆಂದು ಘೋಷಣೆ ಮಾಡಿದ್ದೇವೆ. ಇಡೀ ರಾಜ್ಯದಲ್ಲಿ 775 ಹೋಬಳಿಗಳ ಮಟ್ಟದಲ್ಲಿ 27 ಹೋಬಳಿಗಳಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜುಗಳು ಇಲ್ಲ. ನಾವು ಈಗಾಗಲೇ ಅದನ್ನು

ಪಟ್ಟಿ ಮಾಡಿಕೊಂಡಿದ್ದೇವೆ. ಮಾನ್ಯ ಸದಸ್ಯರಾದ ಶ್ರೀಮತಿ ಜಯಮ್ಮನವರು ಹೇಳಿರುವಂತಹ ಪ್ರಶ್ನೆಯನ್ನು ನಾನು ಪರಿಶೀಲಿಸುತ್ತೇನೆ. ಮಾನ್ಯ ಸದಸ್ಯರಾದಂತಹ ಶ್ರೀಮತಿ ಜಯಮ್ಮರವರು ಹೇಳಿದಂತೆ ತಾಂಡಕ್ಕೊಂದು ಅಥವಾ ಗ್ರಾಮ ಪಂಚಾಯಿತಿಗೆ ಕಾಲೇಜು ಅನ್ನುವುದಲ್ಲ. ನಾವು ಒಂದು ನಿಯಮವನ್ನು ಮಾಡಿಕೊಂಡಿದ್ದೇವೆ. ಗ್ರಾಮ ಪಂಚಾಯಿತಿ ಮಟ್ಟದವರೆಗೂ 01 ರಿಂದ 10 ತರಗತಿ ಹಾಗೂ ಹೋಬಳಿ ಮಟ್ಟಕ್ಕೆ ಬಂದಾಗ ಪದವಿ ಪೂರ್ವ ಕಾಲೇಜನ್ನು ಕೊಡಬೇಕು ಎಂಬುವುದನ್ನು ಮಾಡಿಕೊಂಡಿದ್ದೇವೆ. ವಿದ್ಯಾರ್ಥಿಗಳ ಸಂಖ್ಯೆಯ ಅನುಗುಣವಾಗಿ ನಾವು ಶಾಲೆ-ಕಾಲೇಜುಗಳನ್ನು ಮಾಡಬೇಕಾಗಿರುತ್ತದೆ. ಮಾನ್ಯ ಸದಸ್ಯರ ಭಾಗಕ್ಕೆ ಏನು ಬೇಕಾಗಿದೆ ಅದನ್ನು ಪರಿಶೀಲಿಸುತ್ತೇನೆ. ನಮ್ಮಲ್ಲಿ ಈಗಾಗಲೇ 176 ಕಾಲೇಜುಗಳನ್ನು ಪ್ರಾರಂಭ ಮಾಡಬೇಕೆಂದು ಇದೆ. ಅದು ನಮ್ಮ ಮಾನದಂಡಕ್ಕೆ ಬಂದಂತಹ ಸಂದರ್ಭದಲ್ಲಿ ನಾನು ಖಂಡಿವಾಗಿ ಸ್ಪಂದಿಸುವಂತಹ ಕೆಲಸವನ್ನು ಮಾಡುತ್ತೇನೆ.

**ಶ್ರೀಮತಿ ಜಯಮ್ಮ**:- ಮಾನ್ಯ ಸಭಾಪತಿಯವರೇ, ಆ ಭಾಗದಲ್ಲಿ 220 ವಿದ್ಯಾರ್ಥಿಗಳ ಸಂಖ್ಯೆ ಇದೆ. ಹಾಗಾಗಿ ಆ ಭಾಗದಲ್ಲಿ ಕಾಲೇಜುಗಳು ಅತ್ಯಂತ ಅವಶ್ಯಕತೆ ಇದೆ. ನಾನು ತಿಮ್ಮಪ್ಪನಹಳ್ಳಿ ಮತ್ತು ಮುಷ್ಟಲಗುಮ್ಮಿ ಎಂಬ ಎರಡು ಸ್ಥಳಗಳಿಗೆ ಕೇಳಿದ್ದೇನೆ. ಹಾಗಾಗಿ, ಕಾಲೇಜುಗಳನ್ನು ಮಾಡಿಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಅಲ್ಲದೇ, ಆ ಭಾಗದಲ್ಲಿನ ಮಹಿಳೆಯರಿಗೆ ಹೆಚ್ಚಿಗೆ ಕಾಲೇಜಿಗೆ ಹೋಗುವಂತಹ ಅವಕಾಶ ಸಿಗುತ್ತದೆ. ಆದ್ದರಿಂದ ದಯಮಾಡಿ ಎರಡು ಕಾಲೇಜುಗಳನ್ನು ಮಾಡಿಕೊಡಿ.

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ಎರಡಲ್ಲ. ನಾವು ಈಗಾಗಲೇ ಹೋಬಳಿ ಮಟ್ಟದಲ್ಲಿ ಮಾಡಬೇಕು ಎಂಬುದನ್ನು ಬಹಳ ಸ್ಪಷ್ಟಪಡಿಸಿದ್ದೇನೆ. ಗ್ರಾಮಪಂಚಾಯಿತಿ ಮಟ್ಟದಲ್ಲಿ 01 ರಿಂದ 10ನೇ ತರಗತಿಯವರೆಗೂ ಕೊಡುತ್ತೇವೆ. ಅಲ್ಲಿನ ವಿದ್ಯಾರ್ಥಿಗಳ ಸಂಖ್ಯೆಯನ್ನು ಮತ್ತು ನಮ್ಮ ಉದ್ದೇಶಗಳು ಏನಿವೆ ಅದನ್ನು ನೋಡಿಕೊಂಡು ಪ್ರಾರಂಭ ಮಾಡುತ್ತೇವೆ.

**ಶ್ರೀಮತಿ ಜಯಮ್ಮ**:- ಮಾನ್ಯ ಸಭಾಪತಿಯವರೇ, ಅಲ್ಲಿ 220 ವಿದ್ಯಾರ್ಥಿಗಳು ಇದ್ದಾರೆ ಮತ್ತು ಅಲ್ಲಿ 5 ಎಕರೆ ಜಮೀನು ಇದೆ. ಅಲ್ಲದೇ, ಈಗ ಅಲ್ಲಿ 15 ಕೀಲೋಮೀಟರ್ ದೂರ ಕಾಲೇಜಿಗೆ ಹೋಗಬೇಕಾಗಿದೆ. ಬಸ್ ಸೌಕರ್ಯವು ಸಹ ಇಲ್ಲ. ಹಾಗಾಗಿ ಇದನ್ನು ಕೇಳುತ್ತಿದ್ದೇನೆ.

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ನಾನು ಅದನ್ನು ಪರಿಶೀಲಿಸುತ್ತೇನೆ. ನಮ್ಮ ರಾಜ್ಯದಲ್ಲಿ ಪ್ರತಿ 15 ಕೀಲೋಮೀಟರ್‌ಗೆ ಒಂದು ಪದವಿಪೂರ್ವ ಕಾಲೇಜು ಇರಬೇಕೆಂದು ನಿಮಯ ಇದೆ. ಕಳೆದ ವರ್ಷ ಅದಕ್ಕೆ ತಿದ್ದುಪಡಿ ತಂದು ಪ್ರತಿ 12 ಕೀಲೋಮೀಟರ್ ಎಂದು ಮಾಡಿಕೊಂಡಿದ್ದೇವೆ. ಅದು ನಮ್ಮ ಎಲ್ಲಾ ಮಾನದಂಡಗಳಿಗೆ ಬಂದಂತಹ ಸಂದರ್ಭದಲ್ಲಿ ನಾನು ಖಂಡಿತವಾಗಿ ಸ್ಪಂದಿಸುತ್ತೇನೆ.

**ಸಭಾಪತಿಯವರು**:- ಧನ್ಯವಾದಗಳು. ಈಗ ಗಣೇಶ್ ಕಾರ್ಣಿಕ್‌ರವರೇ, ತಮ್ಮ ಪ್ರಶ್ನೆಯನ್ನು ಕೇಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಗಣೇಶ್ ಕಾರ್ಣಿಕ್**:- ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಯನ್ನು ಕೊನೆಗೆ ತೆಗೆದುಕೊಳ್ಳಿ.

**ಸಭಾಪತಿಯವರು**:- ಮಾನ್ಯ ಕೈಗಾರಿಕಾ ಸಚಿವರು ಕೆಳಮನೆಗೆ ಹೋಗಬೇಕಾಗಿದೆ. ಆದ್ದರಿಂದ, ಈಗಲೇ ಪ್ರಶ್ನೆ ಕೇಳಿ. ತಮ್ಮದು 15ನೇ ಪ್ರಶ್ನೆ.

(240)23.02.2018-10.40-ಎಂವಿ-ವಿಕೆ

**ಪ್ರಶ್ನೆ ಸಂಖ್ಯೆ: 1105**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಮಾನ್ಯ ಸಭಾಪತಿಯವರೇ, ವಿದ್ಯಾರ್ಥಿಗಳಿಗೆ, ಸಿಬ್ಬಂದಿಗಳಿಗೆ ಮತ್ತು ಸಾರ್ವಜನಿಕರಿಗೆ ತೊಂದರೆ ಆಗುತ್ತಿದೆಯೇ ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಆದರೆ, ಅದರ ಬಗ್ಗೆ ಮಾನ್ಯ ಮಂತ್ರಿಗಳು ಏನನ್ನು ಹೇಳಿಲ್ಲ. 1957ರಲ್ಲಿ ವಿಶ್ವವಿದ್ಯಾನಿಲಯ ಪ್ರಾರಂಭ ಆದಾಗಿನಿಂದ level crossingನಲ್ಲಿ ವಿಶ್ವವಿದ್ಯಾನಿಲಯಕ್ಕೆ ಹೋಗಿ ಬರುವಂತಹವರಿಗೆ ಹಾಗೆಯೆ ಮುಂದೆ ಹೋದರೆ ಮಲ್ಲಿಕಾರ್ಜುನ ಮನ್ಸೂರ್‌ರವರು ಹುಟ್ಟಿದ ಊರಾದಂತಹ ಮನ್ಸೂರು ಆ ಭಾಗದ ಜನರಿಗೆ ಇದರಿಂದ ತುಂಬಾ ತೊಂದರೆಯಾಗುತ್ತಿದೆ. ಅದು Main Track ಆಗಿರುವುದರಿಂದ, almost every fifteen minutesಗೆ ಒಂದು ಬಾರಿಗೆ level crossing close ಆಗುತ್ತದೆ. ಶೇಕಡ 50:50 ರಷ್ಟರಲ್ಲಿ ಮಾಡಬೇಕೆಂದು ತಾವು ಲೆಕ್ಕಾಚಾರ ಕೊಟ್ಟಿದ್ದೀರಿ. Train Vehicle Unit Count ಏನಿದೆ. ಅದು ಶೇಕಡಾ 50ಕ್ಕಿಂತ ಕಡಿಮೆ ಇದ್ದರೆ ಆಗುವುದಿಲ್ಲವೆಂದು ಸಹ ತಿಳಿಸಿದ್ದೀರಿ. ನನ್ನ ವಿನಂತಿ ಎಂದರೆ, ಈ ರೀತಿಯ ಕಾರಣಗಳನ್ನು ಕೊಟ್ಟು ಆ level crossing ಬಗ್ಗೆ ಗಮನಹರಿಸಿಲ್ಲ. ಆದರೆ, ವಿಶ್ವವಿದ್ಯಾನಿಲಯಗಳಿಗೆ ಹೋಗುವಂತಹ ವಿದ್ಯಾರ್ಥಿಗಳಿಗೆ ಮತ್ತು ಅಲ್ಲಿರುವಂತಹ ಎಲ್ಲರಿಗೂ ಕೂಡ ಸಮಸ್ಯೆಯಾಗಿದೆ. ಅಲ್ಲಿ ಅನೇಕ trainಗಳು ಸಂಚರಿಸುವುದರಿಂದ ಹಾಗೂ ಹತ್ತರಿಂದ ಹದಿನೈದು ನಿಮಿಷಕ್ಕೆ ಒಂದು ಬಾರಿ block ಆಗುವುದರಿಂದ ತುಂಬಾ ತೊಂದರೆಯಾಗುತ್ತಿದೆ. ಅದು ಏನೋ Train Vehicle Unit Count ಅಥವಾ ಲೆಕ್ಕಾಚಾರ ಇರಬಹುದು. ಆದರೆ, ಅಲ್ಲಿಗೆ ಅನುಕೂಲವಾಗುವ ದೃಷ್ಟಿಯಲ್ಲಿ, ರಾಜ್ಯ ಸರ್ಕಾರ ರೈಲ್ವೆ ಮಂತ್ರಾಲಯದೊಂದಿಗೆ ಮಾತನಾಡಿ, ಅದಕ್ಕೆ ಒಂದು ಮೇಲ್ಸೇತುವೆ ನಿರ್ಮಾಣ ಮಾಡುವುದರ ಬಗ್ಗೆ ತಾವು ಗಂಭೀರವಾದ ಆಲೋಚನೆ ಮಾಡಿ, ಆ ಭಾಗದವರಿಗೆ ಮತ್ತು ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ವಿ.ಸಂಕನೂರ**:- ಮಾನ್ಯ ಸಭಾಪತಿಯವರೇ, ನಾನು ಅದೇ ಕ್ಷೇತ್ರದವನು. ಮಾನ್ಯ ಸಚಿವರಾದ ದೇಶಪಾಂಡೆಯವರಿಗೆ ನಾವು ಹೇಳುವ ಅವಶ್ಯಕತೆ ಇಲ್ಲ. ಅಲ್ಲಿನ ಸಮಸ್ಯೆ ಬಗ್ಗೆ ಅವರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗೊತ್ತಿದೆ. ಆ ಸಮಸ್ಯೆ ಅವರಿಗೆ ಏನು ಹೊಸದಲ್ಲ. ತಾವು ಆ ಸಮಸ್ಯೆಯನ್ನು ಬಗೆಹರಿಸಬೇಕೆಂದು ನಾನು ಕೂಡ ಒತ್ತಾಯ ಮಾಡುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಸಚಿವರಾದ ದೇಶಪಾಂಡೆಯವರು ಸಹ ಅದೇ ಮಾರ್ಗದಲ್ಲಿ ಸಂಚರಿಸುತ್ತಾರೆ.

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, Train Vehicle Unit ಎಂದು Indian Railwayಯವರು ಮೂರು ವರ್ಷಕ್ಕೆ ಒಮ್ಮೆ ಸರ್ವೆ ಮಾಡುತ್ತಾರೆ. ಯಾವ ರೀತಿ National Highways ನವರು ಕಾರ್‌ಗಳನ್ನು ಸರ್ವೆ ಮಾಡುತ್ತಾರೆ, ಆ ರೀತಿ ಇವರು Cars, Trucks, Tangas, three wheelers ಮತ್ತು Scootersಗಳ ಬಗ್ಗೆ ಮೂರು ವರ್ಷಕ್ಕೆ ಒಮ್ಮೆ ಸರ್ವೆ ನಡೆಯುತ್ತದೆ. ಅದಕ್ಕೆ Train Vehicle Unit ಎನ್ನುತ್ತಾರೆ. ಯಾವುದೂ ಒಂದು Underpass ಆಗಲಿ Over Bridge ಆಗಲಿ. ಇದರಲ್ಲಿ ಎಷ್ಟು ವಾಹನಗಳು ಹೋಗುತ್ತವೆ. ಅದನ್ನು 7ರಿಂದ divide ಮಾಡಿದ ನಂತರ ಒಂದು ಲಕ್ಷ ಜನರು ಅದನ್ನು cross ಮಾಡಿದರೆ, that becomes eligible. ಆಗ ಶೇಕಡಾ 50ರಷ್ಟು ರೈಲ್ವೆ ಮಂತ್ರಾಲಯದವರು ಭರಿಸಿದರೆ, ಉಳಿದ ಶೇಕಡ 50ರಷ್ಟನ್ನು ನಮ್ಮ ರಾಜ್ಯ ಸರ್ಕಾರ ಭರಿಸುತ್ತದೆ, ಆ ಮೂಲಕ ಆ ಕೆಲಸ ಆಗುತ್ತದೆ. ಈಗ ಇಲ್ಲಿ ಏನಾಗಿದೆ ಎಂದರೆ, ಪ್ರಸ್ತಾಪಿತ ಸ್ಥಳದಲ್ಲಿ Train Vehicle Unit ಒಂದು ಲಕ್ಷಕ್ಕಿಂತ ಕಡಿಮೆ, ಅಂದರೆ 48,842 ಇರುವುದರಿಂದ ಸದರಿ ಎಲ್‌ಸಿ ಗೇಟ್‌ನಲ್ಲಿ ವೆಚ್ಚ ಹಂಚಿಕೆಯಡಿ ಮೇಲ್ಸೇತುವೆ / ಕೆಳ ಸೇತುವೆ ನಿರ್ಮಾಣ ಮಾಡಲು ಅವಕಾಶವಿರುವುದಿಲ್ಲ. Unfortunately ಅವರು ಹೇಳಿರುವುದು correct ಇದೆ. ನಾನು ಅಲ್ಲಿ ಸಂಚರಿಸುವಾಗಲೆಲ್ಲಾ ನೋಡುತ್ತೇನೆ, it is a fact. ಅದರ ಬಗ್ಗೆ ಯಾವುದೇ ವಾದವಿಲ್ಲ. ಇಲ್ಲಿ 48,842 ಅಂದರೆ ಇದು ಒಂದು ಲಕ್ಷಕ್ಕಿಂತ ಬಹಳ ಕಡಿಮೆ ಇದೆ, less than 50,000. ಹಾಗಾಗಿ ಈ Train Vehicle Unit ಒಂದು ಲಕ್ಷ ಆದಾಗ ಮಾತ್ರ ಅದನ್ನು ಮಾಡುವುದಕ್ಕೆ ಸಾಧ್ಯ. ಈಗ ನಾವು ಏನು ಮಾಡುತ್ತೇವೆ ಎಂದರೆ, ರೈಲ್ವೆ ಇಲಾಖೆಯವರು ಕೊಡುವುದಿಲ್ಲ. Karnataka is the first state in the country to partner with the railways. ಮೊನ್ನೆಯ ದಿವಸ ಮೈಸೂರಿಗೆ ಮಾನ್ಯ ಪ್ರಧಾನ ಮಂತ್ರಿಗಳು ಬಂದಿದ್ದರು. ನಾನು ಮಾನ್ಯ ಪ್ರಧಾನ ಮಂತ್ರಿಗಳಿಗೂ ಸಹ ಹೇಳಿದ್ದೇನೆ. We are the first state in the country to partner with the railways. ಈಗ ನಾವು ಏನು ಮಾಡುತ್ತಿದ್ದೇವೆ ಎಂದರೆ, not only we give 50 percent of the amount to the projects, we also make land acquisition. ಮೊನ್ನೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

electrification and doubling ಆಯಿತು. ಅದರ crossದು.... ಮಾನ್ಯ ಗಣೇಶ್ ಕಾರ್ಣಿಕ್‌ರವರೆ, ಸ್ವಲ್ಪ ಗಡಿಬಿಡಿ ಮಾಡಬೇಡಿ ತಾವು ಕುಳಿತುಕೊಳ್ಳಿ. I will give satisfactory answer. Why do you worry?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮೊನ್ನೆಯ ಕೇಂದ್ರ ಬಜೆಟ್‌ನಲ್ಲಿ level crossingಗಳನ್ನೆಲ್ಲಾ ನಿಲ್ಲಿಸುತ್ತೇವೆಂದು ಕೇಂದ್ರ ಸರ್ಕಾರದವರು ಘೋಷಣೆ ಮಾಡಿದ್ದಾರೆ.

**ಶ್ರೀ ಆರ್.ವಿ.ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ನಾನು ಸ್ವಲ್ಪ ಮಾತನಾಡುತ್ತೇನೆ, ರೈಲ್ವೆ ಮಂತ್ರಿಗಳಾದ ಮಾನ್ಯ ಫಿಯೂಷ್ ಗೋಯಲ್ ರವರು ನನಗೆ ಒಳ್ಳೆಯ ಸ್ನೇಹಿತರು. ಹಾಗಾಗಿ 898 ಕೋಟಿ ರೂಪಾಯಿಗಳಷ್ಟು doubling ಮೇಲೆ ಖರ್ಚಾಗಿದೆ. ಅದರಲ್ಲಿ Rs.583 crore has been given by the Government of Karnataka. ನಾವು ನಮ್ಮ ಸರ್ಕಾರದಿಂದ electrification and doublingಗೆ ಶೇಕಡ 77ರಷ್ಟು ಹಣವನ್ನು ಕೊಟ್ಟಿದ್ದೇನೆ. ಇಲ್ಲಿ ಏನಾಗಿದೆ ಎಂದರೆ, ಇದು ಆ criteriaದಲ್ಲಿ ಬರುವುದಿಲ್ಲ. ಇದಕ್ಕೆ Indian Railways contribute ಮಾಡುವುದಿಲ್ಲ. So, 100 percent Government of Karnataka will have to do it. ಇದರ ಬಗ್ಗೆ ಪ್ರಯತ್ನ ಮಾಡುತ್ತೇವೆ, ಸ್ವತಃ ರೈಲ್ವೆ ಸಚಿವರ ಬಳಿ ಮಾತನಾಡುತ್ತೇನೆ ಮತ್ತು ಇದರ ಗಾಂಭೀರ್ಯವನ್ನು ಅವರ ಗಮನಕ್ಕೆ ತರುತ್ತೇನೆ. ಈ ವ್ಯವಸ್ಥೆ ಆಗಬೇಕು, ಇದರಲ್ಲಿ ಯಾವುದೇ ವಾದ-ವಿವಾದ ಇಲ್ಲ. ನಾನು ಆ ಕಡೆ ಹೋಗುತ್ತಿರುತ್ತೇನೆ ಮತ್ತು ಹಳ್ಳಿಗೆ ಹೋಗಬೇಕಾದರೆ ಅಲ್ಲಿಗೆ ಹೋಗಬೇಕು. ಇದರ ಬಗ್ಗೆ ಪ್ರಾಮಾಣಿಕವಾದ ಪ್ರಯತ್ನ ಮಾಡಲಾಗುವುದು. ಈಗ ಮಾನ್ಯ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರ ಸರ್ಕಾರ ಇಲ್ಲವೆಂದರೆ, ನಾವು ಮಾನ್ಯ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯನವರ ಸರ್ಕಾರವನ್ನು ಕೇಳಬೇಕು.

**ಸಭಾಪತಿಯವರು:–** ಮಾನ್ಯ ಸಚಿವರು ಶೇಕಡಾ 100ರಷ್ಟು ಮಾಡುತ್ತೇವೆಂದು ಹೇಳಿದ್ದಾರೆ, ಅದು ಆಗುತ್ತದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ಈ ಬಾರಿಯ ಕೇಂದ್ರದ ಬಜೆಟ್‌ನಲ್ಲಿ ಮುಂದಿನ ಐದು ವರ್ಷದ ಒಳಗಡೆ ದೇಶದ ಎಲ್ಲಾ level crossingಗಳನ್ನು ಮಾಡುತ್ತೇವೆಂದು ಹೇಳಿದ್ದಾರೆ. ತಾವು ಸ್ವಲ್ಪ ಆದ್ಯತೆ ಕೊಟ್ಟು follow up ಮಾಡಿದರೆ, ಇದು ಅತ್ಯಂತ ಶೀಘ್ರವಾಗಿ ಆಗುತ್ತದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ಮುಂದಿನ ಮೂರು ದಿನದಲ್ಲಿ ರೈಲ್ವೆ ಮಂತ್ರಿಗಳಾದ ಮಾನ್ಯ ಫಿಯೂಷ್ ಗೋಯಲ್ ರವರಿಗೆ ಪತ್ರ ಬರೆಯುತ್ತೇನೆ, ಅದನ್ನು ಮಾನ್ಯ ಸದಸ್ಯರು ಪರಿಶೀಲನೆ ಮಾಡಲಿ. ಈಗ ನೋಡಿ ಎಲ್ಲಾ level crossing ಎಂದ ಮೇಲೆ ರೈಲ್ವೆನಲ್ಲಿ ಆಗುತ್ತದೆ, ಅಲ್ಲಿ ರೈಲ್ವೆ ಬೋರ್ಡ್ ಇರುತ್ತದೆ ಮತ್ತು ನಿಯಮಗಳು ಸಹ ಇರುತ್ತವೆ. ನಾನು ಮಂತ್ರಿಯಾಗಿ ಹೇಳಬಹುದು. Rules ನಲ್ಲಿ fit in ಆಗಿಲ್ಲವೆಂದರೆ sorry sir ಎಂದು ಹೇಳುತ್ತಾರೆ. When I say it, I will do by act.

**CAPT. GANESH KARNIK:-** Thank you.

**ಚುಕ್ಕೆ ಪ್ರಶ್ನೆ ಸಂಖ್ಯೆ: 1136**
(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

**ಪ್ರಶ್ನೆ ಸಂಖ್ಯೆ: 121 (1091+1092)**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಮಾನ್ಯ ಸಚಿವರು ಕೂಡ ಪದವೀಧರರ ಕ್ಷೇತ್ರದಿಂದ ಸುಮಾರು ಬಾರಿ ಈ ಸದನಕ್ಕೆ ಆಯ್ಕೆಯಾಗಿ ಬಂದಿರುವಂತಹವರು. ಅಧಿಕಾರಿಗಳು ಒದಗಿಸಿರುವ ಉತ್ತರವನ್ನು ನೋಡಿದರೆ ನನಗೆ ನಿಜವಾಗಿಯೂ ಕೂಡ ಒಪ್ಪಿಗೆಯಾಗಿಲ್ಲ. ಇದರಲ್ಲಿ ಉತ್ತರವನ್ನು ತಿರುಚಿ ಹೇಳಿದ್ದಾರೆ. ಏನು ನಮ್ಮ ಬಿಆರ್‌ಸಿ ಮತ್ತು ಸಿಆರ್‌ಸಿ ಗಳು ಕೆಲಸ ಮಾಡುತ್ತಿದ್ದರು, ಅವರನ್ನು ಒಂದು ವರ್ಷಕ್ಕೆ ಎಂದು ಹೇಳಿ, ಸ್ಪರ್ಧಾತ್ಮಕ ಪರೀಕ್ಷೆಯ ಮುಖಾಂತರ ಅವರನ್ನು ನೇಮಕ ಮಾಡಿಕೊಂಡಿದ್ದಾರೆ. ಇವರಿಗೆ ಒಂದು ವರ್ಷ ಆದಮೇಲೆ discontinue ಮಾಡಿದಾಗ, ಅವರು ಕೋರ್ಟ್‌ಗೆ ಹೋಗಿದ್ದಾರೆ, ಕೋರ್ಟ್‌ನಿಂದ ಈ ಯೋಜನೆ ಇರುವವರೆಗೂ continue ಮಾಡಿ ಎಂದು ಹೇಳಿದ್ದಾರೆ. ಅವರು ಕೋರ್ಟ್‌ನ ಪ್ರತಿಯನ್ನು ಸಹ ಒದಗಿಸಿದ್ದಾರೆ. ಮಾನ್ಯ ಮಂತ್ರಿಗಳಲ್ಲಿ ನಾನು ಮತ್ತು ಮಾನ್ಯ ಸದಸ್ಯರಾದ ಬಸವರಾಜ ಹೊರಟ್ಟಿಯವರು ಅವರನ್ನು ಮುಂದುವರೆಸಿ ಎಂದು ವಿನಂತಿ ಮಾಡಿಕೊಂಡಾಗ, ಅವರನ್ನು continue ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಅನೇಕ ಬಾರಿ ಆದೇಶಗಳನ್ನು ಮಾಡಿದ್ದಾರೆ. ಆದರೆ, ಇವತ್ತಿನ ದಿವಸ ಅಧಿಕಾರಿಗಳು ತಮ್ಮ ಉತ್ತರದಲ್ಲಿ 44 ಜನರನ್ನು continue ಮಾಡಿದ್ದೇವೆಂದು ಹೇಳುತ್ತಾರೆ. ಅಧಿಕಾರಿಗಳು ಅವರನ್ನು ಕೋರ್ಟ್ ಆದೇಶ ಮತ್ತು ಮಾನ್ಯ ಮಂತ್ರಿಗಳು ಕೊಟ್ಟಿರುವಂತಹ ಆದೇಶದ ಮುಖಾಂತರ continue ಮಾಡಿಲ್ಲ. ಅವರನ್ನು discontinue ಮಾಡಿ, outsource ಮುಖಾಂತರ ತೆಗೆದುಕೊಂಡಿದ್ದಾರೆ. ಆ outsource ಮುಖಾಂತರ ತೆಗೆದುಕೊಂಡಿರುವವರನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

continue ಮಾಡಿದ್ದೇವೆಂದು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು.

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಬಿಆರ್‌ಸಿ ಮತ್ತು ಸಿಆರ್‌ಸಿ ಅಭ್ಯರ್ಥಿಗಳನ್ನು ನಮ್ಮ ಇಲಾಖೆಯಲ್ಲಿ ಆ ಯೋಜನೆ ಮುಗಿಯುವವರೆಗೂ ಮುಂದುವರೆಸಬೇಕೆಂದು ಕೋರ್ಟ್‌ನ ಆದೇಶದ ಹಿನ್ನೆಲೆಯಲ್ಲಿ ತಾತ್ವಿಕವಾಗಿ ನಿರ್ಣಯವನ್ನು ತೆಗೆದುಕೊಂಡಿದ್ದೇವು. ಆದರೆ ಕೆಲವು ಅಧಿಕಾರಿಗಳು ಅವರನ್ನು discontinue ಮಾಡಿ, ಮತ್ತೆ ಅವರನ್ನು outsource ಮುಖಾಂತರ ತೆಗೆದುಕೊಂಡಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ನೋಡಿ, ನಮ್ಮ ಸರ್ಕಾರದಲ್ಲಿ ಕೆಲವು ಅಧಿಕಾರಿಗಳಿಗೆ, ಸರ್ಕಾರದಲ್ಲಿ ನೌಕರಿ ಮಾಡುವಂತಹ; ಅದು ಗುತ್ತಿಗೆ ಆಧಾರದಲ್ಲಿ ಇರಬಹುದು, ದಿನಗೂಲಿಯಲ್ಲಿ ಇರಬಹುದು, outsource ನಲ್ಲಿ ಇರಬಹುದು ಅಥವಾ ಹಾಜರಿ ಪುಸ್ತಕದಲ್ಲಿ ಹೆಸರನ್ನು ಬರೆಯದೆ ಕೆಲಸ ಮಾಡಿಸುವುದು ಇರಬಹುದು. ಅವರನ್ನು ಎಷ್ಟು ವರ್ಷ ಶೋಷಣೆ ಮಾಡಬೇಕೋ, ಆ ರೀತಿ ಶೋಷಣೆ ಮಾಡುವುದಕ್ಕೆ ಅಧಿಕಾರಿಗಳಿಗೆ ಭಾರಿ ಆಸಕ್ತಿ ಇರುತ್ತದೆ. ಅವರನ್ನು ಖಾಯಂ ಮಾಡುವುದು ಅಥವಾ ಶೋಷಣೆಯಿಂದ ಮುಕ್ತರನ್ನಾಗಿ ಮಾಡುವುದು ಅವರಿಗೆ ಬೇಕಾಗಿಲ್ಲ. ಸರ್ಕಾರದ ಅಧಿಕಾರಿಗಳು ಏನಿರುತ್ತಾರೆ, ಆ ಅಧಿಕಾರಿಗಳಿಗೆ ಬರುವಂತಹ ಪಗಾರ ಇವರಿಗೂ ಬಂದರೆ ತೊಂದರೆ ಮಾಡುತ್ತಾರೆ. ಕೆಲವು ಸಲ ಸರ್ಕಾರದ ಆದೇಶಗಳನ್ನು ಅನುಷ್ಠಾನ ಮಾಡುವುದರಲ್ಲೂ ಸಹ ಅಧಿಕಾರಿಗಳು ವಿಳಂಬ ಮಾಡುತ್ತಾರೆ. ಈಗ ಮಾನ್ಯ ಸದಸ್ಯರು ಹೇಳುವುದು, ಅಧಿಕಾರಿಗಳು ಅವರನ್ನು discontinue ಮಾಡಿ outsourceನಲ್ಲಿ ತೆಗೆದುಕೊಂಡಿದ್ದಾರೆಂದು.

**(241)23.02.2018/10.50/ಎಲ್‌ವಿಎಲ್-ಎಕೆ**

**ಶ್ರೀ ಹೆಚ್.ಕೆ. ಪಾಟೀಲ್(ಮುಂದುವರೆದಿದೆ...):-**

ಆ ರೀತಿಯಾದಂತಹ ಉದಾಹರಣೆಯನ್ನು ಮಾನ್ಯ ಸದಸ್ಯರು ನನಗೆ ಕೊಟ್ಟರೆ, ನಮ್ಮ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಸಹ ಇದೇ ಸದನದಲ್ಲಿ ಉಪಸ್ಥಿತರಿದ್ದು, ಅವರಿಗೆ ನಾನು ತಕ್ಷಣವೇ ಸಂಬಂಧಪಟ್ಟ ಅಧಿಕಾರಿಗೆ ನೋಟಿಸ್ ನೀಡಬೇಕೆಂದು ಸೂಚನೆ ಕೊಡುತ್ತೇನೆ. ಜೊತೆಗೆ, ಕಾನೂನಾತ್ಮಕವಾಗಿ ನ್ಯಾಯಾಲಯದ ಆದೇಶವನ್ನು ಪಾಲನೆ ಮಾಡುವ ಜವಾಬ್ದಾರಿ ತಮ್ಮದಾಗಿದೆ ಎನ್ನುವುದನ್ನು ಅವರಿಗೆ ತಿಳಿಸಿ, ಅವರ ವಿರುದ್ಧ ಸೂಕ್ತವಾಗಿರತಕ್ಕಂತಹ ಶಿಸ್ತಿನ ಕ್ರಮಕ್ಕೆ ನಾವು ಮುಂದಾಗುತ್ತೇವೆ.

**ಶ್ರೀ ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರದಲ್ಲಿಯೇ ಕೆಲವು ಜಿಲ್ಲಾ ಪಂಚಾಯತಿಗಳಲ್ಲಿ ಹೊರಗುತ್ತಿಗೆ ಆಧಾರದ ಮೇರೆಗೆ 44 ಜನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೌಕರರನ್ನು ಮುಂದುವರೆಸಿದ್ದೇವೆಂದು ಉತ್ತರ ನೀಡಿದ್ದಾರೆ. ಆದುದರಿಂದ, ನಾವು ಈ ಬಗ್ಗೆ ಬೇರೆ ಯಾವ ದಾಖಲೆ ಕೊಡುವುದಕ್ಕಾಗುತ್ತದೆ?

**ಶ್ರೀ ಹೆಚ್.ಕೆ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಸರ್ಕಾರದ ಆದೇಶದಂತೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಮ ಕೈಗೊಳ್ಳದಿದ್ದರೆ, ಸರ್ಕಾರಿ ನಿರುದ್ಯೋಗ ಪದವೀಧರರಿಗೆ BRC (Block Resource Coordinators) and CRC (Cluster Resource Coordinators) ಗಳಿಗೆ ಯಾವ ರೀತಿ ನ್ಯಾಯ ಒದಗಿಸುತ್ತದೆ? ಮಾನ್ಯ ಉಚ್ಛ ನ್ಯಾಯಾಲಯದ ಆದೇಶದಂತೆ, ಯೋಜನೆ ಮುಗಿಯುವವರೆಗೂ ಮಾರ್ಗಸೂಚಿಗಳ ಅನುಸಾರ ಬಿಆರ್‌ಸಿ/ಸಿಆರ್‌ಸಿ ಯವರ ಸೇವೆಯನ್ನು ಮುಂದುವರೆಸಲು ಕ್ರಮ ವಹಿಸಲಾಗಿದೆ. ತರುವಾಯ, ಬಿಆರ್‌ಸಿ/ಸಿಆರ್‌ಸಿಗಳ ಮಾಸಿಕ ಸೇವಾ ಶುಲ್ಕಕ್ಕೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರವು ಯೋಜನೆ ಮುಗಿಯುವವರೆಗೆ ಅನುದಾನ ನೀಡಲು ನಿರ್ಧರಿಸಿರುತ್ತದೆ. ಆದುದರಿಂದ, ಸದರಿಯವರ ಸೇವೆಯನ್ನು ಯೋಜನೆ ಚಾಲ್ತಿಯಲ್ಲಿರುವವರೆಗೆ ಮುಂದುವರೆಸಲು ಕ್ರಮ ವಹಿಸಲಾಗಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ದಿನಾಂಕ: 24.11.2017 ರಂದು ಬೆಳಗಾವಿಯ ಸುವರ್ಣಸೌಧದಲ್ಲಿ ನಡೆದ ಅಧಿವೇಶನದಲ್ಲಿ ಮಾನ್ಯ ಸಚಿವರು ನನಗೆ ಉತ್ತರ ನೀಡಿದ್ದಾರೆ. ಆ ಉತ್ತರವನ್ನು ನಾನು ಪೂರ್ಣವಾಗಿ ಓದುವುದಕ್ಕೆ ಹೋಗುವುದಿಲ್ಲ. ಅದರಲ್ಲಿ "ಮಾನ್ಯ ಹೊರಟ್ಟಿಯವರಿಗೆ ನಾನು ತಮ್ಮ ಮೂಲಕ ಒಂದು ಭರವಸೆ ಕೊಡಬಯಸುತ್ತೇನೆ. ಅದೇನೆಂದರೆ, ಈಗಾಗಲೇ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಸೂಚನೆ ನೀಡಿದ್ದೇವೆ. ಅದರಂತೆ, ನ್ಯಾಯಾಲಯದ ತೀರ್ಪಿಗೆ ವ್ಯತಿರಿಕ್ತವಾಗಿ ನಡೆದುಕೊಂಡರೆ, ಸಂಬಂಧಪಟ್ಟ ಅಧಿಕಾರಿಗಳೇ ಅದಕ್ಕೆ ಜವಾಬ್ದಾರಿಯಾಗಿರುತ್ತಾರೆ. ಒಂದು ವೇಳೆ ವ್ಯತಿರಿಕ್ತ ಕ್ರಮ ಕೈಗೊಂಡಿರತಕ್ಕಂಥದ್ದು ನಮ್ಮ ಗಮನಕ್ಕೆ ಬಂದರೆ ತಾಂತ್ರಿಕ ಕಾರಣಗಳು ಒಂದು ಅಥವಾ ಎರಡು ತಾಸುಗಳು ತಡವಾಗಿ ಬಂದರೆ ಎಂಬ ಕಾರಣವನ್ನು ಕೊಟ್ಟರೆ ಆ ದಿಸೆಯಲ್ಲಿ ನ್ಯಾಯ ಕೊಡಿಸಬಹುದು ಅಷ್ಟೇ ಅಲ್ಲದೇ, ಸಂಬಂಧಪಟ್ಟ ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ ಮತ್ತು ಸದರಿ ನೌಕರರನ್ನು ಖಾಯಂಗೊಳಿಸುತ್ತೇವೆಂದು" ಉತ್ತರ ನೀಡಿರುತ್ತಾರೆ.

ಮಾನ್ಯ ಮಂತ್ರಿಗಳು ಈ ನೌಕರರನ್ನು ಮುಂದುವರೆಸಬೇಕೆಂದು 3 ಬಾರಿ ಆದೇಶ ಮಾಡಿದ್ದಾರೆ. ಪ್ರಧಾನ ಕಾರ್ಯದರ್ಶಿಗಳು ಸಹ ಈ ನೌಕರರನ್ನು ಮುಂದುವರೆಸಬೇಕೆಂದು ಹೇಳಿದ್ದಾರೆ. ಈ ಮಾತನ್ನು ಹೇಳುವುದಕ್ಕೆ ನನಗೆ ನೋವಾಗುತ್ತದೆ. ಮಾನ್ಯ ಮಂತ್ರಿಗಳು ಮತ್ತು ಪ್ರಧಾನ ಕಾರ್ಯದರ್ಶಿಗಳಿಗಿಂತ ಕೆಳಗಿನ ಅಧಿಕಾರಿಗಳು ಹೆಚ್ಚೋ? ಇವರುಗಳು ಮಾಡಿದಂತಹ ಆದೇಶವನ್ನು ಯಾರೋ ಒಬ್ಬ ಕೆಳಗಿನ ಹಂತದ ಅಧಿಕಾರಿ ಇದನ್ನು ಪುನಃ ಟಿಪ್ಪಣಿ ಬರೆದು ವಾಪಸ್ಸು ಕಳುಹಿಸುತ್ತಿದ್ದರೆ, ನಾವು ಈ ಬಗ್ಗೆ ಪದೇ ಪದೇ ಈ ಸದನದಲ್ಲಿ ಪ್ರಶ್ನೆ ಕೇಳಿದರೆ ಹೇಗೆ? ಸರ್ಕಾರದಲ್ಲಿ ಇವತ್ತಿನ ದಿವಸ ಯಾವ ರೀತಿ ಆಡಳಿತ ನಡೆಯುತ್ತಿದೆ? ಮಾನ್ಯ ಸಚಿವರು ಈ ಬಗ್ಗೆ ಸ್ಪಷ್ಟವಾಗಿ 2 ಬಾರಿ ಆದೇಶ ನೀಡಿದ್ದಾರೆ. ನಾನೇ ಸ್ವತಃ ಅವರ ಕಛೇರಿಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೋಗಿದ್ದೆನು. ಪ್ರಧಾನ ಕಾರ್ಯದರ್ಶಿಗಳು ಸರ್ಕಾರದ ಆದೇಶವನ್ನು ಅನುಷ್ಠಾನ ಮಾಡುವುದಕ್ಕೆ ಕಳುಹಿಸಿದ್ದಾರೆ. ಆದರೆ, ಕೆಳಗಿನ ಹಂತದ ಅಧಿಕಾರಿಗಳು ಸದರಿ ಆದೇಶಕ್ಕೆ ಉಲ್ಟಾ ಬರೆದಿದ್ದುದರಿಂದ, ನಾವು ಪದೇ ಪದೇ ಈ ಪ್ರಶ್ನೆಯನ್ನು ಸದನದಲ್ಲಿ ಕೇಳಬೇಕಾಗುತ್ತದೆ. ಮಾನ್ಯ ಸಚಿವರು ಮತ್ತು ಅವರ ಆಪ್ತ ಕಾರ್ಯದರ್ಶಿಯವರು ನನ್ನ ಎದುರಿನಲ್ಲಿಯೇ ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಬಗ್ಗೆ ಹೇಳಿದ್ದಾರೆ. ಯಾರೋ ಒಬ್ಬ ಉಪ ಕಾರ್ಯದರ್ಶಿ ಅಥವಾ ಮತ್ತೊಬ್ಬ ಅಧಿಕಾರಿ ಸದರಿ ಆದೇಶಕ್ಕೆ ತಕರಾರು ಹಾಕಿದರೆ ನಾವು ಎಲ್ಲಿಯವರೆಗೆ ಸರ್ಕಾರವನ್ನು ಪ್ರಶ್ನೆ ಮಾಡಬೇಕು? ಇದಕ್ಕೆ ಹೇಳುವವರು ಕೇಳುವವರು ಯ್ಯಾರು ಇಲ್ಲವೇ? ಈ ಸರ್ಕಾರದ ಆಡಳಿತಾವಧಿಯಲ್ಲಿ ಅಧಿಕಾರಿಗಳ ಬೇಜವಾಬ್ದಾರಿತನ ಬಹಳ ಆಗಿದೆ. ನಾನು ಈ ಮಾತನ್ನು ಪದೇ ಪದೇ ಹೇಳುತ್ತಿದ್ದೇನೆ. ಇದು ಸ್ವತಃ ತಮ್ಮ ಅನುಭವಕ್ಕೂ ಕೂಡ ಬಂದಿದೆ. ಇದಕ್ಕೆ ಯಾವುದಾದರೂ ದಾರಿ ಹುಡುಕಬೇಕಾಗುತ್ತದೆ. ಮಾನ್ಯ ಮಂತ್ರಿಗಳು ಹೇಳಬೇಕಾದರೆ ಅವರು ಕಾನೂನನ್ನು ನೋಡಿಯೇ ಆದೇಶವನ್ನು ಮಾಡಿರುತ್ತಾರೆ. ಆದುದರಿಂದ, ಮಂತ್ರಿಗಳು ಆದೇಶ ಮಾಡಿದರೆ ಮುಗಿದು ಹೋಗುತ್ತದೆ. ನ್ಯಾಯಾಲಯ ಕೂಡ ಇದನ್ನು ಪರಿಶೀಲನೆ ಮಾಡಿದೆ. ನಂತರ ಮಾನ್ಯ ಸಚಿವರು ನಮ್ಮ ಬಳಿಯಲ್ಲಿಯೂ ಕೂಡ ಚರ್ಚೆ ಮಾಡಿ, ನಿರ್ದೇಶನ ನೀಡಿ 2 ಬಾರಿ ಆದೇಶ ಮಾಡಿದ್ದರೂ ಕೂಡ ಇವತ್ತಿನವರೆಗೂ ಅದು ಅನುಷ್ಠಾನವಾಗಿರುವುದಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರು ತಮ್ಮ ಪ್ರಶ್ನೆಗೆ ಉತ್ತರ ನೀಡುತ್ತಾರೆ.

**ಶ್ರೀ ಹೆಚ್.ಕೆ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದಂತಹ ಶ್ರೀ ಚೌಡರೆಡ್ಡಿ ತೂಪಲ್ಲಿಯವರು ದಯಮಾಡಿ ಕ್ರಮ ಸಂಖ್ಯೆ: 'ಇ' ಅನ್ನು ಗಮನಿಸಬೇಕು. ಅವರು ಜಿಲ್ಲಾ ಪಂಚಾಯತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬಿಆರ್‌ಸಿ ಮತ್ತು ಸಿಆರ್‌ಸಿ ಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಸರ್ಕಾರದ ಉತ್ತರವೇನೆಂದರೆ, ದಿನಾಂಕ:03.11.2017 ರ ಸರ್ಕಾರದ ಪತ್ರಕ್ಕೆ ಅನುಗುಣವಾಗಿ ಅಂದರೆ, ನಾವು ಏನು ಅವರಿಗೆ ನಿರ್ದೇಶನ ಕೊಟ್ಟಿದ್ದೇವೆ, ಆ ನಿರ್ದೇಶನದ ಅನುಗುಣವಾಗಿ ಇತ್ತೀಚಿನ ಪ್ರಸ್ತುತ ಮಾಹಿತಿಯನ್ನು ಪಡೆದುಕೊಂಡಿದ್ದು, ಅದರ ಪ್ರಕಾರ 8 ಜಿಲ್ಲಾ ಪಂಚಾಯತಿಗಳಲ್ಲಿ 44 ಬಿಆರ್‌ಸಿ ಗಳು ಮತ್ತು 122 ಸಿಆರ್‌ಸಿ ಗಳು ಕಾರ್ಯನಿರ್ವಹಿಸುತ್ತಿರುವ ಮಾಹಿತಿ ಲಭ್ಯವಿರುತ್ತದೆ. ಈ ಜಿಲ್ಲೆಗಳಲ್ಲಿ ಮಾನ್ಯ ಉಚ್ಛ ನ್ಯಾಯಾಲಯದ ಆದೇಶ ಹಾಗೂ (*NRDWP*) National Rural Drinking Water Programme ನ ಮಾರ್ಗಸೂಚಿಗಳನುಸಾರ ಜಿಲ್ಲಾ ಪಂಚಾಯತಿ ಹಂತದಲ್ಲಿಯೇ ಬಿಆರ್‌ಸಿ/ಸಿಆರ್‌ಸಿಗಳ ಸೇವೆಯನ್ನು ಮುಂದುವರೆಸಿರುತ್ತಾರೆ.

**ಶ್ರೀ ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ನಾನು ಕೂಡ ಅದೇ ವಿಷಯವನ್ನು ಹೇಳುತ್ತಿರುವುದು, ನಾನು ದೇವರ ಮೇಲೆ ಪ್ರಮಾಣ ಮಾಡಿ ಹೇಳುತ್ತೇನೆ 122 ಇಲ್ಲ ಅಥವಾ 44 ಇಲ್ಲ ಕೇವಲ ಒಬ್ಬ ನೌಕರರನ್ನು ಮುಂದುವರೆಸಿರುವುದಿಲ್ಲ. ಒಂದು ವೇಳೆ ಮಾಡಿದ್ದರೆ ಆ ಯೋಜನೆಯಲ್ಲಿ ಒಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವರ್ಷಕ್ಕೆ ಮುಕ್ತಾಯ ಮಾಡಿದಾಗ ಅವರನ್ನು discontinue ಮಾಡಿದ್ದಾರೆ. ಆ ನಂತರ ಅವರು ಕೋರ್ಟ್‌ಗೆ ಹೋದರು. ಕೋರ್ಟ್‌ನಲ್ಲಿ ಸದರಿ ಯೋಜನೆ ಇರುವವರೆಗೂ ಅವರನ್ನು ಮುಂದುವರೆಸಬೇಕೆಂದು ಆದೇಶ ಕೂಡ ಮಾಡಿದ್ದಾರೆ. ಸರ್ಕಾರದವರು ಮಾಡತಕ್ಕಂತಹ ಕೆಲಸ ಏನೆಂದರೆ, ಹೊರಗುತ್ತಿಗೆ ಮೂಲಕ ನೇಮಕ ಆದಂತಹವರು ವಿಧಿಯಿಲ್ಲದೇ ಅವರ ಜೀವನೋಪಾಯಕ್ಕೆ ಹೊರಗುತ್ತಿಗೆ ಮುಖಾಂತರ ಕೆಲಸ ಮಾಡುತ್ತಿದ್ದಾರೆ. ಆದರೆ, ಕೋರ್ಟ್‌ನ ತೀರ್ಪಿನ ಪ್ರಕಾರ ಅಥವಾ ಸರ್ಕಾರದ ಆದೇಶದ ಪ್ರಕಾರ ಒಬ್ಬ ನೌಕರರನ್ನು ಕೂಡ ತೆಗೆದುಕೊಂಡಿರುವುದಿಲ್ಲ.

**ಸಭಾಪತಿಯವರು**:- ಆಯಿತು. ತಾವು ಹೇಳಿದ ವಿಷಯವನ್ನು ಮತ್ತೆ ಹೇಳಬೇಡಿ. ಮಾನ್ಯ ಸಚಿವರು ತಮ್ಮ ಪ್ರಶ್ನೆಗೆ ಉತ್ತರ ನೀಡುತ್ತಾರೆ.

**ಶ್ರೀ ಹೆಚ್.ಕೆ. ಪಾಟೀಲ್**:- ಮಾನ್ಯ ಸಭಾಪತಿಯವರೇ, ನನ್ನ ಹತ್ತಿರ ಈ ಮಾಹಿತಿ ಇದೆ. ಒಂದು ವೇಳೆ ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಯಾವ ಅಧಿಕಾರಿ ಕೆಲಸ ಮಾಡುತ್ತಿದ್ದಾರೆಂದು ಅವರಲ್ಲಿ ಆ ಕುರಿತು ಒಂದು ಕಲ್ಪನೆ ಅಥವಾ ಮಾಹಿತಿ ಇರಬಹುದು, ಈ ವಿಷಯದಲ್ಲಿ ನಾನು ಸರಿ ಇರಬಹುದು ಅಥವಾ ಮಾನ್ಯ ಸದಸ್ಯರು ಸರಿ ಇರಬಹುದು, ಅದನ್ನು ಲಿಖಿತ ಮೂಲಕ ನನಗೆ ಕೊಡಲಿ, 48 ತಾಸುಗಳಲ್ಲಿ ಆ ಜಿಲ್ಲಾ ಪಂಚಾಯತಿಗೆ ನಮ್ಮ ಹಿರಿಯ ಅಧಿಕಾರಿ ಒಬ್ಬರನ್ನು ಕಳುಹಿಸಿ ತನಿಖೆ ಮಾಡಿಸಿ, ಒಂದು ವೇಳೆ ಆ ರೀತಿ ನಮ್ಮ ಸರ್ಕಾರಕ್ಕೆ ಮೋಸ ಮಾಡತಕ್ಕಂತಹ ಅಥವಾ ಬಿಆರ್‌ಸಿ/ಸಿಆರ್‌ಸಿಗಳನ್ನು ಶೋಷಣೆ ಮಾಡತಕ್ಕಂತಹ ನೌಕರರದಾರರನ್ನು ತೆಗೆದು ಹಾಕುವಂತಹ ಕೆಲಸ ಅವರು ಮಾಡುತ್ತಿದ್ದರೆ ನಾನು ಅಂತಹ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀ ಚೌಡರೆಡ್ಡಿ ತೂಪಲ್ಲಿ**:- ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಈ ವಿಷಯವನ್ನು ಹೇಳಿರುವುದಕ್ಕೆ ಧನ್ಯವಾದಗಳನ್ನು ತಿಳಿಸುತ್ತೇನೆ. ಈಗಾಗಲೇ ಮಾನ್ಯ ಮಂತ್ರಿಗಳು ಈ ಬಿಆರ್‌ಸಿ/ಸಿಆರ್‌ಸಿ ನೌಕರರನ್ನು ತೆಗೆದುಕೊಳ್ಳಬೇಕೆಂದು ಆದೇಶ ಹೊರಡಿಸಿದ್ದಾರೆ. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಹೇಳಿದ ರೀತಿ ನಾನು ಕೂಡ ಸಚಿವರ ಬಳಿ ಹೋದಾಗ ಮಾನ್ಯ ಸಚಿವರು 2 ಬಾರಿ ಆದೇಶ ಮಾಡಿರುವುದಕ್ಕೆ ಅಧಿಕಾರಿಗಳು ಸುತ್ತೋಲೆ ಮಾತ್ರ ಹೊರಡಿಸಿದ್ದಾರೆ. ಆ ಸುತ್ತೋಲೆಯಿಂದ ಏನು ಪ್ರಯೋಜನ ಆಗುವುದಿಲ್ಲ. ಅಗತ್ಯವೆನಿಸಿದರೆ, ಮಾನ್ಯ ಸಚಿವರು ಹೊರಡಿಸಿರುವಂತಹ ಆದೇಶವನ್ನು ಸ್ಪಷ್ಟವಾಗಿ ಓದುತ್ತೇನೆ. ಆದರೆ, ಈ ಬಗ್ಗೆ ಅಧಿಕಾರಿಗಳು ಯಾವುದೇ ಆದೇಶವನ್ನೇ ಹೊರಡಿಸಿರುವುದಿಲ್ಲ.

**ಶ್ರೀ ಹೆಚ್.ಕೆ. ಪಾಟೀಲ್**:- ಮಾನ್ಯ ಸಭಾಪತಿಯವರೇ, ಈ ಬಿಆರ್‌ಸಿ ಮತ್ತು ಸಿಆರ್‌ಸಿಗಳನ್ನು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ನೇಮಕ ಮಾಡಿಕೊಂಡಿರುತ್ತಾರೆ. ಅವರನ್ನು ಕೋರ್ಟ್ ತೀರ್ಪಿನ ಪ್ರಕಾರ ಮುಂದುವರೆಸುವುದರ ಬಗ್ಗೆ ಸ್ಪಷ್ಟವಾಗಿರತಕ್ಕಂತಹ ಸೂಚನೆಯನ್ನು ನಾವು ಕೊಟ್ಟಿದ್ದೇವೆ. ಆ ಸೂಚನೆ ಪ್ರಕಾರ ಇಂತಹ ಜಿಲ್ಲಾ ಪಂಚಾಯತಿಗಳಲ್ಲಿ ಆಗಿಲ್ಲವೆಂದು ಹೇಳುವುದಾದರೆ, ಅದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ಜಿಲ್ಲಾ ಪಂಚಾಯತಿ ಇರಬಹುದು ಅಥವಾ ಎರಡು ಜಿಲ್ಲಾ ಪಂಚಾಯತಿ ಇರಬಹುದು ಅದು ಯಾವುದೆಂದು ತಿಳಿಸಿದರೆ, ಅತ್ಯಂತ ಹಿರಿಯ ಅಧಿಕಾರಿಯನ್ನು ಅಲ್ಲಿಗೆ ಕಳುಹಿಸಿಕೊಟ್ಟು ತನಿಖೆ ಮಾಡಿಸುತ್ತೇನೆ. ನಂತರ, ಅದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕು ಅದನ್ನು ನಾವು ತೆಗೆದುಕೊಳ್ಳುತ್ತೇವೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ...

**ಶ್ರೀ ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಆದೇಶಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಆದೇಶ ಮಾಡಿರುವುದನ್ನು ತೋರಿಸಲಿ.

**ಸಭಾಪತಿಯವರು:-** ಮಾನ್ಯ ಚೌಡರೆಡ್ಡಿ ತೂಪಲ್ಲಿಯವರೇ, ಒಂದೇ ಪ್ರಶ್ನೆಗೆ ಅಂತಿಮ ಉತ್ತರ ಸಿಗುವುದಿಲ್ಲ.

**ಶ್ರೀ ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಕೋರ್ಟ್ ತೀರ್ಪಿನ ಪ್ರಕಾರ...

**ಶ್ರೀ ಹೆಚ್.ಕೆ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಕೋರ್ಟ್ ತೀರ್ಪಿನ ಅನ್ವಯವೇ 44 ಬಿಆರ್‌ಸಿ ಮತ್ತು 122 ಸಿಆರ್‌ಸಿ ಗಳನ್ನು ಕರ್ತವ್ಯದಲ್ಲಿ ಮುಂದುವರೆಸಿದ್ದೇವೆ.

**ಶ್ರೀ ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಯವರ ಆದೇಶದ ಮೇರೆಗೆ, ಸಂಬಂಧಪಟ್ಟ ಅಧಿಕಾರಿಗಳು ಹೊರಡಿಸಿರುವ ಆದೇಶದ ಪ್ರತಿಯನ್ನು ಕೊಟ್ಟರೆ ಸಾಕು. ಆದೇಶದ ಪ್ರತಿ ಇಲ್ಲದೇ ಕೇವಲ ಸುತ್ತೋಲೆ ಹೊರಡಿಸಿದ್ದಾರೆ. ಆದರೆ, ಮಾನ್ಯ ಸಚಿವರು ಆದೇಶ ಹೊರಡಿಸಿದ್ದೇವೆಂದು ಹೇಳುತ್ತಿದ್ದಾರೆ.

**ಶ್ರೀ ಹೆಚ್.ಕೆ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಅನುಬಂಧದಲ್ಲಿ ಈ ಬಗ್ಗೆ ಉತ್ತರ ಕೊಟ್ಟಿದ್ದೇವೆ. ಅದರೊಳಗೆ ಮೇಲಿನ ಅಂಶಗಳನ್ನು ಪರಿಗಣಿಸಿ ನಾವು ಸುಮಾರು 5 ಅಂಶಗಳ ಹಿನ್ನೆಲೆಯೊಳಗೆ ಸಂಬಂಧಪಟ್ಟವರಿಗೆ ಸೂಚನೆ ಕೊಟ್ಟಿದ್ದೇವೆ. ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ ಮಾನ್ಯ ಕರ್ನಾಟಕದ ಉಚ್ಛ ನ್ಯಾಯಾಲಯದ ಆದೇಶದ ಉಲ್ಲಂಘನೆಯಾಗದಂತೆ, ಕ್ರಮ ವಹಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈಗಾಗಲೇ ನಿರ್ದೇಶನ ನೀಡಿರುತ್ತಾರೆ. ಈ ಸುತ್ತೋಲೆ ಮೇರೆಗೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ತೆಗೆದುಕೊಂಡಿದ್ದಾರೆ. ಒಂದು ವೇಳೆ ಕ್ರಮ ತೆಗೆದುಕೊಂಡಿಲ್ಲವೆಂದು ಹೇಳುವುದಾದರೆ, ನಾನು ಈಗಾಗಲೇ ತಿಳಿಸಿದ ರೀತಿ ನಾನು ಮುಂದುವರೆಯುತ್ತೇನೆ.

ದಿನಾಂಕ: 03.11.2017 ರ ಅನುಬಂಧ-2 ರಲ್ಲಿ, ಮಾನ್ಯ ಸದಸ್ಯರಿಗೆ ಕೊಟ್ಟಿರತಕ್ಕಂತಹ ಪೂರಕ ಟಿಪ್ಪಣಿಯನ್ನು ಮಾತ್ರ ಅವರು ಓದಿ ಹೇಳುತ್ತಿದ್ದಾರೆ. ಆದರೆ, ದಯಮಾಡಿ ಒಂದು ಸುತ್ತೋಲೆ ಇದೆ. ನಮ್ಮ ಆಯುಕ್ತರು ಹಾಗೂ ಪದನಿಮಿತ್ತ ಕಾರ್ಯದರ್ಶಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯೋಜನೆ ಇವರು ರಾಜ್ಯದ ಎಲ್ಲಾ 30 ಜಿಲ್ಲೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಈ ಸುತ್ತೋಲೆಯನ್ನು ಕಳುಹಿಸಿದ್ದಾರೆ.

**ಶ್ರೀ ಚೌಡರೆಡ್ಡಿ ತೂಪಲ್ಲಿ**:- ಮಾನ್ಯ ಸಭಾಪತಿಯವರೇ, ಆ ಹಂತದಲ್ಲಿಯೇ ತಪ್ಪಾಗಿದೆ ಎಂದು ನಾನು ಹೇಳುತ್ತಿರುವುದು. ಮಾನ್ಯ ಸಚಿವರು ಕೊಟ್ಟಿರತಕ್ಕಂತಹ ಟಿಪ್ಪಣಿಯಲ್ಲಿ ಏನಿದೆಯೆಂದರೆ, ಈ ಬಗ್ಗೆ ಆದೇಶ ಮಾಡಬೇಕೆಂದು ಹೇಳಿದ್ದಾರೆ. ಆದರೆ, ಅಧಿಕಾರಿಗಳು ಈ ಬಗ್ಗೆ ಸುತ್ತೋಲೆ ಮಾತ್ರ ಹೊರಡಿಸಿದ್ದಾರೆ. ಈ ಸುತ್ತೋಲೆ ಮೇರೆಗೆ ಯಾವುದೇ ಜಿಲ್ಲಾಧಿಕಾರಿಗಳು ಅದನ್ನು ಅನುಷ್ಠಾನಗೊಳಿಸಿರುವುದಿಲ್ಲ. ಆ ಬಿಆರ್‌ಸಿ ಯಲ್ಲಿ ಕೆಲಸ ಮಾಡುತ್ತಿರುವ 44 ಜನರನ್ನು ಮೊದಲಿಂದಲೂ ಹೊರಗುತ್ತಿಗೆ ಮೇರೆಗೆ ತೆಗೆದುಕೊಂಡಿದ್ದು, ಅವರು ಈಗಲೂ ಹೊರಗುತ್ತಿಗೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅದನ್ನೇ ಅಧಿಕಾರಿಗಳು ನಮಗೆ ಉತ್ತರದಲ್ಲಿ ಮಾಹಿತಿ ಕೊಟ್ಟಿದ್ದಾರೆ. ದಯವಿಟ್ಟು, ಮಾನ್ಯ ಸಚಿವರು ಏನು ಆದೇಶ ಮಾಡಿದ್ದಾರೆ, ಅದನ್ನು ಅಧಿಕಾರಿಗಳು ಪಾಲನೆ ಮಾಡಿರುವುದಿಲ್ಲ. ಜಿಲ್ಲಾಧಿಕಾರಿಗಳು ಸರ್ಕಾರದಿಂದ ಬಂದಂತಹ ಸುತ್ತೋಲೆಯನ್ನು ಅನುಷ್ಠಾನಗೊಳಿಸಿರುವುದಿಲ್ಲ. 44 ಬಿಆರ್‌ಸಿ ಮತ್ತು 122 ಸಿಆರ್‌ಸಿ ಯವರನ್ನು ಮೊದಲಿಂದಲೂ ಹೊರಗುತ್ತಿಗೆ ಮೇರೆಗೆ ಏನು ಕೆಲಸ ಮಾಡುತ್ತಿದ್ದರು, ಈಗಲೂ ಕೂಡ ಅದೇ ರೀತಿ ಅವರನ್ನು ಮುಂದುವರೆಸಿದ್ದಾರೆ. ಸರ್ಕಾರದ ಸುತ್ತೋಲೆ ಮೇರೆಗೆ ಒಬ್ಬರನ್ನೂ ಸಹ ಮುಂದುವರೆಸಿರುವುದಿಲ್ಲ.

**ಶ್ರೀ ಹೆಚ್.ಕೆ. ಪಾಟೀಲ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ವಿಷಯದಲ್ಲಿ ಗೊಂದಲ ಮಾಡಿಕೊಳ್ಳಬಾರದು. ಸದರಿ ನೌಕರರು ಹೊರಗುತ್ತಿಗೆ ಮುಖಾಂತರ ನೇಮಕ ಆಗಿದ್ದರೆ, ಅವರು ಹೊರಗುತ್ತಿಗೆಯಲ್ಲಿ ಮುಂದುವರೆಯುತ್ತಾರೆ. ಒಂದು ವೇಳೆ ಬಿಆರ್‌ಸಿ ಅಥವಾ ಸಿಆರ್‌ಸಿ ಮೇರೆಗೆ ನೇಮಕ ಮಾಡಿಕೊಂಡಿದ್ದು, ಅಧಿಕಾರಿಗಳು ಯಾರನ್ನು discontinue ಮಾಡಿದ್ದಾರೆ, ಒಂದು ವೇಳೆ ಆ ನೌಕರರು ನಮ್ಮಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಕೋರ್ಟ್ ಆದೇಶ ಆಗುವ ಮಧ್ಯದೊಳಗೆ ಅವರು discontinue ಆಗಿದ್ದರೆ, ಕೋರ್ಟ್ ಆದೇಶದನ್ವಯ ಅವರು ಯಾವ ದಿವಸ ಕೋರ್ಟ್‌ಗೆ ಹೋಗಿದ್ದಾರೆ, ಆ ದಿವಸದಿಂದಲೇ ಅವರನ್ನು ಮುಂದುವರೆಸುತ್ತೇವೆ. ಅವರನ್ನು ಬಿಟ್ಟು ಮತ್ತೊಬ್ಬರು ಹೊರಗುತ್ತಿಗೆ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿದ್ದರೆ ಅವರಿಗೆ ಈ ಕೋರ್ಟ್‌ನ ತೀರ್ಪು ಅನ್ವಯವಾಗುವುದಿಲ್ಲ.

**ಶ್ರೀ ಚೌಡರೆಡ್ಡಿ ತೂಪಲ್ಲಿ**:- ಮಾನ್ಯ ಸಭಾಪತಿಯವರೇ, ನಾನು ಯಾವುದೇ ರೀತಿಯ ಗೊಂದಲ ಮಾಡಿಕೊಳ್ಳುತ್ತಿಲ್ಲ. ದಯಮಾಡಿ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಮಾನ್ಯ ಸಚಿವರು ಕೊಟ್ಟಂತಹ ಸುತ್ತೋಲೆ ಮೇರೆಗೆ ಸಂಬಂಧಪಟ್ಟ ಅಧಿಕಾರಿಗಳು ಆದೇಶ ಹೊರಡಿಸಿರುವುದಿಲ್ಲ.

**ಸಭಾಪತಿಯವರು**:- ಮಾನ್ಯ ಸಚಿವರು ತಮ್ಮ ಪ್ರಶ್ನೆಗೆ ಉತ್ತರ ನೀಡಿದ್ದಾರೆ. ಪ್ರಶ್ನೋತ್ತರ ಅವಧಿಯಲ್ಲಿ, ಆದೇಶ ಮಾಡುವುದಕ್ಕಾಗುತ್ತದೆಯೇ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**:- ಮಾನ್ಯ ಸಭಾಪತಿಯವರೇ...

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು**:- ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರೇ ಸಾಕು. ದಯಮಾಡಿ ಕುಳಿತುಕೊಳ್ಳಿ. ಒಂದು ಪ್ರಶ್ನೆಗೆ 20 ನಿಮಿಷ ಸಮಯ ನೀಡಬೇಕೇ? ಈ ರೀತಿಯಾದರೆ ನಾನು ಪ್ರಶ್ನೋತ್ತರ ಅವಧಿ ಮುಂದುವರೆಸುವುದಕ್ಕೆ ಆಗುವುದಿಲ್ಲ. ಮಾನ್ಯ ಸಚಿವರು ತಮ್ಮ ಪ್ರಶ್ನೆಗೆ ಉತ್ತರ ನೀಡಿದ್ದಾರೆ. ತಾವು ಅವರ ಬಳಿ ಮಾತನಾಡಿ.

(242)23.02.2018/ವೈಎಲ್-ಬಿಎನ್ಎಸ್/11.00

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ**:- ಮಾನ್ಯ ಸಭಾಪತಿಯವರೇ, ನಾನು ಪದವೀಧರರ ಕ್ಷೇತ್ರದಿಂದ ಆಯ್ಕೆಯಾಗಿದ್ದು, ಇವತ್ತಿನ ದಿನ 50 ಜನ ಪದವೀಧರರಿಗೆ ಅನ್ಯಾಯವಾಗಿದೆ. ನಾನು 3 ವರ್ಷಗಳಿಂದ ಸಚಿವರಲ್ಲಿ ವಿನಂತಿ ಮಾಡುತ್ತಿದ್ದೇನೆ. ಸಚಿವರು ಇದಕ್ಕೆ ಉತ್ತರವನ್ನು ನೀಡುತ್ತಿದ್ದಾರೆ. ಅಧಿಕಾರಿಗಳು ಉತ್ತರವನ್ನು ನೀಡುತ್ತಿಲ್ಲ.

**ಸಭಾಪತಿಯವರು**:- ಆಯ್ತು ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ**:- ಮಾನ್ಯ ಸಭಾಪತಿಯವರೇ, ನಾನು ಪದವೀಧರರ ಕ್ಷೇತ್ರದಿಂದ ಆಯ್ಕೆಯಾಗಿ ಬಂದವನಾಗಿದ್ದು, ಪದವೀಧರರಿಗೆ ನ್ಯಾಯವನ್ನು ದೊರಕಿಸಿಕೊಡಲಿಲ್ಲವೆಂದರೆ ನಾನು ಏಕೆ ಸದನಕ್ಕೆ ಬರಬೇಕು. ತಕ್ಷಣವೇ ಇದರ ಬಗ್ಗೆ ತೀರ್ಮಾನ ಮಾಡಿ, ಆದೇಶ ಹೊರಡಿಸಬೇಕು.

**ಶ್ರೀ ಹೆಚ್.ಕೆ.ಪಾಟೀಲ್**:- ಮಾನ್ಯ ಸಭಾಪತಿಯವರೇ, ಪದವೀಧರರು ನಮಗೂ ಪದವೀಧರರೆ, ಅವರು ನಮ್ಮ ನೌಕರರು ಅವರಿಗೆ ಶೋಷಣೆಯಾಗಬಾರದು. ಬೇಕಾದರೆ ಕಡತವನ್ನು ತೆಗೆದುಕೊಂಡು ನಿಮ್ಮ ಹತ್ತಿರ ಬರುತ್ತೇವೆ. ಒಂದು ಪಕ್ಷದಲ್ಲಿಯೋ ಒಂದು ಕಡೆ ತಮಗೂ ಆ ಆದೇಶದಲ್ಲಿ ಗೊಂದಲ ಇದೆ ಎಂದು ಅನಿಸಿದರೆ ನೀವೇ ಆದೇಶವನ್ನು ಹೊರಡಿಸಿ. ನಮ್ಮ ಇಲಾಖೆಯವರೆ ಅದನ್ನು ಸೂಕ್ತವಾಗಿ ಅನುಸರಿಸುತ್ತಾರೆ.

(ಗೊಂದಲ)

**ಸಭಾಪತಿಯವರು**:- ಆಯ್ತು, ಧನ್ಯವಾದಗಳು.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ**:- ಮಾನ್ಯ ಸಭಾಪತಿಯವರೇ, ಸ್ವಲ್ಪ ಇರಿ. ನಾವು 3 ವರ್ಷದಿಂದಲೂ ಮಾನ್ಯ ಸಚಿವರನ್ನು ಇದರ ಬಗ್ಗೆ ಕೇಳುತ್ತಿದ್ದೇವೆ. (ಗೊಂದಲ) ನಮಗೆ ಒಂದು ಕೆಲಸ ಮಾಡಿ.

**ಸಭಾಪತಿಯವರು**:- ಮಾನ್ಯ ಸದಸ್ಯರೆ ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ**:- ಮಾನ್ಯ ಸಭಾಪತಿಯವರೇ, ನ್ಯಾಯಾಲಯದ ಆದೇಶದ ಪ್ರಕಾರ (ಗೊಂದಲ) ಅವರಿಗೆ ಮಾಡಿಕೊಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸಚಿವರು ಮಾಡುತ್ತೇವೆ ಎಂದು ಹೇಳಿದ್ದಾರೆ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಇಲಾಖಾ ಅಧಿಕಾರಿಗಳು ಮಾಡಲಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೆ ಮುಂದೆ ಮಾಡುತ್ತೇವೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ.

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೇ,....

**ಸಭಾಪತಿಯವರು:-** ಮಾನ್ಯ ಸಚಿವರೆ ಎಷ್ಟು ಸಲ ಹೇಳುತ್ತೀರಿ ಕುಳಿತುಕೊಳ್ಳಿ.

**ಪ್ರಶ್ನೆ ಸಂಖ್ಯೆ : 1154**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆರ್.ಪ್ರಸನ್ನ ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿ, ಎಲ್ಲಾ ವಿವರಗಳನ್ನು ಸಹ ಹೇಳಿದ್ದಾರೆ. ಸರ್ಕಾರಿ ಪ್ರಾಯೋಜಿತ KRIDL (Karnataka Rural Infrastructure Development Ltd.) ಸಂಸ್ಥೆಯ ಮೂಲಕ ಕಾಮಗಾರಿಗಳನ್ನು ನಿರ್ವಹಿಸುವ ಸಂದರ್ಭದಲ್ಲಿ ಯಾವ ಯಾವ ಶುಲ್ಕವನ್ನು ಭರಿಸುತ್ತೀರಿ ಎಂದು ಕೇಳಿರುವ ಪ್ರಶ್ನೆಗೆ ಸೇವಾ ಶುಲ್ಕ-3%, GST (Goods and Services Tax)-7%, Labour Cess-1% ಅನ್ನು ತೆಗೆದುಕೊಳ್ಳುತ್ತಿದ್ದೇವೆ ಎಂದು ತಿಳಿಸಿದ್ದಾರೆ. ನನಗೆ ಮಾನ್ಯ ಮುಖ್ಯಮಂತ್ರಿಗಳ ಗ್ರಾಮ ವಿಕಾಸ ಯೋಜನೆ ಅಡಿಯಲ್ಲಿ ರೂ.1.00 ಕೋಟಿಗಳಷ್ಟು ಕೆಲಸ ನೀಡಿದ್ದರು. ನಾನು ಅದನ್ನು ಒಂದು ಗ್ರಾಮಕ್ಕೆ ನೀಡಿ ರೂ.1.00 ಕೋಟಿಗಳಿಗೆ ಕೆಲಸ ಮಾಡಬೇಕೆಂದು ತಿಳಿಸಿದಕ್ಕೆ ರೂ.79.00 ಲಕ್ಷಕ್ಕೆ ನೇರವಾಗಿ ಎಸ್ಟಿಮೇಟ್ ಮಾಡಿದ್ದು, ಶೇಕಡ 21 ರಷ್ಟು ಕಡಿತಗೊಳಿಸಿದ್ದಾರೆ. ಇದರಲ್ಲಿ ಶೇಕಡ 10 ರಷ್ಟು savings ಅನ್ನು ಸಹ ಸೇರಿಸಿಲ್ಲ. ಇದರಲ್ಲಿ statutory deductions ಎಂದರೆ, GST 7%, Labour Cess 1%. ಇನ್ನು 10% savings ಮತ್ತು 3% ಸೇವಾ ಶುಲ್ಕವನ್ನು ಒಟ್ಟು 13% ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ. ನಾವೇನಾದರೂ ಈ ಕೆಲಸವನ್ನು PRED (Panchayat Raj Engineering Department) ಮೂಲಕ ಮಾಡಿಸಿದರೆ ಖಂಡಿತವಾಗಿ 85 ರಿಂದ 90 ಲಕ್ಷದವರೆಗೆ ಕೆಲಸವಾಗುತ್ತಿತ್ತು. Tender process ನಿಂದ ಕೆಲಸ ವಿಳಂಬವಾಗುತ್ತದೆ ತಕ್ಷಣವೇ ಕೆಲಸವಾಗಬೇಕೆಂಬ ಉದ್ದೇಶದಿಂದ KRIDL ಮೂಲಕ ಕೆಲಸ ಮಾಡಿಸಬೇಕೆಂದು ಹೇಳುವುದರಿಂದ ಇವತ್ತು ರೂ.1.00 ಕೋಟಿಯಲ್ಲಿ ಶೇಕಡ 21 ರಷ್ಟು ನೇರವಾಗಿ ಕಡಿತಗೊಂಡು, ರೂ.79.00 ಲಕ್ಷದಲ್ಲಿ ಕೆಲಸವಾಗುವ ಪರಿಸ್ಥಿತಿ ಇದೆ. ಜೊತೆಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಿಮೆಂಟ್ ಮತ್ತು ಕಬ್ಬಿಣ ಎರಡನ್ನು KRIDL ಸಂಸ್ಥೆಯೇ ಸರಬರಾಜು ಮಾಡುತ್ತಿದೆ. ಆದರೆ, ಇವತ್ತಿನ ದಿವಸ ಸರ್ಕಾರದ ದರವೇನಿದೆ, ಅದು ಮಾರುಕಟ್ಟೆ ದರಕ್ಕಿಂತ ಸುಮಾರು 40 ರಿಂದ 50 ರೂಪಾಯಿಗಳಷ್ಟು ಸಿಮೆಂಟ್ ಮತ್ತು ಕಬ್ಬಿಣದ ದರ ಹೆಚ್ಚಾಗಿ ಇದೆ. ಇದರಿಂದಾಗಿ ಕೆಲಸ ಕಡಿಮೆ ಆಗುತ್ತದೆ ಎಂಬುದು ನನ್ನ ಉದ್ದೇಶ. ಇನ್ನೊಂದು ವಿಚಾರವೇನೆಂದರೆ, ಈ ಕೆಲಸವನ್ನು ನೋಡಿಕೊಳ್ಳುವುದಕ್ಕೆ ಸಾಕಷ್ಟು ನೌಕರರು ಅಥವಾ ಇಂಜಿನಿಯರ್ಸ್ ಯಾರು ಅಲ್ಲಿ ಇಲ್ಲ. ಹಾಗಾಗಿ ಸದರಿ ಸಂಸ್ಥೆಯವರು ರೂ.1.00 ಕೋಟಿಯಲ್ಲಿ ಶೇಕಡ 21 ರಷ್ಟು ಕಡಿತಗೊಳಿಸಿ ಮಾಡುವಂತಹ ಕೆಲಸವನ್ನು ಯಾವ ರೀತಿ ಮಾಡಿಸುತ್ತಿದ್ದಾರೆ ಎಂಬುದರ ಬಗ್ಗೆ ಸಚಿವರು ವಿವರಕೊಡಬೇಕೆಂದು ಹೇಳುತ್ತೇನೆ ಹಾಗೂ 2012-13ನೇ ಸಾಲಿನಿಂದ 2017ನೇ ಡಿಸೆಂಬರ್ ಮಾಹೆಯವರೆಗೂ 5 ವರ್ಷದಲ್ಲಿ ರೂ.10,398.42 ಕೋಟಿಗಳಷ್ಟು ಕೆಲಸವಾಗಿದ್ದು, ಅದರಲ್ಲಿ 10% savings ಗಾಗಿಯೇ 1,039.00 ಕೋಟಿ ರೂಪಾಯಿಗಳಷ್ಟು ಆಗುತ್ತದೆ. ಹೆಚ್ಚು ಹೆಚ್ಚಾಗಿ ಕೆಲಸವಾಗಬೇಕೆಂದು ಹೇಳುತ್ತಿದ್ದೇವೆ. ಹಾಗಾಗಿ ರೂ.10,000 ಚಿಲ್ಲರೆ ಕೋಟಿಗೆ ಒಂದು ಸಾವಿರ ಚಿಲ್ಲರೆ ಕೋಟಿಯಷ್ಟು ಸರ್ಕಾರವೇ ಲಾಭವನ್ನು ಪಡೆದುಕೊಂಡರೆ, ಕೆಲಸ ಕಡಿಮೆ ಪ್ರಮಾಣದಲ್ಲಿ ನಡೆಯುತ್ತದೆ. ಆದ್ದರಿಂದ ಇದರ ವಿವರವನ್ನು ಮಾನ್ಯ ಸಚಿವರು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಕಳಕಳಿಯು ನನಗೆ ಅರ್ಥವಾಗುತ್ತದೆ. ಆದರೆ, ಪುನಃ ಪುನಃ 21% ಎಂದು ಹೇಳಿದರೆ,.... ನಾವು 1.00 ಕೋಟಿ ರೂಪಾಯಿಗಳಷ್ಟು ಕೆಲಸವನ್ನು ನೀಡಿ, ಕೇವಲ ರೂ.79.00 ಲಕ್ಷದಷ್ಟು ಕೆಲಸ ಮಾತ್ರ ಆಗುತ್ತದೆ. ಉಳಿದ ರೂ.21.00 ಲಕ್ಷದಷ್ಟು ದೊಡ್ಡ ಮೊತ್ತವನ್ನು ಅವರು ಉಳಿಸಿಕೊಳ್ಳುತ್ತಾರೆ ಎಂಬ ಭಾವನೆ ನನಗೂ ಬರುತ್ತದೆ. ಇದಕ್ಕೆ ಕಾರಣವೇನೆಂಬುದನ್ನು ಗಮನಿಸಬೇಕಾಗುತ್ತದೆ. KRIDL ಸಂಸ್ಥೆ ಅಂದರೆ Land Army ಎಂದು ಈ ಮೊದಲು ನಾವು ಏನು ಕರೆಯುತ್ತಿದ್ದೆವು ಆ ಸಂಸ್ಥೆಗೆ ಸರ್ಕಾರದವರಾಗಲಿ, ಇನ್ನಾವುದೇ ಏಜೆನ್ಸಿಯವರಾಗಲಿ ಅಥವಾ ಬೇರೆಯವರಾಗಲಿ ನೀಡತಕ್ಕಂಥ ಕೆಲಸವೇನಿದೆ ಅದಕ್ಕೆ ನಿರ್ವಹಣಾ ವೆಚ್ಚ ತೆರಿಗೆಗಳು ಎಂದು ಏನು statutory taxes ಇವೆ ಅದು ಸೇವಾ ಶುಲ್ಕ 3%, GST 7%, Labour Cess 1% ಇದೆ. ಇದೆಲ್ಲಾ ಸೇರಿ 11% ರಷ್ಟಾಗುತ್ತದೆ. ಇದಲ್ಲದೆ, KRIDL ಗೆ ಒಂದು ಕೆಲಸದಲ್ಲಿ upto 10%, not necessarily 10%, upto 10% they should take profit. ಯಾವುದೇ ಕೆಲಸವನ್ನು ಒಂದು ಸಂಸ್ಥೆಯಾಗಲಿ, ಏಜೆನ್ಸಿಯಾಗಲಿ ಅಥವಾ ಒಬ್ಬ ವ್ಯಕ್ತಿ ಮಾಡಿದಾಗ ಆತನಿಗೂ ಲಾಭಾಂಶ ಇರಬೇಕಾಗುತ್ತದೆ. ಆ ಲಾಭಾಂಶ ಗರಿಷ್ಠ 10% ರಷ್ಟು ಇರಬೇಕು. ಕೆಲವೊಂದರಲ್ಲಿ ಶೇಕಡ 7 ರಷ್ಟು ಇರಬಹುದು. ಹಾಗೆಯೇ water units ನಲ್ಲಿ we have slashed it down, we have not taken any profit. ಹೀಗೆ ಕೆಲವು ಶಾಲಾ ಕಟ್ಟಡಗಳ ನಿರ್ಮಾಣದಲ್ಲಿ ಅದನ್ನು ಶೇಕಡ 5 ರಷ್ಟು ಇಳಿಸಲಾಗಿದೆ. ಅದರ ವಿವೇಚನಾ ಅಧಿಕಾರವನ್ನು ಬೋರ್ಡ್‌ಗೆ ಕೊಟ್ಟಿದ್ದೇವೆ. ಆದರೆ, ಸಾಮಾನ್ಯವಾಗಿ road work

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಯಾವುದೇ ಇರಬಹುದು. ಅದರಲ್ಲಿ ಎಲ್ಲಾ ಶೇಕಡ 10 ರಷ್ಟು ಮೀಸಲಿರಿಸಲಾಗಿದೆ. ಖಾಸಗಿಯವರು ಹೇಗೆ ಮಾಡುತ್ತಾರೆ ಎಂದು ಕೇಳುತ್ತಾರೆ. ಅವರು ಕೇಳುವುದು ತಪ್ಪಲ್ಲ. ಖಾಸಗಿ ಸಂಸ್ಥೆಯವರು ಟೆಂಡರ್ ಕರೆಯುವಾಗ ಶೇಕಡ 7% -10% ರಷ್ಟು excess ಹಾಕಿರುತ್ತಾರೆ. ಆದರೆ, Schedule of Rates ಏನಿರುತ್ತದೆ ಅದಕ್ಕೆ ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಒಪ್ಪಿಕೊಂಡ ಸಂದರ್ಭದಲ್ಲಿ ಅಲ್ಲಿರತಕ್ಕಂಥ local situations ನೋಡಿ ಗರಿಷ್ಟ 10% ವರೆಗೂ ಮಾಡುತ್ತೇವೆ. ನಮಗೂ ಶೇಕಡ 21 ರಷ್ಟು ಮೊತ್ತವು ಸಂಸ್ಥೆಗೆ ಹೋಗುತ್ತದೆ ಎಂದು ಅನಿಸುತ್ತದೆ. ಆದರೆ, ಅನಿವಾರ್ಯವಾಗಿದೆ. ಸಂಸ್ಥೆಯನ್ನು ನಡೆಸಬೇಕು ಮುಂದುವರೆಸಬೇಕು ಎನ್ನುವ ದೃಷ್ಟಿಯಿಂದ ಆ ರೀತಿ ಮಾಡಲಾಗುತ್ತದೆ. ಹೆಚ್ಚು ಲಾಭವಾಗುತ್ತಿದ್ದರೆ ಅದನ್ನು ಕಡಿತಗೊಳಿಸುವುದಕ್ಕೆ ಚಿಂತನೆ ಮಾಡಬಹುದು. ಸದ್ಯಕ್ಕೆ ಆ ರೀತಿಯ ಪರಿಸ್ಥಿತಿ ಇಲ್ಲ. ಗಳಿಸಿರತಕ್ಕಂಥ ಲಾಭವೇನಿದೆ, now it is one of the profit making Institutions and if you look at qualitywise, ನಮ್ಮ ಉಡುಪಿ ಜಿಲ್ಲಾ ಪಂಚಾಯಿತಿ ಕಛೇರಿಯನ್ನು ನೋಡಿದರೆ Land Army ಯವರು ಎಂತಹ ಕೆಲಸ ಮಾಡುತ್ತಿದ್ದಾರೆ ಎಂಬುದು ನಿಮ್ಮ ಗಮನಕ್ಕೆ ಬರುತ್ತದೆ. ಅದೇ ರೀತಿ challenging situation ನಲ್ಲಿ ನಮ್ಮ ಶುದ್ಧ ಕುಡಿಯುವ ನೀರಿನ 7 ಸಾವಿರ ಘಟಕವನ್ನು ಮಾಡುವುದಕ್ಕೆ ನಮ್ಮ ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಿ, ಸದರಿ ಕೆಲಸವನ್ನು ಮಾಡಲೇಬೇಕೆಂದು ಪ್ರಯತ್ನ ಮಾಡಿದಂತಹ ಸಂದರ್ಭದಲ್ಲಿ ಅದನ್ನು ಸವಾಲಾಗಿ ಸ್ವೀಕರಿಸಿ ಕೆಲಸ ಮಾಡಿದರೂ, ಕಳಪೆ ಕೆಲಸದ ಬಗ್ಗೆಯೂ ನಮ್ಮ ಹತ್ತಿರ ದೂರು ಬಂದಿಲ್ಲವೆಂದು ಏನಿಲ್ಲ. ಅಲ್ಲಿಯೂ ತಿದ್ದುವಂತಹ ಪ್ರಯತ್ನ ಮಾಡುತ್ತಿದ್ದೇವೆ. ಇವತ್ತು ಅವರು ಮಾಡಿರತಕ್ಕಂಥ ಲಾಭಾಂಶದಲ್ಲಿ ಶೇಕಡ 2 ರಷ್ಟು ಹಣವನ್ನು CSR (Corporate Social Responsibility) ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಗಾಗಿ ಬಳಕೆ ಮಾಡುತ್ತೇವೆ. ಕರ್ನಾಟಕ ರಾಜ್ಯದ ಈ ಸಂಸ್ಥೆಯಲ್ಲಿ ತೊಡಗಿಸಿರುವ ಷೇರುದಾರರಿಗೆ ಬಂಡವಾಳದ ಮೊತ್ತಕ್ಕೆ ಅನುಗುಣವಾಗಿ ಈ ಸಂಸ್ಥೆಯ ಲಾಭಾಂಶದಲ್ಲಿ ಶೇ.20% dividend ಅನ್ನು ಕೊಡುತ್ತಿದ್ದೇವೆ. ಆದ್ದರಿಂದ ಬರತಕ್ಕಂಥ ಲಾಭಾಂಶವನ್ನು ಈ ರೀತಿಯಲ್ಲಿ ವಿತರಣೆ ಮಾಡುತ್ತಿದ್ದೇವೆ. ಇನ್ನು ತಿದ್ದುಪಡಿ ಮಾಡಬೇಕು, ಸುಧಾರಣೆ ಮಾಡಬೇಕು ಎನ್ನುವುದಾದರೆ ಬಹಳಷ್ಟು ಅವಕಾಶ ಇದೆ. ಆ ಕೆಲಸಗಳನ್ನು ಮಾಡುವುದರಲ್ಲಿ ಪ್ರಯತ್ನ ಮಾಡುತ್ತೇವೆ. ಹಾಗೆಯೇ ನೇಮಕಾತಿ ಮಾಡುವುದರ ಬಗ್ಗೆ ಕಡಿಮೆ ನೌಕರರಿದ್ದಾರೆ ಎಂದು ತಿಳಿಸಿದ್ದಾರೆ. ಅವರ ಮಾತು ಸತ್ಯ. ಈಗಾಗಲೇ ನೌಕರರ ನೇಮಕಾತಿಗಾಗಿ ಹೈದ್ರಾಬಾದ್-ಕರ್ನಾಟಕ ಪ್ರದೇಶದಿಂದ 44 ಇಂಜಿನಿಯರ್ಸ್ ಅನ್ನು ನೇಮಕ ಮಾಡಿಕೊಳ್ಳುತ್ತಿದ್ದೇವೆ. ಈ ಸಂಬಂಧ ಇಷ್ಟರಲ್ಲಿಯೇ ಆದೇಶವನ್ನು ಹೊರಡಿಸಲಾಗುತ್ತದೆ. Non-Hyderabad-Karnataka ಪ್ರದೇಶದಿಂದ 65 ಇಂಜಿನಿಯರ್ಸ್ ಅನ್ನು ನೇಮಕ ಮಾಡಿಕೊಳ್ಳುತ್ತಿದ್ದೇವೆ. ಇವರುಗಳನ್ನೆಲ್ಲಾ merit-cum-reservation ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುವುದು. ಇದುವರೆಗೂ ಯಾವುದೇ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೀತಿಯ ತಕರಾರು ಮತ್ತು ದೂರುಗಳು ಬಂದಿಲ್ಲ. ಈ 119 ಜನ ಇಂಜಿನಿಯರ್ಸ್ ಸಂಸ್ಥೆಗೆ ಬಂದ ಮೇಲೆ ಪರಿಸ್ಥಿತಿ ಸ್ವಲ್ಪ ಸುಲಭವಾಗುತ್ತದೆ.

**ಶ್ರೀ ಆರ್.ಪ್ರಸನ್ನ ಕುಮಾರ್**:- ಮಾನ್ಯ ಸಭಾಪತಿಯವರೇ,

**ಸಭಾಪತಿಯವರು**:- ಸಾಕು 10 ನಿಮಿಷವಾಗಿದೆ.

**ಶ್ರೀ ಆರ್.ಪ್ರಸನ್ನ ಕುಮಾರ್**:- ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಸಿಮೆಂಟ್ ಮತ್ತು ಕಬ್ಬಿಣದ ವಿಚಾರದ ಬಗ್ಗೆ ಕೇಳಿದ್ದೆನು. ಇಲಾಖೆಯಿಂದ ಸರಬರಾಜು ಆಗುತ್ತಿದ್ದು, ದರ ಹೆಚ್ಚಾಗಿರುವುದರ ಬಗ್ಗೆ ಮಾನ್ಯ ಸಚಿವರು ಉತ್ತರ ನೀಡಬೇಕು.

**ಶ್ರೀ ಹೆಚ್.ಕೆ.ಪಾಟೀಲ್**:- ಮಾನ್ಯ ಸಭಾಪತಿಯವರೇ, ನಾವು ಸಿಮೆಂಟ್ ಮತ್ತು ಕಬ್ಬಿಣವನ್ನು ಇ-ಟೆಂಡರ್ ಮುಖಾಂತರ ಕರೆದು procure ಮಾಡಲಾಗಿದೆ. ಬೆಲೆ ಜಾಸ್ತಿ ಇದೆ ಎಂದು ಮಾರುಕಟ್ಟೆಯಲ್ಲಿ private negotiations ಮಾಡಿದಾಗ ಕೆಲವು ಸಲ ಕಡಿಮೆ ಇದೆ ಎಂದು ಅನಿಸುತ್ತದೆ. ನಮ್ಮ ಗಮನಕ್ಕೆ ಬಂದಿಲ್ಲವೆಂದು ಹೇಳುತ್ತಿಲ್ಲ. ಆದರೆ, ಇ-ಟೆಂಡರ್ ಮಾಡಿ, ಯಾರು ಸ್ಪರ್ಧಾಳುದಾರರಿದ್ದಾರೆ ಆ ಸ್ಪರ್ಧಾಳುಗಳ ಮುಖಾಂತರ ಹೋಗುತ್ತಿದ್ದೇವೆ.

(243)/23.02.2018/11.10/ಎಸ್‌ಕೆ-ಬಿಎನ್‌ಎಸ್

**ಶ್ರೀ ಹೆಚ್.ಕೆ.ಪಾಟೀಲ್(ಮುಂದು)**:- ಮಾನ್ಯ ಸಭಾಪತಿಯವರೇ, ಮುಂದಿನ ದಿನಗಳಲ್ಲಿ ಕಂಪನಿಗಳಿಂದ ನೇರವಾಗಿ negotiations ಮಾಡಿ, ಸರ್ಕಾರವೇ ಈ ಕಂಪನಿಗಳು ಎಷ್ಟು ಬೆಲೆ ಕೊಡಬಹುದು ಎನ್ನುವುದನ್ನು ನೋಡಿಕೊಂಡು ರಾಜ್ಯದ ಎಲ್ಲಾ ಇಲಾಖೆಗಳಿಗೂ ಖರೀದಿ ಮಾಡುವುದನ್ನು ಮಾಡಬೇಕಾಗುತ್ತದೆ. ಏಕೆಂದರೆ ಮಾರುಕಟ್ಟೆಯ ಬೆಲೆಗೂ ಸರ್ಕಾರ ಏಜೆನ್ಸಿಯಿಂದ ಖರೀದಿ ಮಾಡುವುದಕ್ಕೆ ನಲವತ್ತು, ಐವತ್ತು ರೂಪಾಯಿಗಳ ವ್ಯತ್ಯಾಸವಾಗುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

**ಸಭಾಪತಿಯವರು**:- ಧನ್ಯವಾದಗಳು. ಮಾನ್ಯ ರಮೇಶ್‌ಬಾಬುರವರ ಪ್ರಶ್ನೆಗೆ ಮಾನ್ಯ ಉನ್ನತ ಶಿಕ್ಷಣ ಸಚಿವರು ಕಾಲಾವಕಾಶ ಕೇಳಿದ್ದಾರೆ.

**ಪ್ರಶ್ನೆ ಸಂಖ್ಯೆ 1147**

**ಶ್ರೀ ರಮೇಶ್ ಬಾಬು**:- ಮಾನ್ಯ ಸಭಾಪತಿಯವರೇ,

**ಸಭಾಪತಿಯವರು**:- ಈಗ ಮಾನ್ಯ ಸಚಿವರು ಬಂದಿದ್ದಾರೆ. ಮಾನ್ಯ ಸಚಿವರೇ, ಮಾನ್ಯ ರಮೇಶ್ ಬಾಬು ಕೇಳಿರುವಂತಹ ಪ್ರಶ್ನೆಗೆ ಕಾಲಾವಕಾಶ ಏಕೆ ಬೇಕು ಎಂದು ಹೇಳಿಬಿಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ್ ಬಾಬುರವರು ಕೇಳಿರುವಂತಹ ಪ್ರಶ್ನೆಗೆ ಉತ್ತರ ಸಮರ್ಪಕವಾಗಿ ಬಂದಿಲ್ಲ. ಆ ಉತ್ತರ ಸಮರ್ಪಕವಾಗಿ ಬರದೇ, ನಾನು ಮಾಹಿತಿಯನ್ನು ಕೊಡುವುದು ತಪ್ಪಾಗುತ್ತದೆ. ಹೀಗಾಗಿ, ನಾನು ಕಾಲಾವಕಾಶ ಕೇಳಿದ್ದೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರಿಗೆ ಉತ್ತರವನ್ನು ಕಳುಹಿಸಿಕೊಡಬೇಕು.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸದಸ್ಯರಿಗೆ ಉತ್ತರವನ್ನು ಖಂಡಿತವಾಗಿ ಕಳುಹಿಸಿಕೊಡುತ್ತೇನೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಒಂದೇ ಒಂದು ನಿಮಿಷ.

**ಸಭಾಪತಿಯವರು:-** ಆಯಿತು. ಅವರಿಗೆ ಉತ್ತರ ಬಂದಿಲ್ಲ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ನಾನು ತಮಗೆ ಮನವಿಯನ್ನು ಮಾಡುತ್ತಿದ್ದೇನೆ. ಮಾನ್ಯ ಸಚಿವರಿಗೆ ಖಾಸಗಿ ವಿಶ್ವವಿದ್ಯಾಲಯ ವಿಧೇಯಕವನ್ನು ಕೊಡುವುದಕ್ಕೆ ಇರುವ ಆಸಕ್ತಿ, ನಾನು ಕೇಳಿರುವ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಇಲ್ಲವೆಂದರೆ ಇದು ಹೇಗೆ?

**ಸಭಾಪತಿಯವರು:-** ಏನು ಮಾಡುವುದು.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ನಿನ್ನೆಯೂ ಕೂಡ ಚರ್ಚೆ ಮಾಡಿದ್ದೇನೆ. ಸರ್ಕಾರ ಈ ತರಹ ನಡೆದುಕೊಂಡರೆ ಬಹಳ ಕಷ್ಟವಾಗುತ್ತದೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಶ್ನೆಯನ್ನು ಏನು ಕೇಳಿದ್ದಾರೆಂದರೆ, ಎಷ್ಟು ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಯಾವ್ಯಾವ ಹುದ್ದೆಗಳು ಖಾಲಿಯಿವೆ ಮತ್ತು ಎಲ್ಲಾ ವಿವರಗಳನ್ನು ಕೇಳಿದ್ದಾರೆ. ನಾನು ಸುಮಾರು ಇಪ್ಪತ್ತೈದು ವಿಶ್ವವಿದ್ಯಾಲಯಗಳಿಂದ ಮಾಹಿತಿಯನ್ನು ತರಿಸಿಕೊಡಬೇಕು.

**ಶ್ರೀ ರಮೇಶ್ ಬಾಬು:-** ಮಾಹಿತಿಯನ್ನು ತರಿಸಿಕೊಡಿ. ನಿಮ್ಮ ಸರ್ಕಾರ ಇರುವುದು ಏತಕ್ಕೆ? ನಿಮ್ಮ ಸರ್ಕಾರ ಉತ್ತರ ತರಿಸುವುದಕ್ಕೆ ಆಗಲಿಲ್ಲವೆಂದರೆ, ನಾವು ಏತಕ್ಕೆ ಪ್ರಶ್ನೆಯನ್ನು ಕೇಳಬೇಕು?

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಸುಮಾರು ಇಪ್ಪತ್ತೈದು ವಿಶ್ವವಿದ್ಯಾಲಯಗಳು .....

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**Mr.CHAIRMAN**:- Collect the information and give it to him at the earliest.

**ಚುಕ್ಕೆ ಗುರುತಿನ ಪ್ರಶ್ನೆ : 1086**
**(ಉತ್ತರವನ್ನು ಲಗತ್ತಿಸಲಾಗಿದೆ).**

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ** :- ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ನೂತನವಾಗಿ ಮಂಜೂರಾದ ಗ್ರಾಮ ಪಂಚಾಯತ್‌ಗಳಲ್ಲಿ, ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಗ್ರಾಮ ಪಂಚಾಯಿತಿಗಳ ಸಂಖ್ಯೆ 151, ಇತರೆ ಕಟ್ಟಡಗಳಲ್ಲಿ ನಡೆಯುತ್ತಿರುವ ಗ್ರಾಮ ಪಂಚಾಯತ್‌ಗಳ ಸಂಖ್ಯೆ 293, ಸ್ವಂತ ಕಟ್ಟಡಗಳಲ್ಲಿ ನಡೆಯುತ್ತಿರುವ ಗ್ರಾಮ ಪಂಚಾಯಿತಿಗಳ ಸಂಖ್ಯೆ 18, ನಿವೇಶನ ಲಭ್ಯವಿರದ ಗ್ರಾಮ ಪಂಚಾಯಿತಿಗಳ ಸಂಖ್ಯೆ 132.

ಮಾನ್ಯ ಸಭಾಪತಿಯವರೇ, ಈ ಗ್ರಾಮ ಪಂಚಾಯಿತಿಗಳಿಗೆ ನಿವೇಶನ ಸಿಗದೇ ಇದ್ದರೆ, ಆ ಗ್ರಾಮ ಪಂಚಾಯಿತಿಗಳು ಬೇರೆ ಫಲಾನುಭವಿಗಳಿಗೆ ನಿವೇಶನ ಹೇಗೆ ಕೊಡುತ್ತದೆ? ಇದನ್ನು ಬಹಳ ಗಂಭೀರವಾಗಿ ಪರಿಗಣಿಸಿ, ಆದ್ಯತೆ ಮೇರೆಗೆ ಗ್ರಾಮ ಪಂಚಾಯಿತಿಗೆ ಅವಶ್ಯಕತೆ ಇರುವಂತಹ ನಿವೇಶನಗಳನ್ನು ಆದಷ್ಟು ಶೀಘ್ರವಾಗಿ ಮಂಜೂರು ಮಾಡುವಲ್ಲಿ ಯಾವ ರೀತಿ ಸಾಧ್ಯವಾಗುತ್ತದೆಯೋ, ಆ ರೀತಿಯಲ್ಲಿ ಸರ್ಕಾರ ಕ್ರಮವನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಹೆಚ್.ಕೆ.ಪಾಟೀಲ್**:- ಮಾನ್ಯ ಸಭಾಪತಿಯವರೇ, ಮಾನ್ಯ ಕೆ. ಪ್ರತಾಪಚಂದ್ರ ಶೆಟ್ಟಿಯವರು ಈ ಗಂಭೀರವಾದ ವಿಷಯವನ್ನು ನಮ್ಮ ಗಮನಕ್ಕೆ ತಂದಿದ್ದಕ್ಕೆ ನಾನು ಅವರಿಗೆ ಕೃತಜ್ಞತೆಯನ್ನು ಹೇಳುತ್ತೇನೆ. ನಾವು ಇಂತಹ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಏನು ಅಗತ್ಯ ಕ್ರಮಗಳಿವೆಯೋ, ಅವುಗಳನ್ನು ಬಿಟ್ಟಿರುವುದಿಲ್ಲ. ನಾವು ಇದರ ಬಗ್ಗೆ ಗಂಭೀರವಾಗಿ ಗಮನಹರಿಸಿದ ಹಾಗೇ ಕಾಣಲಿಲ್ಲ. ನಮ್ಮ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಾದ ಡಾ॥ ನಾಗಾಂಬಿಕಾ ದೇವಿಯವರು ಮತ್ತು ನಿರ್ದೇಶಕರಾದ ಶ್ರೀ ಕೆಂಪೇಗೌಡರು ಸದನದಲ್ಲಿದ್ದಾರೆ. ನಿವೇಶನ ಲಭ್ಯವಿರದ ಗ್ರಾಮ ಪಂಚಾಯಿತಿಗಳ ಸಂಖ್ಯೆ 132 ಏನಿವೆ ಅವುಗಳನ್ನು ಮಾರ್ಚ್ 31 ರೊಳಗೆ ಪಡೆದುಕೊಳ್ಳುವುದಕ್ಕೆ ಮತ್ತು ಅಗತ್ಯ ಬಿದ್ದರೆ, ಅದನ್ನು ಖರೀದಿ ಮಾಡುವುದಕ್ಕೂ ಸಹ ನಾವು ಸಿದ್ಧರಿದ್ದೇವೆ. ನಿವೇಶನವನ್ನು ಮಾರ್ಚ್ 31 ನೇ ತಾರೀಖಿನೊಳಗಾಗಿ ನಾವು ಪಡೆದುಕೊಳ್ಳುತ್ತೇವೆ.

**ಸಭಾಪತಿಯವರು**:- ಧನ್ಯವಾದಗಳು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1056**

**(ಉತ್ತರವನ್ನು ಲಗತ್ತಿಸಲಾಗಿದೆ).**

**ಶ್ರೀ ಭಾನುಪ್ರಕಾಶ್:-** ಮಾನ್ಯ ಸಭಾಪತಿಯವರೇ, ನನ್ನದು ಎರಡು ಪ್ರಶ್ನೆಗಳತ್ತು. ಮೊದಲನೆಯ ಪ್ರಶ್ನೆ ಏನೆಂದರೆ, ಕಳೆದ ನಾಲ್ಕು ವರ್ಷಗಳಿಂದ ಇಲಾಖೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು? ಎರಡನೆಯ ಪ್ರಶ್ನೆ ಏನೆಂದರೆ, ಬಿಡುಗಡೆಯಾಗಿರುವ ಅನುದಾನದಲ್ಲಿ ವೆಚ್ಚ ಮಾಡಿರುವುದು ಎಷ್ಟು? ಇದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಈ ಪ್ರಶ್ನೆಗಳನ್ನು ಸದಸ್ಯರು ಏಕೆ ಕೇಳುತ್ತಾರೆ? ಅವರು ಬಹಳ ಹಿರಿಯ ಸಚಿವರು. ನನ್ನ ಶಬ್ಧಗಳಿಗೆ, ನನಗೆ ಉತ್ತರ ಸಿಕ್ಕಿದೆ. ಆದರೆ ಅದರಲ್ಲಿರುವ ಭಾವನೆಗಳಿಗೆ ನನಗೆ ಉತ್ತರ ಸಿಕ್ಕಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು ಎಂದು ಕೇಳಿದಾಗ, ಎರಡು ಪ್ರತ್ಯೇಕವಾಗಿ ಪ್ರಶ್ನೆಗಳನ್ನು ಕೊಡಬೇಕು ಎಂಬುದು ನನ್ನ ಮನಸ್ಸಿನಲ್ಲಿತ್ತು. ಅದನ್ನು ಮಾನ್ಯ ಸಚಿವರು ಗಮನಿಸುವುದಕ್ಕೆ ಆಗದೇ ಇರುವಂತಹ ಪ್ರಶ್ನೆಯನ್ನು ನಾನು ಕೇಳಿದ್ದೇನೆಂದು ಅಂದುಕೊಳ್ಳುತ್ತೇನೆ. ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನ ನೀಡಿರುವ ಬಗ್ಗೆ ಉತ್ತರವನ್ನು ಬೇರೆ ಬೇರೆಯಾಗಿ ಕೊಟ್ಟಿದ್ದರೆ, ಯಾವುದು ಎಂದು ಹೇಳಿ ನಾವು ಅದರ ಮೇಲೆ ಬೆಳಕನ್ನು ಚೆಲ್ಲಬಹುದಾಗಿತ್ತು. ಅದನ್ನು ಕೊಡುವುದಕ್ಕೆ ಏಕೆ ಸಾಧ್ಯವಾಗಲಿಲ್ಲ ಎಂಬುದು ಇರಲಿ. ಅದನ್ನು ಕೊಡುತ್ತಾರೆಯೇ? ಎರಡನೆಯದು, ಈ percentage ಮೇಲೆ, ಇಷ್ಟಿಷ್ಟು percent ಖರ್ಚಾಗಿದೆ ಎಂದು ಹೇಳಿದ್ದಾರೆ. 2013-14 ನೇ ಸಾಲಿನಲ್ಲಿ ಶೇಕಡ 100 ರಷ್ಟು ಅನುದಾನದ ಹಣ ಖರ್ಚಾಗಿದೆ. 2014-15 ನೇ ಸಾಲಿನಲ್ಲಿ ಅನುದಾನದ ಬಂದಿರುವುದನ್ನು ಹೇಳಿದ್ದಾರೆ. ಸುಮಾರು 91% ರಷ್ಟು ಅನುದಾನದ ಹಣ ಖರ್ಚಾಗಿದೆ. 2015-16 ನೇ ಸಾಲಿನಲ್ಲಿ ಶೇಕಡ 94 ರಷ್ಟು ಅನುದಾನದ ಹಣ ಖರ್ಚಾಗಿದೆ ಮತ್ತು 2016-17 ನೇ ಸಾಲಿನಲ್ಲಿ ಶೇಕಡ 96 ರಷ್ಟು ಅನುದಾನದ ಹಣ ಖರ್ಚಾಗಿದೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಕೇಳಬಯಸುವುದೇನೆಂದರೆ, ಒಂದು ರೂಪಾಯಿಯೋ, ಮೂರು ರೂಪಾಯಿಯೋ, ನಾಲ್ಕು ರೂಪಾಯಿಯೋ ಉಳಿಯಿತು ಎಂದರೆ ಸರಿ. ಆದರೆ, ಇದರಲ್ಲಿ 2014-15 ನೇ ಸಾಲಿನಲ್ಲಿ ಸುಮಾರು 1018 ಕೋಟಿ ರೂಪಾಯಿಗಳು, 2015-16ನೇ ಸಾಲಿನಲ್ಲಿ ಸುಮಾರು 590 ಕೋಟಿ ರೂಪಾಯಿಗಳು, 2016-17ನೇ ಸಾಲಿನಲ್ಲಿ 574 ಕೋಟಿ ರೂಪಾಯಿ ಅಂದರೆ ಒಟ್ಟು ಸುಮಾರು 2183 ಕೋಟಿ ರೂಪಾಯಿ unspent money ಉಳಿಯಿತು. ನನ್ನ ಪ್ರಶ್ನೆ ಏನೆಂದರೆ, ಕೇಂದ್ರ ಸರ್ಕಾರದಿಂದ ಬಂದಿರುವಂತಹ ಹಣ ಅದಕ್ಕೆ U.C. (Utilization Certificate) ಕೊಡದೇ, ಮುಂದಿನ ವರ್ಷದ್ದು ಹಣ ವಾಪಸ್ಸು ಬರುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಆ ವರ್ಷದಲ್ಲಿ ಬಂದಿರುವಂತಹ ಅನುದಾನವನ್ನು ಖರ್ಚು ಮಾಡದೇ ಇದ್ದರೆ, ಆ ಹಣ ಲ್ಯಾಪ್ಸ್ ಆಗುತ್ತದೆಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾನು ತಿಳಿದುಕೊಂಡಿದ್ದೇನೆ. ಹಾಗಾಗಿ, ಇದರಿಂದ ನಮ್ಮ ರಾಜ್ಯಕ್ಕೆ ನಷ್ಟವಾಗಲಿಲ್ಲವೇ ಅಥವಾ ಅದಕ್ಕೆ ಏನಾದರೂ ಪರಿಹಾರ ತೆಗೆದುಕೊಂಡಿದ್ದೀರೆ? ಕೇಂದ್ರ ಸರ್ಕಾರದಿಂದ ಬಂದಿರುವಂತಹ ಅನುದಾನವನ್ನು ಪೂರ್ತಿ ಬಳಕೆ ಮಾಡದೇ, ಏಕೆ ವಿಫಲರಾಗಿದ್ದಾರೆ? UC ಕೊಡದೇ ಈ ರೀತಿ ಆಗಿರುವುದಕ್ಕೆ ಯಾರು ಜವಾಬ್ದಾರರು? ಇದರ ಸ್ಪಷ್ಟೀಕರಣವನ್ನು ನಾನು ಮಾನ್ಯ ಸಚಿವರಿಗೆ ಕೇಳುತ್ತೇನೆ.

**ಶ್ರೀ ಹೆಚ್.ಕೆ.ಪಾಟೀಲ್**:- ಮಾನ್ಯ ಸಭಾಪತಿಯವರೇ, ಮಾನ್ಯ ಭಾನುಪ್ರಕಾಶ್‌ರವರು ನಮಗೆ ಅಭಿನಂದನೆಯನ್ನು ಹೇಳುತ್ತಾರೆಂದು ನಾನು ತಿಳಿದುಕೊಂಡಿದ್ದೆನು. ಮಾನ್ಯ ಸದಸ್ಯರು ಯಾವ ರೀತಿಯಾಗಿ ಪ್ರಶ್ನೆಯನ್ನು ಕೇಳಿದ್ದಾರೆ. ಆ ರೀತಿಯಾಗಿ ನಾವು ಉತ್ತರವನ್ನು ಕೊಟ್ಟಿದ್ದೇವೆ. ಆ ಭಾವನೆ ಅಥವಾ ಸ್ಪಿರಿಟ್ ಏನಿದೆ, ಆ ಸ್ಪಿರಿಟ್‌ಗೆ ಸ್ಪಂದಿಸಬಾರದೆಂಬುದು ನಮ್ಮದಲ್ಲ. ಆದರೆ ಆ ಸ್ಪಿರಿಟ್‌ಗೆ, ಭಾವನೆಗಳಿಗೆ ನಮ್ಮ ಮಾತುಗಳು ಸ್ಪಂದಿಸಬಹುದೇ ಹೊರತು, ತಾಂತ್ರಿಕವಾಗಿ ಪ್ರಶ್ನೆಯನ್ನು ಹೇಗೆ ಕೇಳುತ್ತೀರಿ ಹಾಗೇ ಉತ್ತರ ಕೊಡುವ ಕೆಲಸವನ್ನು ಅಧಿಕಾರಿಗಳು ಮಾಡುತ್ತಾರೆ.

**ಶ್ರೀ ಭಾನುಪ್ರಕಾಶ**:- ಮಾನ್ಯ ಸಭಾಪತಿಯವರೇ, ನಾನು ಮುಂಚೆಯೇ ಒಪ್ಪಿಕೊಂಡು ಬಿಟ್ಟೆ. ನಿಮ್ಮಷ್ಟು ಹಿರಿಯವನಲ್ಲ ಮತ್ತು ಬುದ್ಧಿವಂತನಲ್ಲ. ನಾನು ಪ್ರಶ್ನೆ ಕೇಳುವುದರಲ್ಲಿ ತಪ್ಪಾಗಿದೆ ಎಂದು ನಾನೇ ಹೇಳಿಬಿಟ್ಟಿದ್ದೇನೆ.

**ಶ್ರೀ ಹೆಚ್.ಕೆ.ಪಾಟೀಲ್**:-ನಾನು ಅದನ್ನು ಒಪ್ಪುವುದಿಲ್ಲ. ನೀವು ನನಗಿಂತ ಹೆಚ್ಚು ಅನುಭವಸ್ಥರು. ಇದರ ಅಂಕಿ-ಸಂಖ್ಯೆಯನ್ನು ನೋಡಿದರೆ, on an average, we are somewhere near 97.5% during the period between 2013-14 to 2016-17. 97.5% is a very good percentage. ಮಾನ್ಯ ಸದಸ್ಯರು U.C. ಬಗ್ಗೆ ಹೇಳಿದರು. ನಾನು ಹೇಳುವ ಉದ್ದೇಶವಿರಲಿಲ್ಲ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಕೇಳಬೇಕು. ನಮ್ಮ ಇಲಾಖೆಯಲ್ಲಿ U.C. ನ್ನು ಮನ ಬಂದಂತೆ ಕೊಡುತ್ತಿದ್ದರು. ಅದೇನೇ ಇರಲಿ, ಕೇಂದ್ರ ಸರ್ಕಾರದಿಂದ ಅನುದಾನವನ್ನು ತೆಗೆದುಕೊಳ್ಳಬೇಕೆಂದು ಹೇಳಿ, ಇಲ್ಲಿ ಕೆಲಸವಾಗಿರದಿದ್ದರೂ ಕೂಡ ಹಣವನ್ನು ತೆಗೆದುಕೊಂಡು, ಎಲ್ಲೋ ಒಂದು ಕಡೆ ಕಳ್ಳಗಂಟು ಮಾಡಿ ಇಡುತ್ತಿದ್ದರು. ಅದಕ್ಕೆ ಯಾವುದೇ ನಿಯಮ ಬಾಹಿರವಾಗಿರುವಂತಹ ಪದ್ಧತಿಗಳಿಗೆ ನಾನು ಅವಕಾಶ ಕೊಡಲಿಲ್ಲ. ಹಾಗಾಗಿ ಶೇಕಡ 2, 3 ರಷ್ಟು ತೊಂದರೆಯಾಗಿರಬಹುದು. ಆದರೆ, ಯಾವುದೇ ಇಲಾಖೆಯನ್ನು ತೆಗೆದುಕೊಳ್ಳಲಿ, ನಮ್ಮ ಸರ್ಕಾರ ಬಂದ ಮೇಲೆ ಕೇಂದ್ರ ಸರ್ಕಾರ ಕೊಟ್ಟಿರುವಂತಹ ಹಣವನ್ನು ಪೂರ್ಣವಾಗಿ ಖರ್ಚು ಮಾಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿದ್ದೇವೆ. ಕೆಲವೊಂದರಲ್ಲಿ, ಉದಾಹರಣೆಗೆ MGNREG (Mahatma Gandhi National Rural Employment Guarantee) ಯೋಜನೆಯ ಪ್ರಕಾರ, ನಮ್ಮ ರಾಜ್ಯ ಸರ್ಕಾರದ ಹಣ, ಅಂದರೆ, ನಾವು ಏನು participation ಮಾಡಬೇಕಾಗಿತ್ತೋ, ಆ participation

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವುದಲ್ಲದೇ ವಿಳಂಬವಾಗುವಂತಹ ಸಂದರ್ಭದಲ್ಲಿ ಕೂಲಿ ಕೊಡುವುದಕ್ಕೆ ಮತ್ತು ಇತ್ಯಾದಿ ವಿಚಾರಗಳಲ್ಲಿ, ನಾವು ಕೆಲವು ಸಂದರ್ಭದಲ್ಲಿ 100 ಕೋಟಿ, 200 ಕೋಟಿ ಈ ರೀತಿಯಾಗಿ, we have given upto Rs.500 Crores in excess of our statutory contribution. ಆದ್ದರಿಂದ, ಹಣ ಖರ್ಚು ಮಾಡುವುದರಲ್ಲಿ, ಹಣ ವಿನಿಯೋಗ ಮಾಡುವುದರಲ್ಲಿ ನಾವು ಅತ್ಯಂತ ಸಾಧ್ಯವಾದ ಮಾನವೀಯ ಪ್ರಯತ್ನಗಳನ್ನು ಮಾಡಿದ್ದೇವೆ.

**ಶ್ರೀ ಭಾನುಪ್ರಕಾಶ:-** ಮಾನ್ಯ ಸಭಾಪತಿಯವರೇ, ಕೇಂದ್ರ ಮತ್ತು ರಾಜ್ಯದ್ದು ಎಂದು ಪ್ರಶ್ನೆಯನ್ನು ಕೇಳಿಲ್ಲ. ನಾನು ತಮ್ಮ ಮೂಲಕ ವಿನಂತಿ ಮಾಡುವುದೇನೆಂದರೆ, ಇಲಾಖೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ಬಗ್ಗೆ ಮಾಹಿತಿಯನ್ನು ಪ್ರತ್ಯೇಕವಾಗಿ ಕೊಡಬೇಕು. ಎರಡನೆಯದಾಗಿ, ಬಿಡುಗಡೆಯಾದಂತಹ ಅನುದಾನವನ್ನು ಉಪಯೋಗಿಸಿಕೊಳ್ಳಲಾರದೇ, ಎಷ್ಟು ಹಣ ಕೇಂದ್ರ ಸರ್ಕಾರಕ್ಕೆ ವಾಪಸ್ಸು ಹೋಗಿದೆಯೆಂಬುದರ ಮಾಹಿತಿಯನ್ನು ಕೊಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಬಂದು ಐದು ವರ್ಷಗಳಲ್ಲಂತೂ ಯಾವುದೇ ಹಣ ಕೇಂದ್ರ ಸರ್ಕಾರಕ್ಕೆ ವಾಪಸ್ಸು ಹೋಗಿರುವಂತಹದ್ದು ಇಲ್ಲ. ನಮಗೆ ಯಾವುದೇ ಮಾಹಿತಿ ಇತ್ತು ಎಂದರೆ ಹೇಳುತ್ತೇನೆ.

(244)/23/02/2018/ಟಿಸಿಹೆಚ್-ಕೆಎಸ್/11.20

**ಶ್ರೀ ಎಚ್.ಕೆ.ಪಾಟೀಲ್ (ಮುಂದು):-** ಮಾನ್ಯ ಕೆ.ಬಿ.ಶಾಣಪ್ಪನವರೇ, ಈ ಎಲ್ಲಾ ವಿಚಾರವಾಗಿ ರಾಜ್ಯ ಸರ್ಕಾರ ಏನು ಮಾಡಿದೆ ಮತ್ತು ಕೇಂದ್ರ ಸರ್ಕಾರದಿಂದ ಏನು ಬಂದಿದೆ ಎಂಬುದರ ಬಗ್ಗೆ, ನಿನ್ನೆ ದಿವಸ ನಾವು ಒಂದು small bag ಅನ್ನು ಕಳುಹಿಸಿಕೊಟ್ಟಿದ್ದೇವೆ. ತಾವು ಅದನ್ನು ಹಾಗೆಯೇ ಇಡಬೇಡಿ. ನಾಲ್ಕು ಪುಸ್ತಕಗಳನ್ನು ಅದರಲ್ಲಿ ಇಟ್ಟು ನಮ್ಮ ಇಲಾಖೆಯು 4 ವರ್ಷ 10 ತಿಂಗಳಿನಲ್ಲಿ ಏನು ಕೆಲಸವನ್ನು ಮಾಡಿದೆ ಎನ್ನುವ ವಿವರಗಳನ್ನೆಲ್ಲಾ ಕಳುಹಿಸಿದ್ದೇವೆ. ಆದ್ದರಿಂದ ತಮ್ಮಂತಹ ಹಿರಿಯರಾದ ಮಾನ್ಯ ಭಾನುಪ್ರಕಾಶ್‌ರವರು ಮತ್ತು ಮಾನ್ಯ ಬಿ.ಜೆ.ಪುಟ್ಟಸ್ವಾಮಿಯವರು ಅದನ್ನು ಗಮನಿಸಬೇಕು. ಏಕೆಂದರೆ, ನಮ್ಮ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರುಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯ ವಿಚಾರದಲ್ಲಿ ಬಹಳಷ್ಟು ಆಸಕ್ತಿ ವಹಿಸುತ್ತಾರೆ. ಯಾರೇ ಸಚಿವರು ಮಾತನಾಡಲಿ ಎಲ್ಲಾ ಮಾನ್ಯ ಸದಸ್ಯರುಗಳು ಮಾತನಾಡುತ್ತಾರೆ. ನಮ್ಮ ಕರ್ನಾಟಕ ವಿಧಾನ ಪರಿಷತ್ತು ಶಿಕ್ಷಣ ಬಗ್ಗೆ ಮತ್ತು ಶಿಕ್ಷಕರ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬಗ್ಗೆ ಬಹಳಷ್ಟು ಆಸಕ್ತಿಯನ್ನು ವಹಿಸುತ್ತದೆ ಎನ್ನುವ ಕಾರಣಕ್ಕೆ ಆ ಎಲ್ಲಾ ವಿವರಗಳನ್ನು ನಾನು ಕಳುಹಿಸಿಕೊಟ್ಟಿದ್ದೇನೆ. ದಯಮಾಡಿ ಮಾನ್ಯ ಸದಸ್ಯರು ಅದನ್ನು ಗಮನಿಸಬೇಕೆಂದು ನಾನು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಧನ್ಯವಾದಗಳು. ಮಾನ್ಯ ಎಸ್.ವ್ಹಿ.ಸಂಕನೂರರವರೇ, ತಮ್ಮ ಪ್ರಶ್ನೆಗೆ ಮಾನ್ಯ ಉನ್ನತ ಶಿಕ್ಷಣ ಸಚಿವರು ಕಾಲಾವಕಾಶ ಕೋರಿದ್ದಾರೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗೆ ನನ್ನ ಹತ್ತಿರ ಸಮರ್ಪಕವಾದ ಉತ್ತರವಿಲ್ಲ ಎಂದು ಹೇಳುತ್ತಿಲ್ಲ. ಇಲ್ಲಿ ಏನಾಗಿದೆ ಎಂದರೆ, University Grants Commission (UGC) ನ 7ನೇ ವೇತನ ಆಯೋಗದ ವಿಚಾರದಲ್ಲಿ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ, ಇದೆಲ್ಲವೂ ಇದೆ. ಆದರೆ, ಆರ್ಥಿಕ ವಿಚಾರದಲ್ಲಿ ಕೆಲವು ಮಾಹಿತಿ ಸರಿಯಾಗಿಲ್ಲದಿರುವುದರಿಂದ, ಆರ್ಥಿಕ ಇಲಾಖೆಯಿಂದ ಮಾಹಿತಿ ನನಗೆ ಬಂದಿರುವುದಿಲ್ಲ. ಸಾಧ್ಯವಾದರೆ ಇವತ್ತು ಸಾಯಂಕಾಲ ನಿಮಗೆ ಉತ್ತರ ಕೊಡಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಕಾಲಾವಕಾಶ ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ, ಏಕೆಂದರೆ, ಇನ್ನೆರಡು ತಿಂಗಳಿಗೆ ತಮ್ಮ ಅಧಿಕಾರ ಅವಧಿ ಮುಗಿದು ಹೋಗುತ್ತದೆ. ಹಾಗಾಗಿ, ಇನ್ನು ಒಂದು ತಿಂಗಳು ಮಾತ್ರ ಬಾಕಿ ಇರುತ್ತದೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗೆ ನಾನು ತಪ್ಪಾಗಿ ಉತ್ತರ ಕೊಟ್ಟರೆ..

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಇನ್ನು ಒಂದು ತಿಂಗಳನಲ್ಲಿ code of conduct ಜಾರಿಗೆ ಬರುತ್ತದೆ. ಈಗ, ಹೊಸ ವೇತನ ಶ್ರೇಣಿಗಳನ್ನು ಪ್ರಥಮ ದರ್ಜೆ ಪದವಿ ಕಾಲೇಜು ಮತ್ತು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಿಗೆ ಕೇಂದ್ರ ಸರ್ಕಾರದ UGC 7ನೇ ವೇತನ ಆಯೋಗದ ಶಿಫಾರಸ್ಸು ಮಾಡಿರುವ ವೇತನ ಶ್ರೇಣಿಗಳನ್ನು ಈ ಸದನದ ಮೂಲಕ announce ಮಾಡಬೇಕೆಂದು ವಿನಂತಿಸುವ ಸಲುವಾಗಿ ನಾನು ಪ್ರಶ್ನೆ ಕೇಳಿದ್ದೇನೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, UGC ಯವರು 7ನೇ ವೇತನ ಆಯೋಗ ಶಿಫಾರಸ್ಸು ಮಾಡಿದ ವೇತನ ಶ್ರೇಣಿಗಳು ಒಬ್ಬರಿಗೆ ಮಾತ್ರ ಜಾರಿ ಮಾಡುವುದಲ್ಲ, ಇದು ಇಡೀ ರಾಜ್ಯದ ಶಿಕ್ಷಕರಿಗೆ ಸಂಬಂಧಪಟ್ಟಿರುತ್ತದೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇವತ್ತಲ್ಲಾ ನಾಳೆ ದಿವಸ ಅವರಿಗೆ ಅದನ್ನು ಕೊಡಲೇಬೇಕು.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಹೌದು ಮಾನ್ಯ ಸದಸ್ಯರು ಹೇಳುವುದನ್ನು ನಾನು ಒಪ್ಪುತ್ತೇನೆ. ಆದರೆ ಸಾಧಕ-ಬಾಧಕಗಳನ್ನು ಸಹ ನೋಡಬೇಕಲ್ಲವೇ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ವ್ಹಿ.ಸಂಕನೂರ**:- ಮಾನ್ಯ ಸಭಾಪತಿಯವರೇ, ಈ ಸದನದ ಮೂಲಕ ಕಾಲೇಜು ಪ್ರಾಧ್ಯಾಪಕರು ಹಾಗೂ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಿಗೆ ಒಂದು ಸಿಹಿ ಸುದ್ಧಿ ಕೊಡಬೇಕೆಂದು ದಯವಿಟ್ಟು ನಾನು ಮಾನ್ಯ ಸಚಿವರಿಗೆ ಹೇಳುತ್ತಿದ್ದೇನೆ. ಒಂದು ತಿಂಗಳು ಅಥವಾ ಎರಡು ತಿಂಗಳ ನಂತರ ಕೊಡುತ್ತೇವೆಂದು ಹೇಳುವುದು ಬೇಡ. ಈ ರಾಜ್ಯದಲ್ಲಿ code of conduct ಜಾರಿಗೆ ಬಂದರೆ, ಅದನ್ನು announce ಮಾಡಲು ಕಷ್ಟವಾಗುತ್ತದೆ. ಆದ್ದರಿಂದ ಮಾನ್ಯ ಸಚಿವರಿಗೆ ನಾನು ವಿನಂತಿ ಮಾಡುವುದೇನೆಂದರೆ, 'ನಾನು ಮಾಡುತ್ತೇನೆ' ಎಂದು ಈ ಸದನದಲ್ಲಿ announce ಮಾಡಿದರೆ, ಇದರಿಂದ ಅವರು ತಪ್ಪಿಸಿಕೊಳ್ಳಲು ಆಗುವುದಿಲ್ಲ, ಕೊಡಲೇಬೇಕಾಗುತ್ತದೆ.

**ಶ್ರೀ ಕೆ.ಬಿ.ಶಾಣಪ್ಪ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, there is no bar, ನೀವು ಉತ್ತರವನ್ನು ಕಳುಹಿಸಬಹುದಲ್ಲವೇ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು 15 ದಿವಸಕ್ಕಿಂತ ಮೊದಲೇ ಕೇಳಿದಂತಹ ಈ ಪ್ರಶ್ನೆಗೆ ಯಾರು ಸರಿಯಾದಂತಹ ಉತ್ತರವನ್ನು ಕೊಡುತ್ತಾರೋ ಆ ಸಚಿವರ ಗೌರವ ಹೆಚ್ಚುತ್ತದೆ ಎಂಬುದು ನಮ್ಮ ಒಂದು ಲೆಕ್ಕಾಚಾರ.

**ಶ್ರೀ ಬಸವರಾಜ ರಾಯರೆಡ್ಡಿ**:- ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನೋಡಿ,. . .

**ಶ್ರೀ ಎಸ್.ವ್ಹಿ.ಸಂಕನೂರ**:- ಮಾನ್ಯ ಸಭಾಪತಿಯವರೇ...

**ಸಭಾಪತಿಯವರು**:- ಮಾನ್ಯ ಸಂಕನೂರರವರೇ, ಸಚಿವರು ಮಾತನಾಡುವುದಕ್ಕೆ ಬಿಡಿ.

**ಶ್ರೀ ಬಸವರಾಜ ರಾಯರೆಡ್ಡಿ**:- ಮಾನ್ಯ ಸಭಾಪತಿಯವರೇ, ಇಡೀ ರಾಜ್ಯದ ಎಲ್ಲಾ ಪ್ರಾಧ್ಯಾಪಕರಿಗೆ 7ನೇ ವೇತನ ಆಯೋಗದ ಶಿಫಾರಸ್ಸಿನಂತೆ ವೇತನ ಕೊಡಬೇಕೆನ್ನುವ ವಿಚಾರವು ಬಹಳ ಸಣ್ಣ ಸಮಸ್ಯೆಯಲ್ಲ. ಅದಕ್ಕಾಗಿ ಹಣಕಾಸಿನ ವಿಚಾರದಲ್ಲಿ ನನಗೆ ಸರಿ ಕಾಣಲಿಲ್ಲ. ಅದಕ್ಕೆ ನಾವು ಆರ್ಥಿಕ ಇಲಾಖೆಯ ಅಭಿಪ್ರಾಯವನ್ನು ತೆಗೆದುಕೊಂಡು ಮಾಡುತ್ತೇವೆಂದು ಹೇಳಿದ್ದೇನೆ. ಮಾನ್ಯ ಪುಟ್ಟಣ್ಣನವರೇ, ಸೋಮವಾರ ನಾನೇನು ಮೀಟಿಂಗ್ ಕರೆದಿದ್ದೇನೆ, ಅದರ ಜೊತೆಗೆ ಈ ವಿಚಾರದ ಬಗ್ಗೆ ಸಹ ಮೀಟಿಂಗ್ ಕರೆಯುತ್ತೇನೆ. ಮೊನ್ನೆ ದಿವಸ ನಾನು ಈ ಸದನದಲ್ಲಿ ಏನು ಭರವಸೆ ಕೊಟ್ಟಿದ್ದೆನು, ಅದರಂತೆ ಮೀಟಿಂಗ್ ಕರೆದು, ಈ ಮೀಟಿಂಗ್‌ನಲ್ಲೇ ಅದನ್ನು ಪರಿಹರಿಸೋಣ.

(ಗೊಂದಲ)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಆಯಿತು, ಮಾನ್ಯ ಸಚಿವರು ಆ ವಿಚಾರದ ಬಗ್ಗೆ ಸೋಮವಾರ ಮಾತನಾಡುತ್ತಾರೆ. (ಗೊಂದಲ) ಈಗ ಇಲ್ಲಿ ಉತ್ತರ ಕೊಡುವುದಕ್ಕೆ ಬರುವುದಿಲ್ಲ. ಬೇಗ ಕೊಡಿ ಎಂದು ಕೇಳುತ್ತಿದ್ದೇನೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಅವರಿಗೆ 6ನೇ ವೇತನ ಆಯೋಗದ arrears ಕೊಡದೇ ಇವರು ವಿಳಂಬ ಮಾಡುತ್ತಿದ್ದಾರೆ. arrears ನ್ನು ಕೊಡಬೇಕಾಗುತ್ತದೆ ಇದರಿಂದ ಅವರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ದಯವಿಟ್ಟು ಮಾನ್ಯ ಸಚಿವರು ಈ ಸದನದ ಮೂಲಕ ಪ್ರಕಟಿಸಿ, ಅವರಿಗೆ ಒಂದು ಸಹಿ ಸುದ್ಧಿ ಕೊಡಬೇಕೆಂಬುದು ನಮ್ಮ ಒತ್ತಾಯವಾಗಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಅವರಿಗೆ UGC ವೇತನ ಶ್ರೇಣಿ ಕೊಡಬೇಕು. ಎಲ್ಲಾ ಕಡೆ ಕೊಟ್ಟಿದ್ದಾರೆ, ನೀವು ಇಲ್ಲಿ ಅದನ್ನು announce ಮಾಡಿದರೆ ಏನು ತಪ್ಪಿದೆ ಹೇಳಿ? ಉತ್ತರವನ್ನು ಈಗ ಕೊಡುವುದಿಲ್ಲ ನಂತರ ಕೊಡುತ್ತೇವೆಂದು ಹೇಳುತ್ತಿದ್ದೀರಿ. ನೀವು ಅವರಿಗೆ ಇದನ್ನು ಕೊಡಲೇಬೇಕು. ನೀವು ಕೊಡಬೇಕಾಗಿರುವುದನ್ನು ಕೊಡಲು ಏಕೆ ಇವರು ಹಿಂದೆ-ಮುಂದೆ ನೋಡುತ್ತಿದ್ದಾರೆ. ನೀವು ಕೊಡಲಾಗುವುದೆಂದು ಹೇಳುವುದಲ್ಲಾ, ಇದು ಕೇಂದ್ರ ಸರ್ಕಾರದಿಂದ ಬಂದಿರುವಂಥದ್ದು. ಅದನ್ನು ಇವರು implement ಮಾಡಲಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, UGC ಯವರು ಕೊಡುತ್ತಾರೆ. . .

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಅವರಿಗೆ ಸಂಬಳ ಕೊಡಬೇಕಾಗಿರುವುದು ನಮ್ಮ ರಾಜ್ಯ ಸರ್ಕಾರ. UGC ಕೇವಲ ಶಿಫಾರಸ್ಸು ಮಾಡುತ್ತದೆ ಅಷ್ಟೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಅದನ್ನು ಇವರು ಕೊಡಬೇಕಲ್ಲವೇ?

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, 27ನೇ ತಾರೀಖು ನಿಮ್ಮ ವಿಷಯ ಮತ್ತು ಅವರ ವಿಷಯ ಎರಡನ್ನೂ ಸೇರಿಸಿ ಒಂದು ಸಭೆ ಕರೆಯುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಆಗುವುದಿಲ್ಲ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ರಾಜ್ಯ ಸರ್ಕಾರ ಅವರಿಗೆ ಮೊದಲು ಕೊಡಬೇಕು. ನಂತರ ಕೇಂದ್ರ ಸರ್ಕಾರ ಭರಿಸುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಅವರು ಏನು ಮಾಡುತ್ತಾರೆಂದು ಮೀಟಿಂಗ್‌ನಲ್ಲಿ ಹೇಳಿ. I cannot force the Government on the floor of the House.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೇ, ನೀವು ಯಾವತ್ತು ಹೇಳುತ್ತೀರೋ ಆವೊತ್ತು ಮೀಟಿಂಗ್ ಕರೆದು ಮಾಡೋಣ.

**ಪ್ರಶ್ನೆ ಸಂಖ್ಯೆ.1111+1101+1102**

**(ಉತ್ತರ ಲಗತ್ತಿಸಿದೆ)**

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಾನು ಕೇಳಿರುವಂತಹ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದಾರೆ. ಆದರೆ, ಮಾನ್ಯ ರಾಮಚಂದ್ರಗೌಡರವರು ಪ್ರಶ್ನೆ ಕೇಳಿದಂತಹ ಸಂದರ್ಭದಲ್ಲಿ, 2016–17ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಏನು ಮಾರ್ಗಸೂಚಿ ನೀಡಿತ್ತೋ, ಆ ವಿಷಯವನ್ನು ಇವರು ಉತ್ತರದಲ್ಲಿ ಹೇಳಲೇ ಇಲ್ಲ. ಅದನ್ನೂ ತಪ್ಪಿಸಿಬಿಟ್ಟರು. ಅವರು ಆ ವಿಷಯವನ್ನು ಮರೆಮಾಚಿ, ಈ ಹಿಂದೆ "ಸ್ಪೀಡ್ ಗೌರ್ನರ್ ಸುಲಿಗೆಗೆ ಇಲ್ಲ ಬ್ರೇಕ್" ಎಂದು ವಿಜಯ ಕರ್ನಾಟಕ, ವಿಜಯ ವಾಣಿ ಈ ರೀತಿ ಬಹಳಷ್ಟು ದಿನಪತ್ರಿಕೆಗಳಲ್ಲಿ ಬಂದಿರುತ್ತದೆ. ಕೇಂದ್ರ ಸರ್ಕಾರ ಹೇಳಿರುವುದೇನೆಂದರೆ, 19 ಕಂಪನಿಗಳು ವಾಹನಗಳಿಗೆ ಸ್ಪೀಡ್ ಗೌರ್ನರ್‌ನ್ನು ಅಳವಡಿಸಬಹುದೆಂದು ಹೇಳಿರುತ್ತದೆ. ಆದರೆ, ಇವರು ಆವೊತ್ತಿನ ದಿವಸ ಕೇವಲ ಎರಡು ಕಂಪನಿಗಳು ಮಾತ್ರ ವಾಹನಗಳಿಗೆ ಸ್ಪೀಡ್ ಗೌರ್ನರ್‌ನ್ನು ಅಳವಡಿಸಬಹುದೆಂದು ಮಾಡಿದ್ದಾರೆ. ಈ ಎರಡು ಕಂಪನಿಗಳಿಗೆ ಅನುಮತಿ ಕೊಟ್ಟಿರುವುದು ಏಕೆಂದರೆ, Same quality speed governors from same companies, ಬೇರೆ ರಾಜ್ಯಗಳಲ್ಲಿ 1300–2000 ರೂಪಾಯಿಗಳಿಗೆ ಅಳವಡಿಸುತ್ತಿದ್ದಾರೆ. ಆದರೆ, ನಮ್ಮ ರಾಜ್ಯದಲ್ಲಿ ಒಂದು ವಾಹನಕ್ಕೆ ಸುಮಾರು 8000 ದಿಂದ 9000 ದವರೆಗೆ ಹಣ ವಸೂಲಿ ಮಾಡುತ್ತಿದ್ದಾರೆ. ಇದು ಅಧಿಕಾರಿಗಳು ಮತ್ತು ಆ ಕಂಪನಿಗಳು ಮಾಡಿಕೊಂಡಿರುವ ಒಳ ಒಪ್ಪಂದವಾಗಿದೆ. ಈ ವಿಷಯ ಸಾಕಷ್ಟು ಬಾರಿ ಚರ್ಚೆ ಆಗಿದೆ. ಸಾಕಷ್ಟು ಬಾರಿ ಪತ್ರಿಕೆಗಳಲ್ಲಿಯೂ ಸಹ ಪ್ರಕಟವಾಗಿದೆ. ಈ ರೀತಿ ಹೆಚ್ಚಿಗೆ ಹಣ ವಸೂಲಿ ಮಾಡುತ್ತಿರುವುದನ್ನು ಖಂಡಿಸಿ, ಸಾಕಷ್ಟು ಸಂಘ–ಸಂಸ್ಥೆಗಳು ಹೋರಾಟ ಮಾಡಿವೆ. ಆದರೂ ಕೂಡ ಕೇಂದ್ರ ಸರ್ಕಾರ 2016–17ನೇ ಸಾಲಿನಲ್ಲಿ 19 ಕಂಪನಿಗಳು ವಾಹನಗಳಿಗೆ ಸ್ಪೀಡ್ ಗೌರ್ನರ್ ಅಳವಡಿಸಬಹುದೆಂದು ಒಂದು ಸುತ್ತೋಲೆಯನ್ನು ಹೊರಡಿಸಿರುತ್ತದೆ. ಇವರು ಈ ವಿಷಯ ಕೋರ್ಟ್‌ನಲ್ಲಿ ಇದೆಯೆಂದು ಹೇಳಿದ್ದಾರೆ. ಕೋರ್ಟ್ ಬೇರೆ ಕಂಪನಿಯವರ ಸ್ಪೀಡ್ ಗೌರ್ನರನ್ನು ಅಳವಡಿಸಬೇಡಿ ಎಂದು ಹೇಳಿದ್ದಾರೆಯೇ; ಬೇರೆ ಕಂಪನಿಯವರಿಗೆ ಕೊಡಬಾರದು ಎಂದು ಹೇಳಿದ್ದಾರೆಯೇ? ಇವರು 2009ನೇ ಸಾಲಿನದ್ದು ಇನ್ನೂ ಏಕೆ ಜೀವಂತವಾಗಿ ಇಟ್ಟುಕೊಂಡಿದ್ದಾರೆಂದರೆ, ಇದು ಒಳ ಒಪ್ಪಂದ. ಸಾರಿಗೆ ಇಲಾಖೆಯಲ್ಲಿ ಅಧಿಕಾರಿಗಳು ಜನಗಳ ಹತ್ತಿರ ಲೂಟಿ ಹೊಡೆಯುತ್ತಿದ್ದಾರೆ. ಆ ಸ್ಪೀಡ್‌ಗೌರ್ನರ್ 2,000/–ರೂಪಾಯಿಗಳು ಇದ್ದು, ಅದನ್ನು ಸುಮಾರು 13,000–14,000/–

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೂಪಾಯಿಗಳವರೆಗೆ ವಸೂಲಿ ಮಾಡಿದರೆ ಹೇಗೆ? ಸ್ಪೀಡ್ ಗೌರ್‍ನರ್ ಅಳವಡಿಕೆಗೆ ಹೆಚ್ಚಿಗೆ ದರ ನಿಗದಿಪಡಿಸಿರುವ ಕುರಿತು ಮೋಟಾರು ವಾಹನಗಳ ವಿವಿಧ ಸಂಘ-ಸಂಸ್ಥೆಗಳಿಂದ ದೂರುಗಳು ಬಂದ ಹಿನ್ನೆಲೆಯಲ್ಲಿ, ಕಂಪನಿಗಳ ಜೊತೆ ಮಾತುಕತೆ ನಡೆಸಿ, ಈ ಹಿಂದೆ ನಿಗದಿಪಡಿಸಿದ್ಧಂತಹ ದರ 9,500-13500 ರೂಪಾಯಿಗಳಿಂದ 7500-9500/-ರೂಪಾಯಿಗಳಿಗೆ ಇಳಿಸಿದ್ದೇವೆಂದು ಅವರ ಉತ್ತರದಲ್ಲಿ ಹೇಳಿದ್ದಾರೆ. ಇದೇ ಗುಣಮಟ್ಟ (ಸ್ಟ್ಯಾಂಡರ್ಡ್) ಹೊಂದಿರುವ ಸ್ಪೀಡ್‌ಗೌರ್‍ನರ್‌ಗೆ ಬೇರೆ ರಾಜ್ಯಗಳಲ್ಲಿ ಕೇವಲ 2,000/- ರೂಪಾಯಿಗಳ ಬೆಲೆ ನಿಗದಿಪಡಿಸಿರುವಾಗ ನಮ್ಮ ರಾಜ್ಯದಲ್ಲಿ ಏಕೆ 9500/- ರೂಪಾಯಿಗಳನ್ನು ನಿಗದಿ ಮಾಡಿದ್ದಾರೆ?

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಈಗ ಮಾನ್ಯ ಸಚಿವರು ಏನು ಮಾಡಬೇಕು ಎಂಬುದರ ಬಗ್ಗೆ ತಿಳಿಸಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಹೊರರಾಜ್ಯಗಳಲ್ಲಿ ಯಾವ ರೀತಿ ಮಾಡುತ್ತಿದ್ದಾರೆ, ಅದೇ ರೀತಿ ಕೇಂದ್ರ ಸರ್ಕಾರದ ನಿರ್ದೇಶನದಂತೆ ನಮ್ಮ ರಾಜ್ಯದಲ್ಲಿಯೂ ಕೂಡ ಎಲ್ಲಾ ಕಂಪನಿಗಳಿಗೂ ಆದ್ಯತೆ ಕೊಡಬೇಕು. ಆ ರೀತಿ ಮಾಡಿದಾಗ competition ಸೃಷ್ಟಿಯಾಗುತ್ತದೆ, ಇದರಿಂದ ಅದರ ಬೆಲೆಯೂ ಕಡಿಮೆಯಾಗುತ್ತದೆ. ಹೊರರಾಜ್ಯಗಳಲ್ಲಿ ಹೇಗೆ 1300-2000/- ರೂಪಾಯಿಗಳಿಗೆ ಸಿಗುತ್ತಿದೆಯೋ, ಅದೇ ರೀತಿ ಬೆಲೆಯನ್ನು ನಮ್ಮ ರಾಜ್ಯದಲ್ಲಿಯೂ ನಿಗದಿ ಮಾಡಬೇಕು.

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ಮಾನ್ಯ ಸಚಿವರು ಏನು ಹೇಳುತ್ತಾರೆ ಕೇಳೋಣ.

**ಶ್ರೀ ಎಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರು ಕೇಳಿರತಕ್ಕಂಥ ಪ್ರಶ್ನೆಗೆ ಇವತ್ತಿನ ದಿವಸ ರಾಜ್ಯದಲ್ಲಿ ರಸ್ತೆ ಸುರಕ್ಷತೆಗೋಸ್ಕರ ವಾಹನಗಳಿಗೆ ಸ್ಪೀಡ್ ಗೌರ್‍ನರ್‌ನ್ನು ಅಳವಡಿಸುತ್ತಿದ್ದೇವೆ. ಹೈಕೋರ್ಟ್‌ನ ಆದೇಶದ ಪ್ರಕಾರ ಪಾಲನೆ ಮಾಡುತ್ತಿದ್ದೇವೆ. ಒಟ್ಟು ಹತ್ತು ಕಂಪನಿಗಳನ್ನು ಕರೆಯಲಾಗಿತ್ತು, ಅದರಲ್ಲಿ ಎರಡು ಕಂಪನಿಗಳನ್ನು ಆಯ್ಕೆ ಮಾಡಲಾಯಿತು. ಇದರಲ್ಲಿ ಒಂದನೆಯದು, M/s. PRICOL Ltd., ಎರಡನೆಯದು, M/s Rosemerta Auto Tech Pvt. Ltd., ಇರುತ್ತವೆ. ಇವರ ವಿರುದ್ಧ ಆಯ್ಕೆಯಾಗದ ಕಂಪನಿಯವರು ಕೋರ್ಟ್‌ಗೆ ಹೋದರು. ಕೋರ್ಟ್ ಸಹ ಅವರ ಪರವಾಗಿಯೇ ಆದೇಶವನ್ನು ಎತ್ತಿ ಹಿಡಿದಿದೆ. ನಾವು ಸಹ ಪ್ರಶ್ನಿಸಿದೆವು. ಆದರೂ ಕೂಡ ಆದೇಶ ಬಂದಿದೆ. ಇನ್ನು ಎರಡನೆಯದು, 2009ರ ಆದೇಶದ ಪ್ರಕಾರವೇ ಮಾಡುತ್ತಿದ್ದೇವೆ. ಅದರಡಿಯಲ್ಲಿಯೇ ಕೋರ್ಟ್‌ಗೆ ಹೋಗಿರುವುದು. ಕೋರ್ಟ್‌ನಲ್ಲಿ ಆದೇಶವಿದೆ, ಅದನ್ನು ಏಕೆ ಇಟ್ಟುಕೊಂಡಿದ್ದೀರೆಂದು ಸದಸ್ಯರಾದ ಮಾನ್ಯ ಪುಟ್ಟಣ್ಣನವರು ಕೇಳುತ್ತಿದ್ದಾರೆ. ಈ ವಿಚಾರವು ಹೈಕೋರ್ಟ್‌ನಿಂದ ಸರ್ವೋಚ್ಛ ನ್ಯಾಯಾಲಯದವರೆಗೆ ಹೋಗಿದೆ. ಇದು ಇವತ್ತಿನದಲ್ಲ. TATA ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Honda ಕಂಪನಿ ಈ ಎರಡು ಕಂಪನಿಯ ಸ್ಪೀಡ್ ಗೌರ್ನರ್‌ಗಳನ್ನೇ ಅಳವಡಿಸುವಂತೆ ಹೇಳಿರುತ್ತಾರೆ. ಇದರ ಜೊತೆಗೆ 'Association of State Road Transport Undertaking' ಸಂಸ್ಥೆಯವರೂ ಈ 19 ಕಂಪನಿಯಲ್ಲಿ ಇದೂ ಕೂಡ ಸೇರಿದೆ. ಅದರಿಂದ ಇದರಲ್ಲಿ ಬೆಲೆ ನಿಗದಿ ಬಗ್ಗೆ ಹೇಳುವುದಾದರೆ, ಈಗ ಒಂದೊಂದು ವಸ್ತುವಿಗೆ ಒಂದೊಂದು ಬೆಲೆ ಇರುತ್ತದೆ. ಉದಾಹರಣೆಗೆ ಒಂದು ಪೆನ್ನು 10/- ರೂಪಾಯಿಗಳಿಗೂ ಸಿಗುತ್ತದೆ. ಇನ್ನೊಂದು ಪೆನ್ನು 2 ರೂಪಾಯಿಗಳಿಗೂ ಸಹ ಸಿಗುತ್ತದೆ. ಅದನ್ನು ನಾವು comparison ಮಾಡುವುದಕ್ಕೆ ಆಗುವುದಿಲ್ಲ. ಆ ರೀತಿಯಾಗಿ ಯಾರು ಸೇರಿಕೊಂಡು ಮಾಡುತ್ತಿದ್ದಾರೆ ಎನ್ನತಕ್ಕಂಥದ್ದಲ್ಲ. ಈ ವಿಚಾರ ಸುಪ್ರೀಂ ಕೋರ್ಟ್‌ನಲ್ಲಿ ಪೆಂಡಿಂಗ್ ಇರುವುದರಿಂದ ಮಾಡುತ್ತಿದ್ದೇವೆ.

(245)23.2.2018/ಎಂಎಂ/ಕೆಎಸ್/11.30

**ಶ್ರೀ ಹೆಚ್.ಎಂ. ರೇವಣ್ಣ (ಮುಂದು):-**

ಈಗ ಬರುತ್ತಿರುವ ವಾಹನಗಳಿಗೆ ಇರುತ್ತವೆ. ಆದರೆ ಹಳೆಯ ವಾಹನಗಳಿಗೆ ಮಾತ್ರ ಹಾಕುತ್ತಿದ್ದೇವೆ. ಹೊಸ ವಾಹನಗಳಿಗೆ in-built ಬರುತ್ತಿದೆ. ಅಂತಹದ್ದರಲ್ಲಿ ಲಾರಿ ಮಾಲೀಕರ association ಗಳು ಮತ್ತು ಸಂಸ್ಥೆಗಳು ಬಂದ್ ಮಾಡುವುದು ಸರಿಯಲ್ಲ. ಲಾರಿಗಳಿಗೆ ಸ್ಪೀಡ್ ಗೌರ್ನರ್ ಅನ್ನು ಹಾಕಲೇಬೇಕು ಎಂದು ನ್ಯಾಯಾಲಯದ ಆದೇಶ ಇದೆ. ಅದರ ಉದ್ದೇಶದಿಂದ ಅವರ ಜೊತೆ ಚರ್ಚೆ ಮಾಡಿ ರೂ.9500 ಇದ್ದುದನ್ನು 7500 ಮಾಡಿದ್ದೇವೆ, 13500 ಇದ್ದುದನ್ನು 9500 ಮಾಡಿದ್ದೇವೆ. ಅದರಲ್ಲಿಯೂ ಕೂಡ ಇಳಿಸಿದ್ದೇವೆ, ಇಷ್ಟು ಪ್ರಯತ್ನವನ್ನು ಮಾಡಿದ್ದೇವೆ. ಮಾನ್ಯ ಪುಟ್ಟಣ್ಣನವರು ಇದರಲ್ಲಿ ಅಧಿಕಾರಿಗಳು ಸೇರಿದ್ದಾರೆ ಎಂದು ದೊಡ್ಡ ಮಾತುಗಳನ್ನಾಡುತ್ತಲೇ ಇರುತ್ತಾರೆ. ಇದು ಅನೇಕ ಬಾರಿ ಚರ್ಚೆಯಾಗಿದೆ. ಹಿಂದೆಯೂ ಚರ್ಚೆಯಾಗಿದೆ. ಈ ಸಮಯದಲ್ಲಿ ಅದನ್ನು ಚಾಲನೆಗೆ ಕೊಟ್ಟಿದ್ದೇವೆ. ಮಾನ್ಯ ಸರ್ವೋಚ್ಛ ನ್ಯಾಯಾಲಯವು ಸ್ಪೀಡ್ ಗೌರ್ನರ್ ಅನ್ನು ಏಕೆ ಅಳವಡಿಸುತ್ತಿಲ್ಲ ಎಂದು ಕೇಳುತ್ತಿದ್ದಾರೆ. ಅದರಡಿಯಲ್ಲಿ monitor ಮಾಡಿದ್ದೇವೆ. ಇದರಲ್ಲಿ ಏನೇ ಅಡೆತಡೆ ಇದ್ದರೂ ಅದನ್ನು ಸರಿಪಡಿಸಲು ನಾವು ತಯಾರಿದ್ದೇವೆ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ನಾನು ಮುಂಚೆ ಈ ಪ್ರಶ್ನೆಯನ್ನು ಕೇಳಿದ್ದೆ. ಆಗ ಉತ್ತರವನ್ನು ಕೊಟ್ಟಿದ್ದಿರಿ. ಬೇರೆ ರಾಜ್ಯಗಳಲ್ಲಿ ಸುಮಾರು ರೂ.1,500, ರೂ. 2000 ಕ್ಕೆ ಸಿಗುವಂತಹ ಸ್ಪೀಡ್ ಗೌರ್ನರ್‌ಗಳನ್ನು ಉಪಯೋಗಿಸುತ್ತಿದ್ದಾರೆ. ಅವು ವಾಹನಗಳಲ್ಲವೇ? ನಮ್ಮ ರಾಜ್ಯದಲ್ಲಿ ಓಡಾಡುವುದು ಮಾತ್ರ ವಾಹನವೇ? ಸ್ಪೀಡ್ ಗೌರ್ನರ್‌ಗಳನ್ನು ಹಾಕಬೇಕೆಂದು ನಮ್ಮ ರಾಜ್ಯದಲ್ಲಿ ಮುಂಚಿನಿಂದಲೂ ಇದೆ. ನೀವು pen ಉದಾಹರಣೆ ಕೊಟ್ಟಿರಿ. ಹತ್ತು ರೂಪಾಯಿಯ pen ಸಹ ಇದೆ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹತ್ತು ಸಾವಿರ ರೂಪಾಯಿಯ pen ಸಹ ಇದೆ. Pen ಬರೆಯುತ್ತದೋ ಇಲ್ಲವೋ? ಸ್ಪೀಡ್ ಗೌರ್ನರ್ ಕೆಲಸ ಮಾಡುತ್ತದೋ ಇಲ್ಲವೋ? ಕೆಲಸ ಮಾಡುತ್ತದೆ. ಇಂಥದೇ ಬೇಕು ಎಂದು ಆಯ್ಕೆ ಮಾಡುವ ಜರೂರತ್ತು ಏನಿದೆ? 2009ರಲ್ಲಿ ಎಲ್ಲಾ ಕಾನೂನುಗಳನ್ನು ಆರ್ಡರ್ ಬೇಕಿಲ್ಲ ಎಂದು ತೆಗೆದುಬಿಟ್ಟಿದ್ದಾರೆ. ಅದಾದ ನಂತರ ಕೇಂದ್ರ ಸರ್ಕಾರದವರು ನಾವು ಏನು ಆರ್ಡರ್ ಮಾಡಿದ್ದೇವೆ ಅದು ಲಾಗೂ ಆಗುವುದಿಲ್ಲ ಎಂದು ಹೇಳಿದ ಮೇಲೆ, ಈ ಆದೇಶವನ್ನು ಕೋರ್ಟ್‌ಗೆ ನೀಡಿದರೆ ಕೋರ್ಟ್ ತಕ್ಷಣವೇ ಮಾಡುತ್ತದೆ. ಅವರು ಸರ್ಕಾರದ ಮೇಲೆ stay ತೆಗೆದುಕೊಂಡಿದ್ದಾರಾ? ಯಾರೋ ಒಬ್ಬ ವ್ಯಾಪಾರಸ್ಥನ ಮೇಲೆ stay ತೆಗೆದುಕೊಂಡಿದ್ದಾರೆ. ಸರ್ಕಾರದ ಮೇಲೆ ತೆಗೆದುಕೊಂಡಿಲ್ಲ, ಸರ್ಕಾರದ ಮೇಲೆ ತೆಗೆದುಕೊಳ್ಳಬಾರದು ಎಂದು ಹೇಳಿಲ್ಲ. ಅವನು ಇನ್ನೊಬ್ಬ ವ್ಯಾಪಾರಸ್ಥನ ಮೇಲೆ ತೆಗೆದುಕೊಳ್ಳುತ್ತಾನೆ. ಅವನು ಸರ್ಕಾರದ ಮೇಲೆ stay ತೆಗೆದುಕೊಂಡಿಲ್ಲ, ವ್ಯಾಪಾರಸ್ಥನ ಮೇಲೆ stay ತೆಗೆದುಕೊಂಡಿದ್ದಾನೆ. ಆದ್ದರಿಂದ ಮಾನ್ಯ ಪುಟ್ಟಣ್ಣನವರು ಏನೇನಾಗಿದೆ ಎಂದು ಹೇಳಿದರು ಅದನ್ನು ನಾನು ಆಗಿದೆ ಎಂದು ದೃಢೀಕರಿಸುತ್ತೇನೆ. ನಾನು ಆಗ ಪ್ರಶ್ನೆ ಕೇಳಿದಾಗ ಇದೇ ಉತ್ತರವನ್ನು ಕೊಟ್ಟಿದ್ದಿರಿ, ಆದರೆ ಇದರ ಸತ್ಯಾಸತ್ಯತೆ ಬೇರೆ ಇದೆ ಎನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾನು ಕೇಳುವುದು ಇಷ್ಟೇ.

**ಸಭಾಪತಿಯವರು:-** ಪ್ರಶ್ನೆ ಕೇಳಿ. Statement ಅನ್ನು ಮಾಡಬೇಡಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೊಟ್ಟಿರುವ ಉತ್ತರಕ್ಕೆ ಒಂದೆರಡು ಪ್ರಶ್ನೆ ಕೇಳುತ್ತೇನೆ ಅಷ್ಟೇ. ಕೇಂದ್ರ ಸರ್ಕಾರದ 2009ರ ಆದೇಶವನ್ನು ಇಟ್ಟುಕೊಂಡು ಮಾಡಿದ್ದೇವೆ ಎಂದು ಹೇಳುತ್ತಾರಲ್ಲ ಅವರು 100 ವರ್ಷಕ್ಕೆ ಗುತ್ತಿಗೆ ಕೊಟ್ಟಿದ್ದಾರೆಯೇ? 100 ವರ್ಷವೂ ಅವರೇ ನಡೆಸಬೇಕೇ? 2016-17ರಲ್ಲಿ ಕೇಂದ್ರ ಸರ್ಕಾರವು ಸೂಚನೆ ಕೊಟ್ಟಂತೆ ಅದರ ಪ್ರಕಾರ ಮಾಡಲಿ ಎಂದು ಕೇಳುತ್ತೇನೆ.

**ಶ್ರೀ ಹೆಚ್.ಎಂ. ರೇವಣ್ಣ:-** ಮಾನ್ಯ ಸಭಾಪತಿಯವರೇ, 2009ರ ಆದೇಶದ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ stay ಇದೆ. ಅಲ್ಲಿ pending ಇದೆ, ಅದು ತೀರ್ಮಾನವಾದರೆ ಏನು ಬೇಕಾದರೂ ಮಾಡುವುದಕ್ಕೆ ತಯಾರಿದ್ದೇವೆ. ನಾವಾಗಲೀ, ಅಧಿಕಾರಿಗಳಾಗಲೀ ಅದರಲ್ಲಿ ಯಾವುದೇ ಹಸ್ತಕ್ಷೇಪ ಮಾಡುವುದಿಲ್ಲ, ನ್ಯಾಯಾಲಯದ ಆದೇಶ ಇರುವಾಗ ಮಾಡಲೇ ಬೇಕಾಗುತ್ತದೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಏನು ಹೇಳಿದರೆಂದರೆ, ರೂ.9500 ಇದ್ದುದನ್ನು 7500 ಮಾಡಿದ್ದೇವೆ, 13500 ಇದ್ದುದನ್ನು 9500 ಮಾಡಿದ್ದೇವೆ ಎಂದು ಹೇಳಿದ್ದಾರೆ. ನನ್ನ ಪ್ರಶ್ನೆ ಇಷ್ಟೇ. ಇದೇ ಸ್ಪೀಡ್ ಗೌರ್ನರ್‌ಗೆ ಬೇರೆ ರಾಜ್ಯಗಳಲ್ಲಿ 2000 ರೂಪಾಯಿಗೆ ಕೊಡುತ್ತಿದ್ದಾರಲ್ಲ ಅಲ್ಲಿಗೆ ಹೋಗಿ ತಿಳಿದುಕೊಂಡು ಬರುವುದಕ್ಕೆ ನಿಮಗೇನು ದಾಡಿ, ಅಧಿಕಾರಿಗಳಿಗೇನು ದಾಡಿ? ಅಲ್ಲಿ ಎಷ್ಟಕ್ಕೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊಡುತ್ತಿದ್ದಾರೆ ಎಂದು ಅಲ್ಲಿಗೆ ಹೋಗಿ verify ಮಾಡಿ ಅಷ್ಟಕ್ಕೆ ಇಲ್ಲಿಯೂ ಕೊಡಿಸಲಿ. ಏಕೆ ಕೊಡಿಸಬಾರದು? Same quality of speed governors from the same company ಏಕೆ ಕೊಡಿಸಬಾರದು?

**ಶ್ರೀ ಹೆಚ್.ಎಂ. ರೇವಣ್ಣ:-** ಮಾನ್ಯ ಸಭಾಪತಿಯವರೇ, ಅವು fake ಮಾಲ್‌ಗಳಾಗಿರುತ್ತವೆ. ಇಲ್ಲಿ ಸಿಗುವ ಮಾಲ್ ಬೇರೆ, ಅಲ್ಲಿ ಸಿಗುವ ಮಾಲ್ ಬೇರೆ ಇರುತ್ತವೆ. ಎಲ್ಲವೂ ಒಂದೇ ಎಂದು prove ಮಾಡುವುದಕ್ಕಾಗುತ್ತದೆಯೇ?

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರು ಅದನ್ನು ಪರಿಶೀಲನೆ ಮಾಡಿ ಎಂದು ಹೇಳುತ್ತಿದ್ದಾರೆ.

**ಶ್ರೀ ಹೆಚ್.ಎಂ. ರೇವಣ್ಣ:-** ಮಾನ್ಯ ಸಭಾಪತಿಯವರೇ, ಅದನ್ನು ಪರಿಶೀಲಿಸುತ್ತೇವೆ.

**Sri RAMACHANDRA GOWDA:-** Hon'ble Chairman, whether the speed governors are not working in other States? They are working there.

**ಸಭಾಪತಿಯವರು:-** ಆಯಿತು ಬಿಡಿ, check ಮಾಡುತ್ತಾರೆ.

**Sri RAMACHANDRA GOWDA:-** Hon'ble Chairman, the Central Government has suppressed all the earlier orders.

**Sri H.M.REVANNA**:- Hon'ble Chairman, order passed in the year 2009 has been challenged before the Court and the matter is pending before the Supreme Court.

**Sri RAMACHANDRA GOWDA:-** Hon'ble Chairman, then I should suspect the Hon'ble minister.

**ಸಭಾಪತಿಯವರು:-** ಹಾಗೆಲ್ಲ ಮಾತನಾಡಬಾರದು. Check ಮಾಡಿ ಎಂದು ನೀವು ಹೇಳಿದ್ದೀರಿ, ಅವರು check ಮಾಡುತ್ತೇವೆ, the matter ends there.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾನು ನೇರವಾಗಿ ಪ್ರಶ್ನೆ ಕೇಳುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಹೇಗೆ rate fix ಮಾಡುತ್ತೀರಿ ಅದೇ ವಸ್ತು ಹೊರ ರಾಜ್ಯದಲ್ಲಿ ಎಷ್ಟಕ್ಕೆ ಸಿಗುತ್ತಿದೆ ಇದನ್ನು verify ಮಾಡಿ ಅದೇ rate ನಲ್ಲಿ ಈ ರಾಜ್ಯದ ಜನರಿಗೆ ಕೊಡಬೇಕಾಗುತ್ತದೆ.

**ಸಭಾಪತಿಯವರು:-** ನೀವು ಹೇಳಿದ್ದು ಸರಿ ಇದ್ದರೆ ಅವರು ಹಾಗೇ ಮಾಡಬೇಕಾಗುತ್ತದೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಸುಪ್ರೀಂ ಕೋರ್ಟ್‌ನಲ್ಲಿ ಸ್ಟೇ ಇದೆಯೆಂದು ನಿಲ್ಲಿಸುವುದಲ್ಲ.

**Mr. CHAIRMAN:-** Same material ಕಡಿಮೆ ದರಕ್ಕೆ ಹೊರಗಡೆ ಇದ್ದರೆ ಅದನ್ನು ತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರೆ.

**ಶ್ರೀ ಹೆಚ್.ಎಂ. ರೇವಣ್ಣ:-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಪರಿಶೀಲಿಸುತ್ತೇವೆ.

**ಚುಕ್ಕೆ ಪ್ರಶ್ನೆ ಸಂಖ್ಯೆ: 1063**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ವಿಜಯ ಸಿಂಗ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಬೀದರ್ ಜಿಲ್ಲೆಯಲ್ಲಿ 410 ಶುದ್ಧ ನೀರಿನ ಘಟಕಗಳು ಮಂಜೂರಾಗಿವೆ. ಈಗ ನಡೆಯುತ್ತಿರುವುದು 179 ಘಟಕಗಳು ಅದರಲ್ಲಿಯೂ 15 ಘಟಕಗಳು ಸರಿಯಾಗಿ ನಡೆಯುತ್ತಿಲ್ಲ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಅದು ಏಕೆ ತೊಂದರೆಯಲ್ಲಿದೆ ಎಂದು ಮಾನ್ಯ ಸಚಿವರು ತಿಳಿಸಬೇಕು. ಟೆಂಡರ್ ಪ್ರಕ್ರಿಯೆಯನ್ನು ಇನ್ನಷ್ಟು ಬೇಗ ಮಾಡಬೇಕೆಂದು ಕೋರುತ್ತೇನೆ.

**ಶ್ರೀ ಹೆಚ್.ಕೆ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ನೀರು ಶುದ್ಧೀಕರಣ ಘಟಕಗಳನ್ನು ಮಂಜೂರು ಮಾಡಿದ್ದೇವೆ. ಅದರಲ್ಲಿ 170 ಘಟಕಗಳನ್ನು ಕಮಿಷನ್ ಮಾಡಿದ್ದೇವೆ. ಕಮಿಷನ್ ಆಗಿದ್ದರಲ್ಲಿ 15 ಘಟಕಗಳು ದುರಸ್ತಿಗೆ ಬಂದಿವೆ. ಅವು ಮೇಲೆ ಮೇಲೆ ದುರಸ್ತಿಗೆ ಬರುತ್ತಿರುತ್ತವೆ. ಹೊಸ ನೀರು ಶುದ್ಧೀಕರಣ ಘಟಕಗಳಾಗಿದ್ದರೂ ಕೆಲವು ಸಂದರ್ಭಗಳಲ್ಲಿ ದುರಸ್ತಿಗೆ ಬರುತ್ತವೆ. ದುರಸ್ತಿ ಹಾಗೂ maintenance ಮಾಡುವುದಕ್ಕಾಗಿ ಏಜೆನ್ಸಿಯ ಜೊತೆ ಒಪ್ಪಂದ ಮಾಡಿಕೊಂಡಿರುತ್ತೇವೆ. ಒಂದು ವೇಳೆ ಬೇಗ ರಿಪೇರಿಯಾಗಿಲ್ಲ ಎಂಬ ಮಾಹಿತಿ ಇದ್ದರೆ ಸಂಬಂಧಪಟ್ಟ ಮುಖ್ಯ ಅಭಿಯಂತರು, ಆಯುಕ್ತರು ಎಲ್ಲರೂ ಇಲ್ಲಿಯೇ ಇದ್ದಾರೆ, ಅವರು ಈ ಚರ್ಚೆಯನ್ನು ಕೇಳಿಸಿಕೊಳ್ಳುತ್ತಿದ್ದಾರೆ. ತಕ್ಷಣವೇ ಅವುಗಳನ್ನು ರಿಪೇರಿ ಮಾಡುವ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಅದರ ಜೊತೆಗೆ ಉಳಿದ ಕೆಲಸಗಳಿಗೆ ಬೇಗ ಟೆಂಡರ್ ಬೇಗ ಕರೆಯಬೇಕು ಎಂದು ಹೇಳಿದ್ದೀರಿ. ಈಗಾಗಲೇ tender float ಆಗಿದೆ, tender acceptance ಒಂದು ವಾರದೊಳಗೆ ಆಗುತ್ತದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಚುಕ್ಕೆ ಪ್ರಶ್ನೆ ಸಂಖ್ಯೆ: 1073**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಅನುದಾನಿತ ಪದವಿ ಕಾಲೇಜುಗಳಲ್ಲಿ ಖಾಲಿಯಾಗಿರುವ ಹುದ್ದೆಗಳ ಭರ್ತಿಗೆ ಅವಕಾಶವನ್ನು ಕಲ್ಪಿಸಲಾಗಿದೆಯೇ ಎಂದು ಕೇಳಿದ ಪ್ರಶ್ನೆಗೆ ಹೌದು ಎಂದು ಉತ್ತರ ಕೊಟ್ಟಿದ್ದೀರಿ. ಆದರೆ ಎಷ್ಟು ಹುದ್ದೆಗಳ ಭರ್ತಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಕೇಳಿದ್ದೆ ಅದನ್ನು ಒದಗಿಸಿಲ್ಲ. ನಿಮ್ಮ ಪ್ರಕಾರ ಎಷ್ಟು ಹುದ್ದೆಗಳಿಗೆ ಮಾಹಿತಿ ಒದಗಿಸಿದ್ದೀರಿ ಎಂದು ಹೇಳಬೇಕು ಇದು ಮೊದಲನೆಯದು. ಎರಡನೆಯದಾಗಿ, ರೋಸ್ಟರ್ ನಿಯಮಾವಳಿಗಳನ್ನು ಅಳವಡಿಸಿಕೊಳ್ಳುವ ಕುರಿತು ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಒಂದು ಪದ್ಧತಿ ಇದೆ. ನಿಮ್ಮಲ್ಲಿ subject-wise roster ಪಾಲನೆ ಮಾಡುವುದಿದೆ. ಸಾರ್ವಜನಿಕ ಶಿಕ್ಷಣ ಇಲಾಖೆಯ ರೀತಿಯಲ್ಲಿ ರೋಸ್ಟರ್ ಪಾಲನೆ ಮಾಡುತ್ತೀರಾ, ಅದಕ್ಕಿರುವ ಅಡೆತಡೆಗಳೇನು ಇದೆ ಅದನ್ನು ನಿವಾರಿಸಿ ಸಾರ್ವಜನಿಕ ಶಿಕ್ಷಣ ಇಲಾಖೆಯ ರೋಸ್ಟರ್ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು ಎಂದು ವಿನಂತಿ ಮಾಡುತ್ತೇನೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ವಿವಿಧ ಅನುದಾನಿತ ಕಾಲೇಜುಗಳಲ್ಲಿ ಹಲವಾರು ವರ್ಷಗಳಿಂದ ಮಂಜೂರಾಗಿರುವ ಹುದ್ದೆಗಳು ಖಾಲಿ ಇತ್ತು. ಅದನ್ನು ಸರ್ಕಾರವು ಮನಗಂಡು ದಿನಾಂಕ 31.12.2015ರ ಆ ದಿವಸಕ್ಕೆ ಕೊನೆಗೊಂಡಂತೆ ಎಷ್ಟು ಮಂಜೂರಾತಿಯಾದ ಹುದ್ದೆಗಳಿದ್ದವು ಅವೆಲ್ಲವನ್ನೂ ಕೊಟ್ಟಿದ್ದೇವೆ, ಅದು ಸುಮಾರು 1200 ಆಗುತ್ತದೆ. 1200 ಹುದ್ದೆಗಳು ಮಂಜೂರಾಗಿದ್ದು, ನಿಧನ ಮತ್ತು ನಿವೃತ್ತಿ, ರಾಜೀನಾಮೆಯಿಂದ ಖಾಲಿಯಾದ 1200 ಹುದ್ದೆಗಳನ್ನು ಸರ್ಕಾರ ಭರ್ತಿ ಮಾಡಿಕೊಳ್ಳುವುದಕ್ಕೆ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅನುಮತಿ ನೀಡಿದೆ. ಅದರ ಪ್ರಕಾರ ಇಲಾಖೆಯ ಮುಖಾಂತರ ಸಂಸ್ಥೆಗಳಿಗೆ ಗೊತ್ತಾಗಿದೆ. ಅವರು advertisement ಕೊಟ್ಟು, as per the roster ಭರ್ತಿ ಮಾಡಿಕೊಳ್ಳಬೇಕಾಗಿದೆ ಇದು ಮೊದಲನೆಯದು. ನಿಮ್ಮ ಎರಡನೆ ಉಪ ಪ್ರಶ್ನೆಗೆ ಹೇಳುವುದಾದರೆ ತಾವು ಹೇಳಿದ್ದೆಲ್ಲವೂ ಸತ್ಯ ಇದೆಯೆಂದು ಒಪ್ಪಿಕೊಳ್ಳುತ್ತೇನೆ. ನಮ್ಮ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಇಲಾಖೆಯಲ್ಲಿ ವಿಷಯವಾರು ಮೀಸಲಾತಿ ಇಲ್ಲ.

246/23.02.2018/ಕೆಹೆಚ್/ಜಿಆರ್/11-40

**ಶ್ರೀ ಬಸವರಾಜ ರಾಯರೆಡ್ಡಿ (ಮುಂದು):-**

College and institution ನ್ನು as a unit ಎಂದು ತೆಗೆದುಕೊಂಡಿದ್ದಾರೆ. ನಮ್ಮಲ್ಲಿ subject as a unit ಎಂದು ತೆಗೆದುಕೊಂಡಿದ್ದಾರೆ. There is a difference. ಇದು ಸರಿಯಾಗಬೇಕು. ನಾವು subject-wise ಮೀಸಲಾತಿಯನ್ನು ಇಟ್ಟುಕೊಂಡಿರುವುದರಿಂದ, ಕೆಲವು ಸಂದರ್ಭದಲ್ಲಿ ಅದು ಸರಿ ಹೊಂದುವುದಿಲ್ಲ.

**ಸಭಾಪತಿಯವರು**:- ಮಾನ್ಯ ಸಚಿವರೇ ಕೆಲವು ಸಂದರ್ಭದಲ್ಲಿ ಅದು ಸರಿ ಹೋಗುವುದೂ ಇಲ್ಲ.

**ಶ್ರೀ ಬಸವರಾಜ ರಾಯರೆಡ್ಡಿ**:- ಮಾನ್ಯ ಸಭಾಪತಿಯವರೇ, ಅದನ್ನು ನಾನು ಒಪ್ಪುತ್ತೇನೆ. I admit it. ಅದಕ್ಕಾಗಿ ತ್ವರಿತವಾಗಿ ಅದನ್ನು ಸರಿಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಶ್ರೀ ಎಸ್.ವ್ಹಿ.ಸಂಕನೂರರವರ ಸಮಸ್ಯೆಯ ಕುರಿತು ದಿನಾಂಕ: 27-02-2018 ರಂದು ಒಂದು ಸಭೆಯನ್ನು ಕರೆಯುತ್ತಿದ್ದೇನೆ. ಹಾಗೆಯೇ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರು ಅವತ್ತಿನ ಸಭೆಗೆ ಬರಬೇಕು. ಇಲ್ಲಿ ಏನಾಗಿದೆ ಎಂದರೆ ನಮ್ಮ ಇಲಾಖೆಯ ಕಾರ್ಯದರ್ಶಿಯವರು ಪ್ರಭಾರದಲ್ಲಿ ಕೆಲಸ ಮಾಡುತ್ತಿದ್ದಾರೆ. ನಮ್ಮ ಇಲಾಖೆಯು ಎಲ್ಲಾ in-charge system ನಲ್ಲಿ ಇದೆ. ಮಾನ್ಯ ಸದಸ್ಯರ ಸಲಹೆಯನ್ನು ತಾತ್ವಿಕವಾಗಿ ಒಪ್ಪಿಕೊಂಡಿದ್ದೇನೆ. ದಯಮಾಡಿ ಆದಷ್ಟು ಬೇಗ ಇದನ್ನು ಸರಿ ಮಾಡುವುದಕ್ಕೆ ಸಾಧ್ಯವಾದರೆ ಆದೇಶವನ್ನು ಹೊರಡಿಸುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

**ಶ್ರೀ ಅರುಣ ಶಹಾಪುರ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರನ್ನು ಅಭಿನಂದಿಸುತ್ತೇನೆ. ಆದಷ್ಟು ಬೇಗ ಇದನ್ನು ಜಾರಿ ಮಾಡುವ ಹಾಗೆ ಮಾಡಬೇಕು.

**ಶ್ರೀ ಬಸವರಾಜ ರಾಯರೆಡ್ಡಿ**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆಗಳಿಗೆ convince ಆಗಿದ್ದೇನೆ. ಇದರ ಸಾಧಕ-ಬಾಧಕಗಳ ಬಗ್ಗೆ ಚರ್ಚಿಸಲು ಒಂದು ಸಭೆಯನ್ನು ಕರೆಯುತ್ತೇನೆ.

**ಸಭಾಪತಿಯವರು**:- ಪ್ರಶ್ನೋತ್ತರ ಅವಧಿ ಮುಗಿದಿದೆ. ತಡೆ ಹಿಡಿಯಲಾದ ಪ್ರಶ್ನೆಯ ಒಂದು ಪಟ್ಟಿ ಇದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಸದನದಲ್ಲಿ ಇಲ್ಲ.

**ಶ್ರೀ ಎಸ್.ವ್ಹಿ.ಸಂಕನೂರ**:- ಮಾನ್ಯ ಸಭಾಪತಿಯವರೇ, ಬಹಳ ಪ್ರಾಮುಖ್ಯವಾದ ಪ್ರಶ್ನೆಯನ್ನು ಮಾನ್ಯ ಸಚಿವರಲ್ಲಿ ಕೇಳಬೇಕು.

**ಸಭಾಪತಿಯವರು**:- ಇದರ ಬಗ್ಗೆ ನನಗೆ ಹೇಳಬೇಡಿ. ಮಾನ್ಯ ಸಚಿವರು ಸದನಕ್ಕೆ ಬರುತ್ತಾರೆ. ಎಲ್ಲಾ ಪ್ರಶ್ನೆಗಳು ಸಹ ಪ್ರಾಮುಖ್ಯವಾದ ಪ್ರಶ್ನೆಗಳಾಗಿರುತ್ತದೆ. Important ಇಲ್ಲದೇ ಇರುವ ಪ್ರಶ್ನೆಗಳು ಇಲ್ಲವೇ ಇಲ್ಲ. ಆದರೆ ಮಾನ್ಯ ಸಚಿವರು ಇಷ್ಟು ಹೊತ್ತು ಸದನದಲ್ಲೇ ಇದ್ದರು. ಈಗ ಸದನದಲ್ಲಿ ಕಾಣುತ್ತಿಲ್ಲ.

**ಶ್ರೀ ಎಸ್.ವ್ಹಿ.ಸಂಕನೂರ**:- ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶವನ್ನು ಕೊಡಬೇಕು.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಈಗ ತಡೆ ಹಿಡಿಯಲಾದ ಪ್ರಶ್ನೆಯನ್ನು ಕೇಳುವುದಕ್ಕೆ ಆಗದೇ ಇರುವ ಕಾರಣಕ್ಕಾಗಿ ಪ್ರಶ್ನೋತ್ತರ ಅವಧಿ ಮುಗಿದ ಮೇಲೂ ಕೂಡ ಮಾನ್ಯ ಸಚಿವರು ಸದನಕ್ಕೆ ಬಂದರೆ, ತಕ್ಷಣ ತಡೆ ಹಿಡಿಯಲಾದ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ. ಈಗ ಮುಂದಿನ ವಿಷಯವನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಆಯಿತು.

**ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎಂ.ಆರ್. ಸೀತಾರಾಂ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 23ನೇ ಫೆಬ್ರವರಿ 2018 ಸಮೂಹ-Vರ ಲಿಖಿತ ಮೂಲಕ ಉತ್ತರಿಸುವ ಒಟ್ಟು 144 ಪ್ರಶ್ನೆಗಳ ಪೈಕಿ 62 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಹಾಗೂ

ದಿನಾಂಕ 19ನೇ ಫೆಬ್ರವರಿ 2018, ಸಮೂಹ-Iರ ಚುಕ್ಕೆ ಗುರುತಿನ 15 ಪ್ರಶ್ನೆಗಳ ಪೈಕಿ 11 ಪ್ರಶ್ನೆಗಳಿಗೆ ಉತ್ತರವನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ ಒಟ್ಟು 138 ಪ್ರಶ್ನೆಗಳ ಪೈಕಿ 112 ಪ್ರಶ್ನೆಗಳಿಗೆ ಸ್ವೀಕೃತವಾಗಿರುವ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ತಡೆ ಹಿಡಿಯಲಾದ ಪ್ರಶ್ನೆ ಸಂಖ್ಯೆ. 303**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿರುವ ಅನುದಾನಿತ ಶಿಕ್ಷಣ ಸಂಸ್ಥೆಗಳ recognition renewal ಅನ್ನು ಕಳೆದ 5 ವರ್ಷಗಳಿಂದ ನವೀಕರಣ ಮಾಡಿರುವ ಬಗ್ಗೆ ಸರ್ಟಿಫಿಕೇಟ್ ಯಾವ ಕಾಲೇಜಿಗೂ ಇನ್ನೂ ತಲುಪಿರುವುದಿಲ್ಲ. ಹಾಗಾಗಿ ನಾನು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು ಇವತ್ತಿನ ದಿವಸ ಉತ್ತರವನ್ನು ಕೊಟ್ಟಿದ್ದಾರೆ. ರಾಜ್ಯದಲ್ಲಿರುವಂತಹ 3547 ಕಾಲೇಜುಗಳಲ್ಲಿ 2984 ಕಾಲೇಜುಗಳಿಗೆ renewal ಮಾಡಿದ್ದೇವೆ. 383 ಕಾಲೇಜುಗಳನ್ನು ತಟಸ್ಥವಾಗಿ ಹಿಡಿದಿದ್ದೇವೆ. 180 ಕಾಲೇಜುಗಳು ಅರ್ಜಿಯನ್ನೇ ಕೊಟ್ಟಿರುವುದಿಲ್ಲವೆಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರಿಗೆ ನಾನು ನೇರವಾಗಿ ಒಂದು ಪ್ರಶ್ನೆಯನ್ನು ಕೇಳುವುದೇನೆಂದರೆ, ನಾನು ಪ್ರಶ್ನೆಯನ್ನು ಕೇಳಿದ ಮೇಲೆ ಮಾನ್ಯ ಸಚಿವರು ತ್ವರಿತಗತಿಯಿಂದ ಈಗ recognition renewal ಅನ್ನು ಮಾಡಿದ್ದಾರೆ. ಆದರೆ ಇದರ ಬಗ್ಗೆ ಇನ್ನೂ ಒಂದು ಮಾಹಿತಿಯನ್ನು ಕೊಡುತ್ತೇನೆ. ಈಗ 2984

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಲೇಜುಗಳ renewal ಅನ್ನು ಮಾಡಿದ್ದಾರೆ. ಇದನ್ನು 5 ವರ್ಷಗಳಿಂದ ನವೀಕರಣ ಮಾಡದೇ ಏಕೆ ಸುಮ್ಮನೆ ಕುಳಿತುಕೊಂಡಿದ್ದಾರೆ? ಈಗ renewal ಅನ್ನು ಮಾಡಿದ್ದಾರೆಯಲ್ಲವೇ, ಗದಗ ಜಿಲ್ಲೆಗೆ ಒಂದು ಕೂಡ renewal certificate ಮುಟ್ಟಿರುವುದಿಲ್ಲ. ಧಾರವಾಡ ಜಿಲ್ಲೆಗೆ ಶೇಕಡ 50 ರಷ್ಟು ಮುಟ್ಟಿರುತ್ತದೆ. ಹಾವೇರಿ ಜಿಲ್ಲೆಯ ಡಿ.ಡಿ.ಪಿ.ಐ ಕಛೇರಿಗೆ ಸರ್ಟಿಫಿಕೇಟ್ ಹೋಗಿವೆ. ಆದರೆ ಇನ್ನೂ ಯಾವುದು ಮುಟ್ಟಿರುವುದಿಲ್ಲ. 5 ವರ್ಷಗಳ ನಂತರ ಈ recognition renewal ಅನ್ನು ಮಾಡುತ್ತಿದ್ದಾರೆ. ಇದರಲ್ಲಿ ವಿಳಂಬ ಏಕಾಯಿತು? ವಿಳಂಬ ಏಕಾಯಿತು ಎಂಬ ಬಗ್ಗೆ ನನಗೆ ಮಾನ್ಯ ಸಚಿವರಿಂದ ಉತ್ತರ ಬೇಕಾಗಿದೆ.

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ಇಲಾಖೆಯಲ್ಲಿ ಈ ಕೆಲಸವು ನಿರಂತರವಾಗಿ ನಡೆಯುವಂತಹ ಕ್ರಮಗಳಾಗಿದ್ದು, ಸಂಯೋಜನೆಯನ್ನು renewal ಮಾಡುವಂತಹ ಸಂದರ್ಭದಲ್ಲಿ ಪ್ರಾಥಮಿಕ ಶಾಲಾ ವಿಭಾಗದಲ್ಲಿ ಕನಿಷ್ಟ 5 ವರ್ಷಗಳಿಗೊಮ್ಮೆ ಮಾಡಬೇಕೆಂದು ಇದ್ದರೂ ಕೂಡ, ಇದನ್ನು ಪ್ರತಿ ವರ್ಷ ಮಾಡುವ ಪದ್ಧತಿ ಇತ್ತು. ಜೊತೆಗೆ ಕೆಲವೊಂದು ವಿಚಾರಗಳನ್ನು ನಾವು ಸತ್ಯವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಪ್ರತಿ ವರ್ಷ ಈ ನವೀಕರಣವನ್ನು ಮಾಡುವಂತಹ ಸಂದರ್ಭದಲ್ಲಿ ಇಲಾಖೆಯ ಅಧಿಕಾರಿಗಳು ಕೊಡುತ್ತಿರುವಂತಹ ಕಿರುಕುಳಗಳು ಸಹ ನಮ್ಮ ಗಮನಕ್ಕೆ ಬಂದಿದೆ. ಕಳೆದ ವರ್ಷ ಈ ಇಲಾಖೆಗೆ ಸಚಿವನಾಗಿ ಬಂದ ಮೇಲೆ ಇದಕ್ಕೆ ಮಾಹಿತಿ ತಂತ್ರಜ್ಞಾನದ ಒಂದು ತಂತ್ರಾಂಶವನ್ನು ತಂದು ಆನ್‌ಲೈನ್ ಮೂಲಕ ನಾವು affiliation and recognition ಕೊಡುವಂತಹ ಪದ್ಧತಿ ಜಾರಿ ಮಾಡಿದ್ದೇವೆ. ಈಗಾಗಲೇ 2984 ಕಾಲೇಜುಗಳ ನವೀಕರಣವನ್ನು ಮಾಡಿಕೊಟ್ಟಿದ್ದೇವೆ. 383 ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಅಥವಾ ಶೂನ್ಯ ದಾಖಲಾತಿಗಳು ಇತ್ಯಾದಿ ಕಾರಣಗಳಿಂದ ಪರಿಶೀಲನೆಯನ್ನು ಮಾಡುವುದಕ್ಕೆ ಇಟ್ಟುಕೊಂಡಿದ್ದೇವೆ. 180 ಕಾಲೇಜುಗಳದ್ದು ಏಕೆ ತಡವಾಯಿತು ಎಂದು ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಹೊಸ ಸಂಯೋಜನೆಗಳನ್ನು ನಮ್ಮ ಅನುಮತಿ ಇಲ್ಲದೇ ಪ್ರಾರಂಭ ಮಾಡಿರುವಂತಹದ್ದು. ನಾವು ವಾಣಿಜ್ಯ ವಿಭಾಗಕ್ಕೆ ಅನುಮತಿಯನ್ನು ಕೊಟ್ಟಾಗ, ವಿಜ್ಞಾನ ಮತ್ತು ಕಲಾ ವಿಭಾಗವನ್ನು ಪ್ರಾರಂಭ ಮಾಡಿಕೊಳ್ಳುವುದು. ನಮ್ಮ ಅನುಮತಿ ಇಲ್ಲದೇ ಪ್ರಾರಂಭವಾಗಿರುವಂತಹ ಕೆಲವೊಂದು ಸಂಯೋಜನೆಗಳೇನಿವೆ ಅಥವಾ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಾಗಿರುವಂತಹದ್ದು ಮತ್ತು ನೀಡದೇ ಇರುವಂತಹದ್ದು, ಈ ಎಲ್ಲವೂ ಸಹ ಇದರಲ್ಲಿ ಅಡಗಿರುತ್ತದೆ. ಕೇವಲ ಅರ್ಜಿಯನ್ನು ನೀಡಿದ ತಕ್ಷಣ ಅದನ್ನು ನವೀಕರಣ ಮಾಡಿಕೊಡುವಂತಹದ್ದಲ್ಲ. ಈ ಎಲ್ಲಾ ಕ್ರಮಗಳು ಇದ್ದು, ಮಾನ್ಯ ಸದಸ್ಯರು ವಿಳಂಬವಾಗುತ್ತಿರುವುದಕ್ಕೆ ಬೇರೆ ಬೇರೆ ಕಾರಣಗಳೇನಾದರೂ ಇದ್ದರೆ ಅದಕ್ಕೆ ಸಲಹೆಗಳನ್ನು ಕೊಡಬಹುದು. ಈಗ ಶಿಕ್ಷಣ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ನಾವು ಕೆಲವು ದಟ್ಟವಾದಂತಹ ನಿಯಮಾವಳಿಗಳನ್ನು ರೂಪಿಸಿಕೊಂಡಿರುವುದರಿಂದ ಇನ್ನು ಮುಂದೆ ಈ ರೀತಿಯ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಪ್ಪುಗಳು ಆಗದೇ ಇರುವಂತಹ ರೀತಿಯಲ್ಲಿ ಅಥವಾ ವಿಳಂಬವಾಗದೇ ಇರುವಂತಹ ರೀತಿಯಲ್ಲಿ ಆನ್‌ಲೈನ್ ಮುಖಾಂತರವೇ ನವೀಕರಣವನ್ನು ಮಾಡಿಕೊಡುವುದಕ್ಕೆ ಮುಂದಾಗಿದ್ದೇವೆ.

**ಶ್ರೀ ಎಸ್.ವ್ಹಿ.ಸಂಕನೂರ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ನನ್ನ ಪ್ರಶ್ನೆ ಇರುವುದು ಇಷ್ಟೇ. ಈಗ 383 ಕಾಲೇಜುಗಳಿಗೆ recognition renewal ಅನ್ನು ಸ್ಥಗಿತಗೊಳಿಸಿದ್ದಾರೆ. ಆ ಕಾಲೇಜುಗಳಲ್ಲಿ ಕಲಿತಿರುವಂತಹ ವಿದ್ಯಾರ್ಥಿಗಳ ಪರಿಸ್ಥಿತಿ ಏನಾಗಬೇಕು? ಕಾಲೇಜುಗಳಿಗೆ recognition ಇಲ್ಲ. 5 ವರ್ಷಗಳ ನಂತರ ಮಾನ್ಯ ಸಚಿವರು ಇವತ್ತಿನ ದಿವಸ ಉತ್ತರವನ್ನು ಕೊಡುತ್ತಿದ್ದಾರೆ. ಮಾನ್ಯ ಸಚಿವರಿಗೆ ನೇರವಾಗಿ ಒಂದು ಪ್ರಶ್ನೆಯನ್ನು ಕೇಳುತ್ತೇನೆ. 383 ಕಾಲೇಜುಗಳಿಗೆ ಅರ್ಜಿಯನ್ನು ಸಲ್ಲಿಸಿದ ಕೂಡಲೇ recognition renewal ಮಾಡುವುದಿಲ್ಲ, Infrastructure ಇಲ್ಲ, ಇದನ್ನೆಲ್ಲಾ fulfil ಮಾಡಿ ಎಂದು ಮಾನ್ಯ ಸಚಿವರು ಹೇಳಬಹುದಾಗಿತ್ತಲ್ಲವೇ?

**ಸಭಾಪತಿಯವರು**:- ಮಾನ್ಯ ಸದಸ್ಯರ ಪ್ರಶ್ನೆ ಬಹಳ ಗಂಭೀರವಾಗಿದೆ. ಮಾನ್ಯ ಸಚಿವರಿಗೆ ಅದರ ಬಗ್ಗೆ ವಿವರಣೆಯನ್ನು ಕೊಡಬೇಡಿ. ಈಗಾಗಲೇ 383 ಕಾಲೇಜುಗಳಲ್ಲಿ ಓದುತ್ತಿರುವಂತಹ ವಿದ್ಯಾರ್ಥಿಗಳ ಗೋಳು ಮತ್ತು ಸಮಸ್ಯೆಯ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು.

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಯಾವುದೇ ವಿದ್ಯಾರ್ಥಿ ಯಾವುದೇ ಶಾಲೆಗೆ ಅಥವಾ ಕಾಲೇಜಿಗೆ ಸೇರಿರಲಿ, ಅವರ ಭವಿಷ್ಯವನ್ನು ರೂಪಿಸಿಕೊಡುವುದಕ್ಕೆ ಸರ್ಕಾರವು ಮುಂದಾಗುತ್ತದೆ. ಇಂತಹ ಕಾಲೇಜುಗಳಲ್ಲಿ ಸಂಯೋಜನೆ ಮತ್ತು ನವೀಕರಣ ಆಗಿಲ್ಲವೋ ಅಥವಾ ಆ ಕಾಲೇಜುಗಳಲ್ಲಿರುವಂತಹ ಮೂಲಭೂತ ಸೌಕರ್ಯಗಳಾಗಿರಬಹುದು. ವ್ಯಾಜ್ಯಗಳಿರಬಹುದು. ಆ ವಿದ್ಯಾರ್ಥಿಗಳಿಗೆ ನ್ಯಾಯವನ್ನು ಒದಗಿಸಲು ರಾಜ್ಯ ಸರ್ಕಾರವು ಮುಂದಾಗುತ್ತದೆ.

**ಶ್ರೀ ಎಸ್.ವ್ಹಿ.ಸಂಕನೂರ**:- ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು**:- ಮಾನ್ಯ ಸಚಿವರು ಮಾಡಿಕೊಡುತ್ತೇನೆ ಎಂದು ಹೇಳಿದರು.

**ಶ್ರೀ ಎಸ್.ವ್ಹಿ.ಸಂಕನೂರ**:- ಮಾನ್ಯ ಸಭಾಪತಿಯವರೇ, 1983 ರ ಕಾಯ್ದೆಯ ಪ್ರಕಾರ ಪದವಿ ಪೂರ್ವ ಕಾಲೇಜುಗಳನ್ನು ಎ, ಬಿ, ಸಿ ವರ್ಗೀಕರಣ ಮಾಡುವಂತಹ ಪದ್ಧತಿ ಕಾಯ್ದೆಯಲ್ಲಿ ಇದೆ. ಈ ಪದ್ಧತಿಯನ್ನು ಜಾರಿಗೆ ತಂದಿದ್ದಾರೋ, ಇಲ್ಲವೋ ಎಂಬುದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಹೇಳಬೇಕು.

**ಸಭಾಪತಿಯವರು**:- ವಿದ್ಯಾರ್ಥಿಗಳನ್ನು ಬಿಟ್ಟು, ಎ, ಬಿ, ಸಿ ವರ್ಗೀಕರಣ ಮಾಡಿದ್ದೀರೋ ಇಲ್ಲವೋ ಎಂಬುದು ಮಾನ್ಯ ಸದಸ್ಯರ ಮತ್ತೊಂದು ಪ್ರಶ್ನೆಯಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ಎ, ಬಿ, ಸಿ ವರ್ಗೀಕರಣ ಮಾಡಬೇಕೆಂದು ಕಾನೂನಿನಲ್ಲಿ ಮತ್ತು ನಿಯಮಾವಳಿಗಳಲ್ಲಿ ಇದೆ. ಈ ಹಿಂದೆ ಇದರ ಪಾಲನೆಯು ಸರಿಯಾದ ರೀತಿಯಲ್ಲಿ ಆಗುತ್ತಿರಲಿಲ್ಲ. ಈಗ ಅದನ್ನು ಮಾಡುತ್ತಿದ್ದೇವೆ.

**ಶ್ರೀ ಎಸ್.ವ್ಹಿ.ಸಂಕನೂರ**:- ಮಾನ್ಯ ಸಭಾಪತಿಯವರೇ, 12 ವರ್ಷಗಳಾಯಿತು.

**ಸಭಾಪತಿಯವರು**:- ಈಗ ಅದನ್ನು ಪ್ರಾರಂಭ ಮಾಡಿದ್ದಾರೆ, better late than never.

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ವ್ಹಿ.ಸಂಕನೂರರವರೇ, ತಾವು ಸರ್ಕಾರವನ್ನು ನಡೆಸಿದಂತಹ ಸಂದರ್ಭದಲ್ಲಿ ಏನು ಮಾಡಿದ್ದೀರಿ ಎಂಬುದನ್ನು ನೋಡಿಕೊಳ್ಳಬೇಕು? ನಿಯಮಾವಳಿಗಳು ಇದ್ದರೂ ಕೂಡ ಗಾಳಿಗೆ ತೂರಿ ನಡೆಸುತ್ತಿದ್ದಂಥದ್ದು, ಈಗ ಎಲ್ಲವೂ ಕೂಡ I have put in place. ಈಗ ಸರಿಯಾಗಿ ನಡೆಯುತ್ತಿದೆ.

**ಶ್ರೀ ಎಸ್.ವ್ಹಿ.ಸಂಕನೂರ**:- ಮಾನ್ಯ ಸಭಾಪತಿಯವರೇ, ಇದನ್ನು ಪ್ರತಿ ವರ್ಷ ನವೀಕರಣ ಮಾಡುವಂತಹ ಪದ್ಧತಿ ಇತ್ತು. ಹೊಸ ಕಾಯ್ದೆಯ ಪ್ರಕಾರ permanent affiliation ಕೊಡುವ ಪದ್ಧತಿ ಇದೆ. 3 ವರ್ಷಕ್ಕೊಮ್ಮೆ ನವೀಕರಣ ಮಾಡುವ ಪದ್ಧತಿ ಇದೆ. ಯಾವ ಪದ್ಧತಿಯನ್ನು ಮಾನ್ಯ ಸಚಿವರು ಅನುಸರಿಸುತ್ತಾರೆಂಬುದನ್ನು ಹೇಳಬೇಕು. ನವೀಕರಣವನ್ನು ಖಾಯಂಯಾಗಿ ಮಾಡುತ್ತಾರೆಯೇ ಅಥವಾ 3 ವರ್ಷಗಳಿಗೊಮ್ಮೆ ಮಾಡುತ್ತಾರೆಯೇ, ಇವತ್ತಿನ ದಿವಸ ಯಾವ ಪದ್ಧತಿ ಇದೆ ಎಂಬುದನ್ನು ತಿಳಿಸಬೇಕು.

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವನ್ನು ಕೊಡುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ**:- ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು**:- ಮಾನ್ಯ ಸದಸ್ಯರೇ, ತಾವು ಪ್ರಶ್ನೆಗೆ ಮಾನ್ಯ ಸಚಿವರಿಂದ ಉತ್ತರವನ್ನು ಕೇಳುವುದೇ ಇಲ್ಲ. ನಿಮ್ಮದ್ದನ್ನೇ ಹೇಳುತ್ತೀರಿ.

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ಶಾಲೆಗಳ ಅನುಮತಿ ಅಥವಾ ಸಂಯೋಜನೆಯನ್ನು ನವೀಕರಣ ಮಾಡುವಂತಹ ಪದ್ಧತಿ ಕಾನೂನಿನಲ್ಲಿ ಏನಿತ್ತೋ, ಅದಕ್ಕೆ ಮತ್ತಷ್ಟು ಬದಲಾವಣೆಯನ್ನು ತಂದು permanent recognition and permanent affiliation ಪದ್ಧತಿಗೆ ನಾವು ಮುಂದಾಗುತ್ತೇವೆ ಎನ್ನುವ ಬಗ್ಗೆ ಪ್ರಕಟ ಮಾಡಿದ್ದೇನೆ. ಇದರ ಜೊತೆಗೆ ಒಂದು ಶಾಲೆಯು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರಾರಂಭವಾದಂತಹ ಸಂದರ್ಭದಲ್ಲಿ ಕನಿಷ್ಟ 15 ವರ್ಷ ಪೂರೈಸಿರುವಂತಹ ಸಂಸ್ಥೆಗೆ permanent affiliation ಕೊಡುವಂತಹದ್ದಕ್ಕೆ ಪದ್ಧತಿಯನ್ನು ತರುತ್ತಿದ್ದೇವೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಕಾಯ್ದೆ ಇರುವುದು 10 ವರ್ಷವಲ್ಲ.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೇ ಒಂದು ನಿಮಿಷ. 15 ವರ್ಷ ನಿರಂತರವಾಗಿ ನಡೆಯುವಂತಹ ಶಾಲೆ ಅಥವಾ ಕಾಲೇಜುಗಳಿಗೆ permanent affiliation ಕೊಡುವಂತಹ ಪದ್ಧತಿಗೆ ಈಗ ಚಾಲನೆಯನ್ನು ಕೊಟ್ಟಿದ್ದೇವೆ. ಇದನ್ನು subject to the inspection once in three years ಮಾಡಿಕೊಳ್ಳುವುದಕ್ಕೆ ಮಾಡಿದ್ದೇವೆ. ಇದರಿಂದ ಅಧಿಕಾರಿಗಳು ಪದೇ ಪದೇ ಕಾಲೇಜುಗಳಿಗೆ ಹೋಗುವಂತಹದ್ದಲ್ಲ ಅಥವಾ records recall ಮಾಡುವಂತಹದ್ದಲ್ಲ. ಎಲ್ಲವೂ ಸಹ ವೆಬ್‌ಸೈಟ್‌ನಲ್ಲಿ ಸಿಗುವ ಹಾಗೆ ಮಾಡಿದ್ದೇವೆ. ದಾಖಲಾತಿಗಳು ಏನೇನು ಬೇಕೋ ಅದನ್ನೆಲ್ಲಾ ತೆಗೆದುಕೊಂಡಿದ್ದೇವೆ. ಆ ಕಾರಣದಿಂದ ಪೂರ್ಣ ಮಾಹಿತಿ ನಮ್ಮ ಹತ್ತಿರ ಇದೆ. ಆ ಶಾಲಾ, ಕಾಲೇಜುಗಳಲ್ಲಿ ವ್ಯಾಜ್ಯಗಳು ಉಂಟಾದ ಸಂದರ್ಭದಲ್ಲಿ ಮಾತ್ರ ಅವುಗಳನ್ನು ಪರಿಗಣನೆಗೆ ತೆಗೆದುಕೊಳ್ಳುವಂತಹದ್ದು. ಕೆಲವೊಮ್ಮೆ ಆಡಳಿತ ಮಂಡಳಿಯಲ್ಲಿ ಮತ್ತು ಉಪನ್ಯಾಸಕರಲ್ಲಿ ಉಂಟಾಗುವಂತಹ ವ್ಯಾಜ್ಯಗಳು, ಈ ಎಲ್ಲವನ್ನು ನಾವು ಪರಿಗಣನೆಗೆ ತೆಗೆದುಕೊಳ್ಳುತ್ತೇವೆ. Grant-in-Aid policyಯಲ್ಲಿ ಸಾಕಷ್ಟು ಸ್ಪಷ್ಟವಾಗಿ ಮಾರ್ಗಸೂಚಿಗಳನ್ನು ಕೊಟ್ಟಿದ್ದೇವೆ. ಈ ಎಲ್ಲಾ ಅಂಶಗಳು ಒಂದಕ್ಕೊಂದು ಕಾಕತಾಳೀಯವಾಗುವಂತಹ ಪರಿಸ್ಥಿತಿಗಳು ಇರುತ್ತದೆ. ಆ ರೀತಿ ಇದ್ದರೂ ಕೂಡ permanent affiliation ಅನ್ನು ಕೊಡುವುದಕ್ಕೆ ನಾವು ಮುಂದಾಗಿದ್ದೇವೆ.

**ಸಭಾಪತಿಯವರು:-** ಧನ್ಯವಾದಗಳು.

**(247)23/02/2018/ಎಸ್‌ಪಿಆರ್/ಜಿಆರ್/11:50**

3. **ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು**

**ಅ)ವಿಷಯ:-** ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ
ಸ್ಪೆಷಲ್ ಇನ್ಸೆಂಟೀವ್ ಯೋಜನೆ ಅಡಿಯಲ್ಲಿ ಷರತ್ತು ಸಡಿಲಿಸಿ
400 ಅರ್ಜಿದಾರರಿಗೆ ಯಾವುದೇ ಕ್ರಮ ಕೈಗೊಳ್ಳದಿರುವ ಬಗ್ಗೆ

* * *

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ (KSSIDC)ದಲ್ಲಿ ನಿವೇಶನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಂಚಿಕೆದಾರರಿಗೆ ರಾಜ್ಯ ಸರ್ಕಾರವು ಅಂದಿನ ಆರ್ಥಿಕ ಮುಗ್ಗಟ್ಟು ಹಾಗೂ ಮಾರುಕಟ್ಟೆ ಕುಸಿತ ಹಿನ್ನೆಲೆಯಲ್ಲಿ ದಿನಾಂಕ 12/04/2010 ರಿಂದ ದಿನಾಂಕ 31/12/2010 ರವರೆವಿಗೂ Special Incentive Scheme ಅಡಿಯಲ್ಲಿ ಹಂಚಿಕೆದಾರರಿಗೆ ನೀಡಿದ ಮೂಲ ಷರತ್ತುಗಳನ್ನು ಸಡಿಲಿಸಿ, ಕಟ್ಟಡ ಕಟ್ಟದೇ ನೋಂದಾಯಿತ ಕ್ರಯ ಪತ್ರ ಪಡೆಯಲು ವಿಶೇಷ ಅವಕಾಶ ಕಲ್ಪಿಸಿಕೊಡಲಾಗಿತ್ತು.

ಇದರನ್ವಯ 700 ಹಂಚಿಕೆದಾರರು ಕ್ರಮಬದ್ಧವಾಗಿ ಅವಶ್ಯ ದಾಖಲೆಗಳೊಂದಿಗೆ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಇದರ ಪೈಕಿ ಕೇವಲ 300 (pick and choose) ಹಂಚಿಕೆದಾರರ ಅರ್ಜಿಗಳನ್ನು ಮಾತ್ರ ಪರಿಗಣಿಸಿ, KSSIDC ಕ್ರಯ ಪತ್ರ ನೋಂದಾವಣೆಗೆ ಅನುಮತಿ ನೀಡಿರುವುದು ತಾರತಮ್ಯಕ್ಕೆ ಒಳಪಟ್ಟಿದೆ.

ಆದರೆ, ಉಳಿದ 400 ಅರ್ಜಿದಾರರಿಗೆ ಇಲ್ಲಿಯವರೆವಿಗೂ ಯಾವುದೇ ರೀತಿಯ ಕ್ರಮ ಜರುಗಿಸದೇ ರಾಜ್ಯ ಸರ್ಕಾರದ ಆದೇಶಗಳನ್ನು ಮನ್ನಣೆಗೆ ತೆಗೆದುಕೊಳ್ಳದೇ ಈ ಎಲ್ಲಾ 400 ನಿರುದ್ಯೋಗಿಗಳಿಗೆ ಅನ್ಯಾಯವಾಗಿರುವ ಬಗ್ಗೆ ಈ ಸದನದಲ್ಲಿ ಚರ್ಚೆಗೆ ತೆಗೆದುಕೊಳ್ಳುತ್ತಾ, KSSIDC ಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಅಧಿಕಾರ ದುರುಪಯೋಗದ ಬಗ್ಗೆ ರಾಜ್ಯ ಸರ್ಕಾರದ ಗಮನ ಸೆಳೆಯಲು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

KSSIDC ಯಲ್ಲಿ ಸರ್ಕಾರದಿಂದ ಎಷ್ಟೇ ಕ್ರಮಗಳನ್ನು ತೆಗೆದುಕೊಂಡರೂ ಸಹ, ಅಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕೆಲವು ಅಧಿಕಾರಿಗಳು ಅವುಗಳನ್ನು ಶಮನ ಮಾಡುವಂತಹ ರೀತಿಯಲ್ಲಿ ಒಂದು ವ್ಯವಸ್ಥಿತ ರೀತಿಯಲ್ಲಿ ಕೆಲಸಗಳನ್ನು ಮಾಡುತ್ತಾ ಹೋಗುತ್ತಿದ್ದಾರೆ. ಈ ರೀತಿಯಾಗಿ ಕಳೆದ ಏಳೆಂಟು ವರ್ಷಗಳಿಂದ ನಡೆಯುತ್ತಾ ಬಂದಿದೆ. ಸರ್ಕಾರದಿಂದ ಎಷ್ಟೇ ಕ್ರಮಗಳನ್ನು ತೆಗೆದುಕೊಂಡರೂ, ತಪ್ಪಿತಸ್ಥರನ್ನು ಸೇವೆಯಿಂದ ಅಮಾನತ್ತುಗೊಳಿಸಿದರೂ, ಸರ್ಕಾರವನ್ನೇ ಗೋಜಿಗೆ ಇಡುವಂತಹ ರೀತಿಯಲ್ಲಿ ಕೆಲವು ಕುಖ್ಯಾತ ಅಧಿಕಾರಿಗಳು ಅಲ್ಲಿದ್ದಾರೆ. ಅಂತಹವರ ವಿರುದ್ಧ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಕೋರಿ ಸಂಬಂಧಪಟ್ಟ ಇಲಾಖೆಯ ಮಂತ್ರಿಗಳಿಗೆ ನಾನು ಈಗಾಗಲೇ ಪತ್ರವನ್ನು ಬರೆದಿದ್ದೇನೆ. ಹೀಗಾಗಿ ದಯವಿಟ್ಟು ಸದರಿ ಪತ್ರವನ್ನು ಬಹಳ ಗಂಭೀರವಾಗಿ ತೆಗೆದುಕೊಂಡು, ಬಹಳ ಗಂಭೀರವಾಗಿ ವಿಷಯವನ್ನಾಗಿ ಪರಿಗಣಿಸಬೇಕೆಂದು ತಮ್ಮ ಮುಖಾಂತರ ನಾನು ಸಂಬಂಧಪಟ್ಟ ಸಚಿವರಿಗೆ ವಿನಂತಿ ಮಾಡುತ್ತೇನೆ.

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ಬಹಳ ಆತಂಕಕಾರಿ ಬೆಳವಣಿಗೆಯ ವಿಷಯವನ್ನು ಹಾಗೂ ಕಳೆದ ಆರೇಳು ವರ್ಷಗಳಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೆಲಸಗಳಾಗಿಲ್ಲ ಇಂತಹ ವಿಚಾರಗಳನ್ನು ಮಾನ್ಯ ಸಕ್ಕರೆ ಮತ್ತು ಸಣ್ಣ ಕೈಗಾರಿಕೆ ಸಚಿವರ ಗಮನಕ್ಕೆ ತಂದು, ಶೀಘ್ರವಾಗಿ ಈ ವಿಚಾರದಲ್ಲಿ ಪರಿಹಾರವನ್ನು ಹುಡುಕಿಸಿಕೊಡುತ್ತೇನೆ.

**ಆ)ವಿಷಯ:-** ದಿನಾಂಕ 08/02/2018 ರಂದು ಮಂಡ್ಯ ಜಿಲ್ಲೆಯ ಅಂಗನವಾಡಿ ಕೇಂದ್ರದಲ್ಲಿ ಫೆಂಟಾ ಚುಚ್ಚುಮದ್ದು ಹಾಕಿಸಿದ್ದ ಎರಡು ಮಕ್ಕಳು ಮೃತರಾಗಿರುವ ಬಗ್ಗೆ

* * *

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ದಿನಂಕ 08/02/2018 ರಂದು ಮಂಡ್ಯ ಜಿಲ್ಲೆಯ ಅಂಗನವಾಡಿ ಕೇಂದ್ರದಲ್ಲಿ ಫೆಂಟಾ ಚುಚ್ಚುಮದ್ದು ಹಾಕಿಸಿದ್ದ, ಎರಡು ಹಸುಗೂಸುಗಳು ಸಾವನ್ನಪ್ಪಿವೆ. ಮಂಡ್ಯ ಸಮೀಪದ ಚಿಂದಗಿರಿದೊಡ್ಡಿಯ ಶ್ರೀಮತಿ ಯಶೋಧ ಮತ್ತು ತಂಗರಾಜು ದಂಪತಿಯ ಪುತ್ರ ಪ್ರೀತಮ್ ಹಾಗೂ ಶ್ರೀಮತಿ ಹೇಮಾವತಿ ಮತ್ತು ರವಿ ಎಂಬುವವರ ಪುತ್ರ ಭುವನ್, ಮೃತಪಟ್ಟ ಕಂದಮ್ಮಗಳಾಗಿವೆ. ಈ ಮಕ್ಕಳ ಸಾವಿಗೆ ಅಂಗನವಾಡಿಯಲ್ಲಿ ನೀಡಿದ ಚುಚ್ಚುಮದ್ದೆ ಕಾರಣವಾಗಿದೆ. ಕಳೆದ ಗುರುವಾರ ಈ ಮಕ್ಕಳು ಸೇರಿದಂತೆ 9 ಮಕ್ಕಳಿಗೆ ಚುಚ್ಚುಮದ್ದು ನೀಡಲಾಗಿತ್ತು. ಸಂಜೆ ಪ್ರೀತಮ್‌ಗೆ ಜ್ವರ ಕಾಣಿಸಿಕೊಂಡಿದ್ದು, ವಿಮ್ಸ್‌ಗೆ ಕರೆತಂದಿದ್ದಾರೆ. ಆದರೆ ಚಿಕಿತ್ಸೆ ಫಲಿಸದೆ ರಾತ್ರಿ 12-30 ಗಂಟೆಗೆ ಮಗು ಮೃತಪಟ್ಟಿದೆ. ನಂತರ ಶುಕ್ರವಾರ ಬೆಳಗ್ಗೆ ಭುವನ್‌ಗೂ ಜ್ವರ ಕಾಣಿಸಿಕೊಂಡು ಶನಿವಾರ ಮುಂಜಾನೆ 4-00 ಗಂಟೆಗೆ ಮಗು ಮೃತಪಟ್ಟಿದೆ. ಅಲ್ಲದೆ ಇನ್ನೂ ಐದು ಮಕ್ಕಳು ಅಸ್ವಸ್ಥಗೊಂಡು, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ.

ಈ ವಿಚಾರದಲ್ಲಿ ಮೊನ್ನೆಯ ದಿನ ಮಂಡ್ಯ ಜಿಲ್ಲೆಯಲ್ಲಿ ಬಹಳ ದೊಡ್ಡ ಪ್ರತಿಭಟನೆ ನಡೆದಿದೆ. ಸಾಮಾನ್ಯ ಜನತೆ ತಪ್ಪು ಮಾಡಿದರೆ ಸರ್ಕಾರ ಶಿಕ್ಷೆ ಕೊಡುತ್ತದೆ. ಆದರೆ ಈಗ ಸರ್ಕಾರ ನೀಡಿರುವ ಚುಚ್ಚುಮದ್ದು ಮಕ್ಕಳ ಜೀವ ತೆಗೆದಿದೆ. ಇದಕ್ಕೆ ಅಧಿಕಾರಿ, ಸಿಬ್ಬಂದಿಗಳ ನಿರ್ಲಕ್ಷ್ಯವೇ ಕಾರಣವಾಗಿದೆ. ಹೀಗೆ ಆರೋಗ್ಯ ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯದಿಂದ ಮೃತಪಟ್ಟ ಮಕ್ಕಳಿಗೆ ಮುಷ್ಕರ ನಿರತರು ತಲಾ ಹತ್ತು ಲಕ್ಷ ರೂಪಾಯಿಗಳ ಪರಿಹಾರವನ್ನು ಕೋರುತ್ತಿದ್ದಾರೆ. ಕಾರಣರಾದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕು, ಮುಂದೆ ಈ ರೀತಿಯ ಪ್ರಕರಣಗಳು ಮರುಕಳಿಸದಂತೆ ಎಚ್ಚರ ವಹಿಸಬೇಕೆಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರನ್ನು ಆಗ್ರಹಿಸುತ್ತೇನೆ.

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಬಹಳ ಗಂಭೀರವಾದ ಘಟನೆಯು ಜರುಗಿದೆ. ಇದನ್ನು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರ ಗಮನಕ್ಕೆ ತಂದು ಶೀಘ್ರದಲ್ಲಿ ಪರಿಹಾರವನ್ನು ದೊರಕಿಸಿ ಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಇ)** **ವಿಷಯ**:- ವಿಜಯಪುರ ನಗರ ವ್ಯಾಪ್ತಿಯಲ್ಲಿ ಬರುವ ನವರಸಪುರ ಬಡಾವಣೆ ಪ್ರದೇಶಗಳನ್ನು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರ್ಪಡೆಗೊಳಸುವ ಬಗ್ಗೆ

* * *

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ವಿಜಯಪುರ ನಗರ ವ್ಯಾಪ್ತಿಯಲ್ಲಿ ಬರುವ ನವರಸಪುರ ಗ್ರಾಮದಲ್ಲಿ ಬರತಕ್ಕ ಬಡಾವಣೆಗಳಾದ ಸೇನಾ ನಗರ, ಕಬಾಡೆ ನಗರ, ಸಿದ್ದಾರ್ಥ ಕಾಲೋನಿ, ಎನ್.ಜಿ.ಓ.ಕಾಲೋನಿ, ಶಿಕ್ಷಕರ ಕಾಲೋನಿ, ಪೋಲೀಸ್ ಕಾಲೋನಿ, ಏಕತಾ ಕಾಲೋನಿ, ವಿಜಯ ಕಾಲೋನಿ, ಜಗತಾಪ್ ಕಾಲೋನಿ, ದೇಸಾಯಿ ಬಡಾವಣೆ, ಕಂದಾಯ ಇಲಾಖೆ ನೌಕರರ ಕಾಲೋನಿ, ಸದರಿ ಬಡಾವಣೆಗಳು ವಾರ್ಡ್ ನಂ.35 ರ ಬಡಾವಣೆಗಳ ಜೊತೆಗೆ ಹೊಂದಿಕೊಂಡಿರುತ್ತವೆ. ಕೇವಲ ಸರ್ವೆ ನಂಬರುಗಳು ಮಾತ್ರ ವ್ಯತ್ಯಾಸವಿದ್ದು, ಮಹಾನಗರ ಪಾಲಿಕೆಯಲ್ಲಿ ವಿಲೀನಗೊಳಸಬೇಕೆಂದು ಕಳೆದ ಐದು ವರ್ಷಗಳಿಂದ ಮನವಿ ಮಾಡಿಕೊಳ್ಳುತ್ತಾ ಬಂದಿರುತ್ತಾರೆ. ಸದರಿ ಬಡಾವಣೆಯಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿದ್ದು ಹಾಗೂ ತೊರವಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವುದರಿಂದ ಪಂಚಾಯತಿಯಲ್ಲಿ ಹಣಕಾಸಿನ ಕೊರತೆ ಇರುವುದರಿಂದ ಯಾವುದೇ ಮೂಲಭೂತ ಸೌಲಭ್ಯಗಳನ್ನು ಕೈಗೊಳ್ಳಲಾಗಿರುವುದಿಲ್ಲವೆಂದು ತಿಳದು ಬಂದಿರುತ್ತದೆ.

ಸದರಿ ಬಡಾವಣೆಗಳು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬಂದರೂ ಸಹ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬಂದಿರುವುದಿಲ್ಲ. ಸದರಿ ಬಡಾವಣೆಗಳಿಗೆ ಮಹಾನಗರ ಪಾಲಿಕೆಯ ಸಾಮಾನ್ಯ ಸಭೆಯಲ್ಲಿ ವಿಲೀನಗೊಳಸುವ ಬಗ್ಗೆ ಠರಾವಿಗೆ ಅನುಮೋದನೆ ಮಾಡಲಾಗಿದೆ.

ವಿಜಯಪುರ ಜಿಲ್ಲೆಯ ಜಿಲ್ಲಾಧಿಕಾರಿಗಳೂ ಸಹ ಈ ಬಡಾವಣೆಗಳನ್ನು ವಿಜಯಪುರ ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಸೇರಿಸಲು ಸರ್ಕಾರಕ್ಕೆ ಸೂಚನೆಯನ್ನು ನೀಡಿರುವಂತಹ ಸಂದರ್ಭದಲ್ಲಿ, ವಿಜಯಪುರ ನಗರ ವ್ಯಾಪ್ತಿಯಲ್ಲಿ ಬರುವ ನವರಸಪುರ ಗ್ರಾಮದಲ್ಲಿ ಬರತಕ್ಕ ಬಡಾವಣೆಗಳನ್ನು ಮಹಾನಗರ ಪಾಲಿಕೆಯಲ್ಲಿ ವಿಲೀನಗೊಳಸಿ, ಸೇರ್ಪಡೆಗೊಳಸಬೇಕೆಂದು ನಾನು ಈ ಕುರಿತು ಶೂನ್ಯ ವೇಳೆಯಲ್ಲಿ ಸರ್ಕಾರದ ಗಮನವನ್ನು ಸೆಳೆಯಲು ಬಯಸುತ್ತೇನೆ.

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು)**:-ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನಕ್ಕೆ ತಂದು ಉತ್ತರವನ್ನು ಕೊಡಿಸುತ್ತೇನೆ. ಮಂತ್ರಿಗಳು ಸದನಕ್ಕೆ ಬರುವುದಾಗಿ ಹೇಳದ್ದರು. ಆದರೆ ಬರುವುದಕ್ಕಾಗಲಿಲ್ಲ. ಆದರೂ ಸಹ ಈ ವಿಷಯದಲ್ಲಿ ನಾನು ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ. ಸಾಕಷ್ಟು ವಿಷಯಗಳಲ್ಲಿ ಉತ್ತರವನ್ನು ಕೊಟ್ಟಿದ್ದೇವೆ ಹಾಗೂ ಕೊಡಿಸುತ್ತಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಈ)ವಿಷಯ:-** ಸರ್ಕಾರಿ ಹುದ್ದೆಗಳಿಗೆ ಗರಿಷ್ಠ ವಯೋಮಿತಿ ಹೆಚ್ಚಳ ಮಾಡುವ ಕುರಿತು

* * *

**ಶ್ರೀ ಕೆ.ಬಿ.ಶಾಣಪ್ಪ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ದಿನಾಂಕ 16/11/2017 ರಂದು ಬೆಳಗಾವಿ ಅಧಿವೇಶನದಲ್ಲಿ ಸರ್ಕಾರಿ ಹುದ್ದೆಗಳಿಗೆ ಗರಿಷ್ಠ ವಯೋಮಿತಿ ಹೆಚ್ಚಿಸಲು ನನ್ನ ಪ್ರಶ್ನೆಗೆ ಸರ್ಕಾರವು ಸಕಾರಾತ್ಮಕವಾಗಿ ಸ್ಪಂದಿಸಿತ್ತು.

371(ಜೆ) ಹೈದ್ರಾಬಾದ್-ಕರ್ನಾಟಕ ಭಾಗಕ್ಕೆ ನೇಮಕಾತಿಯಲ್ಲಿ ಹಾಗೂ ವಿದ್ಯಾಭ್ಯಾಸದಲ್ಲಿ ಮೀಸಲಾತಿಯನ್ನು ಜಾರಿಗೆ ತರಲು 2012 ರಿಂದ 2015 ಏಪ್ರಿಲ್‌ವರೆಗೆ ರಾಜ್ಯದಲ್ಲಿ ಎಲ್ಲಾ ನೇಮಕಾತಿಗಳನ್ನು ನಿಷೇಧಿಸಲಾಗಿತ್ತು. ಅದೇ ರೀತಿ, ಆಂಧ್ರಪ್ರದೇಶವನ್ನು ಎರಡು ಭಾಗವಾಗಿ ವಿಂಗಡಿಸುವಾಗ ನಾಲ್ಕು ವರ್ಷ ಅಲ್ಲಿಯೂ ನೇಮಕಾತಿ ನಿಷೇಧಿಸಲಾಗಿತ್ತು. ಹೊಸ ರಾಜ್ಯಗಳು ರಚನೆಯಾದ ಕೂಡಲೇ ಆಂಧ್ರಪ್ರದೇಶ ಮತ್ತು ತೆಲಂಗಾಣ ಸರ್ಕಾರಗಳು ಗರಿಷ್ಠ ವಯೋಮಿತಿಯನ್ನು 34 ರಿಂದ 43 ಹಾಗೂ 44 ವರ್ಷಗಳಿಗೆ ಹೆಚ್ಚಿಸಿದೆ. ಅದೇ ಮಾದರಿಯನ್ನು ರಾಜ್ಯದಲ್ಲಿಯೂ ಜಾರಿಗೆ ತರಬೇಕೆಂದು ಪ್ರಶ್ನಿಸಿದಾಗ ರಾಜ್ಯ ಸರ್ಕಾರವು ಸಕಾರಾತ್ಮಕವಾಗಿ ಉತ್ತರಿಸಿತ್ತು. ಆದರೆ ರಾಜ್ಯ ವ್ಯಾಪ್ತಿ ಸರ್ಕಾರಿ ಉದ್ಯೋಗ ಆಕಾಂಕ್ಷಿಗಳಿಗೆ ವಯೋಮಿತಿಯನ್ನು ಹೆಚ್ಚಿಸುವುದರ ಕುರಿತು ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ಸರ್ಕಾರವೇ ಬೆಳಗಾವಿ ಅಧಿವೇಶನದಲ್ಲಿ ಸನ್ಮಾನ್ಯ ಶಾಸಕರ ಪ್ರಶ್ನೆಗಳಿಗೆ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಎಲ್ಲಾ ಶ್ರೇಣಿಯ (ಎ, ಬಿ, ಸಿ, ಡಿ) 2,52,000 ಹುದ್ದೆಗಳು ಭರ್ತಿಯಾಗದೆ ಉಳಿದಿವೆ ಎಂದು ಉತ್ತರಿಸಿದೆ. ಮುರೂವರೆ ವರ್ಷಗಳ ಕಾಲ ರಾಜ್ಯದಲ್ಲಿ ನೇಮಕಾತಿ ನಡೆಯದೇ ಇರುವುದರಿಂದ ನಿರುದ್ಯೋಗಿಗಳಿಗೆ ನ್ಯಾಯ ಒದಗಿಸಲು ಎಲ್ಲಾ ಶ್ರೇಣಿಯ ಉದ್ಯೋಗದಲ್ಲಿ ವಯೋಮಿತಿಯನ್ನು ಹೆಚ್ಚಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಸಚಿವರಿಂದ ಸದನದಲ್ಲಿ ಕೇಳಬಯಸುತ್ತೇನೆ. ಮಾನ್ಯ ಸಭಾನಾಯಕರು ಮಂತ್ರಿಗಳಾಗಿದ್ದಾಗ ಬಹಳ ಸಕಾರಾತ್ಮಕವಾಗಿ ಉತ್ತರವನ್ನು ನೀಡಿದ್ದರು. ಆದರೆ ಈ ವಿಚಾರದಲ್ಲಿ ಇದುವರೆವಿಗೂ ಸಹ ಸರ್ಕಾರವು ಯಾವುದೇ ರೀತಿಯಾದ ಆದೇಶಗಳನ್ನು ಹೊರಡಿಸಿರುವುದಿಲ್ಲ.

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಶೀಘ್ರದಲ್ಲಿ ವಯೋಮಿತಿಯನ್ನು ಹೆಚ್ಚಿಸುವುದಕ್ಕೆ ಪ್ರಯತ್ನಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಉ)ವಿಷಯ**:- ಪಂಚಾಯತ್ ರಾಜ್ ವ್ಯವಸ್ಥೆಯ ಸಬಲೀಕರಣಕ್ಕಾಗಿ ಮೂರು ಎಫ್‌ಗಳನ್ನು ವರ್ಗಾಯಿಸುವ ಬಗ್ಗೆ

* * *

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಕಳೆದ ಜನವರಿ 23 ರಂದು ಮಂಗಳವಾರ, ವಿಧಾನಸೌಧ ಮತ್ತು ವಿಕಾಸಸೌಧ ನಡುವಿನ ಗ್ರಾಮ ಸ್ವರಾಜ್ಯದ ಕನಸು ಕಂಡ ಪೂಜ್ಯ ಮಹಾತ್ಮ ಗಾಂಧಿಯವರ ಪ್ರತಿಮೆ ಎದುರು ಮೇಲ್ಮನೆಯ 17 ಕ್ಕೂ ಮಿಕ್ಕಿ ಶಾಸಕರು ಸಾಂಕೇತಿಕ ಧರಣಿ ನಡೆಸಿ, ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯನ್ನು ಗಟ್ಟಿಗೊಳಸಲು ಪಂಚಾಯತ್ ರಾಜ್‌ನ ಮೂಲ ಮಂತ್ರವಾದ '3-ಎಫ್' ಗಳನ್ನು ಅಂದರೆ ಕಾರ್ಯಕ್ರಮ, ಆಡಳಿತ ಯಂತ್ರ, ಹಣಕಾಸುಗಳನ್ನು ಸ್ಥಳೀಯಾಡಳಿತ ಸಂಸ್ಥೆಗೆ ವರ್ಗಾಯಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದ್ದೇವು.

ನಮ್ಮ ಈ ಧ್ವನಿಯ ಹಿಂದೆ, ರಾಜ್ಯದ ನಾಲ್ಕೂವರೆ ಕೋಟಿ ಜನಸಂಖ್ಯೆ ಹೊಂದಿರುವ ಗ್ರಾಮೀಣ ಭಾಗದ ಜನರ ದುಗುಡ ಮತ್ತು ಸಮಸ್ಯೆಗಳ ನಡುವೆ ನಿತ್ಯ ಬದುಕಿನಲ್ಲಿ ಬಡಿದಾಡುತ್ತಿದ್ದ ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ನ ಒಂದು ಲಕ್ಷಕ್ಕೂ ಮೀರಿದ ಜನ ಪ್ರತಿನಿಧಿಗಳ ಒತ್ತಾಯವಿದೆ. ಅಂದು ನಾವು ಶಾಸಕರು ಸರ್ಕಾರಕ್ಕೆ ನೀಡಿದ ಮನವಿಯಲ್ಲಿ 30ಕ್ಕೂ ಹೆಚ್ಚು ಬೇಡಿಕೆ ಪಟ್ಟಿಗಳನ್ನು ನೀಡಿದ್ದೇವೆ.

ಗ್ರಾಮ ಪಂಚಾಯತ್‌ಗಳು ಸ್ವಂತ ಸ್ಥಳೀಯ ಸರ್ಕಾರದಂತೆ ಕೆಲಸ ಮಾಡಲು, ಸ್ಥಳೀಯ ಅಂಗನವಾಡಿ, ಕೃಷಿ, ತೋಟಗಾರಿಕೆ, ಪ್ರಾಥಮಿಕ ಶಾಲೆಗಳು, ಗ್ರಂಥಾಲಯ, ಕಾರ್ಮಿಕ ಇಲಾಖೆಯ ಪೂರ್ಣ ಜವಾಬ್ದಾರಿ, ಸಹಕಾರಿ, ಆರೋಗ್ಯ ಮತ್ತು ನಾಗರೀಕ ಸರಬರಾಜು ಸೇರಿದಂತೆ 29 ವಿಷಯಗಳನ್ನು ಪಂಚಾಯತ್‌ಗಳಿಗೆ ವರ್ಗಾಯಿಸಬೇಕೆಂದು ಆಗ್ರಹಿಸಿಲಾಗಿತ್ತು.

ಪಂಚಾಯತ್‌ರಾಜ್ ಕಾಯ್ದೆಯಡಿ ಕೆಲಸ ಮಾಡುವ ರಾಜ್ಯ ಸರ್ಕಾರ, ಫಲಾನುಭವಿಗಳ ಆಯ್ಕೆಯನ್ನು ಸರ್ಕಾರಿ ಕಛೇರಿಯಲ್ಲಿ ಮಾಡದೇ, ಗ್ರಾಮ ಸಭೆಗಳಲ್ಲಿಯೇ ಅಂತಿಮ ಆಯ್ಕೆಯಾಗಬೇಕೆಂದು ಕೋರಿದ್ದೇವು.

ಅಭಿವೃದ್ಧಿ ಅನುಷ್ಠಾನ ವ್ಯವಸ್ಥೆ ವಿಧಾನಸೌಧದಲ್ಲಿ ಆಗದೇ, ಗ್ರಾಮಸೌಧದಲ್ಲಿ ಆಗಬೇಕೆಂದು ಕೋರಿಕೆ ಸಲ್ಲಿಸಿದ್ದೇವು. ಪಂಚಾಯತ್ ಸಭೆಗೆ ಅಧಿಕಾರಿಗಳ ಕಡ್ಡಾಯ ಹಾಜರಾತಿಯನ್ನು, ಕೇರಳ ಮಾದರಿಯಲ್ಲಿ ಪಂಚಾಯತ್ ಸದಸ್ಯರ ಗೌರವಧನ, ಎಸ್ಕ್ರೋ ಖಾತೆಯ ರದ್ದು, ವಿದ್ಯುತ್ ಬಿಲ್ಲಿನ ರಿಯಾಯಿತಿ ದರ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಹುದ್ದೆ ಬಿ ವರ್ಗಕ್ಕೆ ಉನ್ನತೀಕರಣ, ಆರ್.ಡಿ.ಓ. ಹುದ್ದೆ ಸೃಜನೆ ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೇಮಕಾತಿ, ಹೆಚ್ಚುವರಿ ತಾಲ್ಲೂಕು ಪಂಚಾಯತ್ ಸಹಾಯಕ ನಿರ್ದೇಶಕರ ಸೃಜನೆ, ಸರ್ಕಾರದಿಂದ ಸಿಬ್ಬಂದಿ ವೇತನ ಪಾವತಿಸುವುದು, ಇಂಜಿನಿಯರ್‌ಗಳ ನೇಮಕ, ಬಾಕಿ ಉಳಿಸಿಕೊಂಡಿರುವ 6,000 ಕೋಟಿಗೂ ಮಿಕ್ಕಿರುವ ತೆರಿಗೆ ಸಂಗ್ರಹಣೆ ಮತ್ತು ವಸೂಲಾತಿ ಸೇರಿದಂತೆ ಅನೇಕ ಅಗತ್ಯ ಬೇಡಿಕೆಗಳ ಬಗ್ಗೆ ಸರ್ಕಾರ ಈ ಕ್ಷಣದವರೆಗೂ ಸ್ಪಂದಿಸದಿಲ್ಲದಿರುವುದು ನಮಗೆಲ್ಲಾ ನೋವು ತಂದಿದೆ.

ಸರ್ವ ರಾಜಕೀಯ ಪಕ್ಷಗಳ ಶಾಸಕರೆಲ್ಲರೂ ಒಟ್ಟಾಗಿ ಪಂಚಾಯತ್‌ರಾಜ್ ವ್ಯವಸ್ಥೆಯ ಸಬಲೀಕರಣಕ್ಕಾಗಿ ಗಾಂಧೀಜಿಯವರ ಪ್ರತಿಮೆ ಎದುರು ಆಗ್ರಹಿಸಿದರೂ, ಸರ್ಕಾರ ಈ ಬಗ್ಗೆ ಜಾಣ ಮೌನ ವಹಿಸಿದೆ. ಮಾನ್ಯ ಮುಖ್ಯ ಮಂತ್ರಿಗಳು, ಪಂಚಾಯತ್‌ರಾಜ್ ಸಚಿವರ ಹಾಗೂ ಇಲಾಖೆಯ ಅಧಿಕಾರಿಗಳ ಜಾಣ ಮೌನದ ಹಿಂದಿರುವ ಮರ್ಮವೇನೆಂದು ಗ್ರಾಮೀಣ ಭಾಗದಿಂದ ಬಂದ ನಮಗೆ ಈ ಕ್ಷಣದವರೆಗೂ ಅರ್ಥವಾಗಿಲ್ಲ. ನಾನು ತಮ್ಮ ಮೂಲಕ ಆಗ್ರಹಿಸುವುದೇನೆಂದರೆ ತಕ್ಷಣ ಸರ್ಕಾರ '3-ಎಫ್ (ಫಂಕ್ಷನ್-ಫಂಕ್ಷನರಿ-ಫಂಡ್)' ಗಳನ್ನು ಪಂಚಾಯತ್‌ಗಳಿಗೆ ವರ್ಗಾಯಿಸಿ ಅಧಿಕೃತ ಆದೇಶ ಹೊರಡಿಸಬೇಕೆಂದು ಈ ಮೂಲಕ ಕೋರುತ್ತೇನೆ. ಸರ್ಕಾರ ಮೌನ ಮುರಿದು ಉತ್ತರಿಸಬೇಕೆಂದು ರಾಜ್ಯದ ಒಂದು ಲಕ್ಷ ಸ್ಥಳೀಯ ಪ್ರತಿನಿಧಿಗಳ ಪರವಾಗಿ ಆಗ್ರಹಿಸುತ್ತೇನೆ.

(248) 23-02-2018/ಸಿಎಸ್/ಎಂಡಿ/ 12:00

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಪಂಚಾಯತ್ ರಾಜ್ ಸಚಿವರು ಇಲ್ಲಿಯವರೆಗೆ ಸದನದಲ್ಲಿಯೇ ಇದ್ದರು. ಈಗ ಕೆಳಮನೆಗೆ ಹೋಗಿದ್ದಾರೆ. ಆದ್ದರಿಂದ ಮಾನ್ಯ ಸದಸ್ಯರು ಪ್ರಸ್ತಾಪಿಸಿದ ವಿಚಾರವನ್ನು ಸಚಿವರ ಗಮನಕ್ಕೆ ತಂದು ಅವರಿಂದ ಉತ್ತರ ಕೊಡಿಸಲಾಗುವುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ ಸರ್ಕಾರದವರು ತಮ್ಮ ಬಜೆಟ್‌ನಲ್ಲಿ ರೈತರೆ ನಮ್ಮ ದೇಶದ ಆತ್ಮ ಎಂದು ಹೇಳಿದ್ದಾರೆ. ನಮ್ಮ ಕ್ಷೇತ್ರವನ್ನು ಪ್ರತಿನಿಧಿಸುವ 17 ಜನ ಶಾಸಕರು ಒಟ್ಟಾಗಿ 3F (Function-Functionary-Fund) ಗಳನ್ನು ವರ್ಗಾವಣೆ ಮಾಡಬೇಕೆಂದು ಗಾಂಧಿ ಪ್ರತಿಮೆಯ ಮುಂದೆ ಧರಣಿ ಕುಳಿತಾಗ, ಸರ್ಕಾರದಿಂದ ಮುಖ್ಯಮಂತ್ರಿಗಳಾಗಲೀ, ಗ್ರಾಮೀಣಾಭಿವೃದ್ಧಿ ಸಚಿವರಾಗಲೀ, ಯಾವುದೇ ಸಚಿವರಾಗಲೀ, ಅಥವಾ ಈ ರಾಜ್ಯದ ಮುಖ್ಯಕಾರ್ಯದರ್ಶಿಯವರಾದರೂ ಅಲ್ಲಿಗೆ ಬರಲಿಲ್ಲವೆಂದರೆ ಇದಕ್ಕೆ ಏನರ್ಥ. ಯಾರು ನಮ್ಮ ಸಮಸ್ಯೆಗೆ ಸಕಾರಾತ್ಮಕವಾಗಿ ಸ್ಪಂದಿಸಲಿಲ್ಲ. ಇದನ್ನೆಲ್ಲ ನೋಡಿದಾಗ ನಾವು ಸದನದಲ್ಲಿ ಧರಣಿ ಮಾಡಬೇಕೆಂದು ಅವರು ಬಯಸುತ್ತಾರೆಂದು ನನಗನಿಸುತ್ತದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):–** ಮಾನ್ಯ ಸಭಾಪತಿಗಳೇ, ಈಗ ಗ್ರಾಮೀಣಾಭಿವೃದ್ಧಿ ಸಚಿವರು ಸದನಕ್ಕೆ ಬಂದಿದ್ದಾರೆ, ಅವರು ಉತ್ತರವನ್ನು ಕೊಡುತ್ತಾರೆ.

**ಸಭಾಪತಿಯವರು:–** ಮಾನ್ಯ ಸಚಿವರೆ, ಅವರಿಗೆ ಉತ್ತರ ಬೇಡ. He wants to make a statement. Let him make a statement. ಸುಮ್ಮನಿದ್ದುಬಿಡಿ. ನಾಲ್ಕು ಜನ ಸದಸ್ಯರು ಒಟ್ಟಿಗೆ ಮಾತನಾಡಿದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಸಚಿವರು ಈಗ ಶೂನ್ಯವೇಳೆಯಲ್ಲಿ ಉತ್ತರ ಕೊಡಲು ತಯಾರಿದ್ದರೆ ಕೊಡಲಿ. ಸಮಯ ತೆಗೆದುಕೊಳ್ಳುವುದಿದ್ದರೂ ಸಹ ತೆಗೆದುಕೊಳ್ಳಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ನಮ್ಮ ವಿಚಾರಗಳನ್ನು ಪ್ರಸ್ತಾಪಿಸುವುದಕ್ಕೆ ನಮಗೆ ಅವಕಾಶವೇ ಸಿಗುತ್ತಿಲ್ಲ.

**ಸಭಾಪತಿಯವರು:–** ಸರ್ಕಾರಕ್ಕೆ ಇನ್ನೂ ಒಂದು ವಾರ ಸದನ ನಡೆಸುವುದಕ್ಕೆ ಹೇಳಿ. ಆಗ ಸಮಯ ಸಿಗಬಹುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೇ, ಈ ಸದನಕ್ಕೆ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿ ಬಂದಿರುವ 25 ಜನ ಸದಸ್ಯರಿದ್ದೇವೆ. ಗ್ರಾಮೀಣಾಭಿವೃದ್ಧಿ ಬಗ್ಗೆ ಮಾತನಾಡಲು ನಮಗೆ ಒಂದು ಗಂಟೆ ಕಾಲಾವಕಾಶ ಸಿಗಲಿಲ್ಲವೆಂದರೆ ಏನರ್ಥ?

**ಸಭಾಪತಿಯವರು:–** ಮಾನ್ಯ ಸಚಿವರೆ, ಸ್ಥಳೀಯ ಸಂಸ್ಥೆಯನ್ನು ಪ್ರತಿನಿಧಿಸತಕ್ಕ 25 ಜನ ಸದಸ್ಯರು ಒಂದು ಗಂಟೆಗಳ ಕಾಲ ಏನು ಮಾತನಾಡುತ್ತಾರೆಂದು ನಾವು ಕೇಳೋಣ. ಅವರಿಗೇನು ಉತ್ತರ ಬೇಕಾಗಿಲ್ಲ, ಅವರು ಮಾತನಾಡಬೇಕೆಂದಿದ್ದಾರೆ. ಈ ವಿಚಾರದ ಬಗ್ಗೆ ಚರ್ಚೆ ನಡೆಸಲು ನನಗೆ ಸಮಯವಿಲ್ಲ. ಹಾಗಾಗಿ ಸಚಿವರು ಒಂದು ನಿಮಿಷದಲ್ಲಿ ಉತ್ತರ ನೀಡಬೇಕು. ಉತ್ತರ ಕೊಡುವುದಾದರೆ ಕೊಡಿ, ಇಲ್ಲದಿದ್ದರೆ ಸಮಯ ತೆಗೆದುಕೊಳ್ಳಿ.

(ಗೊಂದಲ)

**ಸಭಾಪತಿಯವರು:–** *ಮಂತ್ರಿಗಳು ನಿಂತಾಗಲೂ ಮಾತನಾಡುವುದಕ್ಕೆ ಬಿಡುವುದಿಲ್ಲವೆಂದರೆ ಹೇಗೆ. I don't have time. ಸಚಿವರಿಗೆ ನನ್ನದೊಂದು ಸಲಹೆ ಏನೆಂದರೆ ಈ ಸದನವನ್ನು ಮುಂದೂಡಿದ ನಂತರ ಸ್ಥಳೀಯ ಸಂಸ್ಥೆಯನ್ನು ಪ್ರತಿನಿಧಿಸತಕ್ಕ 25 ಜನ ಸದಸ್ಯರು ಹಾಗೂ ಪಂಚಾಯತ್ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರ ಒಂದು ಸಭೆಯನ್ನು ಆಯೋಜಿಸಿ ಅಲ್ಲಿ ಈ ವಿಚಾರದ ಬಗ್ಗೆ ಚರ್ಚೆ ನಡೆಸಲಿ. ಅಲ್ಲಿ 4 ಗಂಟೆಗಳ ಕಾಲ ಮಾತನಾಡಲಿ.*

(ಗೊಂದಲ)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೇ, ಈ ವಿಚಾರದ ಬಗ್ಗೆ ಮಾತನಾಡಲು ನಮಗೆ ಅರ್ಧ ಗಂಟೆಯ ಸಮಯಾವಕಾಶವನ್ನು ನೀಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಸಭಾಪತಿಯವರು:-** ಈಗ ಅರ್ಧ ಅಲ್ಲ, ನಾಲ್ಕು ಗಂಟೆ ಸಮಯ ನೀಡುತ್ತೇನೆ.

**ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೆ, ಮೂರು ನಿಮಿಷಗಳಲ್ಲಿ ಅವರಿಗೆ ಉತ್ತರವನ್ನು ಹೇಳುತ್ತೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರು ಒಪ್ಪುವುದಾದರೆ, ಬಜೆಟ್ ಮೇಲಿನ ಚರ್ಚೆಯನ್ನು ಮುಂದಿನ ತಿಂಗಳು ಮಾಡೋಣ. ಈಗ ಅವರಿಗೆ ಸಮಯ ಕೊಡೋಣ. ಆದರೆ ಈಗ ನನ್ನ ಹತ್ತಿರ ಸಮಯವಿಲ್ಲ. I don't have time. ಏಕೆಂದರೆ ಧನವಿನಿಯೋಗ ವಿಧೇಯಕವನ್ನು ನಮ್ಮ ಸದನದಿಂದ ನಾವು ಪಾಸ್ ಮಾಡಿ ಕೊಡಬೇಕಾಗಿದೆ.

(ಗೊಂದಲ)

**ಸಭಾಪತಿಯವರು:-** ಸಭಾನಾಯಕರು ಒಪ್ಪುವುದಾದರೆ ಆಯವ್ಯಯದ ಮೇಲಿನ ಚರ್ಚೆಯನ್ನು ಮುಂದಿನ ತಿಂಗಳು ಮಾಡೋಣ. ಈ ದಿನ ಅವರಿಗೆ ಚರ್ಚೆ ಮಾಡಲು ಅವಕಾಶ ಕೊಡೋಣ.

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೆ, ಅದಾಗುವುದಿಲ್ಲ. ಗ್ರಾಮೀಣಾಭಿವೃದ್ಧಿ ಸಚಿವರು ಸ್ಥಳೀಯ ಸಂಸ್ಥೆಯನ್ನು ಪ್ರತಿನಿಧಿಸತಕ್ಕ 25 ಜನ ಸದಸ್ಯರ ಜೊತೆಯಲ್ಲಿ ಒಂದು ವಿಶೇಷ ಸಭೆ ಕರೆದು ಚರ್ಚಿಸಲಿ. ನಾನು ಆ ಬಗ್ಗೆ ಮಾನ್ಯ ಸಚಿವರಿಗೆ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

**ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ತಮ್ಮ ಬೈಠಕ್‌ನಲ್ಲಿ ನಿರ್ಣಯಿಸಿ, ಧರಣಿಯನ್ನು ಮಾಡಿದರೆ ನಾವೇನು ಮಾಡಬೇಕು? ರಾಜಕಾರಣ ಮಾಡುವುದಕ್ಕೆ ಅವರು ಧರಣಿ ಮಾಡಿದರೆ ಅದಕ್ಕೆ ನಮ್ಮಿಂದ ಉತ್ತರ ಕೊಡಲು ಸಾಧ್ಯವೇ? ಸರ್ಕಾರ ಮಾಡಿರುವ ಕೆಲಸಗಳ ಬಗ್ಗೆ ಮನವಿ ಕೊಟ್ಟಿದ್ದಾರೆ, ಯಾವ ಆದೇಶಗಳು ಬಂದಿವೆ, ಅದರ ಬಗ್ಗೆ ಮನವಿಗಳು ಬಂದಿವೆ. ಏನು ಆದೇಶಗಳು ಆಗಬೇಕಿವೆ ಅದನ್ನು ಹೇಳಲಿ. ಯಾವುದು ನಿಯಮಗಳಿಗೆ ಕಾನೂನಿಗೆ ವ್ಯತಿರಿಕ್ತವಾಗಿವೆ, ಅವುಗಳನ್ನು ಹಿಂಪಡೆಯುವುದಕ್ಕೆ ಹೇಳಲಿ. ನಮ್ಮ ಸರ್ಕಾರ ಬಿಟ್ಟರೆ ನಮ್ಮ ದೇಶದಲ್ಲಿಯೇ ಬೇರೆ ಯಾವುದೇ ಪಕ್ಷದ ಸರ್ಕಾರ ಹಿಂದೆ ಮಾಡಿದಂತಹ ನಿಯಮಗಳನ್ನು, ಸುತ್ತೋಲೆಗಳನ್ನು ಹಿಂಪಡೆದಿರುವುದಿಲ್ಲ. ಸರ್ಕಾರ ಮಾಡಿರುವ ಸಾಧನೆಗಳನ್ನು ಕೂಡ ಕೇಳುವ ಔದಾರ್ಯತೆ ವಿರೋಧ ಪಕ್ಷಗಳಿಗೂ ಸಹ ಇರಬೇಕು. ಸುಮ್ಮನೆ ನಮ್ಮ ಮೇಲೆ ಆರೋಪ ಮಾಡಿದರೆ ಹೇಗೆ?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಶೂನ್ಯವೇಳೆಯಲ್ಲಿ ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಒಂದು ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಅದಕ್ಕೆ ತಮ್ಮ ಬಳಿ ಉತ್ತರ ರೆಡಿ ಇದ್ದರೆ ಕೊಡಿ. ಇಲ್ಲದಿದ್ದಲ್ಲಿ ನಾನು ಮುಂದಿನ ವಿಚಾರಕ್ಕೆ ಹೋಗುತ್ತೇನೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಗಳೇ, ಶೂನ್ಯವೇಳೆಯಲ್ಲಿ ಯಾವುದೇ ವಿಚಾರ ಚರ್ಚಿಸುವಂತಿಲ್ಲ.

**ಶ್ರೀ ಹೆಚ್.ಕೆ.ಪಾಟೀಲ್:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಚಾರಕ್ಕೆ ಸಂಬಂಧಿಸಿದ ಹೇಳಿಕೆಯನ್ನು ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಕಳುಹಿಸಿ ಕೊಡುತ್ತೇನೆ.

**(ಈ ಹಂತದಲ್ಲಿ ಸರ್ಕಾರದ ನಿಲುವನ್ನು ಪ್ರತಿಭಟಿಸಿ, ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ಕುಳಿತರು.)**

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುವುದಕ್ಕೆ ಅವಕಾಶ ಕೋರಿ ನಾನು ಒಂದು ಸೂಚನೆಯನ್ನು ತಮಗೆ ನೀಡಿದ್ದೆನು. ತಾವು ಅದನ್ನು ತೆಗೆದುಕೊಂಡಿರುವುದಿಲ್ಲ.

**ಸಭಾಪತಿಯವರು:–** ಇವತ್ತಿನ ಶೂನ್ಯವೇಳೆಯಲ್ಲಿ 5 ವಿಷಯಗಳನ್ನು ಪ್ರಸ್ತಾಪಿಸಲಾಗಿದೆ. ಮಾನ್ಯ ಪುಟ್ಟಣ್ಣನವರು ಕಳುಹಿಸಿರುವ ನೋಟಿಸ್ ಕೂಡ ನನಗೆ ಬೆಳಗ್ಗೆಯೇ ಬಂದಿದೆ. ಆದರೆ ಆದ್ಯತೆಯ ಆಧಾರದ ಮೇಲೆ ಯಾವುದಕ್ಕೆ ಪ್ರಾಮುಖ್ಯತೆ ನೀಡಬೇಕೆಂದು ನನ್ನದೇ ಆದ ಒಂದು ಪದ್ಧತಿಯಲ್ಲಿ ವಿಷಯಗಳನ್ನು ಪಟ್ಟಿ ಮಾಡಿಕೊಂಡು, ಅದರಂತೆ ಸದನದಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಿದ್ದೇನೆ. ಮಾನ್ಯ ಪುಟ್ಟಣ್ಣನವರು ಕಳುಹಿಸಿರುವ ವಿಚಾರವನ್ನು ನನ್ನ ಕಚೇರಿಯಿಂದ ಸಂಬಂಧಪಟ್ಟ ಇಲಾಖೆಗೆ ಕಳುಹಿಸಿಕೊಟ್ಟು, ಅದಕ್ಕೆ ಉತ್ತರ ಕೊಡಿಸುವ ವ್ಯವಸ್ಥೆ ಮಾಡುತ್ತೇನೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ಒಬ್ಬ ಶಿಕ್ಷಕ ದಯಾಮರಣ ಕೋರಿ ಅರ್ಜಿ ಸಲ್ಲಿಸಿದ್ದಾರೆ, ಅದರ ಮೇಲೆ ಮಾತನಾಡಲು ಅವಕಾಶ ನೀಡದಿದ್ದರೆ ಹೇಗೆ?

**ಸಭಾಪತಿಯವರು:–** ಈಗ ಸಮಯದ ಅಭಾವ ಇದೆ.

**ಶ್ರೀ ಪುಟ್ಟಣ್ಣ:–**ಮಾನ್ಯ ಸಭಾಪತಿಯವರೆ, ನನಗೆ ಅವಕಾಶ ಕೊಡಿ, 2 ನಿಮಿಷಗಳಿಗಿಂತ ಹೆಚ್ಚಿಗೆ ಸಮಯ ನಾನು ತೆಗೆದುಕೊಳ್ಳುವುದಿಲ್ಲ.

**ಸಭಾಪತಿಯವರು:–** ಆಯಿತು ಓದಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಊ): ಶಿಕ್ಷಕರೊಬ್ಬರು ದಯಾಮರಣ ಕೋರಿ ಅರ್ಜಿ ಸಲ್ಲಿಸಿರುವ ಬಗ್ಗೆ.**

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಬೆಂಗಳೂರು ಉತ್ತರ ಜಿಲ್ಲೆ, ಉತ್ತರ ವಲಯ-3ರ ಶಿವಾಜಿನಗರದಲ್ಲಿರುವ ಸರ್ಕಾರಿ ಪ್ರೌಢಶಾಲೆಗೆ ಚಾಮರಾಜ ಪೇಟೆಯ ಸರ್ಕಾರಿ ಪ್ರೌಢಶಾಲೆಯಿಂದ 14 ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರನ್ನು 6 ತಿಂಗಳ ಹಿಂದೆ ಸ್ಥಳಾಂತರ ಮಾಡಲಾಯಿತು. ಶಿವಾಜಿನಗರ ಸರ್ಕಾರಿ ಪ್ರೌಢಶಾಲೆಯಲ್ಲಿ 6 ತಿಂಗಳಿನಿಂದ ಕೆಲಸ ನಿರ್ವಹಿಸುತ್ತಿರುವ ಶಿಕ್ಷಕರಿಗೆ ಇದುವರೆವಿಗೆ ವೇತನವನ್ನು ನೀಡದೆ ಶಿಕ್ಷಕರು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಈ ಶಿಕ್ಷಕರಿಗೆ ವೇತನ ನೀಡಬೇಕೆಂದು ಒತ್ತಾಯಿಸಿ ನಾನು ಈಗಾಗಲೇ ಮಾನ್ಯ ಶಿಕ್ಷಣ ಸಚಿವರು, ಪ್ರಧಾನ ಕಾರ್ಯದರ್ಶಿಗಳು, ಆಯುಕ್ತರು ಹಾಗೂ ಉಪ ನಿರ್ದೇಶಕರಿಗೆ ಪತ್ರ ಬರೆದು ಭೇಟಿ ಮಾಡಿದ್ದರೂ ಇದುವರೆಗೆ ವೇತನ ಬಿಡುಗಡೆ ಮಾಡಿರುವುದಿಲ್ಲ. ಇದರಿಂದ ಶಿಕ್ಷಕರು ತೀವ್ರ ನೊಂದು ದಯಾಮರಣ ಕೋರಿ ಸರ್ಕಾರ ಹಾಗೂ ರಾಜ್ಯಪಾಲರಿಗೆ ಅರ್ಜಿ ನೀಡಿರುವುದಾಗಿ ದಿನಾಂಕ: 22-2-2018ರ ದಿನಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಈ ಶಾಲೆಯನ್ನು ಯಾವುದೋ ಒಂದು ಸಂಸ್ಥೆಯವರು ದತ್ತು ಪಡೆದು ಶಿಕ್ಷಕರಿಗೆ ಚಿತ್ರ ಹಿಂಸೆ ನೀಡುತ್ತಿದ್ದಾರೆ. ಆದ್ದರಿಂದ ಸದರಿ ಶಾಲೆಯನ್ನು ಖಾಸಗಿ ಸಂಸ್ಥೆಯವರಿಗೆ ವಹಿಸಿ ಶಾಲೆಯ ಶಿಕ್ಷಕರನ್ನು ಬೇರೆ ಶಾಲೆಗೆ ಕೂಡಲೇ ಸ್ಥಳ ನಿಯುಕ್ತಿಗೊಳಿಸಬೇಕು. ಹಾಗೂ 6 ತಿಂಗಳಿನಿಂದ ವೇತನವಿಲ್ಲದೆ ತೀವ್ರ ಸಂಕಷ್ಟದಲ್ಲಿರುವ ಶಿಕ್ಷಕರಿಗೆ ಕೂಡಲೇ ವೇತನ ಬಿಡುಗಡೆ ಮಾಡಬೇಕೆಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಪುಟ್ಟಣ್ಣನವರು ಪ್ರಸ್ತಾಪಿಸಿರುವ ವಿಚಾರವನ್ನು ಗಮನಿಸಿದ್ದೇನೆ. ಅದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

**<u>4.ಸಭಾಪತಿಯವರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳಿಗೆ ಸಂಬಂಧಪಟ್ಟ ಸಚಿವರುಗಳಿಂದ ಉತ್ತರ</u>**

**ಅ) ತಲಶ್ಚೇರಿ ಮೈಸೂರು ರೈಲು ಮಾರ್ಗದ ಬಗ್ಗೆ**

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು):- ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಶ್ರೀಮತಿ ವೀಣಾ ಅಚ್ಚಯ್ಯರವರು ದಿನಾಂಕಃ08.02.2018ರಂದು ಶೂನ್ಯವೇಳೆಯಲ್ಲಿ ಪಸ್ರಾಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.**

(ಹೇಳಿಕೆಗಳನ್ನು ಲಗತ್ತಿಸಲಾಗಿದೆ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ವಿಜಯಪುರ ಮಹಾನಗರ ಪಾಲಿಕೆಯ ದೀರ್ಘಾವಧಿ ಲೀಜ್ ಆಸ್ತಿಗಳನ್ನು ಗುತ್ತಿಗೆ ಹಾಕುವಲ್ಲಿ ವಿಳಂಬ ನೀತಿ ಆಗುತ್ತಿರುವ ಬಗ್ಗೆ**

---

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು):- ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಶ್ರೀ ಬಸನಗೌಡ ಎಸ್.ಪಾಟೀಲ್(ಯತ್ನಾಳ್) ಇವರು ದಿನಾಂಕ:21.02.2018ರಂದು ಶೂನ್ಯವೇಳೆಯಲ್ಲಿ ಪಸ್ರಾಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.**

(ಹೇಳಿಕೆಗಳನ್ನು ಲಗತ್ತಿಸಲಾಗಿದೆ)

(249)/23-2-2018/ಎಲ್ಎಂ/ಎಂಡಿ/12-10

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಗಳೆ, ನಿನ್ನೆ ಪ್ರಸ್ತಾಪ ಮಾಡಿದ ಶೂನ್ಯ ವೇಳೆಗೆ ಉತ್ತರ ಬಂದಿರುವುದಿಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಗಳೆ, ತುಂಬಾ ಮಹತ್ವದ ವಿಚಾರವನ್ನು ಪ್ರಸ್ತಾಪಿಸಲಾಗಿದೆ. ಅವುಗಳಿಗೆ ಉತ್ತರವನ್ನು ಇನ್ನು ಕೊಟ್ಟಿರುವುದಿಲ್ಲ.

ಸಭಾಪತಿಯವರು:- ಉತ್ತರಗಳನ್ನು ಕಳುಹಿಸಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಸದನ ಮುಗಿದರೂ ಕೂಡಾ ಯಾವುದೇ ಪ್ರಶ್ನೆಗಳಿಗೆ ಉತ್ತರ lapse ಆಗದಂತೆ ಎಲ್ಲ ಉತ್ತರಗಳನ್ನು ಸಂಬಂಧಪಟ್ಟ ಗೌರವಾನ್ವಿತ ಸದಸ್ಯರಿಗೆ ತಲುಪಿಸುವ ವ್ಯವಸ್ಥೆಯನ್ನು ಮಾಡುತ್ತಾರೆ. ಶೂನ್ಯವೇಳೆಯಲ್ಲಿ ಎತ್ತಿರುವಂತಹ ಸಂಗತಿಗಳಿಗೂ ಉತ್ತರವನ್ನು ಸಾಧ್ಯವಾದರೆ ಇವತ್ತು ಸಾಯಂಕಾಲದೊಳಗೆ ಕೊಡುತ್ತೇವೆ ಎಂದು ಹೇಳಿದ್ದಾರೆ. ಯಾವುದಕ್ಕೆ ಉತ್ತರವನ್ನು ಇವತ್ತು ಕೊಡಲು ಆಗುವುದಿಲ್ಲ ಅದನ್ನು ಆಯಾ ಸದಸ್ಯರಿಗೆ ತಲುಪಿಸುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆ ಎಂದು ಮಾನ್ಯ ಸಭಾನಾಯಕರು ನನಗೆ ಮಾತು ಕೊಟ್ಟಿದ್ದಾರೆ. ಧರಣಿ ನಿರತ ಸದಸ್ಯರು ದಯಮಾಡಿ ತಮ್ಮ ಸ್ಥಾನಗಳಿಗೆ ತೆರಳಿ ನಾನು ಮುಂದಿನ ವಿಷಯಕ್ಕೆ ಹೋಗಲು ಅವಕಾಶ ಮಾಡಿಕೊಡಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಗಳೆ, ಸ್ಥಳೀಯ ಸಂಸ್ಥೆಯಿಂದ ಆಯ್ಕೆಯಾದ ಸದಸ್ಯರು ಬಾವಿಯಲ್ಲಿರುವುದು ಬೇಡ. ಅವರಿಗೆ ಸರ್ಕಾರದಿಂದ ಸ್ಪಷ್ಟವಾದ ಭರವಸೆಯನ್ನು ಕೊಡಿಸಿ.

**ಸಭಾಪತಿಯವರು:-** ಸ್ಥಳೀಯ ಸಂಸ್ಥೆಗಳ ಸದಸ್ಯರ ಸಭೆಯನ್ನು ಕರೆದು ಅವರ ಜೊತೆಯಲ್ಲಿ ಮಾತನಾಡಿ ಎಂದು ನಾನು ಹೇಳಿದೆ, ಅದಕ್ಕೆ ಮಾನ್ಯ ಮಂತ್ರಿಗಳು ಸಭೆಯನ್ನು ಕರೆಯುತ್ತೇನೆ ಎಂದು ಹೇಳಿದ್ದಾರೆ. ಅದಕ್ಕವರು ಬೇಡವೆಂದರೆ ನಾನೇನು ಮಾಡಲಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಗಳೆ, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಒಂದು ಹೇಳಿಕೆಯನ್ನು ಮಾಡಿಬಿಡಲಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಗಳೆ, ಸಭೆಯನ್ನು ಕರೆಯುತ್ತೇನೆ ಎಂದು ಇನ್ನೊಮ್ಮೆ ಮಾನ್ಯ ಮಂತ್ರಿಗಳು ಹೇಳಿಬಿಡಲಿ.

**ಶ್ರೀ ಎಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಕೊಟ್ಟಿರುವ ಶೂನ್ಯವೇಳೆ ಪ್ರಸ್ತಾವನೆಯನ್ನು ನಾನು ಸಂಪೂರ್ಣವಾಗಿ ಓದಿದ್ದೇನೆ. ಯಾವುದಕ್ಕೆ ಕೇಂದ್ರ ಸರ್ಕಾರ ...

ಸಭಾಪತಿಯವರು:- ಈಗ ಚರ್ಚೆ ಬೇಡ. I want to go forward. ನನ್ನ ಬಳಿ ಸಮಯವಿಲ್ಲ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:- ಮೀಟಿಂಗ್ ಮಾಡಲು ಒಂದು ದಿನಾಂಕವನ್ನು ನಿಗದಿ ಮಾಡಿ ಆ 25ಜನ ಸ್ಥಳೀಯ ಸಂಸ್ಥೆಗಳ ಸದಸ್ಯರನ್ನು ಕರೆದು ಚರ್ಚೆ ಮಾಡಿಬಿಡಿ.

**ಶ್ರೀ ಎಚ್.ಕೆ.ಪಾಟೀಲ್:-**ಮಾನ್ಯ ಸಭಾಪತಿಗಳೆ, ಅವರು ಏನು ಚರ್ಚೆ ಮಾಡಬೇಕು ಎನ್ನುತ್ತಾರೆ, ಕೇಂದ್ರ ಸರ್ಕಾರ ನಮಗೆ ಏನು ಪ್ರಶಸ್ತಿ, ಮನ್ನಣೆ ಕೊಟ್ಟಿದೆ, 3F (Function-Functionary-Fund) devolution ಬಗ್ಗೆ ಹಾಗೂ E-Governance ಬಗ್ಗೆ ಆ ಎಲ್ಲ ವಿವರವನ್ನು ಇಟ್ಟುಕೊಂಡು ಅವರ ಜೊತೆಯಲ್ಲಿ ಚರ್ಚೆ ಮಾಡುತ್ತೇನೆ. ಅವರಿಗೆ ಇನ್ನು ಸಮಾಧಾನ ಆಗದಿದ್ದರೆ, ಅವರಿಗೆ ಏನು ಮಾಹಿತಿ ಬೇಕು ಕೊಟ್ಟು, ಅವರಿಂದ ಬಂದ ಸಲಹೆಗಳನ್ನು ತೆಗೆದುಕೊಂಡು ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

**ಸಭಾಪತಿಯವರು:-** ಧನ್ಯವಾದಗಳು, ಈಗ ಧರಣಿ ನಿರತ ಸದಸ್ಯರು ತಮ್ಮ-ತಮ್ಮ ಸ್ಥಾನಗಳಿಗೆ ತೆರಳಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, ಪ್ರಶಸ್ತಿ ಬಗ್ಗೆ ಕೇಳಲು ನಾವು ಪ್ರಶ್ನೆಯನ್ನು ಕೇಳಿರುವುದಿಲ್ಲ. ನಾವು ಕೇಳಿರುವುದು ಗ್ರಾಮಸ್ವರಾಜ ಕಾಯಿದೆಯಡಿ ಪಿಡಿಓ ಗಳನ್ನು ವರ್ಗಾವಣೆ ಮಾಡುತ್ತಾರೆ. ಎಷ್ಟು ಜನರನ್ನು ವರ್ಗಾವಣೆ ಮಾಡಲಾಗುತ್ತದೆ ಮತ್ತು ಯಾವಾಗ ಮಾಡಲಾಗುತ್ತದೆ. ನೀವು ಪ್ರಶಸ್ತಿ ಕೊಡುತ್ತೀರಾ ಇಲ್ಲವೆ ಎನ್ನುವುದನ್ನು ನಾವು ಕೇಳುತ್ತಿಲ್ಲ. ಸರ್ಕಾರದ ಮೇಲೆ ನಮ್ಮ ದೂರು ಇಲ್ಲ. ಮಂತ್ರಿಗಳ ಮೇಲೆ ನಮ್ಮ ದೂರು ಇಲ್ಲ. ಸರ್ಕಾರ ಮನಸೋ ಇಚ್ಚೆಯಂತೆ ಮಾತನಾಡಬಾರದು. ವರ್ಗಾವಣೆ ಮಾಡಿ ಯಾವಾಗ ಆದೇಶ ಹೊರಡಿಸುತ್ತಾರೆ ಅಷ್ಟು ಹೇಳಲಿ.

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಸಭೆ ಕರೆಯುತ್ತೇನೆ ಎಂದು ಹೇಳಿದ್ದಾರೆ. ಆಗ ಚರ್ಚೆ ಮಾಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಹೊರಟ್ಟಿಯವರೆ ತಾವು ಹೇಳಿದ ಹಾಗೆ ನಾನು ಮಾನ್ಯ ಸದಸ್ಯರಲ್ಲಿ ತಮ್ಮ-ತಮ್ಮ ಸ್ಥಾನಗಳಿಗೆ ತೆರಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಸದನ ನಡೆಸಲು ಅವಕಾಶ ಮಾಡಿಕೊಡಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಪೂಜಾರಿಯವರೆ ನೀವು ಹೇಳಿದ ಹಾಗೆ ಸದನ ನಡೆಯಬೇಕಾ? ಅವರು ಹೇಳಿದ ಹಾಗೆ ಸದನ ನಡೆಸಲು ಆಗುವುದಿಲ್ಲ. ಮಂತ್ರಿಗಳು ಸಭೆ ಕರೆಯುತ್ತೇನೆ ಎಂದು ಹೇಳಿದ್ದಾರೆ. ಆಗ ಚರ್ಚೆ ಮಾಡಿ.

**ಶ್ರೀ ಕೆ.ಬಿ.ಶಾಣಪ್ಪ:–** ಬಾವಿಯಲ್ಲಿರುವ ಸದಸ್ಯರು ದಯಮಾಡಿ ತಮ್ಮ ಸ್ಥಾನಗಳಿಗೆ ಬನ್ನಿ.

(ಗೊಂದಲ)

**ಸಭಾಪತಿಯವರು:–** ಸಭೆ ಕರೆಯುತ್ತೇನೆ ಎಂದು ಮಂತ್ರಿಗಳು ಹೇಳಿದ್ದಾರೆ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಶೂನ್ಯವೇಳೆಯಲ್ಲಿ ಸ್ಪಷ್ಟೀಕರಣಕ್ಕೆ ಎಲ್ಲಿ ಅವಕಾಶವಿದೆ? ಶೂನ್ಯವೇಳೆಯಲ್ಲಿ ಯಾರು ಧರಣಿ ಕೂಡುತ್ತಾರೆ?

(ಗೊಂದಲ)

ಶ್ರೀ ಕೆ.ಬಿ.ಶಾಣಪ್ಪ:– ಸದಸ್ಯರು ಹೇಳಿದ್ದನ್ನು ಕೇಳಬೇಕು. What are you talking to me?

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು)**:– ಮಾನ್ಯ ಸಭಾಪತಿಗಳೆ, ಮಾನ್ಯ ಗ್ರಾಮೀಣಾಭಿವೃದ್ಧಿ ಇಲಾಖೆಯ ಸಚಿವರು ಸಭೆ ಕರೆದು ಚರ್ಚೆ ಮಾಡುತ್ತೇನೆ ಎಂದು ಹೇಳಿದ್ದಾರೆ. ನಾನು ಸರ್ಕಾರದ ಪರವಾಗಿ ಮನವಿ ಮಾಡಿಕೊಳ್ಳುತ್ತೇನೆ. ಶೀಘ್ರದಲ್ಲಿಯೇ 25 ಜನ ಶಾಸಕರ ಸಭೆಯನ್ನು ಕರೆಯುತ್ತಾರೆ. ಇನ್ನು ಎರಡು-ಮೂರು ದಿನಗಳಲ್ಲಿ ಕರೆಯುತ್ತಾರೆ.

ಶ್ರೀ ಬಸವರಾಜ ಹೊರಟ್ಟಿ:– ಮಾನ್ಯ ಮಂತ್ರಿಗಳವರ ಡೈರಿ ನೋಡಿಕೊಂಡು, ಅವರ ಅಜೆಂಡಾ ನೋಡಿಕೊಂಡು ಒಂದು ದಿನಾಂಕವನ್ನು ನಿಗದಿ ಮಾಡಿ ಹೇಳುತ್ತಾರೆ. ಇದಕ್ಕಿಂತ ಇನ್ನು ಏನು ಹೇಳಬೇಕು ಅವರು.

**ಶ್ರೀ ಕೆ.ಬಿ.ಶಾಣಪ್ಪ:–** ಸಚಿವರು ಸಭೆ ಕರೆಯುತ್ತೇವೆಂದು ಸದನದಲ್ಲಿ ಹೇಳುತ್ತಿದ್ದಾರೆ.

**(ಈ ಹಂತದಲ್ಲಿ ಧರಣಿ ನಿರತ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾದ ಸದಸ್ಯರು ಧರಣಿಯನ್ನು ಮುಕ್ತಾಯಗೊಳಿಸಿ ತಮ್ಮ-ತಮ್ಮ ಸ್ಥಾನಗಳಿಗೆ ಹಿಂದುರುಗಿದರು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**5.ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು**

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿಯ ಪರವಾಗಿ ಸಮಿತಿಯ 133ನೇ ವರದಿಯನ್ನು ಸದನದಲ್ಲಿ ಮಂಡಿಸುತ್ತೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**6. ವರದಿಗಳನ್ನೊಪ್ಪಿಸುವುದು**

ಅ) **ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಗಳೆ, 2016-17ನೇ ಸಾಲಿನ ಹಕ್ಕುಬಾಧ್ಯತಾ ಸಮಿತಿಯ 93ನೇ ವರದಿಯನ್ನು ಸದನದಲ್ಲಿ ಮಂಡಿಸುತ್ತೇನೆ.

ಆ) ಶ್ರೀ ವಿ.ಸೋಮಣ್ಣ **(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಗಳೆ, 2016-17 ಹಾಗೂ 2017-18ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಸದಸ್ಯನಾದ ನಾನು ಸಮಿತಿಯ ಪರವಾಗಿ ನಗರಾಭಿವೃದ್ಧಿಗೆ ಸಂಬಂಧಿಸಿದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ Mutual Fund ಗಳಲ್ಲಿ ಮಾಡಿದ ಹೂಡಿಕೆಗಳ ಬಗ್ಗೆ ಸಮಿತಿಯ 11ನೇ ವರದಿಯನ್ನು ಸದನದಲ್ಲಿ ಮಂಡಿಸುತ್ತೇನೆ.

ಇ) **ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು) (ಶ್ರೀ ವಿವೇಕ್‌ರಾವ್ ವಸಂತ್‌ರಾವ್ ಪಾಟೀಲ್ ಪರವಾಗಿ):-** ಮಾನ್ಯ ಸಭಾಪತಿಗಳೆ, 2016-17ನೇ ಸಾಲಿನ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ 33ನೇ ವರದಿಯನ್ನು ಸದನದಲ್ಲಿ ಮಂಡಿಸುತ್ತೇನೆ.

ಈ) **ಶ್ರೀ ಎಂ.ಕೆ.ಪ್ರಾಣೇಶ್(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಗಳೆ, 2016-17ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ ಸಮಿತಿಯ ಸದಸ್ಯನಾದ ನಾನು ಮಾರ್ಚ್ 2015 ಮತ್ತು ಮಾರ್ಚ್ 2016ಕ್ಕೆ ಕೊನೆಗೊಂಡ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ ಸ್ಥಳೀಯ ಸಂಸ್ಥೆಗಳ ವರದಿಯ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಖಂಡಿಕೆಗಳ ಮೇಲಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಇಲಾಖೆಗಳಿಗೆ ಸಂಬಂಧಿಸಿದಂತೆ ಸಮಿತಿಯ 26ನೇ ವರದಿಯನ್ನು ಸದನದ ಮುಂದೆ ಮಂಡಿಸುತ್ತೇನೆ.

ಉ) ಶ್ರೀ ಪ್ರದೀಪ್ ಶೆಟ್ಟರ್(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು):- ಮಾನ್ಯ ಸಭಾಪತಿಗಳೆ, 2017-18ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ 9ನೇ ವರದಿಯನ್ನು ಸದನದ ಮುಂದೆ ಮಂಡಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಂಡಿಸಲಾಯಿತು.

**7. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ)ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ(ತಿದ್ದುಪಡಿ)ವಿಧೇಯಕ, 2018**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ(ತಿದ್ದುಪಡಿ)ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಶ್ರೀ ಟಿ.ಬಿ.ಜಯಚಂದ್ರ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):- ಮಾನ್ಯ ಸಭಾಪತಿಗಳೆ,** ಇದೊಂದು ಸಣ್ಣ ತಿದ್ದುಪಡಿ. ಏನು ಎಂದರೆ, "Auditors report shall be sent to the Government with the approval of the Syndicate." ಎಂದು ಹೇಳಿ ಇದೆ. ಇದೊಂದು ಸಣ್ಣ ತಿದ್ದುಪಡಿ. ಆಡಿಟರ್ಸ್ ವರದಿಯನ್ನು ಸಿಂಡಿಕೇಟ್‌ನಲ್ಲಿ ಅನುಮೋದನೆ ಮಾಡಿ ಅದು ಸರ್ಕಾರಕ್ಕೆ ಬರಬೇಕು ಎಂದು ತಿದ್ದುಪಡಿ ಮಾಡಲಾಗಿದೆ. ಇದೊಂದು ಸಣ್ಣ ತಿದ್ದುಪಡಿ ಇದನ್ನು ಸದನ ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಗಳೆ, 'ಪ್ರಶಾಸನ' ಅಂದರೆ ಏನು ಗೊತ್ತಾಗಲಿಲ್ಲ. Syndicate approval ಆಗಬೇಕು ಎಂದು ಹೇಳಿದ್ದೀರಿ. 'ಪ್ರಶಾಸನ' ಎಂದು ಹೇಳುವುದಕ್ಕಿಂತ ಕಾರ್ಯಕಾರಿ ಸಮಿತಿಯ ಒಪ್ಪಿಗೆ ಎಂದು ಸ್ಪಷ್ಟವಾಗಿ ಹಾಕಲು ಏಕೆ ಆಗುವುದಿಲ್ಲ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಗಳೆ, ಲೆಕ್ಕ ಪರಿಶೋಧಕರ ವರದಿಯನ್ನು ಪ್ರಶಾಸನ ಸಭೆಯು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು ಅಂದರೆ ಗೆಜೆಟ್ ನಲ್ಲಿ ಹಾಕಬೇಕು ಎಂದು ಇತ್ತು. ಈಗ ಗೆಜೆಟ್‌ನಲ್ಲಿ ಹಾಕುವುದನ್ನು ಬಿಟ್ಟು Syndicate approval ತೆಗೆದುಕೊಂಡು ಸರ್ಕಾರಕ್ಕೆ ಬರುತ್ತದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಗಳೆ, ಪ್ರಶಾಸನದ ಅನುಮೋದನೆಯೊಂದಿಗೆ ಎನ್ನುವ ಪದವನ್ನು ಹಾಕಿದ್ದೀರಿ. Syndicate approval ತೆಗೆದುಕೊಳ್ಳಬೇಕು ಎಂದು ತಾವು ಹೇಳುತ್ತಿದ್ದೀರಿ. ಇಲ್ಲಿ ಇರುವುದು ಪ್ರಶಾಸನ ಸಭೆಯು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು ಎಂದು ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಗಳೆ, ಲೆಕ್ಕ ಪರಿಶೋಧಕರ ವರದಿಯನ್ನು ಪ್ರಶಾಸನ ಸಭೆಯು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು ಎಂದು ಮೊದಲು ಇತ್ತು. ಆ ಪದದ ಬದಲಾಗಿ " ಲೆಕ್ಕಪರಿಶೋಧಕರ ವರದಿಯನ್ನು ಪ್ರಶಾಸನ ಅನುಮೋದನೆಯೊಂದಿಗೆ ಸರ್ಕಾರಕ್ಕೆ ಕಳುಹಿಸತಕ್ಕದ್ದು ಎಂದು ಮಾಡಲಾಗಿದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಗಳೆ, ತಾವು Syndicate approval ಜೊತೆಗೆ ಎಂದು ಹೇಳಿದ್ದೀರಿ. ಆದರೆ ಇಲ್ಲಿ ಆ ರೀತಿ ಬರೆದಿರುವುದಿಲ್ಲ. ಇಲ್ಲಿ ಬರೆದಿರುವುದು ಬೇರೆ. 'ಪ್ರಶಾಸನ' ಎಂದರೆ ಏನು ಎಂದೇ ಗೊತ್ತಿಲ್ಲ. ಅದು ಈಗ ಕಾರ್ಯಕಾರಿ ಪರಿಷತ್ ಎಂದು ಆಗಿದೆ.

(250) 23-02-2018 BSD-AK (12-20)

ಕ್ಯಾಪ್ಟನ್ ಗಣೇಶ್ ಕಾರ್ಣಿಕ್ಃ- ಮಾನ್ಯ ಸಭಾಪತಿಯವರೇ, ಈಗ ಅದು ಕಾರ್ಯಕಾರಿ ಪರಿಷತ್ತು ಎಂದಾಗಿದೆ. ಈಗ 'Syndicate' ಎಂಬ ಶಬ್ದ ಇಲ್ಲ. ಇದನ್ನು ಕಾರ್ಯಕಾರಿ ಪರಿಷತ್ತಿನ ಅನುಮೋದನೆಯೊಂದಿಗೆ ಎಂದು ಬದಲಾವಣೆ ಮಾಡಿದರೆ specific ಆಗಿ ಆಗುತ್ತದೆ.

**Sri T.B. JAYACHANDRA:** In Section 56, the proposed amendment reads as follows:-

> *"...the auditor's report shall be sent to the Government with the approval of Syndicate..."*

ಕ್ಯಾಪ್ಟನ್ ಗಣೇಶ್ ಕಾರ್ಣಿಕ್ಃ- ಮಾನ್ಯ ಸಚಿವರು ಓದಿದ್ದು ಆಂಗ್ಲ ಭಾಷೆಯಲ್ಲಿ ಇದೆ, ಆದರೆ ಕನ್ನಡ ಭಾಷೆಯಲ್ಲಿ ಇಲ್ಲ. ಪ್ರಶಾಸನ ಎಂದರೆ Syndicate ಎಂದಾಗುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರಃ- ಮಾನ್ಯ ಸಭಾಪತಿಯವರೇ, ನಾನು ಆ ತಿದ್ದುಪಡಿಯನ್ನು ಕೊಡುತ್ತೇನೆ. ಇದಷ್ಟೇ ಸಣ್ಣ ವ್ಯತ್ಯಾಸ.

ಶ್ರೀ ವಿ.ಎಸ್. ಉಗ್ರಪ್ಪ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ವಿಧೇಯಕದ ಕೊನೆಯಲ್ಲಿ existing provisions ಇದ್ದು, ಅದರ Section 56 ರಲ್ಲಿ clear ಆಗಿ ಇದೆ. ಅದರಲ್ಲಿ " ಹಣಕಾಸು ಅಧಿಕಾರಿಯು, ಕುಲಪತಿಯವರ ನಿರ್ದೇಶನದ ಅಡಿಯಲ್ಲಿ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸತಕ್ಕದ್ದು ಮತ್ತು ಸರ್ಕಾರಕ್ಕೆ ಅದರ ಒಂದು ಪ್ರತಿಯನ್ನು ಕಳುಹಿಸತಕ್ಕದ್ದು" ಎಂದು ಇದೆ. ಮುಂದುವರೆದು clause (3) ನಲ್ಲಿ " ವಿಶ್ವವಿದ್ಯಾಲಯದ ಲೆಕ್ಕಪರಿಶೋಧಿತ ಲೆಕ್ಕಪತ್ರಗಳನ್ನು ಹಾಗೂ ಲೆಕ್ಕಪರಿಶೋಧಕರ ವರದಿಯನ್ನು ಪ್ರಶಾಸನ ಸಭೆಯು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ಅದರ ಪ್ರತಿಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸತಕ್ಕದ್ದು" ಎಂದು ನಮೂದಾಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

ಅಂದರೆ ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸತಕ್ಕದ್ದು ಎಂದು ಸರ್ಕಾರಕ್ಕೆ ಬರಲೇಬೇಕು. ಇದು ಇರಬೇಕಾದ ಪರಿಸ್ಥಿತಿಯಲ್ಲಿ ಈ amendment ನಲ್ಲಿ ಯಾವ logic ಇದೆ ಎಂದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಟಿ.ಬಿ. ಜಯಚಂದ್ರಃ- ಇದೇನು ಬಹಳ ದೊಡ್ಡ ವಿಚಾರವಲ್ಲ.

ಶ್ರೀ ವಿ.ಎಸ್. ಉಗ್ರಪ್ಪಃ- ದೊಡ್ಡದಲ್ಲ ಎಂದಾಗ ಅದರ relevancy ಏನು? Why the Government is seeking this amendment?

ಕ್ಯಾಪ್ಟನ್ ಗಣೇಶ್ ಕಾರ್ಣಿಕ್ಃ- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಉದ್ದೇಶ ಸರಿಯಿದ್ದು, Syndicate approval ಬೇಕು ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಆದರೆ ಈಗ ಋಥಿಟಿಜಿಛಿಚಿಣಜ ಇಲ್ಲ, ಅದನ್ನು ಕಾರ್ಯಕಾರಿ ಪರಿಷತ್ತು ಎಂದು ಕರೆಯುತ್ತಿದ್ದೇವೆ. ಎರಡನೆಯದಾಗಿ ಮಾನ್ಯ ಸಚಿವರು ಅಪೇಕ್ಷಿಸುವ ತಿದ್ದುಪಡಿಯ ಪದವನ್ನು ಕನ್ನಡ ಭಾಷೆಯಲ್ಲಿ ಉಪಯೋಗ ಮಾಡಿಲ್ಲ, ಪುನಃ ಪ್ರಶಾಸನ ಎಂದು ಪದಬಳಕೆ ಮಾಡಿದ್ದಾರೆ. ಮಾನ್ಯ ಉಗ್ರಪ್ಪನವರು ಹೇಳಿದಂತೆ ಅದನ್ನೇ ಉಪಯೋಗ ಮಾಡುವುದಾದರೆ ತಿದ್ದುಪಡಿ ತರುವ ಅಗತ್ಯವೇ ಇಲ್ಲ. Already ಅದರಲ್ಲಿ ಇದೆ. Syndicate approval ಬೇಕು ಎನ್ನುವ ಕಲ್ಪನೆ ಇದ್ದರೆ ಪ್ರಶಾಸನ ಎಂಬ ಪದದ ಬದಲು ಕಾರ್ಯಕಾರಿ ಪರಿಷತ್ತಿನ ಅನುಮೋದನೆಯೊಂದಿಗೆ ಎಂದು ಇರಬೇಕಾಗುತ್ತದೆ. ಆ ಪದ ಹಾಕಿದರೆ ಅಭ್ಯಂತರ ಇಲ್ಲ.

ಸಭಾಪತಿಯವರುಃ- ನಾವು ಇಲ್ಲಿ ಪಾಸ್ ಮಾಡಿದ್ದೇವೆ, ಆದರೆ ಕಾರ್ಯಕಾರಿ ಪರಿಷತ್ತು ಎಂಬ ಪದ ಹಾಕಲು ಇನ್ನೂ ಕಾನೂನು ಆಗಿಲ್ಲ. ಕಾನೂನು ಆದಮೇಲೆ ಬರುತ್ತದೆ, ಅಲ್ಲಿಯವರೆಗೂ Syndicate ಎಂಬ ಪದ ಇರುತ್ತದೆ.

ಕ್ಯಾಪ್ಟನ್ ಗಣೇಶ್ ಕಾರ್ಣಿಕ್ಃ- ಮಾನ್ಯ ಸಭಾಪತಿಯವರೇ, ಇಲ್ಲ. ಮುಂಚಿನದ್ದರಲ್ಲಿಯೂ ಹಾಗೆ ಇದೆ. Already ಕಾರ್ಯಕಾರಿ ಎಂದು ಮಾಡಿದ್ದಾರೆ.

ಶ್ರೀ ವಿ.ಎಸ್. ಉಗ್ರಪ್ಪಃ- ಮಾನ್ಯ ಸಭಾಪತಿಯವರೇ, ಬಿಲ್‌ನ ಹಿಂದೆ ಇದೆ.

ಕ್ಯಾಪ್ಟನ್ ಗಣೇಶ್ ಕಾರ್ಣಿಕ್ಃ- ಅದು exactly ಹಾಗೆಯೇ ಇದೆ.

ಶ್ರೀ ವಿ.ಎಸ್. ಉಗ್ರಪ್ಪಃ- ಅದು existing Act ನಲ್ಲಿ ಇದೆ.

ಸಭಾಪತಿಯವರುಃ- ಸರ್ಕಾರ ಏನು ಹೇಳುತ್ತದೆ, ನೋಡೋಣ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**Sri T.B. JAYACHANDRA:** Clause (3) of the Karnataka State Law University Act, 2009 reads as follows:-

> *"(3) The audited accounts of the University together with the auditor's report shall be published by the Syndicate in the Official Gazette..."*

Gazette ಬದಲು ಎಂದಷ್ಟೇ ಆಗುತ್ತದೆ. Gazette ಬದಲು Syndicate approval ಆಗಿ ಸರ್ಕಾರಕ್ಕೆ ಬರುತ್ತದೆ. ಇದರಲ್ಲಿ ಬೇರೆ ಏನೂ ಇಲ್ಲ.

ಶ್ರೀ ವಿ.ಎಸ್. ಉಗ್ರಪ್ಪಃ- ಸರ್ಕಾರಿ ರಾಜ್ಯ ಪತ್ರ ಎಂದು ಹೇಳುತ್ತಾರೆ.

**Sri T.B. JAYACHANDRA:** No, Gazette ಅನ್ನು ಬಿಡುತ್ತೇವೆ.

**Sri V.S. UGRAPPA:** Gazette ಅನ್ನು ಏಕೆ ಬಿಡುತ್ತಾರೆ? ಸಾರ್ವಜನಿಕರಿಗೆ ಗೊತ್ತಾಗಬೇಕು.

ಶ್ರೀ ಟಿ.ಬಿ. ಜಯಚಂದ್ರಃ- ಅದೇನು ದೊಡ್ಡದಲ್ಲ, ಸಲಹೆ ಬಂದಿತ್ತು. ಸಲಹೆ ಪ್ರಕಾರ ಮಾಡಿದ್ದೇವೆ.

**Sri V.S. UGRAPPA:** Publishing in the Gazette is information to the public at large.

*(Interruptions)*

**Sri T.B. JAYACHANDRA:** It doesn't make much difference.

**Sri V.S. UGRAPPA:** As a matter of right, public will have right to know the things.

**Sri T.B. JAYACHANDRA:** No, it is placed before the House and it will go before the Committee on Public Accounts also.

**Sri V.S. UGRAPPA:** Why is the Government deviating from that? What is the reason for this amendment?

ಶ್ರೀ ಟಿ.ಬಿ. ಜಯಚಂದ್ರಃ- ಮಾನ್ಯ ಸಭಾಪತಿಯವರೇ, ಇದು Public Accounts Committee ಮುಂದೆ ಹೋಗುತ್ತದೆ. Gazette ಗೆ ಹೋಗುವುದನ್ನು avoid ಮಾಡಿ ಸರ್ಕಾರಕ್ಕೆ ಬರುತ್ತದೆ. ಸರ್ಕಾರದಿಂದ Public Accounts Committee ಗೆ ಹೋಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**Sri V.S. UGRAPPA:** Gazette ನಲ್ಲಿ ಬರುವುದರಿಂದ ತೊಂದರೆ ಏನು?

ಶ್ರೀ ಟಿ.ಬಿ. ಜಯಚಂದ್ರಃ- ಇದರಲ್ಲಿ ಮುಚ್ಚಿಡುವ ವಿಚಾರ ಏನೂ ಇಲ್ಲ. ಇದರಲ್ಲಿ ತೊಂದರೆ ಏನೂ ಇಲ್ಲ. ಅದನ್ನು ಮಾಡಿದರೂ ತೊಂದರೆ ಇಲ್ಲ, ಇದನ್ನು ಮಾಡಿದರೂ ತೊಂದರೆ ಇಲ್ಲ.

ಶ್ರೀ ವಿ.ಎಸ್. ಉಗ್ರಪ್ಪಃ- ಜನರಿಗೆ ಗೊತ್ತಾಗಬಾರದೇ?

ಶ್ರೀ ಟಿ.ಬಿ. ಜಯಚಂದ್ರಃ- ಇದು ಸುಲಭವಾದ ಟಜಾಖಜಾ ಎಂದು ಮಾಡಿದ್ದೇವೆ. Gazette ಗೆ ಹೋಗುವುದನ್ನು ಬಿಟ್ಟಿದ್ದೇವೆ.

ಸಭಾಪತಿಯವರು: ಪ್ರಸ್ತಾವ ಏನೆಂದರೆ;

" ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2018ರ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು "

***ಪ್ರಸ್ತಾವ ಅಂಗೀಕರಿಸಲ್ಪಟ್ಟಿತು***

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು

***ಖಂಡ 2***

ಸಭಾಪತಿಯವರು: " ಖಂಡ 2ನ್ನು ಈ ವಿಧೇಯಕದ ಅಂಗವಾಗಿರುತ್ತದೆ"

***ಪ್ರಸ್ತಾವ ಅಂಗೀಕರಿಸಲ್ಪಟ್ಟಿತು***

(ಖಂಡ 2ನ್ನು ವಿಧೇಯಕಕ್ಕೆ ಸೇರಿಸಲಾಯಿತು)

***ಖಂಡ 1 ಇತ್ಯಾದಿ***

ಸಭಾಪತಿಯವರು: ಪ್ರಸ್ತಾವ ಏನೆಂದರೆ;

" ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

***ಪ್ರಸ್ತಾವ ಅಂಗೀಕರಿಸಲ್ಪಟ್ಟಿತು***

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

***ಪ್ರಸ್ತಾವದ ಅಂಗೀಕಾರ***

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):- ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2018ರ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಸಭಾಪತಿಯವರು: ಪ್ರಸ್ತಾವ ಏನೆಂದರೆ;

ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2018ರ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

***<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು</u>***

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಅಲ್ಲಿ ನಾಲ್ಕು ವರ್ಷಗಳು ಕಳೆದಿದ್ದರೂ Vice-Chancellor ಇಲ್ಲ, Registrar ಇಲ್ಲ, ಏನೂ ಇಲ್ಲ. ಹುಬ್ಬಳ್ಳಿಯಲ್ಲಿ Law University ಇದೆ ಎಂದರೂ ಅದಕ್ಕೆ ಏನೇನೂ ವ್ಯವಸ್ಥೆಯೇ ಇಲ್ಲ. ಇದು ಹೇಗೆ ನಡೆದಿದೆ? ಬೆಂಗಳೂರು ಆದರೆ ಎಲ್ಲಾ ಅಧಿಕಾರಿಗಳು ಬರುತ್ತಾರೆ. Vice-Chancellor, Registrar, Registrar (Examination) ಸೇರಿದಂತೆ ಯಾರೂ ಇಲ್ಲ. ಅಲ್ಲಿ ಆ university ಹೇಗೆ ನಡೆಯಬೇಕು? North Karnataka ಎಂದುಕೊಂಡು ಯಾವುದನ್ನೂ ಮಾಡದಿದ್ದರೆ ಹೇಗೆ? ಇಂತಹ ಬಿಲ್ ತಂದಿದ್ದು, Vice-Chancellor ನೇಮಕಾತಿ ಇಲ್ಲ, Registrar ಇಲ್ಲ, ನಾಲ್ಕಾರು ವರ್ಷಗಳಿಂದ ಬರೀ in-charge ಮಾಡುವುದು ನಡೆಯುತ್ತಿದೆ. ಅಲ್ಲಿ ಹೇಳುವವರು ಕೇಳುವವರು ಇಲ್ಲ. Law University ಬೇಡ ಎಂದರೆ ಬೆಂಗಳೂರಿಗೆ ತಂದು ಬಿಡಲಿ. ಏಕೆ ಈ ರೀತಿ ಮಾಡುತ್ತಿದ್ದಾರೆ?

ಕ್ಯಾಪ್ಟನ್ ಗಣೇಶ್ ಕಾರ್ಣಿಕ್:- ಮಾನ್ಯ ಸಭಾಪತಿಯವರೇ, ನಾನು ಒಂದೂವರೆ ವರ್ಷ Academic Council Member ಆಗಿದ್ದು, ಒಂದು meeting ಅನ್ನು ಸಹ ಕರೆದಿಲ್ಲ.

**Sri BASAVARAJ SHIVALINGAPPA HORATTI:** Meeting ಇಲ್ಲ, ಏನೂ ಇಲ್ಲ, Law University ಹೇಗಿದೆ ಎಂದು ಹೇಳಲು ನನಗೆ ಬಹಳ ನೋವಾಗುತ್ತದೆ. ನಾವು ಯಾವುದೋ ಒಂದು ಕಾರಣದಿಂದ ಹುಬ್ಬಳ್ಳಿಗೆ ಮಾಡಿಸಿದ್ದೇವೆ. ಇವತ್ತು ಪರಿಸ್ಥಿತಿ ಏನಿದೆ ಎಂಬುದನ್ನು ಹೇಳಲಿ. ಅಲ್ಲಿ ನಡೆಯುವುದು ಬೇಡ ಎಂದರೆ ಬೆಂಗಳೂರಿಗೆ ತೆಗೆದುಕೊಂಡು ಬರಲಿ. ಉತ್ತರ ಕರ್ನಾಟಕದಲ್ಲಿ Law University ಬೇಡ ಎಂದರೆ ಬೆಂಗಳೂರಿಗೆ ತಂದುಕೊಳ್ಳಲಿ. ಜನರಿಗೆ ಅನುಕೂಲವಾಗಲಿ ಎಂದು ನಾವು ಮಾಡಿದರೆ ಈ ರೀತಿ ಮಾಡುತ್ತಾರೆ. ಇಲ್ಲಿನವರನ್ನು Vice-Chancellor ರನ್ನಾಗಿ ಮಾಡುತ್ತಾರೆ. ಅವರು ಒಂದು ದಿವಸ ಅಲ್ಲಿದ್ದು ಉಳಿದ ದಿನಗಳು ಬೆಂಗಳೂರಿನಲ್ಲಿ ಇರುತ್ತಾರೆ. ನಮ್ಮ ಕಡೆ ಇರುವ Vice-Chancellor ಸಿಗುವುದಿಲ್ಲವೇ? ಇಲ್ಲಿನವರನ್ನೇ ನೇಮಕ ಮಾಡಬೇಕೆಂಬ ಕಾಯ್ದೆ ಇದೆಯೇ? ಅಲ್ಲಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರುವವರನ್ನು ಮಾಡಲಿ. ದಯಮಾಡಿ Law University ಗೆ ನೇಮಕಾತಿ ಮಾಡಬೇಕು. ಇಲ್ಲದಿದ್ದರೆ close ಮಾಡಿಬಿಡಲಿ. ಇಡೀ ರಾಜ್ಯಕ್ಕೆ Law University ಇದ್ದು, ಅದನ್ನು ಸರಿಯಾಗಿ ನಡೆಸದಿದ್ದರೆ ಹೇಗೆ? ಮಾನ್ಯ ಜಯಚಂದ್ರ ರವರು ಎರಡು ಸಾರಿ ಕಾನೂನು ಮಂತ್ರಿಯಾಗಿ ಬಂದಿದ್ದಾರೆ. ಅವರು ಪ್ರಾಮಾಣಿಕವಾಗಿ ಹೇಳಲಿ. ಇದು ತಪ್ಪಾಗುತ್ತದೋ ಇಲ್ಲವೋ?

ಕ್ಯಾಪ್ಟನ್ ಗಣೇಶ್ ಕಾರ್ಣಿಕ್:- ಮಾನ್ಯ ಸಭಾಪತಿಯವರೇ, ಅದರ ಜೊತೆಗೆ ವಿದ್ಯಾರ್ಥಿಗಳು ಬಹಳ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಪರೀಕ್ಷೆಗಳು, ಮೌಲ್ಯಮಾಪನ ಸೇರಿದಂತೆ ಎಲ್ಲಾ ಸಂಗತಿಗಳ ಬಗ್ಗೆ ಹಿಂಡುಹಿಂಡಾಗಿ ದೂರನ್ನು ಕೊಡುತ್ತಾರೆ. University ಆದ ಮೇಲೆ ಅವರ ಸಮಸ್ಯೆಗಳು ಜಾಸ್ತಿಯಾಗಿವೆ. ಮಾನ್ಯ ಸದಸ್ಯರು ಉಲ್ಲೇಖ ಮಾಡಿದಂತೆ ಹುಬ್ಬಳ್ಳಿಯಲ್ಲಿ ಮಾಡಿರುವುದು ತುಂಬಾ ಜನರಿಗೆ ಸಮಾಧಾನ ಇಲ್ಲವೆಂದು ಕಾಣಿಸುತ್ತದೆ. ಆದರೆ ಅದು ಅಲ್ಲಿಯೇ continue ಆಗಲೇಬೇಕು.

ಇನ್ನು ಎರಡನೆಯದಾಗಿ, ಹಿಂದೆ ಬೇರೆ ಬೇರೆ university ಗಳಿಗೆ ಕಾಲೇಜುಗಳು ನಡೆಯುತ್ತಿದ್ದವು. ಈಗ Law University ಎಂದಾದ ಮೇಲೆ ವಿದ್ಯಾರ್ಥಿಗಳ ಸಮಸ್ಯೆ ಉಲ್ಬಣವಾಗಿದೆ. ದಯವಿಟ್ಟು ಇದನ್ನು serious ಆಗಿ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇವೆ.

ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಕಾನೂನು ವಿಶ್ವವಿದ್ಯಾಲಯ ಮಾತ್ರವಲ್ಲದೇ ಸಾರ್ವಜನಿಕ ವಿಶ್ವವಿದ್ಯಾಲಯಗಳೆಲ್ಲವೂ ಮುಳುಗುತ್ತಿರುವ ಹಡಗುಗಳಾಗಿವೆ. ಇದು ತಮಗೂ ಗೊತ್ತಿಲ್ಲ. ದಯವಿಟ್ಟು ಅವುಗಳನ್ನು ಮುಳುಗಿಸುವ ವ್ಯವಸ್ಥೆ ಕೈಬಿಟ್ಟು ಏನಾದರೂ ಬೆಳವಣಿಗೆ ಮಾಡಬೇಕು. ಅದನ್ನು ಬಿಟ್ಟು ಏನು ಕೆಲಸ ಇದೆ.

ಸಭಾಪತಿಯವರು:- ಮುಳುಗಿಸುವುದು. (ನಗುತ್ತಾ)

ಶ್ರೀ ಪುಟ್ಟಣ್ಣ:- ಮಾನ್ಯ ಸಭಾಪತಿಯವರೇ, ತಮಗೆ ಗೊತ್ತಿದೆ, ಅಲ್ಲಿ ಒಬ್ಬರೂ Vice-Chancellor ಇರುವುದಿಲ್ಲ, exam ಗಳು ನಡೆಯುತ್ತಿಲ್ಲ. ಏನೆಂದರೆ ಏನೂ ಇರುವುದಿಲ್ಲ.

ಸಭಾಪತಿಯವರು:- ಮಾನ್ಯ ಸದಸ್ಯರು ಮುಳುಗಿಸುವುದು ಎಂದಿದ್ದಕ್ಕೆ ನಗು ಬಂತು. ಏಕೆಂದರೆ ಇನ್ನೂ 2 ತಿಂಗಳು ಇದೆ. ಹೊಸ ಸರ್ಕಾರ ಬರುತ್ತದೆ. ಯಾರು ಬರುತ್ತಾರೋ, ಗೊತ್ತಿಲ್ಲ. ಆಗ ತಾವು ಇರುತ್ತೀರಿ, ಸ್ವಲ್ಪ ಗಲಾಟೆ ಮಾಡಿ. ನೋಡೋಣ, ಮುಳುಗಿರುವವರನ್ನು ಕೂದಲು ಹಿಡಿದು ಮೇಲಕ್ಕೆ ಎತ್ತೋಣ.

ಶ್ರೀ ಪುಟ್ಟಣ್ಣ:- ಮಾನ್ಯ ಬಸವರಾಜ ಹೊರಟ್ಟಿಯವರು ಬಹಳ important ವಿಷಯವನ್ನು ಹೇಳಿದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರುಃ- ಮಾನ್ಯ ಹೊರಟ್ಟಿಯವರು ಕೋಪದಲ್ಲಿ ಒಂದು ಮಾತನ್ನು ಹೇಳಿದರು. ಅದನ್ನು ಸರ್ಕಾರ ಒಪ್ಪಿಕೊಂಡರೆ ಕಷ್ಟ. ವಿಶ್ವವಿದ್ಯಾಲಯವನ್ನು ಬೆಂಗಳೂರಿಗೆ ಹಾಕಿಬಿಡಿ ಎಂದು ಹೇಳಿದರು. ದಯವಿಟ್ಟು ಬೇಡ. ಅದು ಹುಬ್ಬಳ್ಳಿಯಲ್ಲಿಯೇ ಇರಲಿ. ಅದು ಅಲ್ಲಿಯೇ ಚೆಂದ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಃ- ಮಾನ್ಯ ಸಭಾಪತಿಯವರೇ, ಎಲ್ಲಾ university ಗಳ ಹಣೆಬರಹ ಇಷ್ಟೇ ಆಗಿದೆ. ನಮ್ಮ ಕಡೆ V.T.U. (Visvesvaraya Technological University) ಸಹ ಇದೇ ತರಹ ಇದೆ. ಅಲ್ಲಿ ಏನೆಲ್ಲಾ ನಡೆಯುತ್ತಿದ್ದರೂ ಕೇಳುವುದಿಲ್ಲ. ರೂ.400-500 ಕೋಟಿ ಹಣ income tax ಹೋಯಿತು. ಒಬ್ಬ ಅಧಿಕಾರಿ ಇಲ್ಲ. Vice-Chancellor, Registrar ಹಿಡಿದುಕೊಂಡು ಯಾರೊಬ್ಬರೂ ಇಲ್ಲ.

ಸಭಾಪತಿಯವರುಃ- ಅದು ಇಲ್ಲ ಸರಿ. ಆದರೆ ನೀವು ಕೋಪದ ಭರದಲ್ಲಿ ಬೆಂಗಳೂರಿಗೆ ಹಾಕಿ ಎಂದು ಹೇಳಬೇಡಿ. ನಂತರ ಸರ್ಕಾರ ನಿಮ್ಮ ಹೆಸರು ಹೇಳಿ ವಿಶ್ವವಿದ್ಯಾಲಯವನ್ನು ಬೆಂಗಳೂರಿಗೆ ತಂದರೆ ಗತಿ ಏನು?

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಃ- ತೆಗೆದುಕೊಂಡು ಬರಲಿ.

ಸಭಾಪತಿಯವರುಃ- ಬೇಡ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಃ- ಮಾನ್ಯ ಸಭಾಪತಿಯವರೇ, ನಮ್ಮ ನೋವು ಏನೆಂದರೆ, ಇಲ್ಲಿನವರು ಎಲ್ಲರೂ ಇರುತ್ತಾರೆ. ಅಲ್ಲಿ ಒಬ್ಬರೂ ಇರುವುದಿಲ್ಲ. ಅಧಿಕಾರಿಗಳು ಹೇಳಿದಂತೆ ಸರ್ಕಾರ ನಡೆಯಬೇಕು. ಮಂತ್ರಿಗಳು ಹೇಳಿದಂತೆ ನಡೆಯುವುದಿಲ್ಲ. Registrar ನೇಮಿಸಲು ಏನು ತೊಂದರೆ ಇದೆ? ನಾನು ನೋವು ಮತ್ತು ಬೇಸರದಿಂದ ಹೇಳುತ್ತಿದ್ದೇನೆ.

ಸಭಾಪತಿಯವರುಃ- ನಿಮ್ಮ ಹೆಸರು ಉಲ್ಲೇಖ ಮಾಡಿ ಬೆಂಗಳೂರಿಗೆ ತರುತ್ತಾರೆ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಃ- ಉತ್ತರ ಕರ್ನಾಟಕದ ಪರಿಸ್ಥಿತಿ ಏನೇನಾಗಿದೆ ಎಂದು ನಾನು ಬಜೆಟ್ ಮೇಲೆ ಇವೆಲ್ಲವನ್ನೂ ಮಾತನಾಡಬೇಕೆಂದು ಇದ್ದೆನು. ಅದನ್ನು ಹೇಳುವುದಕ್ಕೆ ಆಗಿಲ್ಲ. ದಯಮಾಡಿ ಏನಾದರೂ ಒಂದು ತೀರ್ಮಾನ ಮಾಡಬೇಕು.

251/23.02.2018/12.30/ಹೆಚ್‌ವಿಃಎಕೆ

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ)ಃ-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರು ಕಾನೂನು ಪದವೀಧರರಾಗಿದ್ದಾರೆ. ಇತ್ತೀಚಿನ ಕಾನೂನು ಶಿಕ್ಷಣದ ಗುಣಮಟ್ಟ ಯಾವ ರೀತಿಯಿದೆ ಎನ್ನುವುದು ಮಾನ್ಯ ಸಚಿವರಿಗೂ ಗೊತ್ತಿದೆ. ವಕೀಲರು ಎಲ್ಲ ರಂಗಗಳಲ್ಲಿ ಯಾವ ರೀತಿ ವಿಫಲರಾಗುತ್ತಿದ್ದಾರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನ್ನುವುದರ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗುತ್ತಿವೆ. ಹುಬ್ಬಳ್ಳಿನಲ್ಲಿ ಕಾನೂನು ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡಿದ ಮೇಲೆ ಇಡೀ ರಾಜ್ಯದಲ್ಲಿ ಮತ್ತು ಬೆಂಗಳೂರಿನಲ್ಲಿ ಎಷ್ಟು ಸರ್ಕಾರಿ ಕಾನೂನು ಕಾಲೇಜುಗಳನ್ನು ತೆರೆಯಲಾಗಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಸರ್ಕಾರದ ವತಿಯಿಂದ ಉತ್ತಮ ಗುಣಮಟ್ಟದ ಕಾನೂನು ಕಾಲೇಜುಗಳನ್ನು ತೆರೆಯಬೇಕಾಗುತ್ತದೆ. ಇಲ್ಲಿಯವರೆಗೆ ಬೆಂಗಳೂರು ನಗರದಲ್ಲಿ ಒಂದೇ ಒಂದು ಸರ್ಕಾರಿ ಕಾನೂನು ಕಾಲೇಜನ್ನು ತೆರೆದಿಲ್ಲ. ಕಾನೂನು ವಿಷಯವನ್ನು ಅಧ್ಯಯನ ಮಾಡಬಯಸುವ ಮಕ್ಕಳು ಖಾಸಗಿ ಕಾನೂನು ಕಾಲೇಜುಗಳಿಗೆ ಹೋಗಬೇಕಾಗಿದೆ. ಸರ್ಕಾರ ಎಲ್ಲ ಜವಾಬ್ದಾರಿಗಳಿಂದ ನುಣುಚಿಕೊಂಡು ಖಾಸಗಿಯವರಿಗೆ ಅವಕಾಶಗಳನ್ನು ನೀಡುತ್ತಿದೆ. ಖಾಸಗಿಯವರು ಕಾನೂನು ಕಾಲೇಜುಗಳನ್ನು ಪ್ರಾರಂಭ ಮಾಡಿ, ಒಂದೂವರೆ ಲಕ್ಷ ರೂಪಾಯಿಗಳಿಂದ ಎರಡು ಲಕ್ಷ ರೂಪಾಯಿಗಳಷ್ಟು ದುಬಾರಿ ಶುಲ್ಕವನ್ನು ವಸೂಲಿ ಮಾಡುತ್ತಿದ್ದಾರೆ. ಬಡ ಮಕ್ಕಳು ಕಾನೂನು ವಿಷಯವನ್ನು ಓದಿ, ವಕೀಲರಾಗುವುದು ಬೇಡವೇ? ದುಬಾರಿ ಶುಲ್ಕವನ್ನು ಕೊಟ್ಟು ಅವರು ಕಾನೂನು ವಿಷಯವನ್ನು ಓದುವುದಕ್ಕೆ ಸಾಧ್ಯವಿದೆಯೇ? ಮೂರು ವರ್ಷಗಳ ಕಾನೂನು ಕೋರ್ಸ್ ನಡೆಸುತ್ತಿದ್ದ ಕಾಲೇಜುಗಳನ್ನು ಸರ್ಕಾರ ಮುಚ್ಚಿದೆ. ಇದರಿಂದಾಗಿ ಈಗ ಸರ್ಕಾರಿ ಕಾನೂನು ಕಾಲೇಜುಗಳು ಎಲ್ಲಿಯೂ ಇಲ್ಲ. ಸರ್ಕಾರ ಏಕೆ ಇದರ ಬಗ್ಗೆ ಗಮನಹರಿಸುತ್ತಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಸರ್ಕಾರ ಸಾಕಷ್ಟು ಸಂಖ್ಯೆಯಲ್ಲಿ ಪದವಿ ಕಾಲೇಜುಗಳನ್ನು ಪ್ರಾರಂಭ ಮಾಡುತ್ತಿದೆ. ಇದರಿಂದಾಗಿ ಪದವಿ ಪಡೆದ ವಿದ್ಯಾರ್ಥಿಗಳು ನಿರುದ್ಯೋಗಿಗಳಾಗುತ್ತಿದ್ದಾರೆ. ಇದರ ಬದಲಿಗೆ ಸರ್ಕಾರ ಕಾನೂನು ಕಾಲೇಜನ್ನು ಪ್ರಾರಂಭ ಮಾಡಿದರೆ, ಕಾನೂನು ಪದವೀಧರಾಗಿ ಪ್ರಾಕ್ಟೀಸ್ ಮಾಡುತ್ತಾರೆ. ಪ್ರತಿ ಜಿಲ್ಲೆಗೊಂದರಂತೆ ಸರ್ಕಾರಿ ಕಾನೂನು ಕಾಲೇಜನ್ನು ಪ್ರಾರಂಭ ಮಾಡಿ, ಉತ್ತಮ ಗುಣಮಟ್ಟವನ್ನು ಕಾಪಾಡಿಕೊಳ್ಳುವುದರ ಜೊತೆಗೆ ನುರಿತ ಶಿಕ್ಷಕರನ್ನು ನೇಮಕ ಮಾಡಿದರೆ, ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಕಾನೂನು ವಿಷಯವನ್ನು ಅಭ್ಯಾಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಯಾವುದೇ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದರೂ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡುವುದು ಚಾಳಿಯಾಗಿದೆ. ಯಾವ ವಿಶ್ವವಿದ್ಯಾನಿಲಯಗಳಿಗೂ ಕುಲಪತಿಗಳನ್ನು ರಿಜಿಸ್ಟ್ರಾರ್‌ಗಳನ್ನು ಮತ್ತಿತ್ತರ ಸಿಬ್ಬಂದಿಗಳನ್ನು ನೇಮಕ ಮಾಡುತ್ತಿಲ್ಲ. ಇಲ್ಲಿಯವರೆಗೆ ಸುಮಾರು ಶೇಕಡಾ 70ರಷ್ಟು ಹುದ್ದೆಗಳು ಖಾಲಿ ಬಿದ್ದಿವೆ. ಖಾಸಗಿ ವಿಶ್ವವಿದ್ಯಾನಿಲಯಗಳಿಗೆ ಸರ್ಕಾರಿ ವಿಶ್ವವಿದ್ಯಾನಿಲಯಗಳು ಸ್ಪರ್ಧೆಯನ್ನೊಡ್ಡಬೇಕಾದರೆ, ಸರ್ಕಾರಿ ಕಾನೂನು ಕಾಲೇಜುಗಳ ಗುಣಮಟ್ಟವನ್ನು ಹೆಚ್ಚಿಸಿ ನುರಿತ ಅಧ್ಯಾಪಕರನ್ನು ಭರ್ತಿ ಮಾಡಿ, ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕಾಗುತ್ತದೆ.

**ಶ್ರೀ ಪ್ರದೀಪ್ ಶೆಟ್ಟರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಹುಬ್ಬಳ್ಳಿಯಲ್ಲಿ ಸರ್ಕಾರ ಕಾನೂನು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಿದೆ. ಅದಕ್ಕೆ ಹೊಸ ಕಟ್ಟಡವನ್ನು ನಿರ್ಮಾಣ ಮಾಡಿ ಒಂದು ವರ್ಷಗಳು ಕಳೆದಿದೆ. ಅದನ್ನು ಉದ್ಘಾಟನೆ ಮಾಡಲಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಯಾವುದಾದರೊಂದು ಕಾರ್ಯಕ್ರಮದಲ್ಲಿ ನನಗೆ ಸಿಗುವಂತಹ ಕಾನೂನು ವಿಶ್ವವಿದ್ಯಾನಿಲಯದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಿಜಿಸ್ಟ್ರಾರ್‌ರವರು, 'ಸರ್ಕಾರದಿಂದ ಒಂದು ದಿನಾಂಕವನ್ನು ನಿಗದಿ ಮಾಡಿ ಹೊಸ ಕಟ್ಟಡವನ್ನು ಉದ್ಘಾಟನೆ ಮಾಡಲಾಗುತ್ತದೆ' ಎನ್ನುವ ಮಾತುಗಳನ್ನು ಹೇಳುತ್ತಿರುತ್ತಾರೆ. ಅಲ್ಲಿನ Academic Council Member ಎಂದು ನನಗೆ ಪತ್ರವನ್ನು ಕಳುಹಿಸಿಕೊಟ್ಟು ಒಂದೂವರೆ ವರ್ಷಗಳಾಗಿವೆ. ಇಲ್ಲಿಯವರೆಗೆ ಯಾರೂ ಒಂದು ಮೀಟಿಂಗ್‌ಗೂ ನನ್ನನ್ನು ಕರೆದಿಲ್ಲ. ಮಾನ್ಯ ಕಾನೂನು ಸಚಿವರು ಈ ವಿಚಾರವನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗಿದೆ. ಉತ್ತರ ಕರ್ನಾಟಕ ಭಾಗಗಕ್ಕೆ ಕಾನೂನು ವಿಶ್ವವಿದ್ಯಾನಿಲಯದ ಅವಶ್ಯಕತೆ ಬಹಳವಿದೆ. ಜೆ.ಎಸ್.ಎಸ್. ಕಾನೂನು ಪದವಿ ಕಾಲೇಜನ್ನು ಬಿಟ್ಟರೆ ಬೇರೆ ಕಾನೂನು ಕಾಲೇಜು ಇಲ್ಲ. ಹುಬ್ಬಳ್ಳಿಯಲ್ಲಿರುವ ಕಾನೂನು ವಿಶ್ವವಿದ್ಯಾನಿಲಯಕ್ಕೆ ಬಹಳ ಉತ್ತಮವಾಗಿರುವ ಕಟ್ಟಡವನ್ನು ನೀಡಲಾಗಿದೆ. ಮೊದಲು ಇದು I.B. (Inspection Bungalow) ಆಗಿತ್ತು. ಎಂ.ಎಲ್.ಸಿ. ಗಳಿಗೆ ಅಲ್ಲಿ ಏನೂ ಮಹತ್ವವೇ ಇಲ್ಲ. ನಮ್ಮ ಊರಿನಿಂದ ಕೇವಲ 20 ಕಿಲೋ ಮೀಟರ್‌ಗಳಷ್ಟು ದೂರವಿದ್ದರೂ ನಮ್ಮನ್ನು ಯಾವುದೇ ಮೀಟಿಂಗ್‌ಗಳಿಗೆ ಕರೆದಿಲ್ಲ. ಕಾನೂನು ವಿಶ್ವವಿದ್ಯಾನಿಲಯವೆಂದರೆ ಏನು ಎನ್ನುವುದು ನಮಗೆ ಗೊತ್ತೇ ಇಲ್ಲ. ಇದು ಬಹಳ ಖೇದದ ವಿಚಾರವಾಗಿದೆ. ಮಾನ್ಯ ಪುಟ್ಟಣ್ಣನವರು ಹೇಳಿದಂತೆ ಕಾನೂನು ಕಲಿಯಬೇಕೆಂಬ ಆಸಕ್ತಿ ಇರುವ ಮಕ್ಕಳಿಗೆ ಅಧ್ಯಯನ ಮಾಡುವುದಕ್ಕೊಂದು ಒಳ್ಳೆಯ ಕಾನೂನು ವಿಶ್ವವಿದ್ಯಾನಿಲಯವಿಲ್ಲ, ಇದ್ದರೂ ಅದನ್ನು ಸರಿಯಾಗಿ ನಿರ್ವಹಣೆ ಮಾಡಿಕೊಂಡು ಹೋಗುತ್ತಿಲ್ಲ.

**ಶ್ರೀ ಶರಣಪ್ಪ ಮಟ್ಟೂರ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ನಾನು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳದೇ ಬಹಳ ಗಂಭೀರವಾಗಿರುವ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತಿದ್ದೇನೆ. ಕಾನೂನು ವಿಶ್ವವಿದ್ಯಾನಿಲಯದಲ್ಲಿರುವ ತೊಂದರೆಗಳ ಬಗ್ಗೆ ಮಾನ್ಯ ಬಸವರಾಜ ಹೊರಟ್ಟಿಯವರು, ಶ್ರೀಯುತ ಪ್ರದೀಪ್ ಶೆಟ್ಟರ್‌ರವರ ಮತ್ತು ಶ್ರೀ ಪುಟ್ಟಣ್ಣನವರು ಬಹಳ ಚೆನ್ನಾಗಿ ವಿವರಿಸಿದ್ದಾರೆ. ಸರ್ಕಾರ ಜಿಲ್ಲೆಗೊಂದರಂತೆ ಹೊಸ ಸರ್ಕಾರಿ ಕಾನೂನು ಕಾಲೇಜನ್ನು ತೆರೆಯುವುದು ಬಹಳ ಮುಖ್ಯವಾಗಿರುವ ವಿಚಾರವಾಗಿದೆ. ಅದಕ್ಕಿಂತಲೂ ಮುಖ್ಯವಾಗಿರುವ ವಿಚಾರವೊಂದನ್ನು ನಾನು ಮಾನ್ಯ ಕಾನೂನು ಸಚಿವರ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಸರ್ಕಾರವೂ ಹೊಸ ಕಾನೂನು ಕಾಲೇಜುಗಳನ್ನು ತೆರೆಯುವುದಕ್ಕೆ ತಯಾರಿಲ್ಲ, ಈಗ ಇರುವಂತಹ ಖಾಸಗಿ ಕಾಲೇಜುಗಳಿಗೆ ಅನುದಾನವನ್ನು ಕೊಡುವುದಕ್ಕೂ ತಯಾರಿಲ್ಲ. ಈ ರೀತಿಯಾದರೆ, ಬಡ ಮಕ್ಕಳು ಕಾನೂನು ಶಿಕ್ಷಣವನ್ನು ಪಡೆದುಕೊಳ್ಳುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಜೈನ್ ವಿಶ್ವವಿದ್ಯಾನಿಲಯದಲ್ಲಿ ಸುಮಾರು ಒಂದೂವರೆಯಿಂದ ಎರಡೂವರೆ ಲಕ್ಷ ರೂಪಾಯಿಗಳವರೆಗೆ ಶುಲ್ಕವನ್ನು ಕಟ್ಟಬೇಕಾಗಿದೆ. ಇಷ್ಟು ದುಬಾರಿ ಶುಲ್ಕವನ್ನು ಪಾವತಿ ಮಾಡಿ ಬಡ ಮಕ್ಕಳು ಆ ಕಾಲೇಜಿನಲ್ಲಿ ಓದುವುದಕ್ಕೆ ಸಾಧ್ಯವಿದೆಯೇ? ಬೀದರ್, ಗುಲ್ಬರ್ಗಾ, ಬಳ್ಳಾರಿ, ರಾಯಚೂರು, ಬೆಂಗಳೂರು, ಚಿತ್ರದುರ್ಗ ಮತ್ತು ದಾವರಣಗೆರೆ ಜಿಲ್ಲೆಗಳಲ್ಲಿ ಇರುವಂತಹ ಖಾಸಗಿ ಕಾನೂನು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ಬಗೆಗಿನ ಕಡತವು ಕಳೆದ 20-25 ವರ್ಷಗಳಿಂದ ಸರ್ಕಾರದ ಮುಂದೆ ಪೆಂಡಿಂಗ್ ಇದೆ. ಆ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಿದರೆ ಉತ್ತಮ ಶಿಕ್ಷಣವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ವಿ.ಎಸ್.ಉಗ್ರಪ್ಪ(ನಾಮ ನಿರ್ದೇಶಿತರು):- ಸನ್ಮಾನ್ಯ ಸಭಾಪತಿಯವರೇ, ಧಾರವಾಡ ಜಿಲ್ಲೆಯಲ್ಲಿ ಹೈಕೋರ್ಟ್‌ನ ವಿಭಾಗೀಯ ಪೀಠವಿದೆ. ಮೊಕದ್ದಮೆಗಳ ಸಂಖ್ಯೆ ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಒಳ್ಳೆಯ ಗುಣಮಟ್ಟದ ವಕೀಲರನ್ನು ನಮ್ಮ ಕಾನೂನು ವಿಶ್ವವಿದ್ಯಾನಿಲಯ ಮತ್ತು ಕಾನೂನು ಕಾಲೇಜುಗಳು ಕೊಡದೇ ಹೋದರೆ, ವ್ಯವಸ್ಥೆಯನ್ನು ಹೇಗೆ ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇರುವ ಕಾರ್ಯಕಾರಿ ಹುದ್ದೆಗಳನ್ನು ತುಂಬದೇ ಇರುವುದು ಸಮಂಜಸವಾದ ವಿಚಾರವಲ್ಲ. ಆದ್ದರಿಂದ ಸರ್ಕಾರ ಈ ಬಗ್ಗೆ ಕೂಡಲೇ ಕ್ರಮ ಜರುಗಿಸುವುದರ ಜೊತೆಗೆ ಎಲ್ಲ ಜಿಲ್ಲೆಗಳಲ್ಲಿ ಉತ್ತಮವಾದ ಕಾನೂನು ಶಿಕ್ಷಣವನ್ನು ನೀಡುವಂತಹ ಪ್ರಯತ್ನವನ್ನು ಸರ್ಕಾರ ಮಾಡಬೇಕೆಂದು ಒತ್ತಾಯಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಕಾನೂನು ಸಚಿವರೇ, ಹುಬ್ಬಳ್ಳಿಯಲ್ಲಿ ಕಾನೂನು ವಿಶ್ವವಿದ್ಯಾನಿಲಯದ ಬಗ್ಗೆ ಮಾತ್ರ ಸ್ಪಷ್ಟೀಕರಣವನ್ನು ನೀಡಿ.

**ಶ್ರೀ ಟಿ.ಬಿ.ಜಯಚಂದ್ರ(ಕಾನೂನು,ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರುಗಳೆಲ್ಲ ಕಾನೂನು ವಿಶ್ವವಿದ್ಯಾನಿಲಯದ ಬಗ್ಗೆ ಮಾತನಾಡಿದ್ದಾರೆ. ಈ ವಿಶ್ವವಿದ್ಯಾನಿಲಯದ ಕುಲಪತಿಗಳ ಹುದ್ದೆ ಖಾಲಿಯಾಗಿ ಸುಮಾರು ಎರಡು ವರ್ಷಗಳಾಗಿವೆ. Search Committee ರಚನೆಯಾಗಬೇಕಾದರೆ, ಸರ್ಕಾರ, ಘನತೆವೆತ್ತ ರಾಜ್ಯಪಾಲರಿಂದ ಮತ್ತು ಸಿಂಡಿಕೇಟ್‌ನಿಂದ ನಾಮ ನಿರ್ದೇಶಿತರಾದವರು ಇರಬೇಕಾಗುತ್ತದೆ. Search Committee ರಚನೆಯಾಗಿ ಮೊದಲನೆಯ ಬಾರಿ ಉಪ ಕುಲಪತಿಗಳ ಪಟ್ಟಿಯನ್ನು ಘನತೆವೆತ್ತ ರಾಜ್ಯಪಾಲರಿಗೆ ಕಳುಹಿಸಿಕೊಟ್ಟಾಗ ಮಾನ್ಯ ರಾಜ್ಯಪಾಲರು ಯಾರ ಹೆಸರಿಗೂ ಒಪ್ಪಿಗೆಯನ್ನು ನೀಡಿರಲಿಲ್ಲ. ನಂತರ ಎರಡನೆಯ ಬಾರಿ Search Committee ಯಾಗಿ, ಪುನಃ ಉಪ ಕುಲಪತಿಗಳ ಹೆಸರನ್ನು ಶಿಫಾರಸ್ಸು ಮಾಡಿದಾಗ, ಪುನಃ ಘನತೆವೆತ್ತ ರಾಜ್ಯಪಾಲರು, 'ನ್ಯೂನ್ಯತೆ ಇದೆ ಸರಿಪಡಿಸಿ ಕಳುಹಿಸಿಕೊಡಿ' ಎಂದು ಕಡತವನ್ನು ರಾಜ್ಯ ಸರ್ಕಾರಕ್ಕೆ ವಾಪಸ್ಸು ಕಳುಹಿಸಿದರು. ಇದು Search Committee ಮತ್ತು ಘನತೆವೆತ್ತ ರಾಜ್ಯಪಾಲರ ಮಧ್ಯೆ ಇರುವಂತಹ ವಿಚಾರವಾಗಿದೆ. ಈಗ ಅವರು ಸೂಚಿಸಿರುವ ನ್ಯೂನ್ಯತೆಗಳನ್ನು ಸರಿಪಡಿಸಿ ಕಳುಹಿಸಿಕೊಡಲಾಗಿದೆ. ಘನತೆವೆತ್ತ ರಾಜ್ಯಪಾಲರನ್ನು ನಾನು ಭೇಟಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದೇನೆ. ಬಹುಶಃ ಮುಂದಿನ 15 ದಿನಗಳೊಳಗಾಗಿ ಉಪ ಕುಲಪತಿಗಳನ್ನು ನೇಮಕ ಮಾಡಲಾಗುತ್ತದೆ ಎನ್ನುವ ವಿಶ್ವಾಸ ನಮಗಿದೆ.

ಸನ್ಮಾನ್ಯ ಸಭಾಪತಿಯವರೇ, ಕಾನೂನು ಶಿಕ್ಷಣದಲ್ಲಿ ಪರಿಪೂರ್ಣತೆ ತರುವ ಮೂಲಕ ವಿದ್ಯಾರ್ಥಿಗಳಿಗೆ ಅನುಕೂಲವಾಗಬೇಕೆನ್ನುವ ದೃಷ್ಟಿಯಿಂದ ಕಳೆದ ವರ್ಷ ಸುಮಾರು 19 ಕಾಲೇಜುಗಳನ್ನು ಅನುದಾನಕ್ಕೊಳಪಡಿಸುವ ಕೆಲಸವನ್ನು ಮಾಡಿದ್ದೇವೆ. ಅದಕ್ಕಿಂತಲೂ ಮೊದಲು ಯಾರೂ ಕಾನೂನು ಕಾಲೇಜುಗಳನ್ನು ತೆರೆಯಲು ಮುಂದೆ ಬರುತ್ತಿರಲಿಲ್ಲ. ಈ 19 ಕಾಲೇಜುಗಳನ್ನು ಅನುದಾನಕ್ಕೊಳಪಡಿಸಿದ ಮೇಲೆ ಈ ನಿಟ್ಟಿನಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸುತ್ತಿದ್ದಾರೆ. ಮಾನ್ಯ ಸದಸ್ಯರುಗಳು ಹೇಳಿದಂತೆ ಖಾಸಗಿ ವಿಶ್ವವಿದ್ಯಾನಿಲಯಗಳು ಕಾನೂನು ಶಿಕ್ಷಣವನ್ನು ನೀಡುತ್ತಿದ್ದೇವೆ. ಅವುಗಳು ದುಬಾರಿ ಶುಲ್ಕವನ್ನು ವಸೂಲಿ ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಪ್ರತಿ ಜಿಲ್ಲೆಯಲ್ಲಿಯೂ ಸರ್ಕಾರಿ ಕಾನೂನು ಕಾಲೇಜುಗಳಿರಬೇಕೆನ್ನುವುದು ಸರ್ಕಾರದ ಉದ್ದೇಶವಾಗಿದೆ. ಆದ್ದರಿಂದ ಈ ಸಾಲಿನಲ್ಲಿ ಚಾಮರಾಜನಗರದಲ್ಲಿ ಒಂದು ಸರ್ಕಾರಿ ಕಾನೂನು ಕಾಲೇಜನ್ನು ಪ್ರಾರಂಭ ಮಾಡಬೇಕೆನ್ನುವ ತೀರ್ಮಾನವನ್ನು ಮಾಡಿದ್ದೇವೆ. ಅದೇ ರೀತಿಯಲ್ಲಿ ಬೇರೆ ಜಿಲ್ಲೆಗಳಲ್ಲಿಯೂ ಸಹ ಸರ್ಕಾರಿ ಕಾನೂನು ಕಾಲೇಜುಗಳನ್ನು ಸ್ಥಾಪನೆ ಮಾಡುವುದರ ಜೊತೆಗೆ ಕಾನೂನು ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕ ನಿರ್ದೇಶನಾಲಯವನ್ನು ಸ್ಥಾಪನೆ ಮಾಡಬೇಕೆನ್ನುವ ಉದ್ದೇಶವನ್ನು ಸಹ ಹೊಂದಿದ್ದೇವೆ. ಈಗ ಕಾನೂನು ಶಿಕ್ಷಣ ಮತ್ತು ಉನ್ನತ ಶಿಕ್ಷಣ ಒಂದೇ ನಿರ್ದೇಶನಾಲಯದಡಿಯಲ್ಲಿ ಬರುತ್ತಿರುವುದರಿಂದ ತೊಂದರೆಯಾಗುತ್ತಿದೆ. ಆ ಹಿನ್ನೆಲೆಯಲ್ಲಿ ಪ್ರತ್ಯೇಕ ನಿರ್ದೇಶನಾಲಯವನ್ನು ಸ್ಥಾಪನೆ ಮಾಡಬೇಕೆನ್ನುವ ಪ್ರಸ್ತಾವನೆ ಕೂಡ ಸರ್ಕಾರದ ಮುಂದಿದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪ್ರದೀಪ್ ಶೆಟ್ಟರ್‌ರವರು ಮಾತನಾಡುತ್ತಾ, ಹುಬ್ಬಳ್ಳಿಯಲ್ಲಿ ಕಾನೂನು ವಿಶ್ವವಿದ್ಯಾನಿಲಯಕ್ಕೆ ಒಳ್ಳೆಯ ಕಟ್ಟಡವನ್ನು ಕಟ್ಟಲಾಗಿದೆ ಆದರೆ, ಅದರ ಉದ್ಘಾಟನೆಯಾಗಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಇಡೀ ದೇಶದಲ್ಲಿಯೇ ಅಷ್ಟು ಒಳ್ಳೆಯ ಕಟ್ಟಡವನ್ನು ಎಲ್ಲಿಯೂ ನೋಡುವುದಕ್ಕೆ ಸಾಧ್ಯವಾಗುವುದಿಲ್ಲ ಅಂತಹ ಕಟ್ಟಡವನ್ನು ಅಲ್ಲಿ ನಿರ್ಮಾಣ ಮಾಡಲಾಗಿದೆ. ಗೆಸ್ಟ್‌ಹೌಸ್ ಮುಂತಾದ ಎಲ್ಲ ಮೂಲಭೂತ ಸೌಲಭ್ಯಗಳನ್ನು ಸಹ ನೀಡಲಾಗಿದೆ. ಮುಂದಿನ 10-15 ದಿನಗಳೊಳಗೆ ಅಂದರೆ, ಚುನಾವಣಾ ಸಂಹಿತೆ ಬರುವುದರೊಳಗಾಗಿ ಅದನ್ನು ಉದ್ಘಾಟನೆ ಮಾಡಲಾಗುತ್ತದೆ.

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, law practice ಮಾಡುವವರಿಗೆ ಕಾನೂನು ವಿಶ್ವವಿದ್ಯಾನಿಲಯದ ಅವಶ್ಯಕತೆ ಇದೆ. ಎಲ್ಲರಿಗೂ ಕಾನೂನಿನ ತಿಳುವಳಿಕೆಯ ಅವಶ್ಯಕತೆ ಇದೆ. ಪದವಿ ಕಾಲೇಜುಗಳಲ್ಲಿ ಕಾನೂನನ್ನು ಬೋಧನಾ ವಿಷಯವನ್ನಾಗಿ ಅಳವಡಿಸುವುದಕ್ಕೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಾಧ್ಯವಾಗುತ್ತದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಏಕೆಂದರೆ, ಕಾನೂನು ಗೊತ್ತಿಲ್ಲವೆಂದು ಹೇಳಿದರೆ, it's not an excuse. ಬಿ.ಎ., ಬಿ.ಎಸ್ಸಿ., ಬಿ.ಕಾಂ., ಇಂಜಿನಿಯರಿಂಗ್ ಮುಂತಾದ ಕಾಲೇಜುಗಳಲ್ಲಿ ಕಾನೂನು ವಿಷಯವನ್ನು ಭೋದನಾ ವಿಷಯವನ್ನಾಗಿ ಅಳವಡಿಸಿದರೆ ಉತ್ತಮ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

252/23.2.2018/ಪಿಕೆ/ಆರ್‌ಎನ್/12.40

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ರಾಮಚಂದ್ರಗೌಡರವರ ಸಲಹೆ ಉತ್ತಮವಾಗಿದೆ. ಕಾನೂನಿನ ಅರಿವು ಎಲ್ಲರಿಗೂ ಇರಬೇಕಾಗುತ್ತದೆ. ಯಾವುದೇ ಕೋರ್ಸ್ ಇರಲಿ ಅದರಲ್ಲಿ ಕಾನೂನಿನ ವಿಷಯ ಇರಬೇಕಾಗುತ್ತದೆ. ಮೆಡಿಕಲ್ ಓದುತ್ತಿರಲಿ, ಇಂಜಿನಿಯರಿಂಗ್ ಓದುತ್ತಿರಲಿ ಅಥವಾ ಇನ್ಯಾವುದೇ ಕೋರ್ಸ್ ಓದುತಿದ್ದರೂ ಕೂಡ ethics ಇರಬೇಕು ಎನ್ನುವುದಾದರೆ Legal Education ನ ಅವಶ್ಯಕತೆಯೂ ಇರುತ್ತದೆ. ಮಾನ್ಯ ಸದಸ್ಯರ ಸಲಹೆಯನ್ನು ಸರ್ಕಾರ ಪರಿಶೀಲಿಸುತ್ತದೆ.

**ಆ) ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2018**

**ಪರ್ಯಾಲೋಚನಾ ಪ್ರಸ್ತಾವ**

ಶ್ರೀ ಟಿ.ಬಿ.ಜಯಚಂದ್ರ **(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರು)(ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ)** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2018ರ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

ಶ್ರೀ ಟಿ.ಬಿ.ಜಯಚಂದ್ರ **(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ):- ಮಾನ್ಯ ಸಭಾಪತಿಯವರೇ,** ಈ ವಿಧೇಯಕದ ಮೂಲಕ ಒಂದು ಸಣ್ಣ ತಿದ್ದುಪಡಿ ತರಲಾಗಿದೆ. ಪ್ರಾಧಿಕಾರದಲ್ಲಿ ಇರುವಂಥವರ ಪಟ್ಟಿ ದೊಡ್ಡದಿದೆ. ಈ ಪಟ್ಟಿಯಲ್ಲಿ ಚೀಫ್ ಸೆಕ್ರೆಟರಿಯವರಿದ್ದರು; ಆದರೆ ಜಿಲ್ಲಾಧಿಕಾರಿಗಳ ಹೆಸರು ಬಿಟ್ಟು ಹೋಗಿತ್ತು. ಒಬ್ಬರನ್ನು Ex-Officio Member ಆಗಿ ಸೇರಿಸಬೇಕು ಎನ್ನುವ ದಿಸೆಯಲ್ಲಿ ಈ ಒಂದು ಸಣ್ಣ ತಿದ್ದುಪಡಿ ತಂದಿದ್ದೇವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ರಾಮಚಂದ್ರಗೌಡ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಇಡೀ ರಾಷ್ಟ್ರದಲ್ಲೇ ಹೆಸರುವಾಸಿಯಾದ ವ್ಯಕ್ತಿ. ನಿಯಮಗಳನ್ನು ಮಾಡುವಾಗ ಕೇವಲ ಆ ಕ್ಷೇತ್ರಕ್ಕೆ ಸೀಮಿತ ಮಾಡದೇ ಅದನ್ನು ಅದನ್ನು ರಾಜ್ಯ ಮಟ್ಟಕ್ಕೂ ವಿಸ್ತರಿಸಿ ರಾಜ್ಯದ ಎಲ್ಲಾ ಭಾಗಗಳನ್ನೂ ಪ್ರತಿನಿಧಿಗಳು ಪ್ರತಿನಿಧಿಸುವಂತಾಗಬೇಕು. ಆ ಮೂಲಕ ಆ ಕ್ಷೇತ್ರವನ್ನೂ ಅಭಿವೃದ್ಧಿ ಮಾಡಿ.

**ಶ್ರೀ ಹೆಚ್.ಎಂ.ರೇವಣ್ಣ (ಸಾರಿಗೆ ಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಈ ಪ್ರಾಧಿಕಾರವನ್ನು ಕ್ಷೇತ್ರ ಮಟ್ಟಕ್ಕೆ ಮಾತ್ರ ಸೀಮಿತ ಮಾಡಿಲ್ಲ. ಇದು ರಾಜ್ಯಮಟ್ಟದ್ದಾಗಿದೆ. ಈ ಸಮಿತಿ ಮುಖ್ಯಮಂತ್ರಿಗಳ ನೇತೃತ್ವದಲ್ಲಿದೆ. ಸದರಿ ವ್ಯಾಪ್ತಿಯಲ್ಲಿ ಕೆಲಸ ಆಗಬೇಕಾದರೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಇರಬೇಕಾಗುತ್ತದೆ. ಬಿಟ್ಟು ಹೋಗಿದ್ದ ಅವರ ಹೆಸರನ್ನು ಸೇರಿಸುವ ನಿಟ್ಟಿನಲ್ಲಿ ತಿದ್ದುಪಡಿ ಮಾಡಲಾಗಿದೆ.

**ಸಭಾಪತಿಯವರು:-** ಯಾವುದೇ ವಿಧೇಯಕಗಳು ಬರಲಿ, ಅದರ ಮೇಲೆ ಮಾನ್ಯ ಉಗ್ರಪ್ಪನವರು ಎರಡು ಮಾತು ಹೇಳದೇ ಇದ್ದರೆ ಸರಿಹೋಗುವುದಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:-** ಈ ತಿದ್ದುಪಡಿ ವಿಧೇಯಕದ ಮೇಲೂ ಮಾತನಾಡುತ್ತಾರೆಯೇ?

**ಸಭಾಪತಿಯವರು:-** ಮಾತನಾಡಲು ಎದ್ದು ನಿಂತಿದ್ದಾರೆ, ನೀವೇ ನೋಡಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಜಿಲ್ಲಾಧಿಕಾರಿಗಳನ್ನು ಈ ಸಮಿತಿಗೆ ಸದಸ್ಯರನ್ನಾಗಿ ಮಾಡಲು ತಂದಿರುವ ತಿದ್ದುಪಡಿಯ ಬಗ್ಗೆ ನನ್ನ ಅಭ್ಯಂತರ ಇಲ್ಲ. Existing Act ನ ಸೆಕ್ಷನ್ 3, (ಎಫ್) ನಲ್ಲಿ, "ಸಂಗೊಳ್ಳಿ ರಾಯಣ್ಣ ಕ್ಷೇತ್ರದ ಭಾಗಶಃ ಅಥವಾ ಸಂಪೂರ್ಣವಾಗಿ ಯಾರ ಚುನಾವಣಾ ಕ್ಷೇತ್ರದ ವ್ಯಾಪ್ತಿಯೊಳಗೆ ಬರುತ್ತದೋ ಆ ಕ್ಷೇತ್ರವನ್ನು ಪ್ರತಿನಿಧಿಸುವ ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರು" ಎಂದಿದೆ. ಇಲ್ಲಿ, ವಿಧಾನಪರಿಷತ್ತಿನ ಸದಸ್ಯರ ಪ್ರಸ್ತಾಪ ಇಲ್ಲ. (ಎಚ್) ನಲ್ಲಿ, "ಸರ್ಕಾರದಿಂದ ನಾಮನಿರ್ದೇಶಿತರಾದ ಐದು ಜನರಿಗೆ ಮೀರದಷ್ಟು ಸದಸ್ಯರು" ಎಂದೂ ಇದೆ. ಆದ್ದರಿಂದ ಸ್ಪಷ್ಟವಾಗಿ, ಪಾರ್ಲಿಮೆಂಟ್ ಸದಸ್ಯರು, ವಿಧಾನಪರಿಷತ್ತಿನ ಸದಸ್ಯರು ಮತ್ತು ವಿಧಾನಸಭೆಯ ಸದಸ್ಯರು ಎಂದು ನಮೂದು ಮಾಡುವುದು ಸೂಕ್ತ.

ಮಾನ್ಯ ಸಭಾಪತಿಯವರೇ, ಸಂಗೊಳ್ಳಿ ರಾಯಣ್ಣ ಬ್ರಿಟಿಷರ ವಿರುದ್ಧ ಹೋರಾಟ ಮಾಡಿದಂತಹ ಒಬ್ಬ ಮಹಾನ್ ಸೇನಾನಿ. ಇಷ್ಟೆಲ್ಲ ಜನರನ್ನು ನೇಮಕ ಮಾಡುವುದರ ಜೊತೆಗೆ, ರಾಜ್ಯದ ಕುರುಬರ ಸಂಘದ ಅಧ್ಯಕ್ಷರನ್ನು ಇದರಲ್ಲಿ ಸದಸ್ಯರನ್ನಾಗಿ ಮಾಡಬೇಕು ಎನ್ನುವುದು ನನ್ನ ಅಭಿಪ್ರಾಯವಾಗಿದೆ.

**ಸಭಾಪತಿಯವರು:-** ದಯವಿಟ್ಟು ಇದನ್ನು ಒಂದು ಜಾತಿಗೆ ಸೀಮಿತ ಮಾಡಬೇಡಿ. *"ಹೋರಾಟಗಾರ" ಎನ್ನುವ ಪದವನ್ನು ಬಳಸಿ. Dont confine him (Sangolli Rayanna) to a community.*

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ತಾವು ಹೇಳಿರುವುದು ಸರಿಯಾಗಿದೆ. ಸಂಗೊಳ್ಳಿ ರಾಯಣ್ಣ ಪ್ರಾಧಿಕಾರವನ್ನು ಒಂದು ಜಾತಿಗೆ ಸೀಮಿತವಾಗಿ ಮಾಡಿರುವಂಥದ್ದಲ್ಲ. ಆತ ದೇಶಪ್ರೇಮಿ ಮತ್ತು ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ್ದರು. ಹಾಗಾಗಿ ಅವರನ್ನು ಒಂದು ಜಾತಿಗೆ ಸೀಮಿತ ಮಾಡುವುದು ಬೇಡ.

**ಶ್ರೀ ವಿ.ಎಸ್.ಉಗ್ರಪ್ಪ:–** ಈ ಪ್ರಾಧಿಕಾರದ ಸಂಬಂಧ ಹೆಚ್ಚು ಒತ್ತು ಕೊಡುತ್ತಿರುವ ಹಿನ್ನೆಲೆಯಲ್ಲಿ ನಾನು ಹೇಳಿದ ಅಂಶಗಳನ್ನು ಸೇರಿಸುವುದು ಸೂಕ್ತ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

**ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಪ್ರಾಧಿಕಾರದಲ್ಲಿ ಯಾರೆಲ್ಲಾ ಸದಸ್ಯರು ಬೇಕು ಎನ್ನುವುದರ ದೊಡ್ಡ ಪಟ್ಟಿಯೇ ಇದೆ. ಈ ಪಟ್ಟಿಯಲ್ಲಿ ಜಿಲ್ಲಾಧಿಕಾರಿಯನ್ನು ಸೇರಿಸಿರಲಿಲ್ಲವಾದ್ದರಿಂದ ಸಣ್ಣ ತಿದ್ದುಪಡಿ ತರಲಾಗಿದೆ. ದಯವಿಟ್ಟು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2018ರ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2**

**ಸಭಾಪತಿಯವರು:–** "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2ನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಪ್ರಸ್ತಾವದ ಅಂಗೀಕಾರ

**ಶ್ರೀ ಟಿ.ಬಿ.ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರು)(ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ)**ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2018ರ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ 2018 ಅನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

## 8. ಸಭೆಯ ಮುಂದಿಡಲಾದ ಕಾಗದಪತ್ರಗಳು

**ಕಾರ್ಯದರ್ಶಿ, ಕ.ವಿ.ಪ.:-** ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಭೂಕಂದಾಯ (ತಿದ್ದುಪಡಿ)ವಿಧೇಯಕ 2018 ಹಾಗೂ ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2018ನೇ ಸಾಲಿನ ಈ ಕೆಳಕಂಡ ವಿಧೇಯಕಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

1. ಡಾ:ಅಂಬೇಡ್ಕರ್ ಅರ್ಥಶಾಸ್ತ್ರ ವಿಶ್ವವಿದ್ಯಾಲಯ ವಿಧೇಯಕ, 2018.
2. ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ, 2018.
3. ಶ್ರೀ ಸತ್ಯಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯ ವಿಧೇಯಕ, 2018
4. ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರೆ ಕಾನೂನು (ತಿದ್ದುಪಡಿ) ವಿಧೇಯಕ, 2018.
5. ಅಮಿಟಿ ವಿಶ್ವವಿದ್ಯಾಲಯ ವಿಧೇಯಕ, 2018

## 9. ವರದಿಗಳನ್ನೊಪ್ಪಿಸುವುದು

ಶ್ರೀ ಕೆ.ಟಿ.ಶ್ರೀಕಂಠೇಗೌಡ (ಸದಸ್ಯರು, ಭರವಸೆಗಳ ಸಮಿತಿ):- ಮಾನ್ಯ ಸಭಾಪತಿಯವರೇ, 2016-17ನೇ ಸಾಲಿನ ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿಯ 46ನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ಶಿಕ್ಷಕರ ಕ್ಷೇತ್ರ) (ಶ್ರೀಮತಿ ತಾರಾಅನೂರಾಧ ಅವರ ಪರವಾಗಿ):- ಮಾನ್ಯ ಸಭಾಪತಿಯವರೇ, 2016-17 ಹಾಗೂ 2017-18 ನೇ ಸಾಲಿನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ 33ನೇ ವರದಿಯನ್ನು ಒಪ್ಪಿಸುತ್ತಿದ್ದೇನೆ.

ಸಭಾಪತಿಯವರು:- ಒಪ್ಪಿಸಲಾಯಿತು.

**10. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಅಂತರ್-ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ (ತಿದ್ದುಪಡಿ) ವಿಧೇಯಕ, 2018**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕೆ.ಆರ್.ರಮೇಶ್ ಕುಮಾರ್** (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2018ರ ಅಂತರ್-ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕೆ.ಆರ್.ರಮೇಶ್ ಕುಮಾರ್** (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಲ್ಲಿ ಸಹ ಈ ವಿಧೇಯಕ ಚರ್ಚೆಗೆ ಬಂದಿತ್ತು. ಆ ಸಂದರ್ಭದಲ್ಲಿ ನನಗೂ ಸಾಕಷ್ಟು ಮಾಹಿತಿ ಇರಲಿಲ್ಲ. ಸದರಿ ವಿಧೇಯಕ್ಕೆ ಈಗ ಸರಳವಾದ ಒಂದು ತಿದ್ದುಪಡಿ ತರಲಾಗಿದೆ. ಈಗಾಗಲೇ ಯುನಿವರ್ಸಿಟಿ ಆಗಿದೆ. University Grant Commission ಅವರೂ ಕೂಡ ಇದಕ್ಕೆ ಬೇಕಾದ ಒಪ್ಪಿಗೆ ಕೊಟ್ಟಿದ್ದಾರೆ. Trans-disciplinary University ಎಂದು nomenclature ಆಗಬೇಕಾಗಿದೆ.

253/23-2-2018/12.50/ಡಿಎಸ್-ಆರ್ಎನ್

ಶ್ರೀ ರಮೇಶ್ ಕುಮಾರ್(ಮುಂದು):-

Now it is only in a name of institution. ಆ ಟೈಟಲ್‌ನ್ನು ಬದಲಾವಣೆ ಮಾಡಬೇಕು ಅಷ್ಟೆ. ಉಳಿದಿರುವುದೆಲ್ಲಾ ಆಗಿದೆ. ಇದಕ್ಕೆ ಸದನ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹಿಂದೆ ಈ ವಿಧೇಯಕವನ್ನು ಮಂಡನೆ ಮಾಡಿದ್ದರು. ಆಗ ನಾವು ಅನೇಕ ಅಂಶಗಳನ್ನು ಪ್ರಸ್ತಾಪ ಮಾಡಿದ್ದು ಅದನ್ನು ಗಮನಕ್ಕೆ ತೆಗೆದುಕೊಂಡು ಮತ್ತೆ ಅದನ್ನು ತಂದಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ನನಗೆ ಮತ್ತೆ ಅದೇ ಸಂದೇಹ ಇದೆ. ಮಾನ್ಯ ಸಚಿವರು ವಿಧೇಯಕದಲ್ಲಿ ಉಲ್ಲೇಖ ಮಾಡುತ್ತಾರೆ, *"whereas it is expedient to establish and incorporate in the State of Karnataka a university of unitary in nature as an institute in private sector.."* ಎಂದು ಸರ್ಕಾರ ಮಾಡುತ್ತಿರುವುದು. ಆದರೆ '*as an institute in private sector'* ಅದರ ಉದ್ದೇಶ ಏನು ಎಂಬುದನ್ನು ಮಾನ್ಯ ಸಚಿವರು ಹೇಳಬೇಕು. ಎರಡನೆಯದು, ವಿಶ್ವವಿದ್ಯಾಲಯ ಎಂದ ಕೂಡಲೇ ಸಾಧಾರಣವಾಗಿ ನಮಗೆ ಕಲ್ಪನೆ ಬರುವುದೇನೆಂದರೆ, affiliating norms ಇಟ್ಟುಕೊಂಡು ಬೇರೆ ಬೇರೆ ಕಾಲೇಜುಗಳನ್ನು ಸಂಯೋಜನೆಗೊಳಿಸುತ್ತಾರೆ ಎನ್ನುವ ಕಲ್ಪನೆ ಇರುತ್ತದೆ. ಈಗ ಉದ್ದೇಶದ ಪ್ರಕಾರವೇ ಬಹಳ ಹೆಚ್ಚು ಸಂದರ್ಭಗಳಲ್ಲಿ research promote ಮಾಡುವುದಕ್ಕೆ ಮತ್ತು ಬೇರೆ ಬೇರೆ ವಿಷಯಗಳ ನಡುವೆ, inter-disciplinary studies ನ ಬಗ್ಗೆ ಕೂಡ ವಿಚಾರ ಮಾಡಬೇಕಾಗುತ್ತದೆ. ಇದು ವಿಶ್ವವಿದ್ಯಾಲಯ ಆಗುವುದಕ್ಕಿಂತ centre of excellence ಆಗಬೇಕು. ನಾನು ಉಲ್ಲೇಖ ಮಾಡಿದ್ದೆ. ಏಕೆಂದರೆ, ಈಗಾಗಲೇ ಆರೋಗ್ಯ ಶಾಸ್ತ್ರಗಳ ವಿಶ್ವವಿದ್ಯಾಲಯ ಇದೆ. ಅವರು ರಿಸರ್ಚ್ ಮಾಡುತ್ತಿದ್ದಾರೆ. ಈಗ ಇವರು ಒಂದು ವಿಶ್ವವಿದ್ಯಾಲಯ establish ಮಾಡಿದ್ದಾರೆ. ಇವರ ವಿಶ್ವವಿದ್ಯಾಲಯದ ಕಾರ್ಯ ಚಟುವಟಿಕೆಯ ಜೊತೆಗೆ ಅವರ ವಿಶ್ವವಿದ್ಯಾಲಯದ ಕಾರ್ಯ ಚಟುವಟಿಕೆ ಇದಕ್ಕೇನು ಹೊಂದಾಣಿಕೆ ಇರುತ್ತದೆ ಅದನ್ನು ನೋಡಬೇಕಾಗುತ್ತದೆ. ಕೇವಲ ಒಂದು unitary university ಆಗಿ ಕೆಲಸ ಮಾಡುವುದಾದರೆ ಆ ಉಳಿದ ವಿಶ್ವವಿದ್ಯಾಲಯಗಳಲ್ಲಿ ಆಗುತ್ತಿರುವಂತಹ ಚಟುವಟಿಕೆಗಳಿಗೆ ಯಾವ ರೀತಿ ಅದನ್ನು co-ordinate ಮಾಡುತ್ತಾರೆ? ಈ ಸಂಗತಿಗಳ ಬಗ್ಗೆ ಮಾನ್ಯ ಸಚಿವರು ಹೇಳಬೇಕು. ಮಾನ್ಯ ಸಚಿವರು ಉಲ್ಲೇಖ ಮಾಡಿರುವ ಹಾಗೆ ಖಾಸಗಿ ವಲಯದಲ್ಲಿ ಇದ್ದ ಹಾಗೆ ಮಾಡುತ್ತೇವೆ ಎನ್ನುವುದರ ಹಿನ್ನೆಲೆಯ ಬಗ್ಗೆ ವಿವರ ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಒಂದು ಸಂಸ್ಥೆಯನ್ನು ಈಗ ವಿಶ್ವವಿದ್ಯಾಲಯವಾಗಿ ಪರಿವರ್ತನೆ ಮಾಡುತ್ತಿದ್ದಾರೆ. ಇಡೀ ದೇಶದಲ್ಲಿ ಅಥವಾ ರಾಜ್ಯದಲ್ಲಿರುವಂತಹ ವಿಶ್ವವಿದ್ಯಾಲಯ ಅದರ ವ್ಯಾಪ್ತಿಯನ್ನು ತರಬೇಕಾದರೆ, ಈಗ ತಂದಿರುವ ವಿಧೇಯಕದಲ್ಲಿ "ನಿರ್ದೇಶಕ" ಎನ್ನುವುದನ್ನು ಕನ್ನಡದಲ್ಲಿ "ಕುಲಪತಿ" ಎಂದು ಹೇಳುತ್ತಿದ್ದಾರೆ. ಇಂಗ್ಲಿಷ್‌ನಲ್ಲಿ "ವೈಸ್‌ಛಾನ್ಸಲರ್" ಎಂದು ಹೇಳುತ್ತಿದ್ದಾರೆ. ಇವರನ್ನು ಯಾವ ರೀತಿ ಬೇರೆ-ಬೇರೆ ವಿಶ್ವವಿದ್ಯಾಲಯಗಳಲ್ಲಿ ವೈಸ್‌ಛಾನ್ಸಲರ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಾರೆ? ಅದೇ ರೀತಿಯ ಮೆಥಡ್‌ನ್ನು ಇಲ್ಲಿ ಅಡಾಪ್ಟ್ ಮಾಡಿಕೊಳ್ಳುವುದಕ್ಕೆ ಯಾವ mechanism ಅನ್ನು ಅಡಾಪ್ಟ್ ಮಾಡಿಕೊಂಡಿದ್ದಾರೆ ಎಂಬುದರ ಬಗ್ಗೆ ಸ್ಪಷ್ಟಪಡಿಸಬೇಕು. ಇದೇ ರೀತಿಯಲ್ಲಿ other faculties; ಅದು ರಿಜಿಸ್ಟ್ರಾರ್, ವೈಸ್‌ಛಾನ್ಸಲರ್, ಛಾನ್ಸರ್ ಇರಬಹುದು ಅಥವಾ Pro-Chancellor ಇರಬಹುದು, ಇವರು ಇರುತ್ತಾರೆಯೇ? ಇದ್ದರೆ ಅವರ ಕಾರ್ಯ ಚಟುವಟಿಕೆಗಳು ಏನು ಎಂಬುದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕೆಂದು ಮಾನ್ಯ ಸಚಿವರನ್ನು ಕೇಳಕೊಳ್ಳುತ್ತೇನೆ.

**ಶ್ರೀ ಕೆ.ಆರ್.ರಮೇಶ್ ಕುಮಾರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಕಳೆದ ಸಲ ಇದೇ ವಿಚಾರವನ್ನು ಸನ್ಮಾನ್ಯ ಸದಸ್ಯರು ಹೇಳಿದ್ದರು. ಮಾನ್ಯ ಗೌರವಾನ್ವಿತ ಸದಸ್ಯರಾದ ಉಗ್ರಪ್ಪನವರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ, ಇಲ್ಲಿ ಇದು unitary and government is not giving any assistance. ಪ್ರೈವೇಟ್ ಎಂದರೆ it is not coming under this. There is an institution called 'Foundation for Revitalisation of Local Health Traditions (FRLHT). Dr.Sam Pitroda ರವರು ಇದರ patron ಆಗಿ ಸಂಸ್ಥೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇಡೀ ದೇಶದಲ್ಲಿ ಎಲ್ಲಾ ಕಡೆಗಳಲ್ಲಿರುವಂತಹ ನಮ್ಮ ಪ್ರಾಚೀನ ವಿಷಯ ಏನೇನು ಇದೆ ವೈದ್ಯಶಾಸ್ತ್ರಕ್ಕೆ ಸಂಬಂಧಪಟ್ಟ ದಾಖಲೆಗಳೇನಿವೆ ಅವುಗಳನ್ನು ತಂದಿಟ್ಟುಕೊಂಡು ಭಾಷಾಂತರ ಮಾಡಿ ಹೊಸ ಕೆಲಸವನ್ನು ಮಾಡುತ್ತಿದ್ದೇವೆ. ಆ inter-disciplinary maintain ಮಾಡುವುದಕ್ಕೆ, ಈಗಾಗಲೇ University Grants Commission has accorded the approval. It has done according to that and now it is only a formality of changing the name. Nomenclature ಅಷ್ಟೆ. ಸದನದ ಸದಸ್ಯರೆಲ್ಲರೂ ಅಂಗೀಕಾರ ಮಾಡಿಬೇಕೆಂದು ಕೇಳಕೊಳ್ಳುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ **2017ರ ಅಂತರ್-ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ (ತಿದ್ದುಪಡಿ) ವಿಧೇಯಕವನ್ನು** ಪರ್ಯಾಲೋಚಿಸುವುದು."

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

<u>ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು</u>

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಖಂಡ 2 ರಿಂದ 17 ರವರೆಗೆ**

**ಸಭಾಪತಿಯವರು:-** "ಖಂಡ 2 ರಿಂದ 17 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 17 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ: "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೆ.ಆರ್.ರಮೇಶ್ ಕುಮಾರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ರ ಅಂತರ್-ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ರ ಅಂತರ್-ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಆ) ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2018**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕಾಗೋಡು ತಿಮ್ಮಪ್ಪ**:- ಮಾನ್ಯ ಸಭಾಪತಿಯವರೇ, ಬಗರ್‌ಹುಕುಂ ಜಮೀನನ್ನು ಮಂಜೂರು ಮಾಡುವುದಕ್ಕೆ ಹಿಂದೆ ಕಂದಾಯ ಕಾನೂನಿನ ನಿಯಮ 94-ಎ ಪ್ರಕಾರ ಮತ್ತು 94-ಬಿ ಪ್ರಕಾರ ಅವಕಾಶವನ್ನು ನೀಡಲಾಗಿತ್ತು. ಇದು ರಾಜ್ಯದ ಅನೇಕ ಭಾಗಗಳಲ್ಲಿ ಬಗರ್‌ಹುಕುಂ ಜಮೀನಿನಲ್ಲಿ ಸಾಗುವಳಿ ಮಾಡಿರತಕ್ಕಂಥವರು ಅರ್ಜಿ ಕೊಡದಿರುವುದು ನನ್ನ ಗಮನಕ್ಕೆ ಬಂದಿತ್ತು. ಸರ್ಕಾರ ಕೂಡ ಎಲ್ಲಾ ಮಾನದಂಡವನ್ನು ಮಾಡಿಕೊಟ್ಟಿದೆ. ಅದಕ್ಕೆ ಮತ್ತೊಂದು ಸಲ ಅಂತಹ ಜನರು ಅರ್ಜಿ ಕೊಡುವುದಕ್ಕೆ ಅವಕಾಶ ಮಾಡಿಕೊಡುವ ಉದ್ದೇಶವೇ ಈ ತಿದ್ದುಪಡಿಯನ್ನು ತಂದಿರುವಂಥದ್ದು. ಅದರಲ್ಲೂ 2005 ರವರೆಗೆ ಯಾರು ಅಕ್ರಮವಾಗಿ ಸಾಗುವಳಿ ಮಾಡಿರುತ್ತಾರೆ ಅಂಥವರಿಗೆ ಅರ್ಜಿ ಕೊಡುವುದಕ್ಕೆ ಈ ಅವಕಾಶವನ್ನು ಮಾಡಿಕೊಟ್ಟಿದೆ. ಜೊತೆಗೆ ಈ ಕಂದಾಯ ಕಾನೂನನ್ನು 1995 ರಲ್ಲಿ country plan ನಲ್ಲಿ ಯೋಜನೆ ಏನು ಮಂಜೂರು ಆಗಿರುತ್ತದೆ ಆ ಜಾಗ ಯಾವ ಉದ್ದೇಶಕ್ಕೆ ಮೀಸಲಿಡಬೇಕೆಂದು ಪ್ಲಾನ್‌ನಲ್ಲಿರುತ್ತದೆಯೋ ಆ ಜಾಗವನ್ನು ಆ ಉದ್ದೇಶಕ್ಕೆ ಬಳಸಿಕೊಳ್ಳಬೇಕೆನ್ನುವುದಾದರೆ ಪರಿವರ್ತನೆ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಇದರಲ್ಲಿ ಮಾಡಿಕೊಟ್ಟಿದ್ದೇವೆ. ಅದಕ್ಕೋಸ್ಕರ ಜಿಲ್ಲಾಧಿಕಾರಿಗಳು ಸಕಾಲದಲ್ಲಿ ಪರಿವರ್ತನೆ ಮಾಡದಿದ್ದರೆ ಅದು ಪರಿವರ್ತನೆಯಾಗಿದೆ ಎಂದು presumption ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಏಕೆಂದರೆ, ವಿಳಂಬವಾಗಬಾರದೆನ್ನುವ ಕಾರಣಕ್ಕಾಗಿ ಅದೊಂದು ಸಣ್ಣ ತಿದ್ದುಪಡಿಯನ್ನು ಮಾಡಿದ್ದೇವೆ. ಆದ್ದರಿಂದ ಈ ಎರಡು ತಿದ್ದುಪಡಿಗಳಿಗೆ ಮಾನ್ಯ ಸದಸ್ಯರೆಲ್ಲರೂ ಒಪ್ಪಿಗೆ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

254/23-02-2018/bkp/vk/1-00

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಕೋಷ್ಟಕದಲ್ಲಿ ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ರ ಅಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 18 ಕಿ.ಮೀ ಅಂತರವನ್ನು ಕೊಟ್ಟಿದ್ದಾರೆ. ಇವತ್ತು ಬೆಂಗಳೂರು ಎಷ್ಟು ವೇಗವಾಗಿ ಬೆಳೆಯುತ್ತಿದೆ ಎಂದರೆ ಅದಕ್ಕೆ 18 ಕಿ.ಮೀ. ಹಾಕಿಕೊಂಡರೆ ಸಾಕಾಗುವುದಿಲ್ಲ. ಅದಕ್ಕೆ 25 ಕಿ.ಮೀ ಹಾಕಿಕೊಂಡರೆ ಸರಿ ಹೋಗುತ್ತದೆ. ಅದು ಬೆಳೆಯುತ್ತಿರುವುದನ್ನು ನಿಮಗೆ ತಡೆಯಲಿಕ್ಕೆ ಆಗುತ್ತಿಲ್ಲ. ಬೆಂಗಳೂರಿಗೆ ಹೊರಗಡೆಯಿಂದ ಬರುವಂತಹ ಜನರು ಹೇಗಿದ್ದಾರೆಂದು ನೋಡಬೇಕಾಗುತ್ತದೆ. ಕರ್ನಾಟಕದವರನ್ನು ಬಿಟ್ಟು ಹೊರಗಡೆಯಿಂದ ಬರುವಂತಹ ಜನರನ್ನು ನೋಡಿದರೆ ಅವರು ಬರುವುದನ್ನು ತಡೆಯಲಿಕ್ಕೆ ಆಗುತ್ತಿಲ್ಲ. 18 ಕಿ.ಮೀ ಎಂದರೆ ಸುಮ್ಮನೆ ಕಲ್ಲು ಎಸೆದರೆ ಸಿಕ್ಕಿ ಹೋಗುತ್ತದೆ. ಆ ರೀತಿಯಲ್ಲಿ ಈಗ ಪರಿಸ್ಥಿತಿ ಇದೆ. ಅದಕ್ಕೋಸ್ಕರ ಇದನ್ನು 18 ರಿಂದ 25 ಕಿ.ಮೀ.ಗೆ ಜಾಸ್ತಿ ಮಾಡಿದರೆ ಒಳ್ಳೆಯದಾಗುತ್ತದೆನ್ನುವುದು ನನ್ನ ಭಾವನೆಯಾಗಿದೆ. ಈ ವಿಚಾರ ತಮಗೆ ಬಿಟ್ಟ ವಿಚಾರ. ತಾವು ಏನು ಮಾಡುತ್ತೀರೋ ಮಾಡಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಒಂದು ಒಳ್ಳೆಯ ಉದ್ದೇಶಕ್ಕೋಸ್ಕರ ಸರ್ಕಾರದವರು ಏನು ಈ ಒಂದು ತಿದ್ದುಪಡಿಯನ್ನು ತರುತ್ತಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತಿದ್ದೇನೆ. ಆದರೆ, ಈ ಸಂಬಂಧ ದಿನಾಂಕವನ್ನು ವಿಸ್ತರಣೆ ಮಾಡಿದ್ದೀರಿ, ಅದಕ್ಕೆ ನಮ್ಮದೇನೂ ಅಭ್ಯಂತರ ಇಲ್ಲ, ಒಳ್ಳೆಯದು. ಆದರೆ, ಈ ರೀತಿಯಲ್ಲಿ ಎಷ್ಟು ದಿವಸಗಳ ಕಾಲ ವಿಸ್ತರಣೆ ಮಾಡಲಿಕ್ಕೆ ಆಗುತ್ತದೆ? ಈಗ ಅವರಿಗೆ ಸೆಕ್ಷನ್ 94(ಸಿ),94ಸಿಸಿ ನಲ್ಲಿ ಕೊಡಬೇಕಾಗಿತ್ತು. ಅದನ್ನು ಕೊಡಲಿಕ್ಕೆ ವಿನಾಕಾರಣಗಳಿಂದ ತೊಂದರೆಯಾಗುತ್ತಿದೆ. ಈಗ ಮತ್ತೆ ದಿನಾಂಕವನ್ನು ವಿಸ್ತರಣೆ ಮಾಡಿದ್ದೀರಿ. ಅಂದರೆ, ಖಂಡಿತವಾಗಿಯೂ ಸಹ ಇನ್ನಷ್ಟು ಅರ್ಜಿಗಳು ಬರುತ್ತವೆ. ಬರಲಿಕ್ಕೆ ತೊಂದರೆಯಿಲ್ಲ. ಅದರೂ ಸಹ ಈ ಪ್ರಕ್ರಿಯೆಯನ್ನು ಮುಗಿಸಲೇ ಬೇಕು ಅಲ್ಲವೇ? ಇನ್ನು ಎರಡನೆಯ ಸಂಗತಿ ಏನೆಂದರೆ, ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ ಉಪಬಂಧಗಳ ಅಡಿಯಲ್ಲಿ ಬರುವ ಎಲ್ಲಾ ನಗರ ಪೌರಸಭೆಗಳಿಗೆ (ಸಿಎಂಸಿ) 5 ಕಿ.ಮೀ.ಗಳು. ಮತ್ತೆ ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ ಉಪಬಂಧಗಳ ಅಡಿಯಲ್ಲಿನ ಎಲ್ಲಾ ಪೌರಸಭೆಗಳು (ಟಿಎಂಸಿ) ಮತ್ತು ಪಟ್ಟಣ ಪಂಚಾಯಿತಿಗಳಿಗೆ 3.ಕಿ.ಮೀ.ಗಳು ಎಂದು ಹೇಳಿದ್ದೀರಿ.

ಹೊರಗಡೆ ಇರುವವರಿಗೆ ಏನೋ ಆಗುತ್ತದೆ. ಆದರೆ, ಒಳಗಡೆ ಇರುವವರಿಗೆ ಏನು ಮಾಡುತ್ತೀರಿ? ಇದರ ಬಗ್ಗೆ ತಾವು ವಿವರವಾಗಿ ಹೇಳಬೇಕು. ಮತ್ತೆ, ನೈಸರ್ಗಿಕ ಕಾಲುವೆಗಳು ಅಥವಾ ನದಿ ಕಣಿವೆ ಪ್ರದೇಶಗಳು ಎಂದು ಒಂದಿಷ್ಟು ಪಟ್ಟಿ ಮಾಡಿದ್ದೀರಿ. ಅದು ನಿಮಗೆ ಗೊತ್ತಿದೆ ಮತ್ತು ಅದು ನಿಮ್ಮ ದಾಖಲೆಗಳಲ್ಲಿ ಇದೆ. ಅಂದರೆ, Railway Track, By-Pass, Outer Ring Road ಎಂದು ಇದೆ. ಅಂತಹ ಕಡೆ ಇದ್ದವನಿಗೆ ಈ ರೀತಿ ಆಗುತ್ತದೆ ಎಂದು ಏನು ಗೊತ್ತು? ಅದು ಅವನಿಗೆ ಗೊತ್ತಿರುವುದಿಲ್ಲ. ನೀವು ಯಾವಾಗ ಆ ಜಾಗವನ್ನು ಅಭಿವೃದ್ಧಿಗೆ ಸೇರಿಸಿಕೊಂಡಿದ್ದೀರಿ, Railway Track, By-Pass, Outer Ring Road ಆಯಿತು, ಎಂದವನಿಗೆ ಗೊತ್ತಿರುವುದಿಲ್ಲ. ಅವನಿಗೆ ಏನು ವ್ಯವಸ್ಥೆ ಮಾಡುತ್ತೀರಿ, ಅವರ ಗತಿ ಏನು? ಅವನನ್ನು ಅಲ್ಲಿಂದ ತೆಗೆಸಲಿಕ್ಕೆ ಆಗುವುದೇ ಇಲ್ಲ. ಅವರ ಜಾಗವನ್ನು ನೀವು regularize ಮಾಡುವುದಿಲ್ಲ. ನೀವು ಅವರಿಗೆ ಬದಲಿ ವ್ಯವಸ್ಥೆ ಮಾಡದಿದ್ದರೆ, ಅವನನ್ನು ತೆಗೆಸದಿದ್ದರೆ ಈ ಕಾನೂನು ತೆಗೆದುಕೊಂಡು ಬಂದರೆ ಏನಾಗುತ್ತದೆ? ಹಾಗಾಗಿ, ತಮ್ಮ ಮನಸ್ಸಿನಲ್ಲಿ ಸರ್ಕಾರಿ ಜಾಗದಲ್ಲಿ ಮನೆ ಕಟ್ಟಿಕೊಂಡಿರುವವರಿಗೆ ಸಹಾಯ ಮಾಡಬೇಕೆಂದು ಇದ್ದರೆ ಎಲ್ಲಿ ಅವರನ್ನು ಎಬ್ಬಿಸುವುದಕ್ಕೆ ಆಗುವುದಿಲ್ಲ, ಅವರಿಗೆ ಬದಲಿ ಜಾಗದ ವ್ಯವಸ್ಥೆಯ ಬಗ್ಗೆ ಆಲೋಚನೆ ಮಾಡದೇ ಇದ್ದರೆ ಯಾವ ಫಲಾನುಭವಿಗಳಿಗೆ ಮತ್ತು ಯಾವ ಬಡವರಿಗೆ ಮನೆಗಳನ್ನು ಕೊಡಬೇಕೆಂದು ಏನು ಹೊರಟಿದ್ದೀರಿ, ಅದನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೆ ತರಲಿಕ್ಕೆ ಆಗುವುದಿಲ್ಲ. ಉಳಿದಿರುವಂತಹ 2 ತಿಂಗಳಲ್ಲಿ ಈ ಕೆಲಸವನ್ನು ಮಾಡಲಿಕ್ಕೆ ಖಂಡಿತವಾಗಿಯೂ ಸಾಧ್ಯವೇ ಇಲ್ಲ. ತಾವು ಇಲ್ಲಿ ಏನೋ ಹೇಳಿರಬಹುದು. ಆದರೆ, ಅದನ್ನು ಮಾಡಲು 2 ತಿಂಗಳಿನಲ್ಲಿ ಸಾಧ್ಯವಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆದರೆ, ಈ Bill ಅನ್ನು ತಿದ್ದುಪಡಿ ಮಾಡಿದ್ದೀರಿ. ಇದನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ, ಈ ಕೆಲಸವನ್ನು ಯುದ್ಧೋಪಾದಿಯಲ್ಲಿ ಮಾಡಬೇಕಾಗುತ್ತದೆ. ಏನು ಸರ್ಕಾರಿ ಜಮೀನಿನಲ್ಲಿ ಮನೆ ಕಟ್ಟಿಕೊಂಡಿರುವವರಿಗೆ ಮನೆ ಕೊಡಲಿಕ್ಕೆ ಏನಾದರೊಂದು master plan ಮಾಡದೇ ಇದ್ದರೆ, ಸಮಯದಲ್ಲಿ ಕೊಡಲಿಕ್ಕೆ ಆಗಲಿಲ್ಲವೆಂದು, ಶಾಸಕರುಗಳು ಈ ಸಂಬಂಧ ಮೀಟಿಂಗ್ ಕರೆಯಲಿಲ್ಲವೆಂದು, ಈ ಎಲ್ಲಾ ಕಾನೂನುಗಳು ಬರುತ್ತವೆಂದು, deemed forest issue ಬರುತ್ತದೆಂದು, ಹೀಗಾಗಿ, ಅವರು ಅಲ್ಲಿಯೇ ಇರುತ್ತಾರೆ, ಇದು ಹೀಗೆಯೇ ಇರುತ್ತದೆ, ಇದನ್ನು regularize ಮಾಡಲಿಕ್ಕೆ ಆಗುವುದಿಲ್ಲ. ಹೀಗಾಗಿ, ಈ ತಿದ್ದುಪಡಿಯನ್ನು ಸ್ವಾಗತ ಮಾಡುತ್ತಾ, ಈ ಸಮಸ್ಯೆಗೆ ಶಾಶ್ವತವಾದ ಪರಿಹಾರವನ್ನು ಹುಡುಕಲಿಕ್ಕೆ ಏನಾದರೊಂದು ಸಮಗ್ರವಾದ ಕಾಯಿದೆಯನ್ನು ರಚಿಸಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಈಗ ಸೆಕ್ಷನ್ 94-ಸಿ ಗೆ ಮತ್ತು 94-ಸಿಸಿ ಗೆ ಅವಧಿಯನ್ನು ವಿಸ್ತರಣೆ ಮಾಡುವುದು ಸರಿ ಇದೆ. ಈಗ ನಮ್ಮಲ್ಲಿ practical ಆಗಿರುವಂತಹ ಸಮಸ್ಯೆಗಳೇನೆಂದರೆ ಈಗ ಮಂಗಳೂರು ನಗರ ಪಾಲಿಕೆಯಿಂದ 10 km radius ನಲ್ಲಿ ತಾವು 94-ಸಿಸಿ ಕೊಡಲಿಕ್ಕೆ ಬರುವುದಿಲ್ಲವೆಂದು ಹೇಳಿದ್ದೀರಿ. ಮೊನ್ನೆ ಮೊನ್ನೆ ಮಂಗಳೂರು ನಗರ ಪಾಲಿಕೆ ವಿಸ್ತೀರ್ಣವಾಗಿದೆ. ಉದಾಹರಣೆಗೆ ಅದರ ಗಡಿಯಲ್ಲಿರುವಂತಹ ವಾಮಂಜೂರು ಇಲ್ಲಿ ಇರುವಂತಹವರಿಗೆ ಇದನ್ನು ಕೊಡಲಿಕ್ಕೆ ಬರುವುದಿಲ್ಲವೆಂದರೆ ಸೆಕ್ಷನ್ 94-ಸಿಸಿ.ಗೂ ಇಲ್ಲ, 94-ಸಿ.ಗೂ ಇಲ್ಲ.

ಮಾನ್ಯ ಸಭಾಪತಿಯವರೇ, ನನಗೆ ಇನ್ನೊಂದು ವಿಚಾರ ಅರ್ಥವಾಗುತ್ತಿಲ್ಲ. 94-ಸಿಸಿ ವ್ಯಾಪ್ತಿ ನಗರ ಪ್ರದೇಶದಲ್ಲಿದ್ದು, ಅವರಿಗೆ 10 ಸಾವಿರ ರೂಪಾಯಿಗಳನ್ನು ಕಟ್ಟಬೇಕು, 20 ಸಾವಿರ ರೂಪಾಯಿಗಳನ್ನು ಕಟ್ಟಬೇಕೆಂದು ಶುಲ್ಕವನ್ನು ನಿಗದಿ ಮಾಡುತ್ತೀರಿ. ಅವನು 30-40-50 ವರ್ಷಗಳಿಂದ ಅಲ್ಲಿ ಮನೆ ಕಟ್ಟಿಕೊಂಡು ಅವನ ಅಪ್ಪ, ಅವನ ಅಜ್ಜನ ಕಾಲದಿಂದಲೂ ಸರ್ಕಾರಿ ಜಾಗದಲ್ಲಿ ವಾಸ ಮಾಡಿಕೊಂಡು ಬಂದಿರುತ್ತಾನೆ. ಈಗ ಅವನಿಗೆ 10 ಸಾವಿರ ಕಟ್ಟಿ, 20 ಸಾವಿರ ಕಟ್ಟಿದರೆ ಮಾತ್ರ ನಿಮಗೆ ಭೂ ಹಕ್ಕು ಕೊಡುತ್ತೇನೆಂದು ಹೇಳಿದರೆ ಹೇಗೆ? What is the spirit behind it ಎಂದು ನಾನು ಕೇಳಲಿಕ್ಕೆ ಬಯಸುತ್ತೇನೆ. ಭೂಮಿಯಲ್ಲಿ ಇದ್ದವರಿಗೆ ಭೂಮಿಯನ್ನು ಕೊಡೋಣ. ನೀವು ಅವರನ್ನು ಅಲ್ಲಿಂದ ಬಿಡಿಸಲಿಕ್ಕೆ ಆಗುತ್ತದೆಯೇ? ನೀವು 3 cents ಕೊಡುತ್ತೇನೆ, 2 cents ಅನ್ನು ಕೊಡುತ್ತೇನೆಂದು, 5 ಸಾವಿರ ಕಟ್ಟು, 10 ಸಾವಿರ ಕಟ್ಟು, 20 ಸಾವಿರ ಕಟ್ಟು ಎಂದು ಹೇಳಿದರೆ, what is the spirit behind it ಎಂದು ನನಗೆ ಅರ್ಥವಾಗುತ್ತಿಲ್ಲ. ಮನೆಯಿಲ್ಲದವರಿಗೆ ಮನೆಯನ್ನು ಕೊಡಲಿಕ್ಕೆ ಹೊರಟಿದ್ದೀರಿ. ಮನೆಯಿಲ್ಲದವರಿಗೆ ನಿವೇಶನ ಕೊಡಲಿಕ್ಕೆ ಹೊರಟ್ಟಿದ್ದೀರಿ. ಅಲ್ಲಿ ಅವನು ತನ್ನ ಅಜ್ಜನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಲದಿಂದಲೂ ವಾಸ ಮಾಡಿಕೊಂಡು ಬಂದಿರುತ್ತಾನೆ. ಮಕ್ಕಳು ಅಲ್ಲಿಯೇ ಕಲಿತು, ಮೂರು-ಮೂರು ಪೀಳಿಗೆಗಳು ಆಗಿ ಹೋಗಿವೆ. ಅಲ್ಲಿ ತೆಂಗಿನ ಮರ ಇಟ್ಟು ಅಲ್ಲಿ ಅದು ಫಲವನ್ನು ಕೊಟ್ಟು, ಈಗ ಅದು ಸಾಯುವ ಕಾಲ ಬಂದಿದೆ. ಈಗ ಅವನಿಗೆ ಜಾಗ ಮಾಡಿಕೊಡುತ್ತೇನೆ, ಅದಕ್ಕೆ 10 ಸಾವಿರ ರೂಪಾಯಿಗಳನ್ನು ಕೊಡು ಎಂದರೆ ಇದು ಯಾವ ನೀತಿ ಇದೆ ಎಂದು ಹೇಳಬೇಕು. ನೀವು complete ಆಗಿ ಆ ಯೋಜನೆಯನ್ನು ಬಿಟ್ಟು ಬಿಡಿ.

**ಶ್ರೀ ಕೆ.ಆರ್.ರಮೇಶ್ ಕುಮಾರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವಿಚಾರವನ್ನು ಶ್ರೀಯುತ ಐವನ್ ಡಿ'ಸೋಜಾ ರವರು ಪ್ರಸ್ತಾಪ ಮಾಡಬೇಕು, ನಾವು ಅದನ್ನು ಒಪ್ಪಿಕೊಳ್ಳಬೇಕು. ಅವರಿಂದ ಜನರಿಗೆ relief ಸಿಕ್ಕಿತು ಎಂದು ಅವರಿಗೆಲ್ಲಾ ಹೇಳುವುದೇ, the spirit behind the this.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ನನ್ನ ವಿಷಯ ಅದೇ ಇದೆ. ತಾವು ಹೇಳುವುದು ಸರಿ ಇದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ, ನಮ್ಮಲ್ಲಿ ಮೊನ್ನೆ ಮೊನ್ನೆ ಪ್ರಕರಣ 94-ಸಿಸಿ ಗೆ ಹಕ್ಕು ಪತ್ರ ಕೊಟ್ಟರು. ಅದಕ್ಕೆ 10 ಸಾವಿರ ರೂಪಾಯಿಗಳನ್ನು ಯಾರು ಕಟ್ಟಿದರು? ಇದರ ಬಗ್ಗೆ ನಾನು ಪ್ರಾಕ್ಟಿಕಲ್ ಆಗಿ ಹೇಳುತ್ತೇನೆ. ಮೊನ್ನೆ 94-ಸಿಸಿಗೆ ಹಕ್ಕುಪತ್ರಗಳನ್ನು ಸರ್ಕಾರದ ವತಿಯಿಂದ ಕೊಡಿಸಿದ್ದೀರಿ. ಆ ದುಡ್ಡನ್ನು ಕೊಟ್ಟಿದ್ದು ಯಾರೆಂದರೆ, ಅವರು ಯಾವುದೋ Political Party Agents. ನಾನು ಜಾಗ ಕೊಡುತ್ತೇನೆ, ನಾನು ದುಡ್ಡು ಕೊಡುತ್ತೇನೆ, ನನಗೆ ನೀನು ಓಟು ಹಾಕಬೇಕೆಂದು ಹೇಳಿದಾಗ ಓಟು ಹಾಕಲಿಲ್ಲವೇ? ಇದರ ಬಗ್ಗೆ ಚರ್ಚೆ ಮಾಡೋಣ. ಇಲ್ಲ, ನನಗೆ ಈ ಜಾಗ ಬೇಡ, ನಾನು 94-ಸಿಸಿ ಗೆ ಅರ್ಜಿ ಹಾಕುವುದಿಲ್ಲ, ನಾನು 10 ಸಾವಿರ ಕಟ್ಟುವುದಿಲ್ಲವೆಂದು ಹೇಳುವಂತಹ ಎಷ್ಟೋ ಕುಟುಂಬಗಳಿವೆ. ಅದಕ್ಕೆ Political Party Agents ಹೋಗಿ, ನಾನು ನಿಮ್ಮ ಹಣವನ್ನು ಕಟ್ಟುತ್ತೇನೆಂದು ಹೇಳುತ್ತಾರೆ. ನಿಮ್ಮಲ್ಲಿ 50 ಮನೆಗಳಿದ್ದು, ನಿಮ್ಮೆಲ್ಲರ ಹಣವನ್ನು ನಾನು ಕಟ್ಟುತ್ತೇನೆ, ನೀವೆಲ್ಲರೂ ನಮ್ಮ ಪರವಾಗಿ ಇರಬೇಕೆಂದು ಹೇಳಿ ಸೆಕ್ಷನ್ 94-ಸಿಸಿ ಮತ್ತು 94-ಸಿ.ಗೆ ಹಕ್ಕುಪತ್ರವನ್ನು ಕೊಡಿಸಿರುವಂತಹ ಉದಾಹರಣೆಗಳಿವೆ.

ಅದಕ್ಕೋಸ್ಕರ ನಾನು ಹೇಳುವುದೇನೆಂದರೆ ನಾವು ಹೇಗಿದ್ದರೂ ಸಹಾಯ ಮಾಡುತ್ತಿದ್ದರೂ ಅವರುಗಳಿಗೆ ಉಚಿತವಾಗಿ ಭೂ ಹಕ್ಕು ಕೊಡಿ. ಅಲ್ಲಿ ವಾಸ ಮಾಡುತ್ತಿರುವವರಿಗೆ ಮಾತ್ರ ಕೊಡುವುದು ಅಲ್ಲವೇ? ಅಲ್ಲಿ ವಾಸ ಮಾಡದೇ ಇದ್ದವರಿಗೆ ಕೊಡುವುದಿಲ್ಲ ಅಲ್ಲವೇ? ಹೀಗಾಗಿ, ಈ ವಿಚಾರವಾಗಿ ಮಾನ್ಯ ಮಂತ್ರಿಗಳಿಗೆ ಅನೇಕ ಬಾರಿ ಹೇಳಿದ್ದೇನೆ. ಅನೇಕ ಸಭೆಗಳಲ್ಲಿ ಹೇಳಿದ್ದೇನೆ. ಅದು KDP (Karnataka Development Programme) ಸಭೆಗಳಿರಬಹುದು, ಇನ್ನಿತರ ಸಭೆಗಳಿರಬಹುದು ಅಲ್ಲಿ ಹೇಳಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಲ್ಲಿಯೋ ಒಂದು ಕಡೆ ಆ ಸಂಬಂಧ ಸರ್ವೆ ಮಾಡಿ sketch ಮಾಡಿಕೊಡಬೇಕಾದರೆ ಇನ್ನೊಬ್ಬ ಯಾರೋ ಅಧಿಕಾರಿ ಅಲ್ಲಿಗೆ ಬರುತ್ತಾನೆ, ಅವನಿಗೆ ಸ್ವಲ್ಪ ಹಣವನ್ನು ಕೊಡಬೇಕಾಗುತ್ತದೆ. ಇದು practical ಆಗಿರುವಂತಹ ವಿಚಾರವಾಗಿದ್ದು, ಇದರ ಬಗ್ಗೆ ಸರ್ಕಾರ ಆಲೋಚನೆ ಮಾಡಬೇಕು. 10 ಕಿ.ಮೀ. ದೂರದಲ್ಲಿರುವವರಿಗೆ ನಾವು ಏನೂ ಕೊಡುವುದಿಲ್ಲವೆಂದರೆ ಇದು ಸರಿಯಾದ ಕ್ರಮವಲ್ಲ. ಅವರು ಗ್ರಾಮಾಂತರ ಭಾಗದಲ್ಲಿದ್ದರೆ, ನಗರ ಭಾಗದ ಕಾನೂನನ್ನು ಅವರ ಮೇಲೆ ಏತಕ್ಕೆ ಹೇರುತ್ತೀರಿ? ಅದನ್ನು ನಗರಕ್ಕೆ ಸೇರಿಸಿದ್ದು ನಾವು. ನಗರದ 1 ಕಿ.ಮೀ ಹೊರಗಡೆ ಇದ್ದವನು 10 ಸಾವಿರ ರೂಪಾಯಿಗಳನ್ನು ಕಟ್ಟಬೇಕು, ನಗರದ ಒಳಗಡೆ ಇದ್ದವನು 20 ಸಾವಿರ ರೂಪಾಯಿಗಳನ್ನು ಕಟ್ಟಬೇಕು. ಏತಕ್ಕೆ ಕಟ್ಟಬೇಕು? ಆದ್ದರಿಂದ, ಈ ಬಗ್ಗೆ ಮಾನ್ಯ ಸಚಿವರು ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ದಿನಾಂಕವನ್ನು ವಿಸ್ತರಣೆ ಮಾಡುವುದಕ್ಕೆ ನನ್ನ ಅಭ್ಯಂತರವಿಲ್ಲ. ಇದು ಸ್ಪಷ್ಟ. ಎರಡನೆಯದಾಗಿ, ಸೆಕ್ಷನ್ 94-ಎ ವಿಚಾರವಾಗಿ ಯಾವ ಜಮೀನನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಹೇಳಿ 14ನೇ ಎಪ್ರಿಲ್ 1990 ರಲ್ಲಿ ಕಾನೂನು ಮಾಡಿ ಈ Social Legislation ಮಾಡಿದೆ ಎಂದು ಹೇಳಿದರೆ ಯಾವ ಜಮೀನು unauthorized cultivation ನಲ್ಲಿ ಇರುತ್ತದೋ ಅದನ್ನು regularize ಮಾಡಬೇಕೆನ್ನುವುದು ಇದರ ಉದ್ದೇಶ. 14ನೇ ಎಪ್ರಿಲ್ 1990 ರಲ್ಲಿ urban areas limitations ಏನಿತ್ತು ಆ boundaries, ಈಗ 18 ಕಿ.ಮೀ. ಬೆಂಗಳೂರಿನದ್ದು ಇರಬಹುದು, 10 ಕಿ.ಮೀ. ಬೇರೆ ಬೇರೆ ನಗರ ಪಾಲಿಕೆಗಳದ್ದು ಇರಬಹುದು. ಅಂದು unauthorized cultivation ನಲ್ಲಿತ್ತು. ಇವತ್ತಿಗೂ ಇದ್ದಾರೆ. ಆದರೆ, ಈ distance ನ್ನು ಅಂದಿನದಕ್ಕೆ ತೆಗೆದುಕೊಳ್ಳುತ್ತೀರೋ, ಅಥವಾ ಇವತ್ತಿನದ್ದಕ್ಕೆ ತೆಗೆದುಕೊಳ್ಳುತ್ತೀರೋ ಎನ್ನುವುದನ್ನು ಸ್ಪಷ್ಟಪಡಿಸಬೇಕು. ಅಂದೇ Social Legislation ಮಾಡಬೇಕಾದರೆ, ಅಂದಿನದ್ದು ಸ್ಪಷ್ಟ. ಹೀಗಾಗಿ, ಅದನ್ನು ತೆಗೆದುಕೊಂಡಾಗ ಅದು ಅವರಿಗೆ regularize ಆಗುತ್ತದೆ. ಇವತ್ತಿನದ್ದನ್ನು ತೆಗೆದುಕೊಂಡರೆ regularize ಆಗುವುದಿಲ್ಲ, purpose defeat ಆಗುತ್ತದೆ. ಇದಕ್ಕೆ ಸರ್ಕಾರದ ಉತ್ತರ ಏನು ಎನ್ನುವುದು ಒಂದು ವಿಚಾರ. ಎರಡನೆಯದಾಗಿ, 94-ಎ ನಲ್ಲಿ ಆ ಸಮಿತಿಯಲ್ಲಿ ಎಂಎಲ್‌ಎ ಮಾತ್ರ ಸದಸ್ಯರು ಇರುತ್ತಾರೆ. ಈಗ ಸ್ಥಳೀಯ ಸಂಸ್ಥೆಗಳ ವತಿಯಿಂದ 25 ಜನ ಶಾಸಕರು ವಿಧಾನ ಪರಿಷತ್ತಿನಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಹೀಗಾಗಿ, ಎಂಎಲ್‌ಎ.ಗಳಿಗೆ ಹೇಗೆ ಅವಕಾಶ ಇದೆ, ಅದೇ ರೀತಿಯಲ್ಲಿ ಸಂಬಂಧಪಟ್ಟ ಸಮಿತಿಗಳಲ್ಲಿ ಉಪಾಧ್ಯಕ್ಷರಾಗಿ ಸಂಬಂಧಪಟ್ಟ ಎಂಎಲ್‌ಸಿಗಳನ್ನು ನಿಯೋಜನೆ ಮಾಡಬೇಕು. ಏಕೆಂದರೆ, ನಾವು ಸಹ ಜನರನ್ನು ಪ್ರತಿನಿಧಿಸುತ್ತೇವೆ, ನಮಗೂ ಸಹ ಈ ಸಮಸ್ಯೆಗಳ ಅರಿವು ಇದೆ. ಜನಗಳು ನಮ್ಮ ಹತ್ತಿರ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬರುವಂತಹ ಹಿನ್ನೆಲೆಯಲ್ಲಿ ಈ ಸದನದ ಸದಸ್ಯರನ್ನೂ ಸಹ ಸಮಿತಿಯಲ್ಲಿ ಒಬ್ಬ ಸದಸ್ಯರನ್ನಾಗಿ ಮಾಡುವುದಕ್ಕೆ ಸರ್ಕಾರ ಕ್ರಮ ವಹಿಸಬೇಕೆಂದು ಹೇಳಲಿಕ್ಕೆ ಬಯಸುತ್ತೇನೆ.

(255) 23.02.2018 01.10 ಎಸ್‌ವಿ-ವಿಕೆ

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಭೂಕಂದಾಯ ತಿದ್ದುಪಡಿ ವಿಧೇಯಕ 2018 ಅನ್ನು ಸ್ವಾಗತಿಸುತ್ತಾ, ಬಗರ್‌ಹುಕುಂ ಸಾಗುವಳಿ ಮಾಡತಕ್ಕಂತಹ ಜನರ ಸಮಸ್ಯೆ ಏನಿದೆಯೆಂದರೆ ದಿನಾಂಕ 20.03.1991ರಿಂದ ದಿನಾಂಕ 19.09.1991ರ ತನಕ ನಮೂನೆ ಸಂಖ್ಯೆ 50ರಲ್ಲಿ ಅರ್ಜಿಯನ್ನು ಸಲ್ಲಿಸುವಂತಹ ಅವಕಾಶವನ್ನು ಕಲ್ಪಿಸಿಕೊಡಲಾಗಿತ್ತು. ದಿನಾಂಕ 01.11.1998ರಿಂದ ದಿನಾಂಕ 30.04.1999ರ ತನಕ ನಮೂನೆ ಸಂಖ್ಯೆ 53ರಲ್ಲಿ ಅರ್ಜಿಯನ್ನು ಸಲ್ಲಿಸುವಂತಹ ಅವಕಾಶವನ್ನು ಕಲ್ಪಿಸಿಕೊಡಲಾಗಿತ್ತು. ಬಹುಶಃ ಇಷ್ಟು ದೀರ್ಘಾವಧಿಯವರೆಗೆ ರೈತರು ಅಕ್ರಮ-ಸಕ್ರಮಕ್ಕಾಗಿ ಅರ್ಜಿಯನ್ನು ಸಲ್ಲಿಸಿ ಖಾತಾ ಪಡೆದಿದ್ದರೂ ಸಹ ಅದರಲ್ಲಿ ಬಹಳಷ್ಟು ಜನರಿಗೆ ಮಂಜೂರಾತಿ ಆಗಿರುವುದಿಲ್ಲ. ಕೆಲವರು ಅರ್ಜಿಯನ್ನೂ ಸಹ ಕೊಟ್ಟಿರುವುದಿಲ್ಲ. ಅರ್ಜಿಯನ್ನು ಕೊಡದೆ ಇರುವವರಿಗೆ ಈಗ ಅವಕಾಶವನ್ನು ಕೊಟ್ಟಿರುವುದಕ್ಕೆ ಸರ್ಕಾರವನ್ನು ಹಾಗೂ ಸಂಬಂಧಪಟ್ಟ ಸಚಿವರನ್ನು ಅಭಿನಂದಿಸಲಿಚ್ಛಿಸುತ್ತೇನೆ.

ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಇಷ್ಟು ದೀರ್ಘಕಾಲದವರೆಗೆ ಅಕ್ರಮ ಸಕ್ರಮ ಸಮಿತಿಯಿಂದ ಇತ್ಯರ್ಥವಾಗುವುದಕ್ಕೆ ತಡವಾಗಿದೆ. ಇಂದು ಪ್ರಸ್ತಾಪವಾಗಿರುವಂತಹ ಪುರಸಭೆ, ನಗರಸಭೆ ಅಥವಾ ಪಟ್ಟಣ ಪಂಚಾಯ್ತಿಗಳಲಾಗಲಿ ಅವರ ಮಿತಿಯನ್ನು ಗುರುತಿಸತಕ್ಕಂತಹ ಸಂದರ್ಭದಲ್ಲಿ ಹಿಂದಿನ ಪರಿಸ್ಥಿತಿಯನ್ನು ಅವಲೋಕಿಸಿದಾಗ ಯಾವುದಾದರೊಂದು ಕಾರಣದಲ್ಲಿ ಮಂಜೂರು ಮಾಡುವುದು ಸಮಿತಿಯ ವ್ಯಾಪ್ತಿಗೆ ಬಿಟ್ಟ ವಿಚಾರವಾಗಿರುತ್ತದೆ. ಅರ್ಜಿ ಕೊಡುವುದು ಅರ್ಜಿದಾರನ ವ್ಯಾಪ್ತಿಗೆ ಬಿಟ್ಟ ವಿಚಾರವಾಗಿದೆ. ಅರ್ಜಿ ಕೊಟ್ಟ ನಂತರ ಅದನ್ನು ಮಂಜೂರು ಮಾಡಬೇಕು ಇಲ್ಲವೆ ತಿರಸ್ಕರಿಸಬೇಕು. ಇಷ್ಟು ದೀರ್ಘಕಾಲ ತಡೆಹಿಡಿದಿರುವ ಹಿನ್ನೆಲೆಯಲ್ಲಿ, ಹೊಸ ಹೊಸ ಕಾಯಿದೆಗಳು ಬಂದಿರುವ ಹಿನ್ನೆಲೆಯಲ್ಲಿ, ನಗರಸಭೆ, ಪುರಸಭೆಗಳ ವ್ಯಾಪ್ತಿ ಹಿರಿದಾಗುತ್ತಿರುವ ಹಿನ್ನೆಲೆಯಲ್ಲಿ ಜನರು ಅವಕಾಶ ವಂಚಿತರಾಗುತ್ತಿದ್ದಾರೆ. ಅರ್ಜಿ ಕೊಟ್ಟಿರುವವರದು ಏನೂ ತಪ್ಪಿಲ್ಲ. ಸಮಿತಿಯು ಇತ್ಯರ್ಥಗೊಳಿಸುವಂತಹ ಸಮಯದಲ್ಲಿ ಆದ ವಿಳಂಬದಿಂದಾಗಿ ಅರ್ಜಿದಾರನಿಗೆ ಅನ್ಯಾಯವಾದರೆ ಅದನ್ನು ಮಾನವೀಯತೆಯ ನೆಲೆಗಟ್ಟಿನಲ್ಲಿ ಸರಿಪಡಿಸಲು ಸಾಧ್ಯವೇ ಎಂಬುದನ್ನು ಪರಿಶೀಲಿಸಬೇಕು.

ಅರ್ಜಿ ಕೊಡುವ ಸಂದರ್ಭದಲ್ಲಿ ಎರಡು ವಿಷಯಗಳನ್ನು ಪರಿಗಣಿಸಬೇಕು. ಮೊದಲನೆಯದಾಗಿ ಇದು deemed forest ಎಂದು ಹೇಳಿ ಅರ್ಜಿ ಕೊಡಲು ಅವಕಾಶ ಇಲ್ಲ. ಕೊಟ್ಟಿರತಕ್ಕಂತಹ ಅರ್ಜಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇತ್ಯರ್ಥವಾಗುತ್ತಿಲ್ಲ. ಅಧಿಕಾರಿಗಳಿಗೆ deemed forest ಎನ್ನುವುದರಲ್ಲಿ ನಮ್ಮ ಮನೆ, ಹಟ್ಟಿ, ಗದ್ದೆ, ತೋಟಗಳು ಅರಣ್ಯದಂತೆ ಕಾಣುವುದಾದರೆ ಅಥವಾ ಅದನ್ನು ಅರಣ್ಯ ಎಂದು ಭಾವಿಸುವುದಾದರೆ ಅದು ನಮ್ಮ ರೈತರ ದುರಾದೃಷ್ಟವೇ ಸರಿ. ಯಾರು ಅಕ್ರಮವಾಗಿ ಸಾಗುವಳಿ ಮಾಡಿಕೊಂಡಿದ್ದಾರೆಯೋ ಅವರಿಗೆ ಸಕ್ರಮ ಮಾಡಿಕೊಡುವ ಮೂಲಕ ಅವಕಾಶವನ್ನು ಕಲ್ಪಿಸಿಕೊಡಬೇಕು ಎನ್ನುವುದು ಈ ಕಾಯ್ದೆಯನ್ನು ತಂದಿರುವ ಮೂಲ ಉದ್ದೇಶವಾಗಿದೆ. Deemed forest ಅನ್ನು ವಾಸ್ತವಾಂಶದ ಮೇಲೆ ನಿಜವಾಗಿಯೂ ಖಾತಾ ಮಾಡಿದ್ದರೆ ಅಥವಾ ಖಾತಾ ಇದ್ದರೆ ಅದನ್ನು ಸಕ್ರಮಗೊಳಿಸುವ ಒಂದು ರೀತಿಯನ್ನು ಸರ್ಕಾರ ಕಂಡುಕೊಳ್ಳಬೇಕಾಗಿದೆ. ಖಾತಾ ಇಲ್ಲದಿದ್ದರೂ ಮಾಡಬೇಕೆಂಬುದು ನನ್ನ ವಾದವಲ್ಲ.

ರೈತರ ಖದಿಮ್ ಭೂಮಿಯ ಒತ್ತುವರಿಯಾದಂತಹ ಜಾಗವನ್ನು ಕುಮ್ಕಿ ಎಂದು ಕರೆಯಲಾಗುವುದು. ಅದರಡಿಯಲ್ಲಿ ಅರ್ಜಿಯನ್ನು ಕೊಡಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಡಲಾಯಿತು. ಅರಣ್ಯಭೂಮಿ ಎನ್ನುವ ಹಿನ್ನೆಲೆಯಲ್ಲಿ ಇಂದು ಅದನ್ನು ತಡೆಹಿಡಿಯಲಾಗಿದೆ. ಅದನ್ನು ಮಂಜೂರು ಮಾಡಲಿಕ್ಕೆ ಆಗುತ್ತದೆಯೋ? ಇಲ್ಲವೋ? ಆಗದಿದ್ದಲ್ಲಿ ಆ ಜಾಗವನ್ನು ಯಾವಾಗ ತೆರವುಗೊಳಿಸಲಾಗುವುದು ಎನ್ನುವುದರ ಬಗ್ಗೆ ಸರ್ಕಾರ ಸ್ಪಷ್ಟೀಕರಣವನ್ನು ನೀಡಬೇಕು. ಇದಕ್ಕೆ ಅರ್ಜಿಯನ್ನು ಕೊಡಲು ವಿಧಾನ ಪರಿಷತ್ತಿನ ಸದಸ್ಯರಿಗೆ ಅವಕಾಶವನ್ನು ಮಾಡಿಕೊಡಬೇಕು ಎಂದು ಮಾನ್ಯ ಸಚಿವರಲ್ಲಿ ಕೋರುತ್ತೇನೆ.

ಅಕ್ರಮ-ಸಕ್ರಮ ಸಮಿತಿಯ ಅಧ್ಯಕ್ಷನಾಗಿ ನನ್ನನ್ನು ಆಯ್ಕೆ ಮಾಡಿದುದಕ್ಕೆ ವಿಶೇಷವಾಗಿ ಮಾನ್ಯ ಸಚಿವರನ್ನು ಅಭಿನಂದಿಸಲಿಚ್ಛಿಸುತ್ತೇನೆ. ನಾನು ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸುವುದಕ್ಕೆ ಇಚ್ಛೆ ಪಟ್ಟಿಲ್ಲ. ಏಕೆ ಪಡಲಿಲ್ಲವೆಂದರೆ ಅಲ್ಲಿ ಹೋಗಿ ಕೆಲಸ ಮಾಡಿದುದಕ್ಕೆ ಯಾವುದೇ ಒಂದು file ಇಲ್ಲ. ಒಂದು deemed forest ಇನ್ನೊಂದು ಕುಮ್ಕಿ ಭೂಮಿ. ನಾನು ರಾಜಕೀಯ ಕ್ಷೇತ್ರದಲ್ಲಿ ಜನರಿಗೆ ಯಾವುದಾದರೂ ಮಂಜೂರಾತಿಯನ್ನು ಮಾಡಬೇಕಾದರೆ ಕುಮ್ಕಿ ಭೂಮಿಯನ್ನೂ ಮಾಡುವುದಕ್ಕಾಗುವುದಿಲ್ಲ. Deemed forest ಅನ್ನೂ ಮಾಡುವುದಕ್ಕಾಗುವುದಿಲ್ಲ. ಅಲ್ಲಿ ಹೋಗಿ ಕುಳಿತುಕೊಂಡು ಮುಂದುವರೆಸಿದ್ದೇವೆ ಇಲ್ಲವೆ ತಾತ್ಕಾಲಿಕವಾಗಿ ಮಂಜೂರಾತಿ ಮಾಡಿದ್ದೇವೆ ಎಂದು ಬರೆಯಬೇಕೇ ವಿನಃ ಆತ್ಮಸಾಕ್ಷಿಯಾಗಿ ಕೆಲಸವನ್ನು ಮಾಡಲಿಕ್ಕೆ ಸಾಧ್ಯವಿಲ್ಲ. ಅದು ಸರಿಯೇ ಅಥವಾ ತಪ್ಪೇ ಎಂಬುದು ನನಗೆ ಗೊತ್ತಿಲ್ಲ. ಆದರೂ ನನ್ನ ಮನಸ್ಸು ಒಪ್ಪದ ಕಾರಣ ನಾನು ಮಾಡಲಿಲ್ಲ. ಹಾಗೆಂದು ಎಲ್ಲಾ ಸರಿಯಿದೆ ಎಂಬ ಅರ್ಥವಲ್ಲ. ನನಗೆ ಅವಕಾಶವನ್ನು ಕೊಟ್ಟಿರುವುದನ್ನು ಈ ಸಂದರ್ಭದಲ್ಲಿ ಸ್ಮರಿಸುವುದು ನನ್ನ ಹೊಣೆ ಎಂದು ನಾನು ಭಾವಿಸುತ್ತೇನೆ.

ಮಾನ್ಯ ಐವನ್ ಡಿ'ಸೋಜಾರವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. 5 cents ಜಾಗವನ್ನು ಕೊಡುವುದಕ್ಕೆ ನಾವು ಮೀನಾ-ಮೇಷ ಎಣಿಸುತ್ತೇವೆ. ಆದರೆ ನಾಲ್ಕು ಎಕರೆಯನ್ನು ಕೊಡುವಾಗ ಉದಾರತೆಯನ್ನು ತೋರುತ್ತೇವೆ. ಅವರಿಗೆ ಕೊಡತಕ್ಕಂತಹ ನಾಲ್ಕು ಎಕರೆಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಂಜೂರು ಮಾಡಲಿಕ್ಕೆ ಐದುನೂರು ಪಟ್ಟು ಹೆಚ್ಚಾಗಿ ಅಕ್ರಮ ಸಕ್ರಮದಡಿಯಲ್ಲಿ ಅರ್ಜಿ ಕೊಟ್ಟವರಿಗೆ 3,000-4,000 ರೂಪಾಯಿಗಳು ಈ ರೀತಿ ಬರುತ್ತದೆ. ಆದರೆ 5 cents ಕೊಡುವವರಿಗೆ ಬಹುಶಃ 10,000 ರೂಪಾಯಿಗಳು ಬರುತ್ತದೆ. 5 cents ಗೆ ರೂ.10,000/-, ನಾಲ್ಕು ಎಕರೆಗೆ ರೂ.3,000-ರೂ.4,000/- ಈ ರೀತಿಯಾಗುವುದು ಎಷ್ಟು ಸರಿ ಎಂಬ ದ್ವಂದ್ವ ನಮ್ಮಲ್ಲಿ ಮೂಡುತ್ತದೆ. ಇದನ್ನೂ ಸಹ ಮಾನ್ಯ ಸಚಿವರು ಚಿಂತನೆ ಮಾಡಬೇಕೆಂದು ಕೋರುತ್ತೇನೆ.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅಕ್ರಮ-ಸಕ್ರಮದಡಿಯಲ್ಲಿ ಅರ್ಜಿ ಹಾಕಲು ಬಹಳಷ್ಟು ಜನರಿಗೆ ತೊಂದರೆಯಾಗುತ್ತಿದೆ. ಸರ್ಕಾರಿ ಜಾಗದಲ್ಲಿ ಯಾವ ರೈತರು ವ್ಯವಸಾಯ ಮಾಡುತ್ತಿದ್ದಾರೆಯೋ, ಅದನ್ನು ಸರ್ಕಾರವೇ Suo moto ಗುರುತು ಹಚ್ಚಿ ಆ ರೈತರ ಕಡೆಯಿಂದ ಅರ್ಜಿ ಹಾಕಿಸುವಂತಹ ಕೆಲಸವನ್ನು ಮಾಡುವುದಕ್ಕಾಗುತ್ತದೆಯೇ? ಏಕೆಂದರೆ ಬಹಳ ಜನಕ್ಕೆ ಇದರ ಬಗ್ಗೆ ಗೊತ್ತೇ ಇಲ್ಲ. ಬೆಂಗಳೂರು ಸುತ್ತಮುತ್ತಲಿರುವ ಜನರಿಗೆ ಗೊತ್ತಿರಬಹುದು. ಗ್ರಾಮೀಣ ಪ್ರದೇಶಗಳಿಗೆ ಹೋದರೆ ಅಕ್ರಮ-ಸಕ್ರಮದಡಿಯಲ್ಲಿ ಅರ್ಜಿ ಸಲ್ಲಿಸಬಹುದು ಎನ್ನುವುದೇ ಅವರಿಗೆ ಗೊತ್ತಿರುವುದಿಲ್ಲ. ಸರ್ಕಾರದ ಅಧಿಕಾರಿಗಳು suo moto ತಾವೇ ಹೋಗಿ ಯಾವ ಜಾಗದಲ್ಲಿ ಉಳುಮೆ ಮಾಡುತ್ತಿದ್ದಾನೆಯೋ, ಅವನಿಂದ ಅರ್ಜಿಯನ್ನು ತೆಗೆದುಕೊಳ್ಳಲಾಗುವುದೇ ಎಂಬುದನ್ನು ಪರಿಶೀಲಿಸಬೇಕು.

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಈ ತಿದ್ದುಪಡಿಯ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಸದಸ್ಯರು ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಐವನ್ ಡಿ'ಸೋಜಾ ಅವರು ಮಾತನಾಡುತ್ತಾ, ನಿವೇಶನವನ್ನು ಮಂಜೂರು ಮಾಡುವ ಸಂದರ್ಭದಲ್ಲಿ ದರ ಜಾಸ್ತಿಯಾಗಿದೆ, ವಿಸ್ತೀರ್ಣ ಕಡಿಮೆಯಾಗಿದೆ ಎಂದು ಹೇಳಿದರು. ವಿಷಯವೇನೆಂದರೆ ಅದು ತಿದ್ದುಪಡಿಯಾಗಿರತಕ್ಕಂಥದ್ದು, ಸಚಿವ ಸಂಪುಟದ ಮುಂದೆ ಈ ವಿಷಯ ಬಂದಾಗ ಆ ವಿಷಯಕ್ಕೆ ಹೆಚ್ಚು ಒತ್ತು ಬರಲಿಲ್ಲ. ಹಾಗಾಗಿ ಅದನ್ನು ಪ್ರಸ್ತಾಪ ಮಾಡಲಿಕ್ಕಾಗಲಿಲ್ಲ. ನಾನು ಮಾಡಬೇಕೆಂದರೆ ಆ ವಿಷಯವು ಸಚಿವ ಸಂಪುಟದ ಒಳಗೆ ತೀರ್ಮಾನವಾಗಬೇಕಾಗುತ್ತದೆ. ಮಾನ್ಯ ಕೆ.ಪ್ರತಾಪಚಂದ್ರ ಶೆಟ್ಟಿಯವರು ಸಹ ಅದನ್ನು ಹೇಳಿದ್ದಾರೆ. ಮತ್ತೊಮ್ಮೆ ಇದನ್ನು ಪರಿಶೀಲಿಸುವ ಪ್ರಯತ್ನವನ್ನು ಮಾಡಲು ತಯಾರಿದ್ದೇವೆ. ಮಾನ್ಯ ಸದಸ್ಯರು ಸಹ ತಮ್ಮ ತಮ್ಮ ವ್ಯಾಪ್ತಿಯಲ್ಲಿ ಸಂಬಂಧಪಟ್ಟವರಿಗೆ ಇದರ ಬಗ್ಗೆ ಅರಿವು ಮೂಡಿಸತಕ್ಕಂತಹ ಪ್ರಯತ್ನವನ್ನು ಮಾಡಿದರೆ ನನಗೆ ಸ್ವಲ್ಪ ಬೆಂಬಲ ಸಿಕ್ಕಂತಾಗುತ್ತದೆ, ಶಕ್ತಿಯೂ ಬರುತ್ತದೆ.

ಹಿಂದೆ ನಾನು ಕರ್ನಾಟಕ ವಿಧಾನ ಸಭೆಯ ಸಭಾಧ್ಯಕ್ಷನಾಗಿದ್ದಂತಹ ಸಂದರ್ಭದಲ್ಲಿ ತಿದ್ದುಪಡಿ ಬಂದಾಗ ಮನೆ, ನಿವೇಶನ ಕೊಡುವ ವಿಚಾರದಲ್ಲಿ ದೊಡ್ಡವ, ಸಣ್ಣವ ಎಂದು ಎಣಿಸುವುದು ಬೇಡ. ಎಲ್ಲರಿಗೂ ಕೊಟ್ಟುಬಿಡೋಣ. 50' X 80' ಅಡಿ ಅಳತೆಯ ನಿವೇಶನವನ್ನು ಹಂಚಿಕೆ ಮಾಡಿಬಿಡೋಣ ಎಂಬ ಒಂದು ಸಲಹೆಯನ್ನು ಕೊಟ್ಟಿದ್ದೆನು. ಈಗ ಅದನ್ನು ಮಾಡಿದ್ದೇನೆ. ಗ್ರಾಮೀಣ ಭಾಗದಲ್ಲಿ ದೊಡ್ಡವ

ಕಟ್ಟಿರಬಹುದು ಅಥವಾ ಸಣ್ಣವ ಕಟ್ಟಿರಬಹುದು; ಅವನಿಗೆ ವ್ಯತ್ಯಾಸವಿಲ್ಲದೆ ಮಂಜೂರು ಮಾಡಲು ಅವಕಾಶವನ್ನು ಕಲ್ಪಿಸಿಕೊಡಲಾಗಿದೆ. ಈ ಅವಕಾಶ ನಗರ ಸಭೆ ಪ್ರದೇಶದಲ್ಲಿಯೂ ಆಗಬೇಕು. ಅದನ್ನು ನಾನು ಒಪ್ಪುತ್ತೇನೆ. ಈ ವಿಷಯದಲ್ಲಿ ನಾನೂ ಸಹ ತಮ್ಮ ಜೊತೆಗಿದ್ದೇನೆ. ಮತ್ತೊಮ್ಮೆ ಅದನ್ನು ಪರಿಶೀಲಿಸಲಾಗುವುದು.

ಮಾನ್ಯ ರಾಮಚಂದ್ರಗೌಡರು ಎರಡು-ಮೂರು ಸಲಹೆಗಳನ್ನು ನೀಡಿದರು. ಅವರು ಹೇಳಿದಂತೆ ಸರ್ಕಾರವೇ ಅಕ್ರಮ ಸಕ್ರಮಕ್ಕಾಗಿ ಅರ್ಜಿಯನ್ನು ಕೊಡಿಸುವಂಥ ಪ್ರಯತ್ನವನ್ನು ಮಾಡಿದರೆ ಅದರಿಂದ ಬಹಳ ಅಪಾಯವಿದೆ. ಏಕೆಂದರೆ ಕೆಳಹಂತದ ಅಧಿಕಾರಿಗಳಿಗೆ ಅವರೇ ಹೋಗಿ ಅರ್ಜಿಗಳನ್ನು ತೆಗೆದುಕೊಳ್ಳುವುದಕ್ಕೆ ಬಿಟ್ಟರೆ ವಸೂಲಿಗಿಳಿದು ಬಿಡುತ್ತಾರೆ. ಆದ್ದರಿಂದ ನಮ್ಮ ಜನ ಪ್ರತಿನಿಧಿಗಳು ಜನರಲ್ಲಿ ಜಾಗೃತಿಯನ್ನು ಮೂಡಿಸತಕ್ಕಂತಹ ಕೆಲಸವನ್ನು ಮಾಡಬೇಕು. ಅದರಿಂದ ಅವರಿಗೂ ಶಕ್ತಿ ಬರುತ್ತದೆ. ಭೂ ಹೋರಾಟದ ಹಿನ್ನೆಲೆಯಿಂದ ಬಂದಂತಹವನಾಗಿ ಜಾರಿಗೆ ಕೊಡಬೇಕಾದ ಸಂದರ್ಭದಲ್ಲಿ ಮನೆ-ಮನೆಗೂ ತಿರುಗಿ ಅರ್ಜಿಗಳನ್ನು ಹಾಕಿಸುವಂತಹ ಕೆಲಸವನ್ನು ನಾವು ಮಾಡಿದ್ದೇವೆ.

(256) 23.02.2018 01.20 ಕೆಜಿ/ಬಿಎನ್‌ಎಸ್

**ಶ್ರೀ ಕಾಗೋಡು ತಿಮ್ಮಪ್ಪ (ಮುಂದು..):-**

ಮಾನ್ಯ ಸದಸ್ಯರಾದ ಕೆ.ಪ್ರತಾಪಚಂದ್ರ ಶೆಟ್ಟಿರವರು ಈಗ ಹೇಳಿರುವಂತಹದ್ದು ಇದೆ. ಕಾರಣವೇನೆಂದರೆ, ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರ ಮುಖಂಡರು ಇಂತಹ ಕಾನೂನುಗಳು ಬಂದಾಗ ಜನರಿಂದ ಜನರಿಗೆ ಜಾಗೃತಿ ಮೂಡಿಸಿ ಅರ್ಜಿ ಹಾಕಿಸುವಂತಹ ಕೆಲಸ ಮಾಡಿದರೆ, ಆ ಜನರಿಗೂ ಕೂಡ ಒಂದು ಸಂತೋಷ ಬರುತ್ತದೆ ಮತ್ತು ಜನಪ್ರತಿನಿಧಿಗಳಾಗಿ ಕೆಲಸ ಮಾಡುವಂತಹವರಿಗೂ ಸಹ ಒಂದು ಮುಖಂಡತ್ವ ಬೆಳೆಯುತ್ತದೆ. ಅದಕ್ಕೆ ಮಾನ್ಯ ಸದಸ್ಯರು ಹೇಳಿರುವಂಥದ್ದನ್ನು ನಾನು ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬೆಂಗಳೂರು ನಗರದ ವಿಚಾರದ ಬಗ್ಗೆ ಇನ್ನೂ ಹೆಚ್ಚು distance ಮಾಡಬೇಕೆಂದು ಹೇಳಿದ್ದಾರೆ. ಈಗಾಗಲೇ 18 ಕಿಲೋಮೀಟರ್ ಮಾಡಿರುವುದು ಏನಿದೆ ಇದರೊಳಗೆ ಕೊಡಬೇಕೆಂದು ಒತ್ತಾಯವು ಸಹ ಇದೆ. ನಾವು ಇದನ್ನು ತಡೆಹಿಡಿದು ಹಾಗೆಯೇ ನಿಲ್ಲಿಸಿದ್ದೇವೆ. ಈಗಾಗಲೇ ಇದರೊಳಗೆ ಅನೇಕ ಕಡೆಗಳಲ್ಲಿ ಸಾಗುವಳಿ ಮಾಡಿದಂತಹ ಪ್ರಕರಣಗಳು ಇವೆ. ಈ ಹಿಂದೆ ಅಕ್ರಮವಾಗಿ ಮಾಡಿದ್ದಾರೆಂಬ ದೂರುಗಳು ಇವೆ. ಆದ್ದರಿಂದ ಮಾನ್ಯ ಸದಸ್ಯರು ಹೇಳಿರುವಂತಹ ಸಲಹೆ ಸರಿ ಇದೆ. ಬೆಂಗಳೂರಿನ ಅಭಿವೃದ್ಧಿ ವೇಗದ ದೃಷ್ಟಿಯಿಂದ ಈಗಿರುವ 18 ಕಿಲೋ ಮೀಟರ್‌ಗಳನ್ನು ಇನ್ನು ಹೆಚ್ಚಿಗೆ ಮಾಡಬೇಕೆಂದು ಇದೆ. ಆದರೆ, ಇದರಿಂದ ಅಪಾಯವೂ ಇದೆ. ಹಾಗಾಗಿ, ನಾನು ಇದನ್ನು ಸ್ವಲ್ಪ ಗಂಭೀರವಾಗಿ ಪರಿಶೀಲನೆ ಮಾಡಬೇಕಾಗುತ್ತದೆ. ಎರಡನೆಯದಾಗಿ, ನಮ್ಮ ಮಾನ್ಯ ಸದಸ್ಯರಾದ ಉಗ್ರಪ್ಪನವರು...

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಾಮಚಂದ್ರಗೌಡ**:- ಮಾನ್ಯ ಸಭಾಪತಿಯವರೇ,..

**ಸಭಾಪತಿಯವರು**:- ಮಾನ್ಯ ರಾಮಚಂದ್ರಗೌಡರೇ, ಆಯಿತು. ಈಗ ಚರ್ಚೆ ಬೇಡ.

**ಶ್ರೀ ರಾಮಚಂದ್ರಗೌಡ**:- ಮಾನ್ಯ ಸಭಾಪತಿಯವರೇ, ಬೆಂಗಳೂರು ಸುತ್ತಮುತ್ತ ಇರುವಂತಹ ಭೂಮಿ ಸರ್ಕಾರಕ್ಕೆ ಅವಶ್ಯಕತೆ ಇರುತ್ತದೆ.

**ಶ್ರೀ ಕಾಗೋಡು ತಿಮ್ಮಪ್ಪ**:- ಮಾನ್ಯ ಸಭಾಪತಿಯವರೇ, ಅವಶ್ಯಕತೆ ಇದೆ. ನಾನು ಅದನ್ನು ಒಪ್ಪುತ್ತೇನೆ.

**ಶ್ರೀ ರಾಮಚಂದ್ರಗೌಡ**:- ಮಾನ್ಯ ಸಭಾಪತಿಯವರೇ, ಆ ಭೂಮಿಯನ್ನು ಪೊಲೀಸ್ ಠಾಣೆ, ಶಾಲೆ-ಕಾಲೇಜು, ರೈಲ್ವೆ ಲೈನ್, ಅಂಚೆ ಕಛೇರಿ ಇತರೆ ಸಂಸ್ಥೆಗಳು ಬರುವಾಗ, ಅವರಿಗೆ ಬೇರೆ ಕಡೆ ಎಲ್ಲಾದರೂ ಕೊಡಬಹುದು. ನಗರದೊಳಗೆ ಬಂದಂತಹ ಸಂದರ್ಭದಲ್ಲಿ ಅದನ್ನು ಉಳಿಸಿಕೊಳ್ಳದೆ ಹೋದರೆ ಸರ್ಕಾರಕ್ಕೆ ಕಷ್ಟವಾಗುತ್ತೆ ಎನ್ನುವಂತಹ ಹಿನ್ನೆಲೆಯಲ್ಲಿ ಈ ಮಾತನ್ನು ಹೇಳಿದ್ದೇನೆ.

**ಶ್ರೀಮತಿ ಜಯಮಾಲ**:- ಮಾನ್ಯ ಸಭಾಪತಿಯವರೇ, ಕುಮ್ಕಿ ಜೊತೆಯಲ್ಲಿ ಸೊಪ್ಪಿನ ಬೆಟ್ಟವನ್ನು ಸಹ consider ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ**:- ಮಾನ್ಯ ಸಭಾಪತಿಯವರೇ, ಈ ಶಾಸನ ಚರ್ಚೆಯಾದಂತಹ ಸಂದರ್ಭದಲ್ಲಿ ಕುಮ್ಕಿ ಬೆಟ್ಟದಿಂದ ಬಂದಂತಹವರು ಬಾಯಿಯೇ ಬಿಡಲಿಲ್ಲ. ಈಗ ನನಗೆ ಏನು ಕಷ್ಟ ಇದೆ ಎಂದು ಅದನ್ನು ಇಲ್ಲಿ ಬಿಚ್ಚಿ ಹೇಳುವುದಕ್ಕೆ ಬರುತ್ತದೆಯೇ? ಆ ರೀತಿ ಅದನ್ನು ಹೇಳುವುದಕ್ಕೆ ಬರುವುದಿಲ್ಲ. ಆ ಕಷ್ಟವನ್ನು ಅನುಭವಿಸುವವನು ನಾನು. ಅದನ್ನು ಏನಾದರೂ ಮಾಡಿ ಬಗೆಹರಿಸಬೇಕೆಂದು ನನ್ನ ತಲೆಯಲ್ಲಿದೆ. ನಮ್ಮ ಮಾನ್ಯ ಉಗ್ರಪ್ಪನವರು ಹೇಳಿದಂತೆ, ಈಗ 2005 ರವರೆಗೂ ಯಾರ್ಯಾರು ಸಾಗುವಳಿ ಮಾಡಿದ್ದಾರೆ ಅವರೆಲ್ಲರಿಗೂ ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ.

**ಶ್ರೀ ವಿ.ಎಸ್.ಉಗ್ರಪ್ಪ**:- ಮಾನ್ಯ ಸಭಾಪತಿಯವರೇ, distance ಎಷ್ಟು ಇದೆ?

**ಶ್ರೀ ಕಾಗೋಡು ತಿಮ್ಮಪ್ಪ**:- ಮಾನ್ಯ ಸಭಾಪತಿಯವರೇ, distance ಮೊದಲು ಏನು ಇತ್ತೋ, ಈಗಲೂ ಅಷ್ಟೇ ಇದೆ.

**ಶ್ರೀ ವಿ.ಎಸ್.ಉಗ್ರಪ್ಪ**:- ಮಾನ್ಯ ಸಭಾಪತಿಯವರೇ ಇಲ್ಲಿ ಎರಡು ರೀತಿಯ ಸಮಸ್ಯೆಗಳು ಇವೆ. ಮೊದಲನೆಯದಾಗಿ, Transfer of Property Act, 1882 ಪ್ರಕಾರ, ಯಾರು ಸರ್ಕಾರಿ ಜಮೀನಿನಲ್ಲಿ 30 ವರ್ಷಗಳ ಕಾಲ adverse possession ನಲ್ಲಿ cultivate ಮಾಡಿರುತ್ತಾರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

as a matter of right, he is entitled for regularization. ಇದು ಒಂದು. ಎರಡನೆಯದಾಗಿ, ಈ distance ವಿಚಾರವಾಗಿ, Bengaluru South taluk ನಲ್ಲಿ 10 ಸಾವಿರ ಕೋಟಿ ರೂಪಾಯಿಗಳನ್ನು, ತಾವೇ ಆದೇಶ ಮಾಡಿದ್ದೀರಿ. ಸುಮಾರು 10 ಸಾವಿರ ಕೋಟಿ ರೂಪಾಯಿಗಳನ್ನು ಒಬ್ಬ ಶಾಸಕರು..., ಈಗ aerial distance ಅನ್ನು ತೆಗೆದುಕೊಳ್ಳಬೇಕೆಂದು Supreme Court ನ Judgment ಇದೆ. ಅವರು (ಒಬ್ಬ ಶಾಸಕರು) ಏನು ಮಾಡಿದ್ದಾರೆಂದರೆ, ಈ ರಸ್ತೆಯ distance ಅನ್ನು ತೆಗೆದುಕೊಂಡು ಹೋಗಿ 18 ಕೀಲೋ ಮೀಟರ್ ಆಚೆಗೆ ಬರುತ್ತದೆಂದು ಹೇಳಿ grant ಮಾಡಿ ಅದರಿಂದ 10 ಸಾವಿರ ರೂಪಾಯಿಗಳಷ್ಟು ಸರ್ಕಾರಕ್ಕೆ ನಷ್ಟವಾಗಿರುತ್ತದೆ. ಹಾಗಾಗಿ, ದಯಮಾಡಿ ಈ distance ಬಗ್ಗೆ ಸಮಿತಿಗೆ clarity ಕೊಡುವುದನ್ನು ಮಾಡದೇ ಇದ್ದರೆ, ಬಹುಶಃ ಒಂದು ಕಡೆ ಯಾರು ಫಲಾನುಭವಿಗಳಿರುತ್ತಾರೆ ಅವರಿಗೆ ತೊಂದರೆಯಾಗುತ್ತದೆ ಮತ್ತು ಇದರಿಂದ ಸರ್ಕಾರಕ್ಕೂ ನಷ್ಟವಾಗುತ್ತದೆ. ಈ ದಿಕ್ಕಿನಲ್ಲಿ ಸರ್ಕಾರ ಒಂದು ಸ್ಪಷ್ಟವಾದಂತಹ ನಿಲುವನ್ನು ರೂಪಿಸುವುದು ಸೂಕ್ತ ಎಂದು ನಾನು ಹೇಳಬಯಸುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಉಗ್ರಪ್ಪನವರು ಹೇಳಿರುವಂಥದ್ದನ್ನು ನಾನು ಒಪ್ಪುತ್ತೇನೆ. ಸರ್ಕಾರಿಂದ ನಿರ್ದಿಷ್ಟವಾಗಿ ಆ distance ಅನ್ನು ಗುರುತು ಮಾಡುವಂತಹ ವಿಧಾನದ ಬಗ್ಗೆ ಒಂದು ಹೊಸ ಆದೇಶವನ್ನು ಹೊರಡಿಸುತ್ತೇವೆ. ಎರಡನೆಯದಾಗಿ, ನಮ್ಮ ಮಾನ್ಯ ಸದಸ್ಯರಾದ ಪ್ರತಾಪಚಂದ್ರ ಶೆಟ್ಟಿಯವರು deemed forest ಮತ್ತು ಖುಷ್ಕಿ ಬಗ್ಗೆ ಹೇಳಿದ್ದಾರೆ. ಈ deemed forest ಬಗ್ಗೆ ಸರ್ಕಾರದ ಮುಂದೆ ಚರ್ಚೆಗೆ ಬಂದು ಯಾವುದನ್ನು ಕೈಬಿಡಬೇಕು ಎಂಬುದರ ಬಗ್ಗೆ ಜಿಲ್ಲಾಧಿಕಾರಿಗಳಿಂದ ಆ ಜಿಲ್ಲೆಯ ಶಾಸಕರೆಲ್ಲ ಸೇರಿ ಒಂದು ಅಭಿಪ್ರಾಯನ್ನು ಪಡೆದು ಆ ಬಗ್ಗೆ ಒಂದು ವರದಿಯನ್ನು ಕಳುಹಿಸಿದರೆ, ಅದನ್ನು ನಾವು ಒಪ್ಪುತ್ತೇವೆಂದು ಹೇಳಿ ಆ ಬಗ್ಗೆ ಆದೇಶ ಹೋಗಿದೆ, ಈಗ ಎಲ್ಲಾ ಬಂದಿದೆ.

**ಶ್ರೀ ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಏನಾದರೂ ಒಂದು ಬಿಟ್ಟು ಹೋದರೆ, ಅದನ್ನು ಎಲ್ಲಿಯಾದರೂ ಕೇಳುವುದಕ್ಕೆ ಅವಕಾಶ ಮಾಡಿಕೊಡಬೇಕು ಅಲ್ಲವೇ, ಅದಕ್ಕೆ Supreme Court ಗೆ ಹೋಗುವುದಕ್ಕೆ ಆಗುತ್ತದೆಯೇ? ಎಲ್ಲಾದರೂ appeal ಮಾಡುವುದಕ್ಕೆ ಒಂದು stage ಇರಬೇಕು.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಈ ಭಾಷೆಯನ್ನು ಬಳಸುವಂತಹ ಸಂದರ್ಭದಲ್ಲಿ ಬಳಸುವಂತಹ ಕೆಲಸ ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಸಚಿವರೇ, ತಾವು ಹೇಳಿದ್ದು ಸರಿ.

**ಶ್ರೀ ಕಾಗೋಡು ತಿಮ್ಮಪ್ಪ:–** ಮಾನ್ಯ ಸಭಾಪತಿಯವರೇ, ನನಗೆ ಇರುವ ನೋವು ಯಾರಿಗೆ ಗೊತ್ತಿದೆ? ಕ್ಯಾಬಿನೆಟ್‌ಗೆ ಬಂದಿದ್ದನ್ನು ಕಳುಹಿಸಿ, ಮತ್ತೆ ಈಗ ಬಂದಿದೆ. ಈಗ ಮತ್ತೆ ಕ್ಯಾಬಿನೆಟ್‌ಗೆ ತರಬೇಕಾಗಿದೆ. ಹೀಗಾಗಿ, ಅದು ಹಿಂದೆ–ಮುಂದೆ ಓಡಾಡುತ್ತಿದೆ. ನಾನು ಅದನ್ನು ಹೇಳುವಂತಿಲ್ಲ, ಅನುಭವಿಸುವಂತಿಲ್ಲ. ಜೊತೆಗೆ ಲ್ಯಾಂಡ್ ವಿಚಾರದಲ್ಲಿ ಕುಮ್ಕಿ, ಸೊಪ್ಪಿನ ಬೆಟ್ಟ, ಕಾನು, ಕೂರ್ಗಿ ಇವೆಲ್ಲ privilege lands as per Section 79(2) of the Karnataka Land Revenue Act, 1964. ಇದು ಬ್ರಿಟಿಷರ ಕಾಲದಿಂದ ಬಂದಂತಹವು. ಇವು ಏನಾಗಿವೆ ಎಂದರೆ, amendment to Section 94 (b) of the Karnataka Land Revenue Act, 1964 ಅನ್ನು ಮಾಡಿದಾಗ privilege land ಅನ್ನು ಬಗರ್‌ಹುಕುಂ ಮಾಡಿದ್ದರೆ, ಅವರಿಗೆ ಮಂಜೂರು ಕೊಡಬೇಕೆಂದು ಮಾಡಿದ್ದಾರೆ. ಆ ರೀತಿ ಮಾಡಿ ಕೊನೆಯಲ್ಲಿ ಒಂದು clause ನಲ್ಲಿ ಮೇಲ್ಕಂಡ ಜಮೀನುಗಳು ಅರಣ್ಯ, ಆದ್ದರಿಂದ ಕೇಂದ್ರ ಸರ್ಕಾರದ ಪೂರ್ವಾನುಮತಿಯನ್ನು ಪಡೆಯಬೇಕೆಂದು ಒಂದು provision ಅನ್ನು ಮಾಡಿದ್ದಾರೆ. ಈಗ ನಾನು ಆ provision ಅನ್ನು ತೆಗೆದು ಹಾಕುವುದಕ್ಕೆ ತಿದ್ದುಪಡಿಯನ್ನು ತರುವುದಕ್ಕೆ ತಂದಿದ್ದೇನೆ. ನಾವು ಎಲ್ಲಿ ದಿಕ್ಕು ಹಾಕಬೇಕು? ನಾವು ಎಲ್ಲಿ ಗರ್ಜಿಸಬೇಕು ಎನ್ನುವುದನ್ನು ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಅದನ್ನು ನಾನು ಹೊರಗಡೆ ಬಂದು ಹೇಳುತ್ತೇನೆ. ಇದು ಕೆಲವರ ತಲೆಗೆ ಹೋಗುತ್ತಿಲ್ಲ. ಈಗಾಗಲೇ ತಿದ್ದುಪಡಿ ಮಸೂದೆ ಆದಾಗ್ಯೂ ಕೂಡ, ಅವುಗಳನ್ನು ಆರ್ಹತೆಯ ಮೇಲೆ ಯಾರಿಗೆ ಕೊಡುವುದಕ್ಕೆ ಅವಕಾಶವಿದೆ ಅವರಿಗೆ ಕೊಡುವುದಕ್ಕೆ ತೀರ್ಮಾನ ಮಾಡಿ ಎಂದು ಸರ್ಕಾರದಿಂದ ಆದೇಶವನ್ನು ಕಳುಹಿಸುತ್ತಿದ್ದೇನೆ. ಆಯಾ ತಾಲ್ಲೂಕಿನಲ್ಲಿ ಅವುಗಳನ್ನು ಒಂದು ಪಟ್ಟಿ ಮಾಡಿ ಸರ್ಕಾರಕ್ಕೆ ಕಳುಹಿಸಿ ಕೊಡಿ. ಅದನ್ನು ಕೇದ್ರ ಸರ್ಕಾರಕ್ಕೆ ಕಳುಹಿಸಿ ಅವರ ಅನುಮತಿಯನ್ನು ಪಡೆಯುವುದಕ್ಕೆ ನಾವು ಪ್ರಸ್ತಾಪ ಮಾಡುತ್ತಿದ್ದೇವೆ. ಆದರೆ, ಜನರನ್ನು ಯಾರು eviction ಮಾಡಬಾರದು ಮತ್ತು ಅವರನ್ನು ಯಾರೂ ತಿರಸ್ಕಾರ ಮಾಡಬಾರದು. ಯಾರಿಗೆ ಅರ್ಹತೆ ಇದೆ ಅವರಿಗೆ ಮಾಡಬೇಕೆಂದು ಸರ್ಕಾರದಿಂದ ಆದೇಶ ಹೋಗುತ್ತಿದೆ. ಇದಕ್ಕೆ ಮಾನ್ಯ ಸದಸ್ಯರಾದ ಪ್ರತಾಪಚಂದ್ರ ಶೆಟ್ಟಿಯವರು ಅಧ್ಯಕ್ಷರಾಗಿದ್ದಾರೆ. ಅವರು ದಯವಿಟ್ಟು ಇದನ್ನು ಮಾಡಬೇಕು.

ಮಾನ್ಯ ಸಭಾಪತಿಯವರೇ, ನಾನು ಇದನ್ನು ಏಕೆ ಪ್ರಸ್ತಾಪಿಸುತ್ತಿದ್ದೇನೆಂದರೆ, ಮೊದಲ ಬಾರಿಗೆ ಈ ಬಗರ್‌ಹುಕುಂ ಸಾಗುವಳಿ ಮಂಜೂರಾತಿಗೆ ಬಂದಾಗ, ನಾವು ಹೋರಾಟ ಮಾಡಿದ್ದೇವೆ, ನಾನೇ ಆ ಸಮಿತಿಯ ಅಧ್ಯಕ್ಷನಾಗಿ ತೀರ್ಮಾನ ಮಾಡಿದ್ದೇನೆ. ಈಗ ಆ ಸಮಿತಿಯ ಅಧ್ಯಕ್ಷರಾದ ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು 'ನಾನು ಅಧ್ಯಕ್ಷನಾಗಿ ಏನು ಮಾಡುವುದು ಸುಮ್ಮನೆ ಕುಳಿತುಕೊಂಡಿರಬೇಕಾದ ಪರಿಸ್ಥಿತಿ ಇದೆ' ಎಂದು ಹೇಳಿದರೆ ಹೇಗೆ ಇರಬೇಕಾಗುತ್ತದೆ, ಅದು ಹೋರಾಟ. ಅದರಲ್ಲಿ ಏನಾಗಿದೆ ಎಂದರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾನೂನು ಮಾಡುವಂತಹ ಸಂದರ್ಭದಲ್ಲಿ constituency-wise ಎಂದು ಮಾಡಿಬಿಟ್ಟಿದ್ದಾರೆ. ಆದರೆ, ಈ ಹಿಂದೆ taluk-wise ಮಾಡಿದ್ದರು. ನಾನು ಬರುವುದಕ್ಕಿಂತ ಮುಂಚೆಯೇ ಆಗಿಬಿಟ್ಟಿವೆ. ಹಾಗಾಗಿ, ಆ ಕ್ಷೇತ್ರದ ಶಾಸಕರೇ ಅದರ ಅಧ್ಯಕ್ಷರಾಗಿರುತ್ತಾರೆ. ಅದನ್ನು ನಾನು ಬದಲಾವಣೆ ಮಾಡಬೇಕು ಎಂದರೆ, ನಾನು ಅದರ ಬಗ್ಗೆ ಬೇರೆ ಹೇಳುವುದಕ್ಕೆ ಹೋಗುವುದಿಲ್ಲ. ಈಗ ವಿಧಾನ ಪರಿಷತ್ತಿನ ಸದಸ್ಯರ ವಿಚಾರದ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಉಡುಪಿ ಜಿಲ್ಲೆಯನ್ನೇ ಕೊಡಲಿ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಪೂಜಾರಿಯವರೇ, ಮಾನ್ಯ ಸಚಿವರು ಬೇರೆ point ಬಗ್ಗೆ ಮಾತನಾಡುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದ್ದು ಅದೇ ಅಲ್ಲವೇ,

**ಸಭಾಪತಿಯವರು:-** ಮಾನ್ಯ ಪೂಜಾರಿಯವರೇ, ಮಾನ್ಯ ಸಚಿವರು ಶಾಸಕರ ಬಗ್ಗೆ ಮಾತನಾಡುತ್ತಿದ್ದಾರೆ. ತಾವೀಗ ಮಧ್ಯೆ ಬಾಯಿ ಹಾಕಬೇಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಾನ್ಯ ಸದಸ್ಯರಾದ ಪ್ರತಾಪಚಂದ್ರ ಶೆಟ್ಟಿಯವರ ಪ್ರಶ್ನೆಗೆ ಉತ್ತರ ಕೊಡುತ್ತಾ, 'ಇದನ್ನು ಮಾನ್ಯ ಸಚಿವರು ಹೇಳಿದ್ದಾರೆ. ಇಲ್ಲಿ ಚರ್ಚೆ ಇರುವುದೇನೆಂದರೆ, ಉಡುಪಿ ಜಿಲ್ಲೆಯಿಂದ 34 ಸಾವಿರ ಹೆಕ್ಟೇರ್ ಅರಣ್ಯ ಪ್ರದೇಶವಲ್ಲವೆಂದು ಪರಿಗಣಿಸಿ deemed forest ನಿಂದ ವಿರಹಿತಗೊಳಿಸಬೇಕೆಂದು ವರದಿ ಕೊಟ್ಟಿದ್ದಾರೆ. ಆ ವರದಿಯನ್ನು ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿ deemed forest ನಿಂದ ವಿರಹಿತ (ನಿರ್ದ ಹೊರತು) ಪಡಿಸುವವರೆಗೆ ಹಕ್ಕು ಪತ್ರಗಳನ್ನು ಕೊಡುವುದಕ್ಕೆ ತೊಂದರೆ ಇದೆ. ಹಾಗಾಗಿ, deemed forest ಅನ್ನು ಸಚಿವ ಸಂಪುಟದಲ್ಲಿ ಕೈಬಿಟ್ಟ ವರದಿ ಬಂದಿದ್ದು' ಎಂದು ಹೇಳುತ್ತಿದ್ದಾರೆ

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಹೌದು. ಈ ಹಿಂದೆ ಒಂದು ಬಾರಿ ಕ್ಯಾಬಿನೆಟ್ ಸಬ್ ಕಮಿಟಿ ಆಗಿತ್ತು. ಆ ಕಮಿಟಿ ರಚನೆಯಾದಂತಹ ಸಂದರ್ಭಲ್ಲಿ ನಾನು ಕಮಿಟಿಯಲ್ಲೇ ಇದ್ದೆ. ಆಗ as per Section 79(2) of the Karnataka Land Revenue Act,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1964 ರಡಿಯಲ್ಲಿ ಬರುವಂತಹ ಜಮೀನುಗಳನ್ನು deemed forest ನಿಂದ completely ಬಿಡಬೇಕೆಂದು ನಾನು ನನ್ನ ಅಭಿಪ್ರಾಯವನ್ನು ಕೊಟ್ಟಿದ್ದೆ. ಅದು ಕ್ಯಾಬಿನೆಟ್‌ಗೂ ಬಂದಿತ್ತು. ಮತ್ತೆ ಕ್ಯಾಬಿನೆಟ್‌ನಲ್ಲಿ ಚರ್ಚೆ ಆಯಿತು. ಆದ್ದರಿಂದ ಜಿಲ್ಲಾಧಿಕಾರಿಯವರು ಆಯಾ ಜಿಲ್ಲೆಯ ಶಾಸಕರೊಂದಿಗೆ ಚರ್ಚೆ ಮಾಡಿ ಯಾವುದನ್ನು ಕೈಬಿಡಬೇಕೆನ್ನುವುದರ ಬಗ್ಗೆ ಜಿಲ್ಲಾಧಿಕಾರಿಯವರಿಂದ ವರದಿಯನ್ನು ಕೇಳಿ ಎಂದು ಕ್ಯಾಬಿನೆಟ್‌ನಲ್ಲಿ ತೀರ್ಮಾನ ಆಗಿತ್ತು. ಆ ಸಲಹೆ ಪ್ರಕಾರ, ಈಗ ವರದಿಗಳು ಬಂದಿವೆ.

(257)23.02.2018-1.30-ಎಂವಿ-ಬಿಎನ್‌ಎಸ್

**ಶ್ರೀ ಕಾಗೋಡು ತಿಮ್ಮಪ್ಪ:-** ಜಿಲ್ಲಾಧಿಕಾರಿಗಳಿಂದ ವರದಿಯನ್ನು ಕೇಳಬೇಕೆಂದು ಸಚಿವ ಸಂಪುಟದಲ್ಲಿ ತೀರ್ಮಾನವಾಗಿತ್ತು. ಆ ಸಲಹೆ ಪ್ರಕಾರ ವರದಿಗಳು ಬಂದಿವೆ. ಅದನ್ನು ಪುನಃ ಸಚಿವ ಸಂಪುಟದಲ್ಲಿ ಇಟ್ಟು, ಅದಕ್ಕೆ ಒಂದು ತೀರ್ಮಾನ ಮಾಡಬೇಕಾಗಿದೆ. ಏನಾಗುತ್ತದೆ ಎಂದು ಮುಂದೆ ಹೇಳುವುದಕ್ಕೆ ಆಗುವುದಿಲ್ಲ. ಅದಕ್ಕೆ ಬೇಕಾದಂತಹ ತೀರ್ಮಾನವನ್ನು ಮಾಡುತ್ತೇವೆ, ಒಟ್ಟಿನಲ್ಲಿ ಅದನ್ನು ಮಾಡಬೇಕಾಗಿದೆ. ಏಕೆಂದರೆ, ಇವತ್ತಿನ ದಿವಸ ನಮ್ಮ ಉತ್ತರ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ, ಮಂಗಳೂರು ಜಿಲ್ಲೆ, ಕೊಡಗು ಜಿಲ್ಲೆ, ಶಿವಮೊಗ್ಗ ಜಿಲ್ಲೆ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಇದರ ಬಗ್ಗೆ ಬಹಳ ಪ್ರಶ್ನೆ ಇದೆ. ಇದನ್ನು ಹೇಳುವುದಕ್ಕೆ ಹೋದರೆ ಈ ರೀತಿಯ ಪ್ರಶ್ನೆ ಬರುತ್ತದೆ. ಈ ವಿಷಯ ಅಡ್ವೊಕೇಟ್ ಜನರಲ್‌ರವರ ಅಭಿಪ್ರಾಯಕ್ಕೆಂದು ಹೋಯಿತು. ಸುಪ್ರೀಂ ಕೋರ್ಟ್, ಸದರಿ ಜಾಗವು ಅರಣ್ಯ ಪ್ರದೇಶಕ್ಕೆ ಒಳಪಟ್ಟಿದೆಯೆಂದು ಹೇಳಿದೆ ಎಂದು ಅಡ್ವೊಕೇಟ್ ಜನರಲ್‌ರವರಿಂದ ಅಭಿಪ್ರಾಯ ಬಂತು. ಶಾಸನ ಮಾಡುವವರು ನಾವು.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, over rule ಮಾಡಲಿ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ನಾನು ನಿಮ್ಮ ಜೊತೆಗೆ ಇದ್ದೇನೆ. ಆದರೆ ಅದರ ಬಗ್ಗೆ ಮುಂದೆ ಹೇಳುವುದಕ್ಕೆ ಹೋಗುವುದಿಲ್ಲ. ಆದುದರಿಂದ ಮಾನ್ಯ ಸದಸ್ಯರು ನೀಡಿರುವಂತಹ ಸಲಹೆಗಳು ಏನಿದೆ ಅದನ್ನು ಪರಿಗಣಿಸಿ, ನಾನು ಅವರ ಜೊತೆಗೆ ಇದ್ದೇನೆ. ಈಗ ಸದ್ಯಕ್ಕೆ ಏನಾಗಿದೆ ಎಂದರೆ, ನಾನು ಹೋದ ಕಡೆಯಲ್ಲೆಲ್ಲಾ ಬಹಳ ಕಡೆ ಬಡವರು ಬಂದು ನಮಗೆ ಅರ್ಜಿಯನ್ನು ಕೊಡುವುದಕ್ಕೆ ಗೊತ್ತಾಗಲಿಲ್ಲವೆಂದು ಹೇಳಿದರು. ಅವರಿಗೆ ಇನ್ನೊಂದು ಅವಕಾಶವನ್ನು ಕೊಡೋಣವೆಂದು, ಅರ್ಜಿಯನ್ನು ಕೊಡುವುದಕ್ಕೆ ಡಿಸೆಂಬರ್‌ವರೆವಿಗೂ ಅವಕಾಶ ಮಾಡಿದ್ದೇನೆ. ನಾನು ಏತಕ್ಕೆ ಈ ವಿಚಾರವನ್ನು ಹೇಳುತ್ತೇನೆಂದರೆ, ವಿಶೇಷವಾಗಿ ನಮ್ಮ ಶಾಸಕರು ಜನರಿಗೆ ಜಾಗೃತಿ ಮೂಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಉದಾಹರಣೆಗೆ, as per Section 94CC of the Karnataka Land Revenue Act, 1964, ಯಾರು ಈಗಾಗಲೇ ಮನೆಯನ್ನು ಕಟ್ಟಿಕೊಂಡಿದ್ದಾರೆ ಅಂತಹವರಿಗೆ ಅದನ್ನು ಕೊಡುವಂಥಾ ಕೆಲಸ ಆಗಬೇಕಾಗಿದೆ. ನಾನು ಸರ್ಕಾರದಿಂದ ಒಂದು ನಿರ್ದೇಶನವನ್ನು ಸಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಳುಹಿಸಿದ್ದೇನೆ. ಅದು ಏನೆಂದರೆ, V.A. (Village Accountant) ಮತ್ತು P.D.O. (Panchayath Development Officer) ಜಂಟಿಯಾಗಿ ಪ್ರತಿ ಗ್ರಾಮಕ್ಕೆ ಹೋಗಿ, ಆ ಸರ್ವೆ ನಂಬರಿನ ನಕಾಶೆ ಇಟ್ಟುಕೊಂಡು, ಯಾರ್‍ಯಾರು ಮನೆಯನ್ನು ಕಟ್ಟಿಕೊಂಡಿದ್ದಾರೆ, ಅಂತಹವರನ್ನು ಗುರುತಿಸಿ, ಅವರು ಅರ್ಜಿಯನ್ನು ಕೊಟ್ಟಿದ್ದರೆ ಅದನ್ನು ರೆಕಾರ್ಡ್ ಮಾಡಿ ಅಥವಾ ಅವರು ಅರ್ಜಿಯನ್ನು ಕೊಡದೇ ಇದ್ದರೆ ಅಲ್ಲೇ ಅರ್ಜಿಯನ್ನು ತೆಗೆದುಕೊಂಡು ಅದನ್ನು ರೆಕಾರ್ಡ್ ಮಾಡಿ ಎಂದು ಸೂಚಿಸಿದ್ದೇನೆ. ಇದರ ಉದ್ದೇಶ ಯಾರು ಸಹ ಬಿಟ್ಟುಹೋಗಬಾರದು. ಮನುಷ್ಯ ಹುಟ್ಟಿ ಸಾಯುತ್ತಾನೆ, ಅವನು ಹುಟ್ಟಿ ಬದುಕಿದಂತಹ ಜಾಗದಲ್ಲಿ ಅವರಿಗೆ ಹಕ್ಕು ಕೊಡೋಣ ಎನ್ನುವಂತಹ ಒಂದು ಆಸೆ ನನಗೆ ಇದೆ. ಆದರೆ, ಇದರ ಕೆಲಸ ಆಗುತ್ತಿಲ್ಲ. ನಾನು ಪ್ರತಿ ಜಿಲ್ಲೆಗೂ ಭೇಟಿ ನೀಡಿ ಬಂದಿದ್ದೇನೆ. ನಾನು ಎಲ್ಲವನ್ನು ಸಹ ನೋಡಿದ್ದೇನೆ, ಏನು ನಾವು ಸರ್ಕಾರದಿಂದ ಆದೇಶವನ್ನು ಕೊಟ್ಟಿದ್ದೇವೆ, ಅದರ ಪ್ರಕಾರ ಕೆಲಸ ಆಗುತ್ತಿಲ್ಲ. ನಾನು Time Table ಹಾಕಬೇಕೆಂದು ನಿರ್ದೇಶನ ಕೊಟ್ಟಿದ್ದೇನೆ. ನೀವು ಯಾವ ಪಂಚಾಯಿತಿಗೆ ಯಾವ ದಿವಸ ಹೋಗುತ್ತೀರಾ ಎಂಬುದನ್ನು Time Table ಹಾಕಿಕೊಳ್ಳಬೇಕು. ಆ Time Table ಹಾಕಿದ ಪ್ರಕಾರ ಪಂಚಾಯಿತಿಯಲ್ಲಿ ಕೆಲಸ ಆಗಬೇಕು, ಆದರೆ ಆ ಪ್ರಕಾರ ಕೆಲಸ ಆಗುತ್ತಿಲ್ಲ. ಈ ರೀತಿಯಾದರೆ ನಾವು ಏನು ಮಾಡಬೇಕು?

**ಶ್ರೀ ರಾಮಚಂದ್ರ ಗೌಡ**:- ಮಾನ್ಯ ಸಭಾಪತಿಯವರೇ, ಇದು ನುಡಿದಂತೆ ನಡೆಯುವ ಸರ್ಕಾರ.

**ಶ್ರೀ ಕಾಗೋಡು ತಿಮ್ಮಪ್ಪ**:- ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಪಟ್ಟಣದಲ್ಲೂ ಸಹ ಅಷ್ಟೆ, ಈ ಕೆಲಸ ಸರಿಯಾಗಿ ಆಗುತ್ತಿಲ್ಲ. ಈಗ ಬಗರ್‌ಹುಕುಂಗೆ ಸಂಬಂಧಪಟ್ಟಂತೆ ಹೇಳುವುದಾದರೆ ಅದು ಸಹ ಇದೆ ರೀತಿಯಾಗಿದೆ. ನಾನು ಇಂತಹ ಬದುಕಿನಲ್ಲೇ ಬಂದಿರುವುದರಿಂದ, ಇದನ್ನು ಸರಿಯಾದ ರೀತಿಯಲ್ಲಿ effective ಆಗಿ implement ಮಾಡಬೇಕಾದರೆ, ಇದನ್ನು ಹೇಗೆ ಮಾಡಬೇಕು ಎಂಬುದು ಗೊತ್ತಿದೆ. ಅದಕ್ಕೋಸ್ಕರ ಸರ್ಕಾರದಿಂದ ಏನು ಆದೇಶ ಕಳುಹಿಸಿದ್ದೆ ಎಂದರೆ, ವಾರಕ್ಕೆ ಒಂದು ಬಾರಿ ಸಭೆಯನ್ನು ಕರೆಯಬೇಕು, ಇಬ್ಬರು ಸದಸ್ಯರು ಇದ್ದರೆ ಸಾಕು ಎಂದು ಆ ಆದೇಶದಲ್ಲೆ ಇದೆ, ಸಭೆಯನ್ನು ಕರೆಯಿರಿ ಎಂದು ಇದೆ. ಆದರೆ, ನಮ್ಮ ಶಾಸಕರೆ ಹೇಳುತ್ತಾರೆ ಸುಮ್ಮನಿರಿ ಆಮೇಲೆ ನೋಡೋಣವೆಂದು. ಅವರು ಸಭೆಯನ್ನೆ ಕರೆಯುವುದಿಲ್ಲ. ತಹಶೀಲ್ದಾರರು ನಾವು ಏನು ಮಾಡುವುದು ಎಂದು ಹೇಳುತ್ತಾರೆ. ಎರಡನೆ ತೀರ್ಮಾನ ಆದ ಕೂಡಲೆ ಹಕ್ಕುಪತ್ರ ಕೊಡುವುದಕ್ಕೆ ಅವಕಾಶವಿದೆ. ಈಗ ಹಣ ಪಾವತಿ ಮಾಡುವುದಾದರೆ, ಮೂರು ಕಂತು ಕಟ್ಟುವುದಕ್ಕೆ ಅವಕಾಶವಿದೆ. ಈಗ ಹಣ ಪಾವತಿ ಮಾಡುವುದಕ್ಕೂ ಮತ್ತು ಹಕ್ಕುಪತ್ರ ನೀಡುವುದಕ್ಕೂ ಸಂಬಂಧ ಕಲ್ಪಿಸಬೇಡಿ. ಅವರು ಮೂರು ಕಂತುಗಳು ಕಟ್ಟುವುದನ್ನು ಹೇಗಾದರೂ ಕಟ್ಟಿಕೊಳ್ಳಲಿ. ಆದರೆ, ಅದರಲ್ಲಿ ನೀವು ಹಕ್ಕುಪತ್ರ ನೀಡಬೇಕೆಂದು ತೀರ್ಮಾನವಾಗಿದೆ. ಆರು ತಿಂಗಳು ಮತ್ತು ಒಂದು ವರ್ಷವಾದರೂ ಇನ್ನು ಹಕ್ಕುಪತ್ರವನ್ನು ಕೊಟ್ಟಿಲ್ಲ. ನಾನು ಆದೇಶ ನೀಡಿದ್ದೇನೆ, ಹಕ್ಕುಪತ್ರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀಡಿದ ಕೂಡಲೇ R.T.C. (Rights, Tenancy and Crops) entry ಮಾಡಬೇಕು. ಆದರೆ ಒಂದು ವರ್ಷವಾದರೂ entry ಮಾಡುವುದಿಲ್ಲ. ಏಕೆಂದರೆ ನಮ್ಮ ಆಡಳಿತದ ಯಂತ್ರ ಜಡ್ಡುಗಟ್ಟಿದೆ. ಈಗ ಒಂದು ವರ್ಷವಾದರೂ R.T.C. entry ಆಗಿಲ್ಲವೆಂದರೆ ಏನು ಮಾಡುವುದು? ಈ ತರಹದ ಪರಿಸ್ಥಿತಿ ಇದೆ. ಸರ್ಕಾರದಿಂದ ಎಲ್ಲಾ ಸೌಲಭ್ಯ ಕೊಟ್ಟರು ಕೂಡ ಆ ಕೆಲಸ ಆಗುವುದಿಲ್ಲ. ಈಗ ನಮಗೆ ಒಂದು ಸಂಕಟವಿದೆ, ಅದು ಏನೆಂದರೆ, ಒಂದು ಸರ್ವೆ ನಂಬರ್‌ನಲ್ಲಿ ಅರಣ್ಯ ಭೂಮಿಯೂ ಇರುತ್ತದೆ ಮತ್ತು ರೆವಿನ್ಯೂ ಭೂಮಿಯೂ ಸಹ ಇರುತ್ತದೆ. ನಮ್ಮ ತಹಶೀಲ್ದಾರ್‌ಗೆ ಎಲ್ಲಾ ಅಧಿಕಾರವಿದೆ, Surveyors ಅವರ ಕೈ ಕೆಳಗೆ ಇದ್ದಾರೆ ಮತ್ತು ತಹಶೀಲ್ದಾರ್‌ರವರು R.T.C. ಬರೆಯುತ್ತಾರೆ . ನಾವು ಸರ್ಕಾರದಿಂದ ಏನು ಆದೇಶ ಮಾಡಿದ್ದೇವೆಂದರೆ, ಅದನ್ನು ಅರಣ್ಯ ಇಲಾಖೆಯವರಿಗೆ ಕಳುಹಿಸಿ, ಅವರಿಂದ ಸರ್ವೆ ಮಾಡಿಸಬೇಡಿ ಎಂದು ಹೇಳಿದ್ದೇನೆ. ಇದು ಅವರಿಗೆ ಸಂಬಂಧಪಡುವುದಿಲ್ಲ. ಇದನ್ನು ತಹಶೀಲ್ದಾರ್‌ರವರೇ ಮಾಡಬೇಕು ಎಂದು ಹೇಳಿದ್ದೇನೆ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, Surveyors ಇಲ್ಲವೆಂದು ಹೇಳುತ್ತಾರೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಮತಿ ಮೋಟಮ್ಮನವರೆ, ದರಖಾಸ್ತು ಮಂಜೂರು ಮಾಡಿಸಿಕೊಡುವಂತಹ ಸಂದರ್ಭದಲ್ಲಿ ಎಲ್ಲಿಯಾದರೂ ಭಾಗವಹಿಸಿದ್ದಾರಾ? ನಮ್ಮ R.I. (Revenue Inspector) ಮತ್ತು V.A., ಇವರುಗಳೇ ರೆವಿನ್ಯೂ sketch ಮಾಡಿ ಮಂಜೂರು ಮಾಡಿಲ್ಲವೆ. ಹಾಗಾದರೆ ಇವರಿಗೆ ಆ ಕೆಲಸವನ್ನು ಮಾಡುವುದಕ್ಕೆ ಬರುವುದಿಲ್ಲವೆ?

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ಹೌದು ಭಾಗವಹಿಸಿದ್ದೇನೆ, ಅವರುಗಳು ಆ ರೀತಿಯ ಸಬೂಬುಗಳನ್ನು ಹೇಳುತ್ತಾರೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಸಬೂಬು ಹೇಳುವುದು ಏನು ಇಲ್ಲ? ಸಾವಿರಾರು ಜನರಿಗೆ Revenue Inspector ಮತ್ತು V.A.ಗಳೇ sketch ಮಾಡಿದಂತಹ ಪ್ರಕರಣದಲ್ಲಿ ಸಾಗುವಳಿ ಚೀಟಿ ಮತ್ತು ಜಮೀನು ಮಂಜೂರು ಮಾಡಿ ಹಕ್ಕುಪತ್ರ ಕೊಟ್ಟಂತಹ ಅನುಭವ ನನಗೆ ಇದೆ. ನಾವು ಪಕ್ಕಾ ಪೋಡಿ ಮಾಡುತ್ತೇವೆ. ಅದನ್ನು ನಾವು ಮಾಡಲೇಬೇಕು. ಆಗ Surveyor ಮತ್ತು ಎಲ್ಲರೂ ಸಹ ಹೋಗುತ್ತಾರೆ. ಇದೆಲ್ಲಾ ದುಡ್ಡು ಕೊಟ್ಟರೆ ಕೆಲಸ ಆಗುತ್ತದೆ, ಅವರು ದುಡ್ಡು ಕೊಡುವುದಿಲ್ಲ. ಅಲ್ಲಿ ಅಧ್ಯಕ್ಷರು ಇರುತ್ತಾರೆ ಮತ್ತು ಸದಸ್ಯರು ಇರುತ್ತಾರೆ. ಈ ರೀತಿಯಲ್ಲಿ ಅಧಿಕಾರಿಗಳ ಸಬೂಬು. ಇದನ್ನು ನಾನು ಯಾರ ಹತ್ತಿರ ಹೇಳುವುದು. ನಾನು ಇದರಲ್ಲೆ ಈಜಿಕೊಂಡು ಬಂದಿದ್ದೇನೆ. ಅದನ್ನು ಬಿಚ್ಚಿ ಹೇಳುವುದಕ್ಕೆ ಹೋದರೆ ನನಗೆ ಕಣ್ಣೀರು ಬರುತ್ತದೆ. 1991 ಮತ್ತು 1998ನೇ ಇಸವಿಯಲ್ಲಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಟ್ಟಂತಹ ಅರ್ಜಿಗಳು ಇನ್ನು ಬಾಕಿಯಿವೆ ಎಂದರೆ ನಾವು ಏನು ಹೇಳಬೇಕು. ಆ ಅರ್ಜಿಗಳು ಅಲ್ಲೇ ಕರಗಿ ಹೋಗಿವೆ ಮತ್ತು ಹುಳು ಹಿಡಿದಿವೆ. ಅದಕ್ಕೋಸ್ಕರ ಏನಾದರೂ ತೀರ್ಮಾನ ಮಾಡೋಣವೆಂದು ಮಾಡಿದ್ದೇವೆ, ನಮ್ಮ ಮಾನ್ಯ ಶಾಸಕರು ವಾರಕ್ಕೊಮ್ಮೆ ಸಭೆ ಸೇರಿದರೆ ಅದರ ಕೆಲಸವಾಗುತ್ತದೆ. ಹಾಗಾಗಿ ಇದು ಒಂದು ಅನಿವಾರ್ಯ ಪರಿಸ್ಥಿತಿಯಲ್ಲಿ ಇದೆ. ಆದರೂ ಅವರ ಬೆನ್ನು ಹತ್ತಿ ಸುಮಾರು ಮೂರರಿಂದ ನಾಲ್ಕು ಲಕ್ಷ ಅರ್ಜಿಗಳನ್ನು ತೀರ್ಮಾನ ಮಾಡಿದ್ದೇವೆ. ಇನ್ನು ಎರಡು ಲಕ್ಷ ಅರ್ಜಿಗಳು ಬಾಕಿ ಇವೆ. ನಮ್ಮ ಮಾನ್ಯ ಸದಸ್ಯರು ಹೇಳಿದ ಹಾಗೆ, ಈ ಕುಮ್ಕಿಗೆ ಸಂಬಂಧಪಟ್ಟಂತೆ ಸುಮಾರು ಒಂದು ಲಕ್ಷ ಅರ್ಜಿಗಳು ಬಾಕಿಯಿವೆ. ಹಾಗಾಗಿ ನಾನು ಧರ್ಮಸಂಕಟದಲ್ಲಿ ಸಿಕ್ಕಿ ಹಾಕಿಕೊಂಡು ನರಳುತ್ತಿದ್ದೇನೆ. ಈ ವಿಷಯ ಬಗೆಹರಿದರೆ ಇದಕ್ಕೆ ನಾನು ಸಾಷ್ಟಾಂಗ ನಮಸ್ಕಾರ ಮಾಡಿ, ಈ ಭೂಮಿಯ ವಿಷಯವನ್ನು ಅಂತ್ಯಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ದಯವಿಟ್ಟು ತಾವು ಈ ತಿದ್ದುಪಡಿಯನ್ನು ಮಂಜೂರು ಮಾಡಿಕೊಡಬೇಕೆಂದು ವಿನಂತಿಸುತ್ತೇನೆ. ಇನ್ನು ಯಾರು ಬಿಟ್ಟು ಹೋಗಿರುವವರು ಇದ್ದಾರೆ, ಅವರು ಸಹ ಅರ್ಜಿಯನ್ನು ಹಾಕುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟರೆ, ನಾನು ತಮಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತ ರೂಪದಲ್ಲಿರುವ 2018ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.</u>

<u>ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.</u>

<u>ಖಂಡ 2 ರಿಂದ 3ರವರೆಗೆ</u>

**ಸಭಾಪತಿಯವರು:–** "ಖಂಡ 2 ರಿಂದ 3ರ ವರೆಗೆ ಈ ವಿಧೇಯಕದ ಭಾಗವಾಗಿರುತ್ತದೆ"

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

(ಖಂಡ 2 ರಿಂದ 3ರವರೆಗೆ ವಿಧೇಯಕಕ್ಕೆ ಸೇರಿಸಲಾಯಿತು)

<u>ಖಂಡ 1 ಇತ್ಯಾದಿ</u>

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.</u>

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತ ರೂಪದಲ್ಲಿರುವ 2018ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತ ರೂಪದಲ್ಲಿರುವ 2018ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**(258) 23-2-18 ಎಲ್ ಎಲ್ ಕೆಎಸ್ 1-40**

**ಇ)ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2018"**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಎಂ.ಆರ್. ಸೀತಾರಾಂ(ಸಭಾ ನಾಯಕರು)(ಯೋಜನೆ, ಸಾಂಖ್ಯಿಕ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2018ರ ಮೇಲಿನ ಪ್ರಸ್ತಾವನೆಯನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಶ್ರೀ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ದಕ್ಷಿಣ ಕನ್ನಡ ಜಿಲ್ಲೆ ಅಥವಾ ಮಂಗಳೂರು ಭಾಗದಿಂದ ಬಂದಿರತಕ್ಕಂತಹ ಶಾಸಕರಾದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಶ್ರೀ ಐವನ್ ಡಿ'ಸೋಜಾ, ಶ್ರೀ ಪ್ರತಾಪಚಂದ್ರ ಶೆಟ್ಟಿ, ಶ್ರೀಮತಿ ಜಯಮಾಲಾ ಇವರೆಲ್ಲರಿಗೂ ತಿಳಿದಿರುವ ಹಾಗೆ, ಆ ಭಾಗದಲ್ಲಿ ಸುಮಾರು 356 ಏಕರೆ ಪ್ರದೇಶದಲ್ಲಿ ಡಾ|| ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮ ಎಂಬುದು 1996ರಿಂದ ಪ್ರಾರಂಭವಾಗಿ ನಡೆಯುತ್ತಿದೆ. ಹಲವಾರು ಸೊಸೈಟಿಗಳು ಈ ನಿಸರ್ಗಧಾಮವನ್ನು ನಡೆಸುತ್ತಾ ಬಂದಿವೆ. ಅವುಗಳಲ್ಲಿ ಪಿಲಿಕುಳ ನಿರ್ಸಗಧಾಮ ಸೊಸೈಟಿಯೂ ಒಂದು. ಈ ನಿಸರ್ಗಧಾಮದಲ್ಲಿ ಸಸ್ಯೋದ್ಯಾನ, ವೈದ್ಯಕೀಯ ಉದ್ಯಾನವನ, ಜೈವಿಕ ಉದ್ಯಾನವನ, ಪಾರಂಪರಿಕ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗ್ರಾಮ, ಕುಶಲಕರ್ಮಿ ಗ್ರಾಮ ಎಂದು ಹಲವಾರು ರೀತಿಯ ಕಾರ್ಯಕ್ರಮಗಳನ್ನು ಈ ಸೊಸೈಟಿಗಳು ನಡೆಸುತ್ತಾ ಬಂದಿವೆ. ನಮ್ಮ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಸೊಸೈಟಿ ಎಂಬುದನ್ನು ಸ್ಥಾಪಿಸಿದ್ದು, ಅದರಲ್ಲಿ ಪ್ರಾದೇಶಿಕ ವಿಜ್ಞಾನ ಕೇಂದ್ರ ಮತ್ತು ಮುಂದಿನ ತಿಂಗಳ 01 ನೇ ತಾರೀಖಿನಂದು ಸುಮಾರು 39 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಒಂದು Hybrid 3D planetarium ಅನ್ನು ಜನರ ಸೇವೆಗೆ ಪ್ರಾರಂಭ ಮಾಡುತ್ತಿದ್ದೇವೆ. ಹಾಗೆಯೇ, Innovation hub ಈ ರೀತಿ ಹಲವಾರು ಚಟುವಟಿಕೆಯನ್ನು ಅಲ್ಲಿನ ಏಜೆನ್ಸಿಗಳು ನಡೆಸುತ್ತಿವೆ.

ಸರ್ಕಾರದ ವಿವಿಧ ಇಲಾಖೆಗಳು ಸುಮಾರು 200 ಕೋಟಿ ರೂಪಾಯಿಗಿಂತಲೂ ಹೆಚ್ಚು ಹಣವನ್ನು ಅದರಲ್ಲಿ ತೊಡಗಿಸಿವೆ. ಇದರಿಂದಾಗಿ, ವರ್ಷಕ್ಕೆ ಸುಮಾರು 6 ರಿಂದ 7 ಲಕ್ಷ ಜನ ಪ್ರವಾಸಿಗರು ಆ ನಿಸರ್ಗಧಾಮಕ್ಕೆ ಬರುತ್ತಾರೆ. ಆದುದರಿಂದ, ಈ ನಿಸರ್ಗಧಾಮವನ್ನು ಇನ್ನೂ ಹೆಚ್ಚು ಉತ್ತಮವಾಗಿ ನಿಯಂತ್ರಿಸಬೇಕು. ಪರಿಸರ, ಪಶ್ಚಿಮ ಘಟ್ಟದ wildlife ಮುಂತಾದವುಗಳನ್ನೆಲ್ಲಾ ಅಭಿವೃದ್ಧಿ ಮಾಡುವುದಕ್ಕೆ ಈ ಪ್ರಾಧಿಕಾರವನ್ನು ರಚನೆ ಮಾಡಿದ್ದೇವೆ ಮತ್ತು ಈ ತಾರಾಲಯಕ್ಕೆ ಸರ್ಕಾರದಿಂದ ಹೆಚ್ಚಿನ ಅನುದಾನವನ್ನು ಕೊಟ್ಟು ಅಭಿವೃದ್ಧಿ ಸಹ ಮಾಡಿದ್ದೇವೆ. ಇದರಿಂದಾಗಿ, ಪ್ರತಿವರ್ಷ ಸುಮಾರು ಮೂರರಿಂದ ಮೂರೂವರೆ ಕೋಟಿ ರೂಪಾಯಿಗಳಷ್ಟು ಆದಾಯ ಬರುತ್ತಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ಸುಮಾರು ಎರಡೂವರೆ ಕೋಟಿ ರೂಪಾಯಿಗಳಿಗೂ ಹೆಚ್ಚಿನ ಅನುದಾನವನ್ನು ಕೊಟ್ಟು, ಒಟ್ಟಾರೆ ಸುಮಾರು ಆರರಿಂದ ಆರೂವರೆ ಕೋಟಿ ರೂಪಾಯಿಗಳಷ್ಟು ಕೆಲಸವನ್ನು ಮಾಡಿದ್ದೇವೆ. In order to increase scientific temper among the people of that area and to promote tourism ನಾವು ಈ ಪ್ರಾಧಿಕಾರವನ್ನು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರುಗಳು ಈ ವಿಧೇಯಕಕ್ಕೆ ಅನುಮೋದನೆ ನೀಡಬೇಕೆಂದು ಕೋರುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಂದಿರತಕ್ಕ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2018 ಅನ್ನು ನಾನು ಸ್ವಾಗತ ಮಾಡುತ್ತೇನೆ. ಈ ಪ್ರಾಧಿಕಾರ ರಚನೆಯಾಗುವುದಕ್ಕಿಂತಲೂ ಮೊದಲು, ಅಲ್ಲಿ ಬಹುಶ: ಇಡೀ ರಾಜ್ಯಕ್ಕೇ ಮಾದರಿ ಆಗುವಂತಹ ರೀತಿಯಲ್ಲಿ ತುಂಬಾ ಒಳ್ಳೆಯ ಕೆಲಸಗಳು ಆಗುತ್ತಿವೆ. ಆ ನಿಸರ್ಗಧಾಮ ಒಳ್ಳೆಯ ಪ್ರವಾಸೋದ್ಯಮ ಕೇಂದ್ರವಾಗಿ ಈಗಾಗಲೇ ಬೆಳೆದಿದೆ. ಹಾಗಾಗಿ ಅದಕ್ಕೆ ಇನ್ನಷ್ಟು ಒತ್ತುಕೊಡತಕ್ಕ ದೃಷ್ಟಿಯಿಂದ ಮಾನ್ಯ ಸಚಿವರು ಸಮಗ್ರವಾಗಿ ಆಲೋಚನೆ ಮಾಡಿ ಈ ವಿಧೇಯಕವನ್ನು ತಂದಿದ್ದಾರೆ. ಇದರಿಂದಾಗಿ, ಆ ನಿಸರ್ಗಧಾಮದ ಇನ್ನಷ್ಟು ಅಭಿವೃದ್ಧಿಗೆ ಖಂಡಿತ ಸಹಕಾರಿಯಾಗುತ್ತದೆ. ಆದರೆ, ಈ ವಿಧೇಯಕದಲ್ಲಿ ಒಂದೇ ಒಂದು ಸಂಶಯವಿದೆ. ಅದೇನೆಂದರೆ, ಈ ಪ್ರಾಧಿಕಾರ ಸಮಿತಿಯಲ್ಲಿ ವಿಧಾನಸಭೆಯ ಸದ್ಯಸರನ್ನು ಮಾತ್ರ ನೇಮಕ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾಡಿದ್ದು, ವಿಧಾನ ಪರಿಷತ್ತಿನ ಸದಸ್ಯರನ್ನು ನೇಮಕ ಮಾಡಿರುವುದಿಲ್ಲ. ಈ ಬಗ್ಗೆ ನಾವು ಸದನದಲ್ಲಿ ಪ್ರತಿ ಬಾರಿ ಉಲ್ಲೇಖ ಮಾಡಬೇಕಾಗುತ್ತದೆ.

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೇ, ರಾಜ್ಯ ಮಟ್ಟದ Advisory Committee ಅನ್ನು ಗಮನಿಸಿ. ಆ ರಾಜ್ಯ ಮಟ್ಟದ ಸಲಹಾ ಸಮಿತಿಯಲ್ಲಿ ವಿಧಾನ ಪರಿಷತ್ತಿನ ಸದ್ಯಸರನ್ನು ನೇಮಕ ಮಾಡಿದ್ದೇವೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ಪ್ರಾಧಿಕಾರ ಸಮಿತಿಯಲ್ಲಿಯೂ ಕೂಡಾ, ಯಾರು ಸ್ಥಳೀಯ ಸಂಸದರು ಇದ್ದಾರೆ ಅವರ ಹೆಸರನ್ನು ಹಾಕಿರುವುದಿಲ್ಲ. ಆ ಪ್ರಾಧಿಕಾರಕ್ಕೆ ಸೇರಿಸುವಾಗ ಅಲ್ಲಿಯೇ ಸೇರಿಸಿ ಬಿಟ್ಟರೆ ಒಳ್ಳೆಯದಾಗುತ್ತದೆ ಎಂದು ನನಗನ್ನಿಸುತ್ತದೆ. ರಾಜ್ಯ ಮಟ್ಟದ ಸಲಹಾ ಸಮಿತಿಯಲ್ಲಿ ಸ್ಥಳೀಯ ಸಂಸದರನ್ನು ಸೇರಿಸಿದ್ದಾರೆ. ಅದನ್ನು ನಾನು ಇಲ್ಲಾ ಎಂದು ಹೇಳುವುದಿಲ್ಲ. ಆದರೆ ಪ್ರಾಧಿಕಾರದ ರಚನೆಯಲ್ಲಿ ಏಕೆ ಅವರನ್ನು ಕೈಬಿಟ್ಟಿದ್ದಾರೆ? ಆ ಭಾಗಕ್ಕೆ ಸಂಬಂಧಪಟ್ಟ ಕೇವಲ ಮೂರು ಜನ ಶಾಸಕರನ್ನು ಮಾತ್ರ ಸೇರಿಸಿದ್ದಾರೆ. ಆದರೆ, ಆ ಭಾಗದ ವಿಧಾನ ಪರಿಷತ್ತಿನ ಸದಸ್ಯರು ಮತ್ತು ಸಂಸದರನ್ನು ಪ್ರಾಧಿಕಾರ ಸಮಿತಿಯಲ್ಲಿ ಕೂಡ ಸೇರಿಸಬೇಕು ಎಂಬ ವಿನಂತಿ ಮಾಡುತ್ತಾ, ಈ ಒಂದು ಒಳ್ಳೆಯ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ನಾನು ಪ್ರಸ್ತುತ ಇದರ Administrative Committee ಸದಸ್ಯನಾಗಿದ್ದೇನೆ. ಮಾನ್ಯ ಸಚಿವರು ಈ ವಿಧೇಯಕವನ್ನು ತಂದಿರುವುದಕ್ಕೆ ಬಹಳ ಸಂತೋಷವಾಗುತ್ತಿದೆ. ಆದರೆ, ನನಗೆ ಒಂದು ವಿಚಾರ ಅರ್ಥವಾಗುವುದಿಲ್ಲ. ಅದೇನೆಂದರೆ, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡುವಾಗ ಸ್ಥಳೀಯ ವಿಧಾನ ಪರಿಷತ್ತಿನ ಸದಸ್ಯರನ್ನು ಏತಕ್ಕೆ ಕೈಬಿಟ್ಟಿದ್ದಾರೆ? ನಾನೂ ಕೂಡ ಆ ಸಮಿತಿಯಲ್ಲಿ ಸದಸ್ಯನಾಗಿದ್ದೇನೆ. ಇದನ್ನು ಯಾವ ಉದ್ದೇಶಕ್ಕಾಗಿ ಮಾಡಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ? What is the reason behind this? ಅದು ನನಗೆ ಗೊತ್ತಿಲ್ಲ. ಅದರಲ್ಲಿ ಸ್ಥಳೀಯವಾಗಿರತಕ್ಕಂತಹ ಲೋಕಸಭೆಯ ಸದಸ್ಯರು ಮತ್ತು ವಿಧಾನ ಪರಿಷತ್ತಿನ ಸದಸ್ಯರನ್ನು ಸೇರಿಸುವುದರಿಂದ ನಿಸರ್ಗಧಾಮ ಅಭಿವೃದ್ಧಿ ಮಾಡುವುದಕ್ಕೆ ಹೆಚ್ಚು ಅವಕಾಶಗಳಾಗುತ್ತವೆ ಮತ್ತು ಉತ್ತಮವಾದ ಸಲಹೆಗಳನ್ನು ಕೊಡಲೂ ಸಾಧ್ಯವಾಗುತ್ತದೆ. ಆದುದರಿಂದ ಅವರನ್ನು ಸಮಿತಿಗೆ ಸೇರಿಸಿಕೊಳ್ಳಬೇಕು ಎನ್ನುವುದು ಒಂದು.

ಎರಡನೆಯದಾಗಿ, ಪಿಲಿಕುಳ ನಿಸರ್ಗ ಧಾಮದಲ್ಲಿ ಒಂದು water park ಇದೆ. ಆ water park ಅನ್ನು ಈ ವಿಧೇಯಕದಲ್ಲಿ ಏತಕ್ಕೆ ಸೇರಿಸಿರುವುದಿಲ್ಲ? ಅದನ್ನು ಇದರಲ್ಲಿ ಸೇರಿಸಲೇಬೇಕು. Water Park is the major event in Pilikula Nisargadhama. ಆ water

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

park ಗೆ ಬಹಳಷ್ಟು ಜನ ಪ್ರವಾಸಿಗರು ಬರುತ್ತಾರೆ. ಅದನ್ನು ಸಹ ಈ ವಿಧೇಯಕದಲ್ಲಿ ಸೇರಿಸುವಂತಹ ಕೆಲಸವಾಗಬೇಕು. ಅದನ್ನು ಬಿಟ್ಟು ಈ ವಿಧೇಯಕ ಮಾಡಿದರೆ ಹೇಗೆ? ಆ water park 356 ಏಕರೆ ಪ್ರದೇಶದ ಒಳಗಡೆಯೇ ಇದೆ. ಅದು ಅಭಿವೃದ್ಧಿ ಅಹ ಆಗಿದೆ. ಆದುದರಿಂದ, ಈ water park ಅನ್ನು ಇದರಲ್ಲಿ ಸೇರಿಸುವ ಕ್ರಮವನ್ನು ತೆಗೆದುಕೊಳ್ಳಬೇಕು. ಜೊತೆಗೆ, ಈ ಪ್ರಾಧಿಕಾರ ಮಾಡುವ ಅವಶ್ಯಕತೆ ಇದೆ ಎಂದು ಹೇಳಿ, ಈ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ, ವಿಧಾನ ಪರಿಷತ್ತಿನ ಸದಸ್ಯರನ್ನು ಪ್ರಾಧಿಕಾರದಲ್ಲಿ ಸೇರಿಸುವ ಬಗ್ಗೆ ಈ ಸದನದಲ್ಲಿಯೇ ಉತ್ತರ ನೀಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರು ಈ ವಿಧೇಯಕದ ಬಗ್ಗೆ ಉತ್ತರ ನೀಡುವುದಕ್ಕೆ ತಾವು ಅವಕಾಶ ಮಾಡಿಕೊಡಿ.

**ಶ್ರೀ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ಮಾನ್ಯ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಹೇಳಿರುವ ಸಲಹೆಯನ್ನು ಈ ವಿಧೇಯಕದಲ್ಲಿ ಮುಂದಕ್ಕೆ ನಾವು ಸೇರಿಸಿಕೊಳ್ಳುತ್ತೇವೆ. ಸಂಸದರು ಹಾಗೂ ವಿಧಾನ ಪರಿಷತ್ತಿನ ಸದಸ್ಯರುಗಳನ್ನು ಒಂದು additional ಆದೇಶವನ್ನು ಮಾಡಿ ಈ ಪ್ರಾಧಿಕಾರಕ್ಕೆ ಸೇರಿಸಿಕೊಳ್ಳುತ್ತೇವೆ. ಮಾನ್ಯ ಐವನ್ ಡಿ'ಸೋಜಾರವರು ಹೇಳಿರುವ water games and zoo ಎಲ್ಲವೂ ಸಹ ಈ ಪ್ರಾಧಿಕಾರದಲ್ಲಿ ಸೇರಿಸಿದ್ದೇವೆ ಎಂಬ clarification ಅನ್ನು ಸಹ ನೀಡುತ್ತಿದ್ದೇನೆ. ಆದುದರಿಂದ, ಮಾನ್ಯ ಸದಸ್ಯರುಗಳು ಈ ವಿಧೇಯಕಕ್ಕೆ ಅನುಮೋದನೆ ನೀಡಬೇಕೆಂದು ಕೋರುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಅಭಿವೃದ್ಧಿ ಮತ್ತು ನಿರ್ವಹಣೆಯಲ್ಲಿ ಈಗಾಗಲೇ ಸೇರಿಸಿಕೊಂಡಿದ್ದಾರೆ. ಆದರೆ, ಒಟ್ಟು geographical area ದಲ್ಲಿ ಬರುತ್ತಿರುವುದರಿಂದ ನಿರ್ದಿಷ್ಟವಾಗಿ ಅದನ್ನು ಸೇರಿಸುವುದು ಒಳ್ಳೆಯದೆಂದು ನನ್ನ ಅಭಿಪ್ರಾಯವಾಗಿದೆ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ಈ ಪ್ರವಾಸಿ ತಾಣಕ್ಕೆ ಬಹಳಷ್ಟು ಜನ ಪ್ರವಾಸಿಗರು ಬರುತ್ತಾರೆ. ಆದುದರಿಂದ, ಈ ಕಮಿಟಿಯೊಳಗೆ ಒಬ್ಬ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಯವರು ಇರಬೇಕು. ಮಾನ್ಯ ಸಚಿವರು ಎಲ್ಲಾ ಅಧಿಕಾರಿಗಳನ್ನು ಈ ಪ್ರಾಧಿಕಾರದಲ್ಲಿ ಸೇರಿಸಿದ್ದಾರೆ. ಇದರ ಜೊತೆಗೆ, ಒಬ್ಬ Superintendent of police ಅವರನ್ನು ಪ್ರಾಧಿಕಾರದಲ್ಲಿ ಸೇರಿಸಿಕೊಂಡರೆ ಸಂದರ್ಭ ಬಂದಾಗ ಆ ಪ್ರವಾಸಿ ತಾಣವನ್ನು ರಕ್ಷಣೆ ಮಾಡುವುದಕ್ಕೆ ಅನುಕೂಲವಾಗುತ್ತದೆ.

**ಶ್ರೀ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ಈ ಕಮಿಟಿಯಲ್ಲಿ ಮಂಗಳೂರು ನಗರ ಪೋಲೀಸ್ ಆಯುಕ್ತರನ್ನು ಸದಸ್ಯರನ್ನಾಗಿ ನೇಮಕ ಮಾಡಿದ್ದೇವೆ. ಮಾನ್ಯ ಸದಸ್ಯರು ದಯಮಾಡಿ ಅದನ್ನು ಗಮನಿಸಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು**:- ತಾವು ಹೇಳಿದ ರೀತಿ ಪೊಲೀಸ್ ಆಯುಕ್ತರನ್ನು ಪ್ರಾಧಿಕಾರದಲ್ಲಿ ಸೇರಿಸಿದ್ದಾರೆ.

**ಶ್ರೀ ರಾಮಚಂದ್ರಗೌಡ**:- ಮಾನ್ಯ ಸಭಾಪತಿಯವರೇ, ಕಮಿಟಿಯಲ್ಲಿ ಮಂಗಳೂರು ಪೋಲೀಸ್ ಆಯುಕ್ತರನ್ನು ಸದಸ್ಯರನ್ನಾಗಿ ಮಾಡಿರುವುದು ನನಗೆ ಗೊತ್ತಿರುವುದಿಲ್ಲ. ಒಂದು ವೇಳೆ ಅವರನ್ನು ಸದಸ್ಯರನ್ನಾಗಿ ಸೇರಿಸಿದ್ದರೆ ಸರಿ.

**ಸಭಾಪತಿಯವರು**:- ಪ್ರಸ್ತಾವ ಏನೆಂದರೆ:

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2018 ಅನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

ಖಂಡ 2 ರಿಂದ 41 ರವರೆಗೆ

**ಸಭಾಪತಿಯವರು**:- "ಖಂಡ 2 ರಿಂದ 41 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 41 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 2 ಇತ್ಯಾದಿ

**ಸಭಾಪತಿಯವರು**:- ಪ್ರಸ್ತಾವ ಏನೆಂದರೆ:

"ಮೊದಲನೆಯ ಖಂಡ. ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ. ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಎಂ.ಆರ್. ಸೀತಾರಾಂ(ಸಭಾ ನಾಯಕರು)(ಯೋಜನೆ, ಸಾಂಖ್ಯಿಕ ಮತ್ತು** ವಿಜ್ಞಾನ **ಮತ್ತು ತಂತ್ರಜ್ಞಾನ ಸಚಿವರ)**:-ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2018 ಅನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು**:- ಪ್ರಸ್ತಾವ ಏನೆಂದರೆ:

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2018 ಅನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

(259)23.02.2018/ವೈಎಲ್-ಕೆಎಸ್/1.50

**ಸಭಾಪತಿಯವರು:-** ಈಗ ಸದನವನ್ನು ಭೋಜನಕ್ಕಾಗಿ 3.30 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 1 ಗಂಟೆ 51 ನಿಮಿಷಕ್ಕೆ ಮುಂದೂಡಲ್ಪಟ್ಟು, ಪುನಃ ಮಧ್ಯಾಹ್ನ 3 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

(260)/23.02.2018/3.30/ಎಸ್‌ಕೆ-ಜಿಆರ್

**(ಭೋಜನ ವಿರಾಮದ ನಂತರ ಸದನವು ಪುನಃ ಮಧ್ಯಾಹ್ನ 3:38 ಗಂಟೆಗೆ ಸಮಾವೇಶಗೊಂಡಿತು)**

**(ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಶಿಕ್ಷಣ ಇಲಾಖೆ Schooglink Private Limited ಜೊತೆ ಆಗಿರುವಂತಹ ಒಡಂಬಡಿಕೆಯ ಕುರಿತು ಪ್ರಸ್ತಾಪ ಮಾಡುವುದಕ್ಕೆ ದಯವಿಟ್ಟು ಅವಕಾಶ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅದು ಸಾರ್ವಜನಿಕರ ಮಹತ್ವದ ವಿಷಯವಾಗಿದ್ದು ನಿಯಮ 68ರಡಿಯಲ್ಲಿ ಪಟ್ಟಿಯಾಗಿದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನಾವು ಬೆಳಗ್ಗೆ Zero Hour ನಲ್ಲಿ ಸಹ ಪ್ರಸ್ತಾಪ ಮಾಡಿದ್ದೇವೆ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಇದು ಬಹಳ ಪ್ರಮುಖವಾಗಿರುವ ವಿಷಯವಾಗಿದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಮಕ್ಕಳು, ಪೋಷಕರ ಎಲ್ಲಾ data ವನ್ನು ಖಾಸಗಿ ಸಂಸ್ಥೆಯವರಿಗೆ ಕೊಟ್ಟು ಬಿಟ್ಟಿರುವುದರಿಂದ ಅವರ privacy ಏನಿದೆ. ಅದರಲ್ಲಿ ಯಾವ ರೀತಿ ಉನ್ನತಿಯಾಗಿದೆ? ದಯವಿಟ್ಟು, ಆ ಎಲ್ಲ ವಿಚಾರಗಳ ಬಗ್ಗೆ ಪ್ರಸ್ತಾಪಿಸಲು ಸ್ವಲ್ಪ ಅವಕಾಶ ಕೊಡಬೇಕು.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಶಿಕ್ಷಣ ಸಚಿವಾಲಯ ಒಂದೇ ರೀತಿ ಖಾಸಗೀಕರಣವಾಗುತ್ತದೆ. ಇದು ಬಹಳ ಮಹತ್ವದ್ದಾಗಿದೆ. ಈ ವಿಚಾರದಲ್ಲಿ ನಾವು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ತಾವು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೀರಾ. ಸರ್ಕಾರ ಇಚ್ಛೆ ಪಟ್ಟರೆ, ಅದನ್ನು ಮಂಡಿಸುವುದಕ್ಕೆ ಹೇಳುತ್ತೇನೆ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಿಗೆ ನಮ್ಮದು ಒಂದು ವಿನಂತಿ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಿಂದ ಖಾಸಗಿ ಸಂಸ್ಥೆಯವರ ಜೊತೆಗೆ ಒಡಂಬಡಿಕೆಯಾಗಿದೆ. ಈ ಬಗ್ಗೆ ನಾವು ನಿಯಮ 68 ರಡಿಯಲ್ಲಿ notice ಕೊಟ್ಟಿದ್ದೇವೆ. ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆ. ಹೀಗಾಗಿ ಶಿಕ್ಷಣ ಇಲಾಖೆ ಒಂದು ರೀತಿ ಖಾಸಗೀಕರಣವಾಗುತ್ತದೆ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಚಿವರು ಬಂದ ಮೇಲೆ ಈ ವಿಚಾರವನ್ನು ಅವರ ಗಮನಕ್ಕೆ ತರಲಾಗುತ್ತದೆ.

**ಶ್ರೀ ಅರುಣ ಶಹಾಪುರ:-** ಆದರೆ ಸಮಯ ಉಳಿಯುವುದಿಲ್ಲ. ಇದು ಬಹುತೇಕ ಕೊನೆಯ ಚರ್ಚೆಯಾಗುತ್ತದೆ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ,...

**ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಇವತ್ತು ...

**ಶ್ರೀ ಅರುಣ ಶಹಾಪುರ:-** ದಯವಿಟ್ಟು, ನೀವು...

## 11. ಪ್ರಕಟಣೆಗಳು

**ಸಭಾಪತಿಯವರು:-** ಒಂದು ಪ್ರಕಟಣೆ ಇದೆ. ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 104ರ ಮೇರೆಗೆ ವಿಧಾನ ಸಭೆಯು ದಿನಾಂಕ: 23.02.2018 ರಂದು ಈ ಕೆಳಕಂಡ ವಿಧೇಯಕಗಳನ್ನು ತಿದ್ದುಪಡಿಗಳೊಂದಿಗೆ ಅಂಗೀಕರಿಸುತ್ತದೆ ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1) ಜಗತ್ ವಿಶ್ವವಿದ್ಯಾಲಯ ವಿಧೇಯಕ, 2018

2) ನಾಡಪ್ರಭು ಕೆಂಪೇಗೌಡ ಪರಂಪರೆಯ ತಾಣದ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2018

3) ಬನವಾಸಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2018

**261 23-2-18 3-40 ಟಿಸಿಹೆಚ್/ಜಿಆರ್ (ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ಇನ್ನೊಂದು ಪ್ರಕಟಣೆ ಬಂದಿರುತ್ತದೆ. ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 116ರ ಮೇರೆಗೆ ವಿಧಾನ ಸಭೆಯು ದಿನಾಂಕ:

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

23.02.2018ರಂದು ಕರ್ನಾಟಕ ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರದ ರೂಪದಲ್ಲಿ ಮತ್ತು ಕರ್ನಾಟಕ ವಿಧಾನ ಪರಿಷತ್ತಿನಿಂದ ತಿದ್ದುಪಡಿ ವಿವರಣೆ ಅಂಗೀಕಾರವಾದ ರೂಪದಲ್ಲಿರುವ 2018ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ವಿಧೇಯಕವನ್ನು ಪರ್ಯಾಲೋಚಿಸಿ ಅಂಗೀಕರಿಸಿರುತ್ತದೆಂದು ತಿಳಿಸಿರುತ್ತಾರೆ.

## 12. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಕಾರ್ಯದರ್ಶಿ, ಕ.ವಿ.ಪ:-** ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2018ನೇ ಸಾಲಿನ " **ಜಗತ್ ವಿಶ್ವವಿದ್ಯಾಲಯ ವಿಧೇಯಕ", "ನಾಡಪ್ರಭು ಕೆಂಪೇಗೌಡ ಪರಂಪರೆ ತಾಣದ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ" ಮತ್ತು ಬನವಾಸಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ"** ಹಾಗೂ ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

01. ಕರ್ನಾಟಕ ಧನವಿನಿಯೋಗ ವಿಧೇಯಕ, 2018
02. ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ. 2018
03. ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಿಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ, 2018.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳು ಧನವಿನಿಯೋಗ ವಿಧೇಯಕವನ್ನು ತಾವೇನು ಸದನದಲ್ಲಿ ಮಂಡಿಸುತ್ತೀರಾ ಇಲ್ಲವೇ, ಮಾತನಾಡಿ ಮಂಡಿಸುತ್ತೀರಾ ಹೇಳಿ? ಏಕೆಂದರೆ, ನಮ್ಮ ಸದನದಲ್ಲಿ ಬಜೆಟ್ ಮೇಲೆ ಚರ್ಚೆ ಮಾಡುವುದಕ್ಕೆ ತಮಗೆ ಅವಕಾಶ ಸಿಗಲಿಲ್ಲ. ಆದ್ದರಿಂದ ತಾವು ಯಾವ ರೀತಿ ಮಾಡುತ್ತೀರಿ ಎಂದು ಹೇಳಿ?

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, ಇತಿಹಾಸದಲ್ಲಿಯೇ ಇದೇ ಮೊದಲ ಬಾರಿ ಬಜೆಟ್‌ನ್ನು ಚರ್ಚೆ ಮಾಡದೇ ಬಿಲ್ ಪಾಸ್ ಮಾಡುತ್ತಿರುವುದು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಭಜೆಟ್ ಮೇಲೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಒಂದು ಸ್ವಲ್ಪವೂ ಅವಕಾಶ ಸಿಕ್ಕಿಲ್ಲ. ಹಾಗಾಗಿ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವ ಸಂಗತಿ ಉದ್ಭವವಾಗುವುದಿಲ್ಲ. ನಾವು ಕ್ಲಾರಿಫಿಕೇಷನ್ ಕೇಳಿಯೇ ಇಲ್ಲ. ಆದ್ದರಿಂದ ನಮ್ಮದೊಂದು ವಿನಂತಿ ಇದೆ. ನಮಗ್ಯಾರಿಗಾದರೂ ಮಾತನಾಡಲು ಅವಕಾಶ ಮಾಡಿಕೊಟ್ಟಿಲ್ಲ, ನಾವು ಅದರ ಬಗ್ಗೆ ಏನಾದರೂ ಕೇಳಬಹುದು. ಅದು ಇಲ್ಲದೇ, ಇವರು ನೇರವಾಗಿ ಭಾಷಣ ಪ್ರಾರಂಭ ಮಾಡಿದರೆ, ನಾವು ಯಾವುದರ ಬಗ್ಗೆ ಭಾಷಣ ಕೇಳಬೇಕು. ಕ್ಲಾರಿಫಿಕೇಷನ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಳುವುದಕ್ಕೇ ನಮಗೆ ಅವಕಾಶ ಕೊಟ್ಟಿಲ್ಲ. ಈಗ ಧನವಿನಿಯೋಗ ಬಿಲ್ ಪಾಸ್ ಮಾಡಬೇಕೆಂದು ಹೇಳುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಈಗ ಯಾವ ವಿಷಯಗಳು ಬಹಳ ಪ್ರಮುಖವಾಗಿವೆ ಅವುಗಳನ್ನು ಸದನದಲ್ಲಿ ನಾನು ಹೇಳಿಬಿಡುತ್ತೇನೆ, ಅದನ್ನು ಕೇಳಿಕೊಳ್ಳಿ ಅಷ್ಟೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ನಾವು 4 ಗಂಟೆಗಳ ಕಾಲ ಮಾನ್ಯ ಮುಖ್ಯಮಂತ್ರಿಯವರ ಭಾಷಣ ಕೇಳಿದ್ದೇವೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರೇ, ತಾವು ಸದನಕ್ಕೆ ಯಾವಾಗ ಬಂದಿದ್ದೀರಿ?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಬಜೆಟ್ ಪುಸ್ತಕ ನಮ್ಮ ಬಳಿ ಇದೆ ಮತ್ತು ಇದು ಟಿ.ವಿಯಲ್ಲಿಯೂ ಸಹ ಬಂದಿದ್ದು, Live telecast ಆಗಿದೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಜೆಟ್ ಪುಸ್ತಕ ಓದಿದ ನಂತರ, ಏನು ಬೇಕೆಂದು ಕೇಳಬಹುದು ಅಷ್ಟೆ. ಮಾನ್ಯ ಸಭಾಪತಿಯವರೇ....

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ಒಂದೇ ಒಂದು ನಿಮಿಷ. ನಾನು ಒಂದೆರಡು-ಮೂರು ನಿಮಿಷಗಳ ಕಾಲ ಬಜೆಟ್ ಮೇಲೆ ನಮ್ಮ ಭಾವನೆಗಳ ಬಗ್ಗೆ ಮಾತನಾಡುತ್ತೇನೆ. ಅದಕ್ಕೆ 3 ನಿಮಿಷಗಳ ಕಾಲ ಅವಕಾಶ ಮಾಡಿಕೊಡಿ.

**ಸಭಾಪತಿಯವರು:-** ಮಾನ್ಯ ಲಹರ್ ಸಿಂಗ್ ಸಿರೋಯಾರವರೇ, ಒಬ್ಬ ಸದಸ್ಯರಿಗೆ ಮಾತನಾಡಲು ಅವಕಾಶ ಕೊಟ್ಟರೆ, ಉಳಿದ ಎಲ್ಲಾ ಸದಸ್ಯರಿಗೂ ಅವಕಾಶ ಕೊಡಬೇಕಾಗುತ್ತದೆ. ಆದ್ದರಿಂದ ಯಾರಾದರೂ ಒಬ್ಬರಿಗೆ ಮಾತನಾಡಲು ಅವಕಾಶ ಕೊಡುವುದಕ್ಕಾಗುವುದಿಲ್ಲ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಈಗ ಚರ್ಚೆ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ನನಗೆ ಮೂರೇ ಮೂರು ನಿಮಿಷಗಳ ಕಾಲ ಮಾತನಾಡಲು ಅವಕಾಶ ಕೊಡಿ.

**ಶ್ರೀ ಐವನ್ ಡಿ'ಸೋಜ:-** ಮಾನ್ಯ ಸಭಾಪತಿಯವರೇ, ಬಜೆಟ್ ಈ ಸದನದಲ್ಲಿ ಮಂಡನೆಯಾಗಿದೆ. ನಮ್ಮ ಕೈಯಲ್ಲಿ ಬಜೆಟ್ ಪುಸ್ತಕ ಇದೆ. ಸಮಯ ಕೊಡುವ ಅವಶ್ಯಕತೆ ಇಲ್ಲ. ಹಾಗಾಗಿ, ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಮಾನ್ಯ ಸಭಾಪತಿಯವರೇ, ನಾವು ಬಜೆಟ್ ಮೇಲಿನ ಭಾಷಣವನ್ನು ಕೇಳಿದ್ದೇವೆ. ಮತ್ತು ಬಜೆಟ್ ಪುಸ್ತಕವನ್ನು ಓದಿದ್ದೇವೆ. ವಿರೋಧ ಪಕ್ಷದವರಾದ ನಾವು ನಮ್ಮ ಯಾವ ಭಾವನೆಗಳನ್ನು ಕೂಡ ಹಂಚಿಕೊಂಡಿಲ್ಲ. ಇವತ್ತು ನಾವು ಏನು ಭಾಷಣ ಕೇಳಬೇಕು ಮತ್ತು ಏನು ಕ್ಲಾರಿಫಿಕೇಷನ್ ಕೇಳಬೇಕು?

**ಶ್ರೀ ವಿ.ಎಸ್.ಉಗ್ರಪ್ಪ**:- ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿರಲಿ, ಅದರ ಮೇಲೆ ನಾವು ಕ್ಲಾರಿಫಿಕೇಷನ್ ಕೇಳುತ್ತೇವೆ.

**ಸಭಾಪತಿಯವರು**:- ಈಗ ನಾನು ಪ್ರಾರಂಭ ಮಾಡುತ್ತೇನೆ, ನೋಡೋಣ ಮುಂದೆ ಏನಾಗುತ್ತದೆಂದು. ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು.

**ಸಭಾಪತಿಯವರು**:- ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಧನವಿನಿಯೋಗ ವಿಧೇಯಕ-2018ರ ಮೇಲಿನ ಪ್ರಸ್ತಾವನೆಯನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು.

**ಶ್ರೀ ಸಿದ್ದರಾಮಯ್ಯ**:- ಮಾನ್ಯ ಸಭಾಪತಿಯವರೇ, ಈ ರೀತಿಯಾದರೆ, ನಾವು ಏನು ಮಾಡುವುದಕ್ಕಾಗುತ್ತದೆ.

**ಸಭಾಪತಿಯವರು**:- ಮಾನ್ಯ ಮುಖ್ಯಮಂತ್ರಿಗಳೇ, ತಾವು ಪರ್ಯಾಲೋಚಿಸಬೇಕೆಂದು ಸೂಚಿಸಿದ ನಂತರ, ತಾವು ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

**ಶ್ರೀ ಸಿದ್ದರಾಮಯ್ಯ**:- ಮಾನ್ಯ ಸಭಾಪತಿಯವರೇ, ಬಜೆಟ್ ಮೇಲಿನ ಚರ್ಚೆಯಲ್ಲಿ ನಾವು ಪ್ರತಿಯೊಬ್ಬ ಸದಸ್ಯರು ಕೂಡ ಭಾಗವಹಿಸಬೇಕು ಸರಿ. ನಾನು ಸದನದಲ್ಲಿ ಇದೇ ತಿಂಗಳ 16ನೇ ತಾರೀಖಿನಂದು ಬಜೆಟ್‌ನ್ನು ಮಂಡಿಸಿರುತ್ತೇನೆ. ಇದಾದ ನಂತರ, 19ನೇ ತಾರೀಖಿನಿಂದ ಸದನ ನಡೆದಿದೆ. ಇವರ್ಯಾರು ಬಜೆಟ್ ಮೇಲೆ ಭಾಗವಹಿಸಬಾರದೆಂದು ನಿರ್ಬಂಧ ಹಾಕಿರಲಿಲ್ಲ, ನೀವು ಕೂಡ ನಿರ್ಬಂಧ ಹಾಕಿಲ್ಲವೆಂದು ಅನಿಸುತ್ತದೆ.

**ಸಭಾಪತಿಯವರು**:- ಮಾನ್ಯ ಮುಖ್ಯಮಂತ್ರಿಗಳೇ, ಇಲ್ಲ.

**ಶ್ರೀ ಸಿದ್ದರಾಮಯ್ಯ**:- ಮಾನ್ಯ ಸಭಾಪತಿಯವರೇ, ಬಜೆಟ್ ಮೇಲೆ ಮಾತನಾಡದಿದ್ದರೆ ಮಾತನಾಡಬಹುದಿತ್ತು. ಮಾನ್ಯ ಸದಸ್ಯರು ಯಾರು ಮಾತನಾಡಲಿಲ್ಲವೆನ್ನುವ ಕಾರಣಕ್ಕೆ ನಾನು ಸದನಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉತ್ತರ ಕೊಡುವಂತಹ ಪ್ರಿವಿಲೇಜ್‌ನ್ನು ಕಳೆದುಕೊಂಡರೆ ಹೇಗೆ? It is my privilege to give the reply, whether they have discussed it or not.

**ಶ್ರೀ ಅರುಣಶಹಾಪುರ**:- ಮಾನ್ಯ ಸಭಾಪತಿಯವರೇ, ಬಜೆಟ್ ಮಂಡನೆ ಮಾಡಿದ ನಂತರ ನಮ್ಮ.. .

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಮಾನ್ಯ ಸಭಾಪತಿಯವರೇ, ನಾನು ತಮ್ಮಲ್ಲಿ ಒಂದು ವಿಚಾರವನ್ನು ಕೇಳುತ್ತೇನೆ. 19ನೇ ತಾರೀಖಿನ ನಂತರ ಇವತ್ತಿನವರೆಗೆ ಬಜೆಟ್ ಮೇಲೆ ಚರ್ಚೆ ಎಂದು ಎಲ್ಲಾದರೂ ನಮ್ಮ ಕಾರ್ಯಕಲಾಪಗಳ ಪಟ್ಟಿಯಲ್ಲಿ ಬಂದಿದೆಯೇ?

**ಶ್ರೀ ಸಿದ್ದರಾಮಯ್ಯ**:- ಮಾನ್ಯ ಸಭಾಪತಿಯವರೇ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರೇ ಏನು, ಆ ರೀತಿ ಬರುವುದಿಲ್ಲ ರೀ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಮಾನ್ಯ ಸಭಾಪತಿಯವರೇ, ಅದು ಲಿಸ್ಟ್ ಆಗಿಲ್ಲ. ಲಿಸ್ಟ್ ಆಗಿಲ್ಲದೇ ಇದ್ದರೆ, ನಾವು ಹೇಗೆ ಮಾತನಾಡುವುದು?

**ಶ್ರೀ ಸಿದ್ದರಾಮಯ್ಯ**:- ಮಾನ್ಯ ಸಭಾಪತಿಯವರೇ, it is implied and understood.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಮಾನ್ಯ ಸಭಾಪತಿಯವರೇ, but if it is understood, then why your answer?

**ಶ್ರೀ ಸಿದ್ದರಾಮಯ್ಯ**:- ಮಾನ್ಯ ಸಭಾಪತಿಯವರೇ, ಬಜೆಟ್ ಮಂಡಿಸಿದ ತಕ್ಷಣವೇ ಇದು ಚರ್ಚೆ ಆಗಬೇಕು ಎಂದು ಇದೆ, ತಾನೆ.

(ಗೊಂದಲ)

**ಶ್ರೀ ಟಿ.ಎ.ಶರವಣ**:- ಮಾನ್ಯ ಸಭಾಪತಿಯವರೇ, ಬಜೆಟ್ ಮೇಲೆ ಚರ್ಚೆಗೆ ಬರುತ್ತದೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನನ್ನಿಂದ ಉತ್ತರ ಕೇಳುವುದಕ್ಕೆ ತಯಾರಿಲ್ಲ. ಇವರಿಗೆ ಉತ್ತರವೇ ಬೇಕಾಗಿಲ್ಲ. (ಗೊಂದಲ) ನಾನು ಬಜೆಟ್‌ನ ಮೇಲೆ ಉತ್ತರವನ್ನು ಹೇಳುವುದಕ್ಕೆ ಹೋಗುವುದಿಲ್ಲಪ್ಪಾ. ಆಮೇಲೆ. . . (ಗೊಂದಲ) Money Bill ಪಾಸ್ ಮಾಡುವುದು... (ಗೊಂದಲ) ಹಾಗಾದರೆ, 75 ಜನ ಸದಸ್ಯರೂ ಸಹ ನಾವು ಮಾತನಾಡಿಲ್ಲ. ಆದ್ದರಿಂದ ಈ 75 ಜನ ಸದಸ್ಯರು ಮಾತನಾಡುವವರೆಗೆ ನಾನು ಉತ್ತರ ಕೊಡಬಾರದು ಎಂದು ಹೇಳಿದರೆ ಹೇಗೆ? How

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

is it possible? It's not possible. (ಗೊಂದಲ) ರೀ ತಾವೆಲ್ಲರೂ ಕುಳಿತುಕೊಂಡು ಕೇಳಿ. ತಾವು ಕೇಳ್ರಪ್ಪಾ, ಕ್ಲಾರಿಫಿಕೇಷನ್ ಕೇಳಿ. (ಗೊಂದಲ) ಅವರೆಲ್ಲರಿಗೂ ಬಜೆಟ್ ಪುಸ್ತಕದ ಪ್ರತಿಯನ್ನು ಕೊಡಿ. (ಗೊಂದಲ) ನೀವು ಬಜೆಟ್ ಪುಸ್ತಕವನ್ನು ತೆಗೆದುಕೊಂಡು ಓದಿಕೊಳ್ಳಿ. (ಗೊಂದಲ)ನಾನು ಮಾತನಾಡುತ್ತೇನೆ, ಮಾತನಾಡಿದ ನಂತರ if any doubt arises, please ask clarifications.

(ಗೊಂದಲ)

**ಶ್ರೀ ಐವನ್ ಡಿ'ಸೋಜ**:- ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದ ನಂತರ, ಏನಾದರೂ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶವಿದೆ. ತಾವು ಶುರು ಮಾಡಬಹುದು.

(ಗೊಂದಲ)

**ಸಭಾಪತಿಯವರು**:- ಈಗ ಈ ರೀತಿ ಮಾಡೋಣ...

(ಗೊಂದಲ)

**ಶ್ರೀ ಎಂ.ನಾರಾಯಣ ಸ್ವಾಮಿ**:- ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲಿ, ಆಮೇಲೆ ಬೇಕಾದರೆ ಮಾನ್ಯ ಸದಸ್ಯರು ಕ್ಲಾರಿಫಿಕೇಷನ್ ಇದ್ದರೆ ಕೇಳಲಿ. ದಯವಿಟ್ಟು ಅವರು ಉತ್ತರ ಕೊಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

**ಸಭಾಪತಿಯವರು**:- ಮಾನ್ಯ ಮುಖ್ಯಮಂತ್ರಿಗಳೇ, ತಾವು ಪರ್ಯಾಲೋಚಿಸಬೇಕೆಂದು ಪ್ರಸ್ತಾವವನ್ನು ಮಂಡಿಸಿ. ನಂತರ ತಮಗೆ ಮಾತನಾಡಲು ಅವಕಾಶ ಕೊಡುತ್ತೇನೆ. ಆಮೇಲೆ ಮುಂದೆ ನೋಡೋಣ.

**ಶ್ರೀ ಸಿದ್ಧರಾಮಯ್ಯ**:-ಮಾನ್ಯ ಸಭಾಪತಿಯವರೇ, Appropriation Bill ಎಂದರೆ, ಬಜೆಟ್‌ಗೆ ಸಂಬಂಧಪಟ್ಟಿರುತ್ತದೆ. ನಾವು ಬಜೆಟ್‌ನಲ್ಲಿ ಏನು ಹೇಳಿರುತ್ತೇವೆಯೋ ಅದನ್ನೇ ನಾವು demands ಮೂಲಕ ಕೇಳುತ್ತೇವೆ. ನಾಲ್ಕು ತಿಂಗಳಿನೊಳಗೆ ನಾವು ಇಷ್ಟು ಹಣವನ್ನು ಖರ್ಚು ಮಾಡುತ್ತೇವೆ. 2018-2019ನೇ ಸಾಲಿನ ಬಜೆಟ್‌ನಲ್ಲಿ ಇಷ್ಟು ಬಜೆಟ್ ಇದೆ, ನಾಲ್ಕು ತಿಂಗಳಿನೊಳಗೆ ಲೇಖಾನುದಾನವನ್ನು ಕೇಳಿದ್ದೇವೆ. ಅದಕ್ಕೆ ಒಪ್ಪಿಗೆ ಕೊಡಿ ಎಂದು ಕೇಳುತ್ತಿದ್ದೇನೆ. ಅದಕ್ಕೆ ಒಂದು Appropriation Bill ನ್ನು ಮಂಡಿಸುತ್ತಿದ್ದೇವೆ. ಇದರ ಜೊತೆಗೆ ಹಣಕಾಸಿನ ವಿಧೇಯಕಗಳು ಇದ್ದಲ್ಲಿ ಅದನ್ನೂ ಸಹ ಮಂಡಿಸುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Supplementary Estimates Bill ನ್ನು ಮಂಡಿಸುತ್ತೇವೆ. ಈ ಬಿಲ್‌ಗಳನ್ನು ಪಾಸ್ ಮಾಡಬೇಕು. ಇದಕ್ಕೆ ಸದನ ಒಪ್ಪಿಗೆ ಕೊಡಬೇಕು. ಆಯಿತು, ತಾಂತ್ರಿಕವಾಗಿ ಹೋಗುವುದು ಬೇಡ. ಈಗ ನಾನು Appropriation Bill ಏನಿದೆ ಇದನ್ನು ಪರ್ಯಾಲೋಚಿಸಬೇಕೆಂದು ಮಂಡಿಸುತ್ತೇನೆ. ಅದರ ಮೇಲೆ ಚರ್ಚೆ ಮಾಡೋಣ. ಅದರ ಮೇಲೆ ಭಾಷಣ ಮಾಡುತ್ತೇನೆ. ಇದು ಕೂಡ ಬಜೆಟ್ ಭಾಷಣ.

**ಶೀ ಅರುಣ ಶಹಾಪುರ**:- ಮಾನ್ಯ ಸಭಾಪತಿಯವರೇ, ಬಜೆಟ್ ಭಾಷಣದ ಮೇಲೆ ಮತ್ತು ಅದರ ಮೇಲೆ ಇನ್ನೊಂದು ಪ್ರಶ್ನೆಯನ್ನು ಕೇಳುವುದಕ್ಕೆಂದೇ ಸದನ ಇರುವುದು. ನಮ್ಮನ್ನು ಸರ್ಕಾರ ಕೇಳಿಲ್ಲ.

**ಶ್ರೀ ಸಿದ್ದರಾಮಯ್ಯ**:- ಮಾನ್ಯ ಸಭಾಪತಿಯವರೇ, ಈಗ Appropriation Bill ಪಾಸ್ ಆಗಬೇಕೋ, ಬೇಡವೋ?

**ಶ್ರೀ ಬಿ.ಜೆ.ಪುಟ್ಟಸ್ವಾಮಿ**:- ಅದು ಆಗಬೇಕು, it is our responsibility to get it passed.

**ಶ್ರೀ ಸಿದ್ದರಾಮಯ್ಯ**:- ಮಾನ್ಯ ಸಭಾಪತಿಯವರೇ, ಮತ್ತೆ ಅದನ್ನೇ ನಾನು ಹೇಳುತ್ತಿರುವುದು. ನೀವು ಮಾತನಾಡದಿದ್ದರೆ, if the Hon'ble Members don't participate in the discussion, ಅದಕ್ಕೆ ಸರ್ಕಾರ ಜವಾಬ್ದಾರಿನಾ?

**ಶ್ರೀ ಬಿ.ಜೆ.ಪುಟ್ಟಸ್ವಾಮಿ**:- ಮಾನ್ಯ ಸಭಾಪತಿಯವರೇ, ಮಾತನಾಡದಿದ್ದರೆ ಉತ್ತರ ಏಕೆ ಹೇಳುತ್ತೀರಿ.

**ಶ್ರೀ ಸಿದ್ದರಾಮಯ್ಯ**:- ಮಾನ್ಯ ಸಭಾಪತಿಯವರೇ, is this Government responsible for that?

**ಶ್ರೀ ಅರುಣ ಶಹಾಪುರ**:- ಮಾನ್ಯ ಸಭಾಪತಿಯವರೇ, ಈ ವಿಷಯ ಚರ್ಚೆಗೆ ಬಂದಿಲ್ಲ, ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಏಕೆ ತಪ್ಪು ಮಾಹಿತಿ ಕೊಡುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ**:- ಮಾನ್ಯ ಸಭಾಪತಿಯವರೇ, Appropriation Bill ಪಾಸ್ ಆಗಬೇಕು. ಈ ವಿಷಯ Business Advisory Committee ನಲ್ಲೂ ಕೂಡ ಚರ್ಚೆಯಾಗಿದೆ. ಇಂದೇ ಈ ವಿಧೇಯಕವನ್ನು ಪಾಸ್ ಮಾಡಬೇಕೆಂದು ತೀರ್ಮಾನವಾಗಿದೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಆರ್.ಸೀತಾರಾಂ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಅವರು ಕೂಗಿದರೆ, ಏನಾಯಿತು. ನಮಗೆ ನಿಮಗಿಂತ ಜೋರಾಗಿ ಕೂಗುವುಕ್ಕೆ ಬರುತ್ತದೆ. ರೀ, ಸ್ವಲ್ಪ ಶಾಂತವಾಗಿ ಮಾತನಾಡಿ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾನು ಇವರು ಹೇಳಿದಂತೆಲ್ಲಾ ಕೇಳುವುದಕ್ಕೆ ಆಗುವುದಿಲ್ಲ. We have to run the Government. They want to cross check for each and everything. For opposition, they should not oppose.

(ಗೊಂದಲ)

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳೇ, ವಿಧೇಯಕವನ್ನು ಪರ್ಯಾಲೋಚಿಸಬೇಂದು ಸೂಚಿಸಿ ಮಂಡಿಸಿ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ಈಗ Appropriation Bill ನ್ನು move ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳೇ, ತಾವು Appropriation Bill ನ್ನು move ಮಾಡಿ.

**13. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕ ಧನ ವಿನಿಯೋಗ ವಿಧೇಯಕ, 2018**

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಧನವಿನಿಯೋಗ ವಿಧೇಯಕ 2018ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವನೆಯನ್ನು ಮಂಡಿಸಲಾಯಿತು.

(262)23.2.2018/ಎಂಎಂ/ಎಂಡಿ/3.50

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾನು explain ಮಾಡುತ್ತೇನೆ ಆಮೇಲೆ ಯಾರಾದರೂ ಸ್ಪಷ್ಟನೆ ಕೇಳುವುದಿದ್ದರೆ ಕೇಳಲಿ. 2018-19ನೇ ಆರ್ಥಿಕ ವರ್ಷಕ್ಕೆ ಆಯವ್ಯಯ ಮುಂಗಡ ಪತ್ರವನ್ನು ಮಂಡಿಸಿದ್ದೇನೆ. ಈ ತಿಂಗಳ 16ನೇ ತಾರೀಖು ವಿಧಾನಸಭೆಯಲ್ಲಿ ಮಂಡಿಸಿದ್ದೇನೆ. Leader of the House ಇಲ್ಲಿ ಕೂಡ ಈ ತಿಂಗಳ 16ನೇ ತಾರೀಖು ಮಂಡಿಸಿದ್ದಾರೆ.

**ಸಭಾಪತಿಯವರು:-** ಸಭಾನಾಯಕರು ಮಂಡಿಸಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಸಭಾನಾಯಕರು ಇಲ್ಲಿಯೇ ಇದ್ದಾರೆ. I am not the Leader of the House. Mr.Seetharam is the Leader of the House. ಸಭಾನಾಯಕರು ಇಲ್ಲಿ ಬಜೆಟ್ ಮಂಡಿಸಿದ್ದಾರೆ. ಅದು ಇಡೀ ರಾಜ್ಯದ ಗಮನಕ್ಕೆ ಬಂದಿದೆ. ಇಡೀ ರಾಜ್ಯದ ಜನರು ಬಜೆಟ್ ಅನ್ನು ನೋಡಿದ್ದಾರೆ. ಬಹುಶಃ 2018-19ನೇ ಸಾಲಿನ ಬಜೆಟ್ ಅನ್ನು ಸಾಮಾನ್ಯವಾಗಿ ಮಾರ್ಚ್ ತಿಂಗಳಿನಲ್ಲಿ ಮಂಡಿಸುತ್ತಿದ್ದೆವು. ಈ ಸಲ ಫೆಬ್ರವರಿ ತಿಂಗಳಿನಲ್ಲಿಯೇ ಮಂಡಿಸಿದ್ದೇವೆ. ಕಾರಣವೇನೆಂದರೆ, ಮಾರ್ಚ್ ತಿಂಗಳಿನಲ್ಲಿ Code of Conduct ಯಾವಾಗಲಾದರೂ ಬರಬಹುದು, ಚುನಾವಣೆ ಏಪ್ರಿಲ್ ತಿಂಗಳಿನಲ್ಲಿ ಇರುವುದರಿಂದ Code of Conduct ಬರುವ ಸಾಧ್ಯತೆ ಇದೆ ಎನ್ನುವ ಕಾರಣಕ್ಕೋಸ್ಕರ ಫೆಬ್ರವರಿ ತಿಂಗಳಿನಲ್ಲಿಯೇ ಬಜೆಟ್ ಅನ್ನು ಮಂಡಿಸಿದ್ದೇನೆ. ನಾನು ನಿನ್ನೆಯೇ ಪ್ರಸ್ತಾಪ ಮಾಡಿದ ಹಾಗೆ ವಿಧಾನ ಪರಿಷತ್ತಿಗೆ ಇದು ಕೊನೆಯ ಅಧಿವೇಶನವಲ್ಲ. ವಿಧಾನಸಭೆಗೆ ಕೊನೆಯ ಅಧಿವೇಶನವಾಗಿದೆ. ಇದು ನಿರಂತರವಾದ ಅಧಿವೇಶನವಾಗಿದೆ. ಇದು ನಮ್ಮ ಸರ್ಕಾರದ 14ನೇ ವಿಧಾನಸಭೆಯ ಅವಧಿಯ ಕೊನೆಯ ಅಧಿವೇಶನವಾಗಿದೆ. ಏಕೆಂದರೆ, ಮತ್ತೆ ನಾವೇ ಬರುತ್ತೇವೆ, ಆದ್ದರಿಂದ ಅದು ಮುಂದುವರಿಯುತ್ತದೆ.

(ಈ ಹಂತದಲ್ಲಿ ಆಡಳಿತಪಕ್ಷದ ಸದಸ್ಯರೆಲ್ಲರೂ ಮೇಜು ಕುಟ್ಟಿ ಹರ್ಷವನ್ನು ವ್ಯಕ್ತಪಡಿಸಿದರು)

**ಶ್ರೀ ಟಿ.ಎ. ಶರವಣ:-** ಹಗಲುಗನಸು ಕಾಣಿರಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಶರವಣರವರೆ, ಕುಳಿತುಕೊಳ್ಳಿ, ನೀವೆಲ್ಲಿ ಬರುತ್ತೀರಿ? ನೀವೆಲ್ಲ ಏಕೆ ಇಷ್ಟೊಂದು ಕನಸು ಕಾಣುತ್ತೀರಿ? ಆದ್ದರಿಂದ ಈ ಬಜೆಟ್ ಅನ್ನು ಕೆಲವರು 'ಇದು ಚುನಾವಣಾ ಬಜೆಟ್', ಚುನಾವಣೆಗೋಸ್ಕರ ಮಂಡಿಸಿದ್ದಾರೆ ಎಂದು ವ್ಯಾಖ್ಯಾನ ಮಾಡಿದ್ದಾರೆ. ಇನ್ನು ಕೆಲವರು ಎಲ್ಲಿಯವರೆಗೆ ಮಾತನಾಡಿದ್ದಾರೆಂದರೆ, ಈ ಬಜೆಟ್‌ಗೆ sanctity ನೇ ಇಲ್ಲ ಎಂದು ಹೇಳಿದ್ದಾರೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ನಾವು ಬಜೆಟ್ ಬಗ್ಗೆ ಮಾತನಾಡಬೇಕಾಗಿತ್ತು ಆದರೆ ಇವರು ಬಿಲ್ ಅನ್ನು ತಂದು . . .

**Sri SIDDARAMAIAH:-** What do you mean by Appropriation Bill? Let me know.

(ಗೊಂದಲ)

**Sri SIDDARAMAIAH:-** I can't understand. What is your problem? Appropriation Bill ಮೇಲೆ ಮಾತನಾಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಅರುಣ ಶಹಾಪುರ:-** ಮಾನ್ಯ ಮುಖ್ಯಮಂತ್ರಿಯವರೇ, ನೀವು ಬರೀ ರಾಜಕಾರಣದ ಬಗ್ಗೆ ಮಾತನಾಡುತ್ತಿದ್ದೀರಲ್ಲಾ. . .

**ಶ್ರೀ ಸಿದ್ಧರಾಮಯ್ಯ:-** ಆಯಿತು ಏನನ್ನು ಮಾತನಾಡಬೇಕು ಅದನ್ನು ಬರೆದುಕೊಡಿ ಮಾತನಾಡುತ್ತೇನೆ.

(ಗೊಂದಲ)

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಅದೇ ಸ್ಥಿತಿಗೆ ಬಂದಿದ್ದೀರಿ ನೀವು. ಖಂಡಿತವಾಗಿಯೂ ಮಾನ್ಯ ಮುಖ್ಯಮಂತ್ರಿಯವರು . . .

**Sri SIDDARAMAIAH:-** This is too much.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಯವರು ಮಾತನಾಡುತ್ತಾರೆ, ಅವರಿಗೆ ಮಾತನಾಡಲು ಬಿಡಿ.

**ಶ್ರೀ ಸಿದ್ಧರಾಮಯ್ಯ:-** ಈಗ Appropriation Bill ಮೇಲೆ ಏನೇನು ಮಾತನಾಡಬೇಕೆಂಬುದನ್ನು ಇವರು ಹೇಳಿಕೊಡಲಿ.

(ಗೊಂದಲ)

**Sri SIDDARAMAIAH:-** Sir, Please ask them to sit down.

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ಒಬ್ಬೊಬ್ಬರಾಗಿ ಮಾತನಾಡಿ.

**ಶ್ರೀ ಎಂ.ಆರ್. ಸೀತಾರಾಂ (ಸಭಾನಾಯಕರು):-** ಮಾನ್ಯ ಗಣೇಶ್ ಕಾರ್ಣಿಕ್‌ರವರೇ, ಮಾನ್ಯ ಮುಖ್ಯಮಂತ್ರಿಗಳು Appropriation Bill ಬಗ್ಗೆಯೇ ಮಾತನಾಡುತ್ತಿದ್ದಾರೆ. ಬೇರೆ ವಿಷಯವನ್ನು ಮಾತನಾಡುತ್ತಿಲ್ಲ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

**ಸಭಾಪತಿಯವರು:-** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಒಬ್ಬೊಬ್ಬರಾಗಿ ಮಾತನಾಡಿ, ವಿಷಯವೇನೆಂದು ಹೇಳಿ. ಅವರು ಮಾತನಾಡಿದ ಮೇಲೆ . . . ಮಾನ್ಯ ಮುಖ್ಯಮಂತ್ರಿಯವರು ವಿಷಯ ಮಂಡನೆ ಮಾಡಿದ ಮೇಲೆ ನಿಮಗೆ ಪ್ರಶ್ನೆಯನ್ನು ಕೇಳಲು ಬಿಡುತ್ತೇವೆ ಎಂದು ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಅರುಣ ಶಹಾಪುರ**:- ಮಾನ್ಯ ಸಭಾಪತಿಯವರೇ, ಒಂದು ನಿಮಿಷ . . ನನ್ನ ಒಂದೇ ಒಂದು ವಿನಂತಿ ಇದೆ ಅದೇನೆಂದರೆ, ಈ ಸದನದಲ್ಲಿ ಬರದಿರುವ ಮಾತಿನ ಬಗ್ಗೆ ಈ ಸದನದಲ್ಲಿ ಮಾತನಾಡುವುದು ಎಷ್ಟರಮಟ್ಟಿಗೆ ಪ್ರಸ್ತುತ? ಅದು ಮಾನ್ಯ ಮುಖ್ಯಮಂತ್ರಿಯವರು ಯಾರೋ ಒಬ್ಬರು ಹೀಗೆಂದರು ಹಾಗೆಂದರು ಎಂದು ಈ ಸದನದ ವೇದಿಕೆಯನ್ನು ಉಪಯೋಗಿಸಿಕೊಂಡು ಮಾತನಾಡುವುದು ಎಷ್ಟರಮಟ್ಟಿಗೆ ಪ್ರಸ್ತುತ? ಈ ಸದನ ರಾಜಕೀಯ ವೇದಿಕೆಯಾಗಬೇಕೇ? . . .

(ಗೊಂದಲ)

**ಶ್ರೀ ಎಂ.ಆರ್. ಸೀತಾರಾಂ**:- ದಯಮಾಡಿ ಎಲ್ಲರೂ ಕುಳಿತುಕೊಳ್ಳಿ . . .

**ಶ್ರೀ ಕೆ.ಜೆ. ಜಾರ್ಜ್(ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು)**:- ಮಾನ್ಯ ಪ್ರಧಾನಮಂತ್ರಿಯವರು ಪಾರ್ಲಿಮೆಂಟ್‌ನಲ್ಲಿ ಹೇಗೆ ಮಾತನಾಡುತ್ತಾರೆ?

**ಸಭಾಪತಿಯವರು**:- ಆಯಿತು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಎಂ.ಆರ್. ಸೀತಾರಾಂ**:- ಮಾನ್ಯ ಪ್ರಾಣೇಶ್‌ರವರೇ, ಒಂದು ನಿಮಿಷ ಕುಳಿತುಕೊಳ್ಳಿ.

**ಸಭಾಪತಿಯವರು**:- ದಯಮಾಡಿ ಒಂದು ನಿಮಿಷ ಕುಳಿತುಕೊಳ್ಳಿ. ಮಾನ್ಯ ರಾಮಚಂದ್ರಗೌಡರು ಏನು ಹೇಳುತ್ತಾರೆ ಕೇಳೋಣ.

(ಗೊಂದಲ)

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ)**:- ನಿಮ್ಮ ಎಂ.ಪಿ. ಗಳಿಗೆ ಲೋಕಸಭೆಯಲ್ಲಿ ಮಾತನಾಡುವುದಕ್ಕೆ ಹೇಳಿ.

**ಸಭಾಪತಿಯವರು**:- ಮಾನ್ಯ ರಾಮಚಂದ್ರಗೌಡರು ಮಾತನಾಡುತ್ತಾರೆ, ಕುಳಿತುಕೊಳ್ಳಿ. ಅವರು ಏನು ಹೇಳುತ್ತಾರೆ ಅದನ್ನು ಕೇಳೋಣ.

**ಶ್ರೀ ಸಿ.ಎಂ. ಇಬ್ರಾಹಿಂ (ವಿಧಾನಸಭಾ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ನೀವು Appropriation Bill move ಮಾಡಿ ಎಂದು ಹೇಳಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು Appropriation Bill move ಮಾಡಿದ್ದಾರೆ. ಅವರು ಅದರ ಮೇಲೆ ಮಾತನಾಡುತ್ತಿದ್ದಾರೆ ಅದರಲ್ಲಿ ತಪ್ಪೇನಿದೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** Appropriation Bill move ಮಾಡಿದ್ದಾರೆ. ಮಾನ್ಯ ರಾಮಚಂದ್ರಗೌಡರು ಏನು ಹೇಳುತ್ತಾರೆ ಎಂದು ಕೇಳೋಣ.

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಅವರು ಮಧ್ಯದಲ್ಲಿ ಏನೋ ಹೇಳುತ್ತಾರೆಂದರೆ ಹೇಗೆ? Appropriation Bill move ಮಾಡಿದ ಮೇಲೆ ಮಾತನಾಡಬೇಕಲ್ಲವೇ? ಸುಮ್ಮನೇ ಬಾಯಿಗೆ ಬಟ್ಟೆ ಕಟ್ಟಿಕೊಂಡು ಇದ್ದುಬಿಡಬೇಕೇ?

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ನಾನು ಕಳೆದ . .

**ಶ್ರೀ ಸಿ.ಎಂ. ಇಬ್ರಾಹಿಂ:-** ಅವರು Appropriation Bill ಇಡುತ್ತಿದ್ದಾರೆ. ಅದರ ಮೇಲೆ ಮಾತನಾಡುತ್ತಾರೆ, ಆಮೇಲೆ ನೀವು ಮಾತನಾಡಿ.

(ಗೊಂದಲ)

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ನಾನು ಕಳೆದ 29 ವರ್ಷದಿಂದ ವಿಧಾನ ಮಂಡಲದ ಸದಸ್ಯನಾಗಿದ್ದೇನೆ. ಇದುವರೆಗೂ ಕೂಡ ಯಾವುದೇ ಆಯವ್ಯಯ ಮಂಡನೆಯಾಗಿ ಚರ್ಚೆಯಾದ ಮೇಲೆ Vote on Account ತೆಗೆದುಕೊಳ್ಳುತ್ತಾರೆ. ಆಯವ್ಯಯ ಮಂಡನೆ ಮಾಡಿದ ಮೇಲೆ ಅದರ ಮೇಲೆ ಚರ್ಚೆ ಆಗೇ ಆಗಬೇಕು. ದುರಾದೃಷ್ಟವಶಾತ್ with due respect to our beloved Chief Minister, he has not given an opportunity to discuss.

ಶ್ರೀ ಐವನ್ ಡಿ'ಸೋಜ:- ಮಾತನಾಡಬೇಡಿ ಎಂದು ಯಾರು ಹೇಳಿದ್ದಾರೆ. You must allow the Chief Minister to speak.

**ಶ್ರೀ ಟಿ.ಬಿ.ಜಯಚಂದ್ರ:-** ಅವರು ಮಾತನಾಡಲು ಅವಕಾಶವೇ ಕೊಟ್ಟಿಲ್ಲ ಎನ್ನುತ್ತಿದ್ದಾರೆ.

**ಶ್ರೀ ಸಿದ್ಧರಾಮಯ್ಯ:-** ನಾವಲ್ಲ ರೀ, ನೀವು . . .

(ಗೊಂದಲ)

**ಸಭಾಪತಿಯವರು:-** ಈಗ ಅದಕ್ಕೆ ಏನು ಮಾಡಬೇಕೆಂದು ಹೇಳಿ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯ ಮಾಡಿದ್ದೇವೆ. ನಮಗೆ ಬಜೆಟ್ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಡದೇ ಏಕ್ ದಂ ಬಿಲ್ ಇಟ್ಟುಬಿಟ್ಟು ಬಿಲ್ ಮೇಲೆ ಮಾತನಾಡಿ ಎಂದರೆ, ಬಿಲ್ ಮೇಲೆ ಮಾತನಾಡುವುದೇ ಬೇರೆ, ಬಜೆಟ್ ಮೇಲೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತನಾಡುವುದೇ ಬೇರೆ. ನಮಗೆ ಬಜೆಟ್ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಡದೇ ಇರುವುದರಿಂದ ನಾವು walk out ಮಾಡುತ್ತೇವೆ.

**(ಈ ಹಂತದಲ್ಲಿ ಬಿ.ಜೆ.ಪಿ. ಪಕ್ಷದ ಮಾನ್ಯ ಸದಸ್ಯರುಗಳೆಲ್ಲಾ ಸಭಾತ್ಯಾಗ ಮಾಡಿದರು)**

(ಈ ಹಂತದಲ್ಲಿ ಆಡಳಿತ ಪಕ್ಷದ ಮಾನ್ಯ ಸದಸ್ಯರುಗಳೆಲ್ಲಾ ಶೇಮ್ ಶೇಮ್ ಎಂದು ಕೂಗುತ್ತಿದ್ದರು)

**ಶ್ರೀ ಐವನ್ ಡಿ'ಸೋಜಾ:-** ನಿಮಗೆ ನಾಚಿಕೆಯಾಗಬೇಕು. ಈ ರಾಜ್ಯವನ್ನು ಲೂಟಿ ಮಾಡಿದ್ದವರು ನೀವು . . .

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಲೂಟಿಕೋರರೆಲ್ಲಾ ಹೀಗೇ ಮಾಡುವುದು. ನಾನು ಈ ತಿಂಗಳ 16ನೇ ತಾರೀಖಿಗೇ ಬಜೆಟ್ ಮಂಡಿಸಿದ್ದೇನೆ. 16ನೇ ತಾರೀಖು ಆದ ಮೇಲೆ 19, 20, 21, 22, 23 ಇಂದಿಗೆ ಐದನೇ ದಿನವಾಯಿತು. ಇವರನ್ನು ಮಾತನಾಡಬೇಡಿ ಎಂದು ನೀವು ಹೇಳಿದ್ದೀರಾ? ನಾವು ಹೇಳಿದ್ದೇವೆಯೇ? ಅಥವಾ ಇಲ್ಲಿನ Leader of the House ಏನಾದರೂ ಹೇಳಿದ್ದಾರಾ? ಅವರು ಮಾತನಾಡಬೇಕಾಗಿತ್ತು. ಏಕೆಂದರೆ, ಬಜೆಟ್‌ನಲ್ಲಿ ಎಲ್ಲರೂ ಭಾಗವಹಿಸಬೇಕು, ಅವರ ಸಲಹೆಗಳಿದ್ದರೆ ಕೊಡಬೇಕು. ಅವರ ಅಭಿಪ್ರಾಯಗಳನ್ನು ಹೇಳಬೇಕು, ಟೀಕೆ ಮಾಡುವುದಿದ್ದರೆ ಟೀಕೆಯನ್ನೂ ಮಾಡಬೇಕು. That is democracy.

263/23.02.2018/ಕೆಹೆಚ್/ಎಂಡಿ/4-00 122

**ಶ್ರೀ ಸಿದ್ದರಾಮಯ್ಯ (ಮುಂದು):-**

ಅದನ್ನು ಬಿಟ್ಟು ಮಾತನಾಡಲೇಬಾರದು, Appropriation Bill ಎಂದರೆ ನಾನು ಓದಿ ಕುಳಿತುಕೊಳ್ಳುವುದೇ, ತಾವು ಈ ವಿಧೇಯಕವನ್ನು ಏನೆಂದು ಕರೆಯಲಾಗಿತ್ತು. ಪರ್ಯಾಲೋಚಿಸಬೇಕು ಎಂದರೆ ಏನು? ನಾವು 4 ತಿಂಗಳು Vote on Account ಅನ್ನು ಕೇಳಿದ್ದೇವೆ. ಎಲ್ಲಾ ಇಲಾಖೆಗಳಲ್ಲೂ ಕೂಡ 4 ತಿಂಗಳ ಕಾಲ ಯಾವ್ಯಾವ ಬೇಡಿಕೆಗಳು ಇವೆಯೋ, ಆ ಎಲ್ಲಾ ಬೇಡಿಕೆಗಳಿಗೂ ಕೂಡ ಖರ್ಚು ಮಾಡುವುದಕ್ಕೆ ದುಡ್ಡನ್ನು ಕೊಡಬೇಕು. ಆದ್ದರಿಂದ ಈ ವಿಧೇಯಕಕ್ಕೆ ಒಪ್ಪಿಗೆ ಕೊಡಬೇಕೆಂದು ಇದನ್ನು ತಂದಿದ್ದೇವೆ. ಈ ವಿಧೇಯಕವು ವಿಧಾನ ಸಭೆಯಲ್ಲಿ ಅನುಮೋದನೆಯಾಗಿ, ಈ ಸದನಕ್ಕೆ ಬಂದಿದೆ. ಅದರ ಮೇಲೆ ಈ ಸದನದಲ್ಲಿ ಚರ್ಚೆಯಾಗಬೇಕು. ಏನು ಹೇಳದೇ ಇದರ ಬಗ್ಗೆ ಮಾತನಾಡದೇ ಹಾಗೆ ಇದ್ದುಬಿಡಿ ಎಂದರೆ ಹೇಗೆ? ನಾನು ಏನಾದರೂ ರಾಜಕೀಯದ ಬಗ್ಗೆ ಮಾತನಾಡಿದ್ದೇನೆಯೇ? ಕೆಲವು ಸದಸ್ಯರು ಆಯವ್ಯಯದ ಮೇಲೆ ಸಾರ್ವಜನಿಕವಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ಅಂಗೀಕರಿಸಬಾರದು ಎಂದಲ್ಲ. ಆದರೆ ಪ್ರತಿ ವರ್ಷವು ಕೂಡ ಆಯವ್ಯಯದ ಮೇಲೆ ಮಾತನಾಡುವುದಕ್ಕೆ ಒಂದು ಅವಕಾಶ ಸಿಗುತ್ತಿತ್ತು.

**ಶ್ರೀ ಸಿದ್ಧರಾಮಯ್ಯ(ಮಾನ್ಯ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಆಯವ್ಯಯದ ಮೇಲೆ ಮಾತನಾಡುವುದಕ್ಕೆ 5 ದಿವಸ ಕಾಲಾವಕಾಶ ಇತ್ತು. ಯಾವ ಮಾನ್ಯ ಸದಸ್ಯರುಗಳು ಮಾತನಾಡಲಿಲ್ಲ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರೇ ಒಂದು ನಿಮಿಷ. ಈ ವಿಧೇಯಕವನ್ನು ಅಂಗೀಕರಿಸಬಾರದು ಎನ್ನುವುದು ನಮ್ಮ ಉದ್ದೇಶವಲ್ಲ. ಎಲ್ಲಾ ಸದಸ್ಯರುಗಳು ರಾಜ್ಯಪಾಲರ ಭಾಷಣ ಮತ್ತು ಆಯವ್ಯಯದ ಭಾಷಣ ಮೇಲೆ ಮಾತ್ರ ಮಾತನಾಡುವುದಕ್ಕೆ ಅವಕಾಶ ಇದೆ ಎಂಬುದು ತಮಗೂ ಗೊತ್ತಿರುವ ವಿಚಾರವಾಗಿದೆ. ಇನ್ನೂ ಉಳಿದ ವಿಷಯಗಳಿಗೆ ನಿಯಮಾವಳಿಯ ಪ್ರಕಾರ ಒಬ್ಬರು ಮಾತನಾಡಬೇಕು. ಒಬ್ಬರಿಗೆ ಅವಕಾಶ ಸಿಗುತ್ತದೆ. ಒಬ್ಬರಿಗೆ ಅವಕಾಶ ಸಿಗುವುದಿಲ್ಲ. ಆ ರೀತಿಯ ಅವಕಾಶಗಳು ಈ ಬಾರಿ ತಪ್ಪಿಹೋಗಿವೆ. ಏಕೆಂದರೆ ದಿನಾಂಕ: 28-02-2018 ರವರೆಗೂ ನಡೆಯಬೇಕಾದ ಅಧಿವೇಶನವನ್ನು ದಿನಾಂಕ: 23-02-2018 ಕ್ಕೆ ಕಡಿತಗೊಳಿಸಲಾಗಿದೆ. ಆದಕಾರಣ, ನಮಗೆ ಮಾತನಾಡಲು ಅವಕಾಶ ಸಿಗುತ್ತಿಲ್ಲ. ಹಾಗಾಗಿ ಇದರ ಬಗ್ಗೆ ಒಳ್ಳೆಯದು ಹೇಳುತ್ತಿದ್ದೇವೋ, ಕೆಟ್ಟದ್ದು ಹೇಳುತ್ತಿದ್ದೇವೋ ಅಥವಾ ತಮ್ಮ ಸಲಹೆಗಳನ್ನು ಹೇಳುತ್ತಿದ್ದೇವೋ, ಇಲ್ಲದಿದ್ದರೆ ತಮ್ಮನ್ನು appreciate ಮಾಡುತ್ತಿದ್ದೇವು.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ತಾವು ಒಳ್ಳೆಯದನ್ನು ಹೇಳಿದರೂ ಸ್ವಾಗತ ಮಾಡುತ್ತೇನೆ. ತಾವು ಕೆಟ್ಟದ್ದನ್ನು ಹೇಳಿದರೂ ಸ್ವಾಗತ ಮಾಡುತ್ತೇನೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರೇ ತಾವು ಸ್ವಾಗತ ಮಾಡುತ್ತೀರಿ. ಆದರೆ ಮಾನ್ಯ ಸದಸ್ಯರುಗಳು ಮಾತನಾಡುವುದಕ್ಕೆ ಅವಕಾಶವೇ ಸಿಗಲಿಲ್ಲ ಎಂಬುದರ ಬಗ್ಗೆ ಹೇಳುತ್ತಿದ್ದೇನೆ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, It is not the mistake of the Government or it is not the mistake of the Chair. It is the mistake of the Hon'ble members. ಲೋಕಸಭೆಯಲ್ಲಿ ಏನು ಮಾಡಿದರು ಎಂದರೆ Hon'ble President's Address ಆಯಿತು. ಆದಾದ ಎರಡು ದಿನಕ್ಕೆ ಆಯವ್ಯಯವನ್ನು ಮಂಡಿಸಲಾಯಿತು. ಎರಡು ದಿನದಲ್ಲಿ Hon'ble President's Address ಮುಗಿಯಿತು. ಅದರ ಮೇಲೆ ವಂದನಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿರ್ಣಯವು ಅಂಗೀಕಾರವಾಯಿತು. ಆಯವ್ಯಯ ಭಾಷಣವು ಮುಗಿದು ಹೋಯಿತು. 5 ದಿವಸ ಇದ್ದರೂ ಕೂಡ ತಮಗೆಲ್ಲಾ ಮಾತನಾಡುವುದಕ್ಕೆ ಅವಕಾಶ ಸಿಗಲಿಲ್ಲವೆಂದರೆ, ಈ ವಿಧೇಯಕವು ದಿನಾಂಕ:09-02-2018 ರಂದು ಅಂಗೀಕಾರವಾಗಿರುತ್ತದೆ.

**ಶ್ರೀ ಟಿ.ಎ. ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದರಲ್ಲಿ ಮಾನ್ಯ ಸದಸ್ಯರುಗಳ ತಪ್ಪು ಎಲ್ಲಾಗುತ್ತದೆ?

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯವು ಮುಗಿಯಿತು. ಸಮಯಾವಕಾಶ ಸಿಗದೇ ಇರುವುದರಿಂದ ನೆನ್ನೆಯ ದಿವಸ ಇದಕ್ಕೆ ಉತ್ತರವನ್ನು ಕೊಟ್ಟಿದ್ದೇನೆ. ನೆನ್ನೆಯ ದಿವಸ ಉತ್ತರ ಸಿಗಲಿಲ್ಲವೆಂದುಕೊಳ್ಳಿ, ಉಳಿದ 3 ದಿವಸಗಳ ಸಮಯಾವಕಾಶ ಇತ್ತಲ್ಲವೇ, ಮಾನ್ಯ ಸದಸ್ಯರು ಆಯವ್ಯಯದ ಮೇಲೆ ಏಕೆ ಮಾತನಾಡಲಿಲ್ಲ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರೇ ನೆನ್ನೆಯ ದಿವಸದವರೆಗೂ ಕೂಡ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆದಿರುತ್ತದೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ದಿನಾಂಕ:09-02-2018ಕ್ಕೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ ಮುಗಿದು ಹೋಗಿತ್ತು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮೊನ್ನೆಯ ದಿವಸ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ನೆನ್ನೆಯ ದಿವಸ ಉತ್ತರವನ್ನು ಕೊಟ್ಟಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, Leader of the Opposition ಎಂದು ಸುಮ್ಮನೆ ಅವಕಾಶವನ್ನು ಕೊಟ್ಟಿದ್ದಾರೆ ಅಷ್ಟೇ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, Discussion on Hon'ble Governor's address ದಿನಾಂಕ:05-02-2018 ರಿಂದ ದಿನಾಂಕ:09-02-2018 ರವರೆಗೆ ಅಧಿವೇಶನವು ನಡೆದಿರುತ್ತದೆ. ದಿನಾಂಕ:09-02-2018 ರಂದೇ ಉತ್ತರವನ್ನು ಕೊಟ್ಟು ಇದನ್ನು ಮುಗಿಸಬೇಕಾಗಿತ್ತು.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅಜೆಂಡಾವನ್ನು fix ಮಾಡುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ತಾವೆಲ್ಲಾ ದೊಡ್ಡ ಮನಸ್ಸು ಮಾಡಿ Leader of the Opposition ಅವರು ಮಾತನಾಡಲಿಲ್ಲವೆಂದು ಅವಕಾಶವನ್ನು ಕೊಟ್ಟಿದ್ದಾರೆ. I have no objection. ಆಯವ್ಯಯದ ಮೇಲೆ ಮಾತನಾಡಲಿಲ್ಲವೆಂದು ಹೇಳುತ್ತಿದ್ದಾರೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಅದನ್ನು ಅವರು ಮಾಡಬೇಕು. ಈಗ ನಮ್ಮ ಮೇಲೆ ಹೇಳಿದರೆ ಹೇಗೆ? ಅವರು ಅಥವಾ ನೀವೋ ನಾನು ಹೇಳುವುದೇನೆಂದರೆ ಅಜೆಂಡಾವನ್ನು ಮಾನ್ಯ ಸಭಾಪತಿಯವರು ಸಿದ್ಧ ಮಾಡುತ್ತಾರೆ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು 170 ಪುಟಗಳ ಸುದೀರ್ಘವಾದ ಆಯವ್ಯಯವನ್ನು 4 ಗಂಟೆ 10 ನಿಮಿಷಗಳ ಕಾಲ ಮಂಡನೆ ಮಾಡಿದ್ದಾರೆ. ಮಾನ್ಯ ಸದಸ್ಯರುಗಳು ಆ ಆಯವ್ಯಯದ ಮೇಲೆ 10 ರಷ್ಟು ಹೆಚ್ಚು ಮಾತನಾಡಬೇಕು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರು ಕೂಡ walk out ಮಾಡಬೇಕೆಂದು ಅಂದುಕೊಂಡಿದ್ದಾರೆಯೇ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಮುಖ್ಯಮಂತ್ರಿಯವರೇ walk out ಮಾಡುವುದೂ ಅಲ್ಲ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಶ್ರೀಕಂಠೇಗೌಡರೇ, Walk out ಮಾಡುವ ಹಾಗಿದ್ದರೆ ಮಾಡಬಹುದು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಮುಖ್ಯಮಂತ್ರಿಯವರೇ, Walk out ಮಾಡುವ ಪ್ರಶ್ನೆ ಅಲ್ಲ. ತಾವು ಆಯವ್ಯಯವನ್ನು 4 ಗಂಟೆ 10 ನಿಮಿಷಗಳ ಕಾಲ ಮಂಡನೆ ಮಾಡಿದ್ದೀರಲ್ಲವೇ, ನಾವು ಅದರ ಬಗ್ಗೆ 10 ನಿಮಿಷವಾದರೂ ಮಾತನಾಡಬೇಕಲ್ಲವೇ?

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಆಗದೇ ಇರುವುದಕ್ಕೆ ಮೊಸರಿನಲ್ಲಿ ಕಲ್ಲು ಹುಡುಕುತ್ತಾರೆ ಎಂಬಂತಾಗಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಮುಖ್ಯಮಂತ್ರಿಯವರೇ ಮೊಸರಿನಲ್ಲಿ ಕಲ್ಲು ಹುಡುಕುವ ಪ್ರಶ್ನೆ ಅಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ತಾವು ಇನ್ನೇನು ಕೆಲಸ ಮಾಡುತ್ತಿರುವುದು. What were you doing all these three days? Did you make use of the opportunity?

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಮುಖ್ಯಮಂತ್ರಿಯವರೇ ಆಯವ್ಯಯದ ಮೇಲೆ ಮಾತನಾಡುವುದಕ್ಕೆ ಅವಕಾಶವನ್ನೇ ಕೊಟ್ಟಿಲ್ಲ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳಿಗೆ ಆಯವ್ಯಯದ ಭಾಷಣದ ಮೇಲೆ ಮಾತನಾಡುವುದಕ್ಕೆ ಅವಕಾಶ ಇತ್ತು.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಮುಖ್ಯಮಂತ್ರಿಯವರೇ ಇದರ ಬಗ್ಗೆ ಸಭಾಪತಿಯವರನ್ನೇ ಕೇಳಬೇಕು. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ರಾಜ್ಯಪಾಲರ ಭಾಷಣ ಮತ್ತು ಆಯವ್ಯಯದ ಭಾಷಣದ ಮೇಲೆ ಬಹಳ ಗೌರವ ಮತ್ತು ಘನತೆ ಇದೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಿಮ್ಮ ನಾಯಕರು, Leader of the Opposition ರವರು Business Advisory Committee meeting ಗೆ ಬಂದಿದ್ದರು. ಇದನ್ನು ಅವರೆಲ್ಲರೂ ಕೂಡ ಒಪ್ಪಿಕೊಂಡಿದ್ದಾರೆ. ದಿನಾಂಕ: 23-02-2018 ರಂದು ಅಧಿವೇಶನವನ್ನು ಮುಗಿಸುವುದಕ್ಕೆ ಒಪ್ಪಿಕೊಂಡಿದ್ದಾರೆ. ತಮ್ಮ ಅಧ್ಯಕ್ಷತೆಯಲ್ಲಿಯೇ ಈ ಸಭೆ ನಡೆದಿದೆ. ವಿಧಾನಸಭೆಯಲ್ಲಿ ಅಧಿವೇಶನವನ್ನು ದಿನಾಂಕ: 23-02-2018ಕ್ಕೆ ಮುಕ್ತಾಯಗೊಳಸಬೇಕೆಂದು ತೀರ್ಮಾನವಾಗಿದೆ. ಮಾನ್ಯ ಸದಸ್ಯರುಗಳಿಗೆ ಆಯವ್ಯಯದ ಮೇಲೆ ಮಾತನಾಡಲು 3 ದಿನಗಳ ಕಾಲಾವಕಾಶ ಇತ್ತು. ಆ ಅವಕಾಶವನ್ನು ಉಪಯೋಗಿಸಿಕೊಳ್ಳದೇ ಹೋದರೆ ಸರ್ಕಾರವಾಗಲಿ, ಮಾನ್ಯ ಸಭಾಪತಿಯವರಾಗಲಿ ಕಾರಣವಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಮುಖ್ಯಮಂತ್ರಿಯವರೇ ಆಯವ್ಯಯದ ಮೇಲೆ ಇನ್ನೂ ಚರ್ಚೆ ಪ್ರಾರಂಭವಾಗಿಲ್ಲ. ಸದನದಲ್ಲಿ ಮಾನ್ಯ ಸಭಾಪತಿಯವರು ಮತ್ತು ಮಾನ್ಯ ಸಭಾನಾಯಕರು ಇದ್ದಾರೆ ಅವರನ್ನೇ ಕೇಳಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ತಾವು ಉತ್ತರವನ್ನು ಕೊಡಬೇಡಿ ಎಂದು ಹೇಳಿದರೆ it is not a valid objection. The objection can be prima facie

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

rejected. I may be allowed to express my views on the Appropriation Bill.

**Sri K.T.SRIKANTEGOWDA:-** Sir, this is not fair enough to pass an Appropriation Bill. ಈಗ ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡುವುದೇನೆಂದರೆ, ಆಯವ್ಯಯದ ಮೇಲಿನ ಚರ್ಚೆಯನ್ನು ಇನ್ನೂ ಕೈಗೆತ್ತಿಕೊಂಡಿಲ್ಲ. ಇದರ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮತ್ತು ಮಾನ್ಯ ಸದಸ್ಯರುಗಳಿಗೆ ಮಾತನಾಡುವುದಕ್ಕೆ ಅವಕಾಶವೇ ಸಿಕ್ಕಿಲ್ಲ. ನಾನು ನೆನ್ನೆಯ ದಿವಸ ಮಾನ್ಯ ಮುಖ್ಯಮಂತ್ರಿಯವರ ಜೊತೆ ಮಾತನಾಡುವಾಗ ಅವರೇ ಸ್ವತಃ ನಾನು ನಾಳೆಯ ದಿವಸ ಆಯವ್ಯಯದ ಮೇಲೆ ಉತ್ತರವನ್ನು ಕೊಡುವಾಗ, ತಮ್ಮದೇನಾದರೂ ಸ್ಪಷ್ಟೀಕರಣ ಇದ್ದರೆ ಕೇಳಿ ಎಂದು ಹೇಳಿದರು. ದಯಮಾಡಿ ಈ ರಾಜ್ಯದ ಇತಿಹಾಸದಲ್ಲಿ ಆಯವ್ಯಯದ ಮೇಲೆ ಚರ್ಚೆ ಇಲ್ಲದೇ ಆಯವ್ಯಯ ಅಂಗೀಕಾರ ಆಗಿರುವುದು ಇದ್ದರೆ ನನಗೆ ತಿಳಿಸಬೇಕು. ಇವತ್ತಿನ ದಿವಸ 2.86 ಲಕ್ಷ ಒಂದು ದೊಡ್ಡ ಪ್ರಮಾಣದ ಆಯವ್ಯಯವನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರುಗಳು ಅದರ ಮೇಲೆ ಚರ್ಚೆ ಮಾಡಬೇಕಲ್ಲವೇ, ಅದರ ಮೇಲೆ ಸ್ವಲ್ಪ ಬೆಳಕನ್ನು ಚೆಲ್ಲಬೇಕಲ್ಲವೇ, ಇನ್ನು ಯಾವುದಾದರೂ ವಿಚಾರವನ್ನು ಕೇಳಿದರೂ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾನು ಇದರ ಬಗ್ಗೆ ನಂತರ ವಿವರಣೆಯನ್ನು ಕೊಡುತ್ತೇನೆ. ಆಯವ್ಯಯದ ಮೇಲೆ ಮಾತನಾಡುವುದಕ್ಕೆ ಒಬ್ಬೊಬ್ಬರಿಗೆ ಐದೈದು ನಿಮಿಷಗಳ ಕಾಲಾವಕಾಶವನ್ನು ಕೊಡಬೇಕು. ಈ ವಿಧೇಯಕದ ಪರ್ಯಾಲೋಚನೆಯಲ್ಲವೇ? ಮಾನ್ಯ ಶ್ರೀಕಂಠೇಗೌಡರವರಿಗೆ ಆಯವ್ಯಯದ ಮೇಲೆ ಮಾತನಾಡುವುದಕ್ಕೆ 5 ನಿಮಿಷಗಳ ಅವಕಾಶವನ್ನು ಕೊಡಿ, ನಂತರ ಈ ವಿಧೇಯಕವನ್ನು ಅಂಗೀಕಾರ ಮಾಡೋಣ. ನಾನು ಮಾತನಾಡಿದ ನಂತರ ಅವರು 5 ನಿಮಿಷ ತೆಗೆದುಕೊಳ್ಳಲಿ.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಯವರು ವಿಧೇಯಕವನ್ನು ಪರ್ಯಾಲೋಚನೆ ಮಾಡಬೇಕು ಎಂದು ಹೇಳಿದ್ದಾರೆ. ವಿಧೇಯಕವನ್ನು ಏಕೆ ಪರ್ಯಾಲೋಚನೆ ಮಾಡಬೇಕೆಂಬ ಬಗ್ಗೆ ಹೇಳುತ್ತಾರೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಎಲ್ಲರಿಗೂ ಅವಕಾಶವನ್ನು ಕೊಡಬೇಕು. ಕೇವಲ ಮಾನ್ಯ ಶ್ರೀಕಂಠೇಗೌಡರಿಗೆ ಮಾತ್ರ ಅವಕಾಶವನ್ನು ಕೊಡಿ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ಆದರೆ ನಾವೆಲ್ಲಾ ಇದರ ಬಗ್ಗೆ ಮಾತನಾಡುವುದಕ್ಕೆ ಸಿದ್ಧರಾಗಿ ಬಂದಿರುತ್ತೇವೆ. ಆದರೆ ನಮಗೆ ಅವಕಾಶವೇ ಸಿಗುವುದಿಲ್ಲ. ಈ ರೀತಿ ಏಕೆ ಮಾಡುತ್ತಿದ್ದೀರಿ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಸಾಮಾನ್ಯವಾಗಿ Appropriation Bill ಬಗ್ಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಲೇಬಾರದು. ಇದರ ಮೇಲೆ ಚರ್ಚೆಯೇ ಇರುವುದಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು.

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್):-** ಮಾನ್ಯ ಸಭಾಪತಿಯವರೇ, . . .

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಇದರ ಮೇಲೆ ಮಾತನಾಡುವುದಕ್ಕೆ ಯಾರಿಗೂ ಅವಕಾಶವಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ರಾತ್ರಿ 10 ಗಂಟೆಯಾದರೂ ಪರವಾಗಿಲ್ಲ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಆ ರೀತಿ ಆಗುವುದಿಲ್ಲ. It is not correct. ಹೊಸ ಸಂಪ್ರದಾಯವನ್ನು ಮಾಡಬಾರದು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಕೆಟ್ಟ precedent ಸೃಷ್ಟಿ ಮಾಡುತ್ತಿದ್ದಾರೆ.

(**ಗೊಂದಲ**)

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್):-** ಮಾನ್ಯ ಸಭಾಪತಿಯವರೇ, . . .

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ . . .

(**ಗೊಂದಲ**)

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಶ್ರೀಕಂಠೇಗೌಡರವರೇ, ಇದು 13ನೇ ಆಯವ್ಯಯವಾಗಿದೆ. ಯಾವತ್ತೂ ಸಹ ಈ ರೀತಿಯಾಗಿರುವಂತಹದ್ದನ್ನು ನಾನು ನೋಡಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಹೌದು, ಇದು 13ನೇಯ ಆಯವ್ಯಯವಾಗಿದೆ. ಶ್ರೀ ರಾಮಕೃಷ್ಣ ಹೆಗಡೆಯವರ ಸಮಾನ ಪ್ರಮಾಣದಲ್ಲಿ ತಾವು 13ನೇ ಆಯವ್ಯಯವನ್ನು ಮಂಡಿಸಿದ್ದೀರಿ ಎಂದು ಹೇಳುವುದಕ್ಕೆ ತಾವು ಅವಕಾಶವನ್ನು ಕೊಡಬೇಕಲ್ಲವೇ,

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಶ್ರೀಕಂಠೇಗೌಡರವರೇ, ನಮ್ಮದು 13ನೇ ಆಯವ್ಯಯವಾಗಿದೆ. ಶ್ರೀ ರಾಮಕೃಷ್ಣ ಹೆಗಡೆಯವರು 13ನೇ ಆಯವ್ಯಯವನ್ನು ಮಂಡಿಸಿದ್ದಾರೋ ಇಲ್ಲವೋ. I do not know.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ರಾಮಕೃಷ್ಣ ಹೆಗಡೆಯವರು ಯಾವ್ಯಾವ ವರ್ಷದಲ್ಲಿ 13ನೇ ಆಯವ್ಯಯವನ್ನು ಮಂಡಿಸಿದ್ದಾರೆ ಎಂಬುದನ್ನು ಹೇಳಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಹೌದು, ಅದನ್ನು ಹೇಳುವುದಕ್ಕಾದರೂ ಅವಕಾಶವನ್ನು ಕೊಡಬೇಕಲ್ಲವೇ?

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಶ್ರೀಕಂಠೇಗೌಡರಿಗೆ ಇದರ ಬಗ್ಗೆ ಗೊತ್ತಿಲ್ಲ, ಸುಮ್ಮಸುಮ್ಮನೆ ಹೇಳುತ್ತಿದ್ದಾರೆ.

**ಸಭಾಪತಿಯವರು:-** ಈಗ ಅದರ ಬಗ್ಗೆ ಚರ್ಚೆ ಬೇಡ. ಮಾನ್ಯ ಮುಖ್ಯಮಂತ್ರಿಯವರೇ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಹೇಳಿದ್ದೀರಿ. ಇದನ್ನು ಮಂಡಿಸಿದ್ದೀರಿ ಎಂದು ನಾನು ಒಪ್ಪಿಕೊಂಡಿದ್ದೇನೆ. ಈ ವಿಧೇಯಕವನ್ನು ಏಕೆ ಪರ್ಯಾಲೋಚನೆ ಮಾಡಬೇಕೆಂದು ಮತ್ತು ಪರ್ಯಾಲೋಚಿಸುವ ಬಗ್ಗೆ ಏನು ಮಾಡಬೇಕೆಂದು ತಾವು ಹೇಳಬೇಕು. ಮಾನ್ಯ ಮುಖ್ಯಮಂತ್ರಿಯವರೇ ತಾವು ಹೇಳಿದ ಮೇಲೆ ಮಾನ್ಯ ಸದಸ್ಯರುಗಳಿಗೆ ಮಾತನಾಡಲು ಅವಕಾಶವನ್ನು ಕೊಡುತ್ತೇನೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾನು ಅದನ್ನೇ ಹೇಳುತ್ತಿರುವುದು. This is an Appropriation Bill. ಇದು ಯಾವುದೇ ಒಂದು ವಿಧೇಯಕವಲ್ಲ. ಅದರ ಬಗ್ಗೆ ನಾನು ಮಾತನಾಡಬೇಕಲ್ಲವೇ?

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಯವರೇ ಮೊದಲು ತಾವು ಮಾತನಾಡಿ.

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್):-** ಮಾನ್ಯ ಮುಖ್ಯಮಂತ್ರಿಯವರೇ ನನ್ನದೊಂದು ವಿನಂತಿಯೇನೆಂದರೆ . . .

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಬಸನಗೌಡ ಆರ್. ಪಾಟೀಲ್‌ರವರೇ ತಾವು ಭಾರತೀಯ ಜನತಾ ಪಕ್ಷಕ್ಕೆ ಸೇರಿದ್ದೀರಾ?

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್):-** ಮಾನ್ಯ ಮುಖ್ಯಮಂತ್ರಿಯವರೇ ಇನ್ನೂ ಸಹ ಭಾರತೀಯ ಜನತಾ ಪಕ್ಷಕ್ಕೆ ಸೇರಿರುವುದಿಲ್ಲ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಬಸನಗೌಡ ಆರ್. ಪಾಟೀಲ್‌ರವರೇ ಮತ್ತೆ ಆ ಪಕ್ಷಕ್ಕೆ ಹೋಗಿ.

**(ನಗುವಿನ ಅಲೆ)**

**ಸಭಾಪತಿಯವರು:-** ಮಾನ್ಯ ಬಸನಗೌಡ ಆರ್.ಪಾಟೀಲ್‌ರವರು ಇನ್ನೂ ಆ ಪಕ್ಷಕ್ಕೆ ಹೋಗಿಲ್ಲ ಎಂದು ಹೇಳುತ್ತಿದ್ದಾರೆ. ಇನ್ನೂ option open ಇದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಎಲ್ಲರನ್ನೂ ಹೋಗಿ ಹೋಗಿ ಎಂದು ಹೇಳುತ್ತಿದ್ದೀರಲ್ಲವೇ?

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್):-** ಮಾನ್ಯ ಸಭಾಪತಿಯವರೇ, . . .

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾನು ಬಹಳ ಹೊತ್ತು ಈ ವಿಷಯದ ಬಗ್ಗೆ ವಿವರಣೆಯನ್ನು ಕೊಡುವುದಿಲ್ಲ.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಯವರೇ, ತಾವು ಮಾತನಾಡುವುದನ್ನು ಬೇಗ ಮುಗಿಸಿ. ನಂತರ ಮಾನ್ಯ ಸದಸ್ಯರುಗಳಿಗೆ ಅವಕಾಶ ಕೊಡುತ್ತೇನೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದನ್ನು 15 ನಿಮಿಷದಲ್ಲಿ ಮುಗಿಸಿಬಿಡುತ್ತೇನೆ. ನಂತರ ಮಾನ್ಯ ಶ್ರೀಕಂಠೇಗೌಡರಿಗೆ 5 ನಿಮಿಷ ಕಾಲಾವಕಾಶವನ್ನು ಕೊಡಬೇಕು. ಮಾನ್ಯ ಶ್ರೀಕಂಠೇಗೌಡರೇ ತಾವು ಸಹ walk out ಮಾಡಿ.

**(ನಗುವಿನ ಅಲೆ)**

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಎಲ್ಲವನ್ನೂ ತಾವೇ ಹೇಳಿದರೆ ಹೇಗೆ?

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಸುಮ್ಮನೆ ತಮಾಷೆಗೆ ಹೇಳಿದೆ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಮತ್ತು ನಾವೆಲ್ಲಾ ಒಂದೇ ಭಾಗದಿಂದ ಬಂದವರು. ಈ ರೀತಿಯಲ್ಲಿ ಏಕೆ ಬದಲಾಗಿದ್ದಾರೆ ಎಂದು ಗೊತ್ತಾಗುತ್ತಿಲ್ಲ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಒಂದು ವೇಳೆ ಮಾತನಾಡುವ ಹಾಗಿದ್ದರೆ ಐದು ನಿಮಿಷ ಮಾತನಾಡಿಸಿ ಬಿಡಿ.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಯವರೇ ತಾವು ಮಾತನಾಡುವುದಕ್ಕಿಂತ ಮೊದಲು ಮಾನ್ಯ ಸದಸ್ಯರುಗಳು ಮಾತನಾಡುವುದಕ್ಕಾಗುವುದಿಲ್ಲ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಮೊದಲು ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಮಾನ್ಯ ಸದಸ್ಯರುಗಳನ್ನು ಕುಳಿತುಕೊಳ್ಳುವುದಕ್ಕೆ ತಿಳಿಸಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್)**:- ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು**:- ಮಾನ್ಯ ಸದಸ್ಯರುಗಳು ದಯಮಾಡಿ ಕುಳಿತುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಯವರು ಈ ವಿಧೇಯಕವನ್ನು ಏಕೆ ಪರ್ಯಾಲೋಚಿಸಬೇಕೆಂದು ಹೇಳುತ್ತಾರೆ. ಅವರು ಹೇಳಿದ ಮೇಲೆ ಅದಕ್ಕೆ ಒಂದು ತೂಕ ಬರುತ್ತದೆ. ಮಾನ್ಯ ಮುಖ್ಯಮಂತ್ರಿಯವರು ಹೇಳದೆಯೇ ಮಾನ್ಯ ಸದಸ್ಯರುಗಳು ಇದರ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುವುದಕ್ಕೆ ಬರುವುದಿಲ್ಲ.

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್)**:- ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು**:- ಮಾನ್ಯ ಬಸನಗೌಡ ಆರ್. ಪಾಟೀಲ್‌ರವರೇ ತಮಗೂ ನಂತರ ಅವಕಾಶವನ್ನು ಕೊಡುತ್ತೇನೆ.

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್)**:- ಮಾನ್ಯ ಸಭಾಪತಿಯವರೇ, ನನಗೆ ಏಕೆ ಅವಕಾಶವನ್ನು ಕೊಡಬೇಕೆನ್ನುವ ಬಗ್ಗೆ ಹೇಳುತ್ತಿದ್ದೇನೆ.

**ಸಭಾಪತಿಯವರು**:- ಮಾನ್ಯ ಮುಖ್ಯಮಂತ್ರಿಯವರು ಮಾತನಾಡಿದ ಮೇಲೆ ತಮಗೆ ಅವಕಾಶವನ್ನು ಕೊಡುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತಕರು)**:- ಮಾನ್ಯ ಸಭಾಪತಿಯವರು ಅವಕಾಶವನ್ನು ಕೊಡುತ್ತೇನೆ ಎಂದು ಹೇಳಿದ ಮೇಲೂ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ.

**ಸಭಾಪತಿಯವರು**:- ಮಾನ್ಯ ಮುಖ್ಯಮಂತ್ರಿಯವರು ಈ ಪ್ರಸ್ತಾವನೆಯನ್ನು ಪರ್ಯಾಲೋಚಿಸಬೇಕೆಂದು ಹೇಳಿದ್ದಾರೆ. ಇದನ್ನು ಏಕೆ ಪರ್ಯಾಲೋಚಿಸಬೇಕೆಂದು ಹೇಳುತ್ತಾರೆ? ನಂತರ ಮಾನ್ಯ ಶ್ರೀಕಂಠೇಗೌಡರಿಗೆ ಮತ್ತು ತಮಗೆ ಐದೈದು ನಿಮಿಷಗಳ ಕಾಲಾವಕಾಶವನ್ನು ಕೊಡುತ್ತೇನೆ.

(**ಗೊಂದಲ**)

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್)**:- ಮಾನ್ಯ ಸಭಾಪತಿಯವರೇ, ನಾನು ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ . . .

**ಶ್ರೀ ಕೆ.ಟಿ.ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ, It is the great history in the democratic setup.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ವಿಧೇಯಕದ ಮೇಲೆ ಐದ್ಹೈದು ನಿಮಿಷ ಮಾತನಾಡಿದರೆ ಏನು ಆಗುವುದಿಲ್ಲ? ನಾಲ್ಕೈದು ಜನ ಇರುವುದು, ಅವರನ್ನು ಸಹ ಮಾತನಾಡಬೇಡಿ ಎಂದು ಹೇಳಬಿಟ್ಟರೆ ಹೇಗೆ?

**ಸಭಾಪತಿಯವರು:-** ಈ ಮಾನ್ಯ ಮುಖ್ಯಮಂತ್ರಿಯವರು ಮಾತನಾಡಲಿ ಬಿಡಿ. ದಯಮಾಡಿ ಎಲ್ಲಾ ಮಾನ್ಯ ಸದಸ್ಯರು ಕುಳಿತುಕೊಳ್ಳಿ.

**(264)23/02/2018/ಎಸ್‌ಪಿಆರ್/ಎ.ಕೆ./4:10**

ಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವುದು ಬೇಡ ಉತ್ತರವನ್ನು ಕೊಟ್ಟರೆ ಸಾಕು.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳು ಅದನ್ನೇ ಮಾಡುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ನಾನು ಉತ್ತರವನ್ನೇ ಕೊಡುತ್ತಿದ್ದೇನೆ. Appropriation Bill ನ್ನು ಪರ್ಯಾಲೋಚಿಸಬೇಕೆಂದು ನಾವು ಪ್ರಸ್ತಾಪ ಮಂಡಿಸಿದ್ದೇವೆ.

**ಸಭಾಪತಿಯವರು:-** ಇದನ್ನು ಏಕೆ ಪರ್ಯಾಲೋಚಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಈಗ ಹೇಳಬೇಕು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಅದನ್ನೇ ಹೇಳಲು ಹೊರಟಿದ್ದೇನೆ.

**ಸಭಾಪತಿಯವರು:-** ತಾವು ದಯಮಾಡಿ ಪ್ರಾರಂಭಿಸಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಹೀಗೆ ಅಡ್ಡಿ ಪಡಿಸಿದರೆ ನಾನು ಮಾತನಾಡುವುದು ಹೇಗೆ? ನಾನು ನನಗೆ ತಿಳಿದಿದ್ದನ್ನು ಹೇಳುತ್ತೇನೆ. ಅದನ್ನು ಯಾವ ಧಾಟಿ, ಮಾದರಿಗಳಲ್ಲಿ ಹೇಳಬೇಕೋ ಅದೇ ರೀತಿಯಾಗಿ ಹೇಳುತ್ತೇನೆ. ಯಾವ ಪದಗಳನ್ನು ಉಪಯೋಗಿಸಬೇಕೋ ಅದೇ ಪದಗಳನ್ನೇ ನಾನು ಉಪಯೋಗಿಸುತ್ತೇನೆ. ಆದರೆ ಸಂಸದೀಯ ಪದಗಳನ್ನು ಮಾತ್ರವೇ ಬಳಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಇದಕ್ಕೆ ನಮ್ಮ ತಕರಾರು ಏನೂ ಇಲ್ಲ. ಹೀಗಾಗಿ ಮಾನ್ಯ ಮುಖ್ಯಮಂತ್ರಿಗಳು ಆರಾಮವಾಗಿ ಮಾತನಾಡಲಿ. ಅವರು ಹೇಳಿದ್ದನ್ನು ನಾವು ಕುಳಿತುಕೊಂಡು ಕೇಳುತ್ತೇವೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಹೊರಟ್ಟಿರವರು ನಮ್ಮ ಸ್ನೇಹಿತರಾಗಿರುವುದರಿಂದ ಅವರಿಗೆ ಸ್ವಲ್ಪ ದೊಡ್ಡತನವಿದೆ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಟೀಕೆ ಮಾಡುವ ದೃಷ್ಟಿಯಿಂದ ನಾವು ಹೇಳುತ್ತಿಲ್ಲ. ಆದರೆ ನಮಗೆ ಮಾತನಾಡಲು ಒಂದು ಅವಕಾಶ ಸಿಗುತ್ತಿತ್ತು. ಅರ್ಧಗಂಟೆ ನಾವುಗಳು ಮಾತನಾಡಬಹುದಿತ್ತು. ಇಷ್ಟು ಬಿಟ್ಟರೆ ಬೇರೇನೂ ವಿಚಾರವಿಲ್ಲ. ಈ ವಿಚಾರದಲ್ಲಿ ಚರ್ಚೆಯಾಗಬೇಕು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಮುಂದಿನ ದಿನಗಳಲ್ಲಿ ಮುಂಗಡ ಪತ್ರದ ಬೇಡಿಕೆಗಳ ಬಗ್ಗೆ ಚರ್ಚೆಯಾಗುತ್ತದೆ. ಆ ಸಂದರ್ಭದಲ್ಲಿ ಮಾನ್ಯ ಸಭಾಪತಿಯವರು ಮಾನ್ಯ ಸದಸ್ಯರಿಗೆ ಮಾತನಾಡಲು ಸಾಕಷ್ಟು ಕಾಲಾವಕಾಶವನ್ನು ನೀಡಲಿ; ಮಾನ್ಯ ಸದಸ್ಯರು ಬಹಳ ದೀರ್ಘವಾಗಿ ಮಾತನಾಡಲಿ. ನಾನೂ ಸಹ ದೀರ್ಘವಾಗಿ ಉತ್ತರವನ್ನು ಕೊಡುತ್ತೇನೆ.

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆಗ ಸಭಾಪತಿಗಳ ಸ್ಥಾನದಲ್ಲಿ ಯಾರು ಇರುತ್ತಾರೆ? ವಿರೋಧ ಪಕ್ಷದಲ್ಲಿ ಯಾರು ಇರುತ್ತಾರೆ? ಆದುದರಿಂದ ...

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಹಾಗಾದರೆ ನಾನು ಮಾತನಾಡಿದ ನಂತರದಲ್ಲಿ ಮಾನ್ಯ ಸದಸ್ಯರು ಐದು ನಿಮಿಷಗಳ ಕಾಲ ಮಾತನಾಡಲಿ.

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್):-** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಬಹುಷಃ ದೇವರಾಜ ಅರಸುರವರ ನಂತರ ಸುದೀರ್ಘವಾಗಿ ಐದು ವರ್ಷಗಳ ಕಾಲ ತಾವು ರಾಜ್ಯದ ಮುಖ್ಯಮಂತ್ರಿಗಳಾಗಿ ಸೇವೆಯನ್ನು ಸಲ್ಲಿಸಿದ್ದೀರಿ. ಇದು 14ನೇ ವಿಧಾನಸಭೆಯ ಕೊನೆಯ ಅಧಿವೇಶನವಾಗಿದೆ. ಯಾವಾಗಲೂ ಸಹ ಯಾವುದೇ ಸರ್ಕಾರ ಅಧಿಕಾರದಲ್ಲಿರಲಿ, ನಾಳೆಯ ದಿನ ಜನರು ಏನು ತೀರ್ಪು ಕೊಡುತ್ತಾರೋ ಕೊಡಲಿ. ನಾನು 1994 ನೇ ಸಾಲಿನಲ್ಲಿ ಶಾಸಕನಾಗಿದ್ದಾಗ ದಿವಂಗತ ಜೆ.ಹೆಚ್.ಪಟೇಲ್‌ರವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಆಗ ಅವರು ಕೊನೆಯ ಅಧಿವೇಶನದಲ್ಲಿ ಎಲ್ಲಾ ಸದಸ್ಯರುಗಳು ಮಾತನಾಡಲು ಅವಕಾಶವನ್ನು ನೀಡಿದ್ದರು. ಸರ್ಕಾರವು ಮಾಡಿದ ಒಳ್ಳೆಯ

ಕೆಲಸಗಳ ಬಗ್ಗೆ ಅಭಿನಂದನೆಗಳನ್ನು ಸಲ್ಲಿಸುವಂತಹದ್ದು ಶಾಸಕರುಗಳ ಧರ್ಮವಾಗಿದೆ. ನಿಮ್ಮ ಐದು ವರ್ಷಗಳ ಅಧಿಕಾರಾವಧಿಯಲ್ಲಿ ನಾವು ಶಾಸಕರಾಗಿ ಕೆಲಸವನ್ನು ಮಾಡಿರುತ್ತೇವೆ. ಸರ್ಕಾರವು ಒಳ್ಳೆಯ ಕೆಲಸಗಳನ್ನು ಮಾಡಿರುತ್ತದೆ. ಆದರೆ, . . .

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ನಂತರ ಮಾತನಾಡಲು ಐದು ನಿಮಿಷಗಳ ಕಾಲಾವಕಾಶವನ್ನು ನೀಡುವುದಾಗಿ ತಿಳಿಸಿ.

**ಸಭಾಪತಿಯವರು:-** ನಾನು ನಿಮಗೆ ಮಾತನಾಡಲು ಐದು ನಿಮಿಷಗಳ ಕಾಲಾವಕಾಶವನ್ನು ನೀಡುತ್ತೇನೆ. ಆಗ ನೀವು ಮಾತನಾಡಿ. ಈಗ ಮಾನ್ಯ ಮುಖ್ಯಮಂತ್ರಿಗಳು ಮಾತನಾಡಲಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಬಸನಗೌಡ ಪಾಟೀಲ್ (ಯತ್ನಾಳ್) ರವರು ನಮ್ಮ ಮನುಷ್ಯರಾಗಿದ್ದಾರೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಸದಸ್ಯರನ್ನು ಅವರ ಮನುಷ್ಯ ಎಂಬುದಾಗಿ ಹೇಳುತ್ತಿದ್ದಾರೆ.

**Sri BASAVARAJ RAYAREDDY:** There is a possibility.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರದ್ದು ಸಮಾನ ಚಿಂತನೆ ಇರುವಂತಹದ್ದು ಎಂಬರ್ಥದಲ್ಲಿ ನಾನು ಹೇಳಿದ್ದು, 'ನಮ್ಮ ಮನುಷ್ಯ' ಎಂದರೆ ಇದೇ ಅರ್ಥವಾಗಿದೆ. ಮಾನ್ಯ ಸದಸ್ಯರು ಸಮಾನ ಮನಸ್ಕ ಹಾಗೂ ಸಮಾನ ಚಿಂತಕರಾಗಿದ್ದಾರೆ. ಈ ಮಾತನ್ನು ಮಾನ್ಯ ಯತ್ನಾಳ್‌ರವರು ಒಪ್ಪಿಕೊಳ್ಳುತ್ತಾರೆಯೋ, ಇಲ್ಲವೋ?

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್):-** ಮಾನ್ಯ ಸಭಾಪತಿಯವರೇ, ಯಾವಾಗಲೂ ಕಿತ್ತೂರು ರಾಣಿ ಚೆನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣ ರವರುಗಳು ತಾಯಿ-ಮಗ ಇದ್ದ ಹಾಗೆ. ಅದೇ ರೀತಿಯಾಗಿ ನಾವು ಮತ್ತು ಮುಖ್ಯಮಂತ್ರಿಗಳು . . . .

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಸವಣ್ಣನವರ ತತ್ವಗಳನ್ನು ಅನುಸರಿಸುತ್ತಾರೆ, ಅದೇ ರೀತಿಯಾಗಿ ನಾನೂ ಸಹ ಬಸವಣ್ಣನವರ ತತ್ವಗಳನ್ನು ಅನುಸರಿಸುತ್ತೇನೆ. ಅವರು ಕಿತ್ತೂರು ರಾಣಿ ಚೆನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣರವರುಗಳನ್ನು ಗೌರವಿಸುತ್ತಾರೆ. ಹಾಗೆಯೇ, ನಾವೂ

ಸಹ ಅವರನ್ನು ಗೌರವಿಸುತ್ತೇವೆ. ಹೀಗಿರುವಾಗ ಇಬ್ಬರದ್ದೂ ಸಮಾನ ಮನಸ್ಕರಾಯಿತಲ್ಲವೇ? ಅಲ್ಲಿಗೆ ಮುಗಿಯಿತು.

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್):-** ಮಾನ್ಯ ಸಭಾಪತಿಯವರೇ, ನಾನು ಈ ಹಿಂದೆ ಲೋಕಸಭೆಯ ಸದಸ್ಯನಾಗಿದ್ದಾಗ, ಮಾನ್ಯ ಮುಖ್ಯಮಂತ್ರಿಗಳ ಹುಬ್ಬಳ್ಳಿಯ ಕಾರ್ಯಕ್ರಮಕ್ಕೆ ನಾನು ಹೋಗಿದ್ದೇನು. ಇದಕ್ಕೆ ಸಂಬಂಧಪಟ್ಟಂತೆ ಆಗ ನಮ್ಮ ಪಕ್ಷವು ನನಗೆ ನೋಟಿಸ್‌ನ್ನು ನೀಡಿತ್ತು. ಆಗ ನಾನು ಅಂಜಲಿಲ್ಲ ಹಾಗೆಯೇ ಈಗಲೂ ಸಹ ನಾನು ಅಂಜುವುದಿಲ್ಲ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅವತ್ತಿನ ದಿವಸ 'ಅಹಿಂದ' ಸಮಾವೇಶಕ್ಕೆ ಬಂದಿದ್ದರು .

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್):-** ಮಾನ್ಯ ಸಭಾಪತಿಯವರೇ, ಆದರೆ ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ನನಗಿರುವ ಒಳ್ಳೆಯ ವಿಚಾರಗಳನ್ನು ನಾನು ಹೇಳುತ್ತೇನೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಅಭಿನಂದನೆಯನ್ನು ಸಲ್ಲಿಸಬೇಕು.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, a right person is going to the wrong party ಎನ್ನುವುದು ಈಗಿನ ಸಮಸ್ಯೆಯಾಗಿದೆ.

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್):-** ಮಾನ್ಯ ಸಭಾಪತಿಯವರೇ, ಇದು ಕೊನೆಯ ಅಧಿವೇಶನವಾಗಿರುವುದರಿಂದ, ನಾವು ಕೇವಲ ವಿರೋಧವನ್ನು ಮಾಡುವುದು ಅಷ್ಟೇ ಅಲ್ಲ ಒಳ್ಳೆಯ ವಿಚಾರಗಳನ್ನು ವ್ಯಕ್ತಪಡಿಸಿ, ರಾಜ್ಯದ ರೈತರ ಆತ್ಮಹತ್ಯೆಯನ್ನು.... ನಿಮ್ಮ ಪಕ್ಷವೇ ಮುಂದೆ ಅಧಿಕಾರಕ್ಕೆ ಬರಬಹುದು, ಇದು ಜನರ ತೀರ್ಪು ಆಗಿದೆ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ಇನ್ನು ಮುಂದೆಯೂ ಸಹ ನಮ್ಮ ಪಕ್ಷವೇ ಅಧಿಕಾರಕ್ಕೆ ಬರುವುದು. ಇದರಲ್ಲಿ ಯಾವುದೇ ಅನುಮಾನವಿಲ್ಲ. ಬೇರೆ ಯಾವುದೇ ಪಕ್ಷವೂ ಸಹ ಅಧಿಕಾರಕ್ಕೆ ಬರುವುದಿಲ್ಲ.

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್):-** ಮಾನ್ಯ ಸಭಾಪತಿಯವರೇ, ಆದರೆ ನಮ್ಮ ಅನಿಸಿಕೆಗಳನ್ನು ಈ ವೇದಿಕೆಯಲ್ಲಿ ಹೇಳುವುದಕ್ಕೆ ಅವಕಾಶವನ್ನು ನೀಡಬೇಕು.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಬೇಕಾದರೆ, ಮಾತನಾಡಲು ಐದು ನಿಮಿಷಕ್ಕಿಂತ ಹೆಚ್ಚು ಸಮಯವನ್ನು ಕೊಡಬಹುದಾಗಿದೆ.

**(ಸದನದಲ್ಲಿ ನಗು)**

ನಾನು ಹಣಕಾಸಿನ ಮಂತ್ರಿಯಾಗಿ ಈಗ ಮಂಡಿಸುತ್ತಿರುವುದು ನನ್ನ 13 ನೇ ಆಯವ್ಯಯವಾಗಿದೆ. 1994-95 ನೇ ಸಾಲಿನಲ್ಲಿ ನನ್ನ ಮೊದಲನೆಯ ಆಯವ್ಯಯವನ್ನು ಮಂಡಿಸಿದ್ದೇನೆ. ನಾನು ಮುಖ್ಯಮಂತ್ರಿಯಾಗಿ ಈಗ ಮಂಡಿಸಿರುವುದು ನನ್ನ ಆರನೆಯ ಆಯವ್ಯಯವಾಗಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಮಾತನಾಡುವುದಕ್ಕಾಗಿಯೇ ನಾನು ಈ ಎಲ್ಲಾ ಸಂಗತಿಗಳನ್ನು ಬರೆದುಕೊಂಡು ಬಂದಿದ್ದೇನೆ. ಮಾನ್ಯ ಸಿದ್ಧರಾಮಯ್ಯನವರು ಉಪ ಮುಖ್ಯಮಂತ್ರಿಗಳಾಗಿ ಐದು ಬಾರಿ, ಮುಖ್ಯಮಂತ್ರಿಯಾಗಿ ಆರು ಬಾರಿ, ಮತ್ತು ಹಣಕಾಸಿನ ಮಂತ್ರಿಯಾಗಿ ಎರಡು ಬಾರಿ ಆಯವ್ಯಯಗಳನ್ನು ಮಂಡಿಸಿದ್ದಾರೆ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಒಂದು ಗಂಟೆಗಳ ಕಾಲ ಸಾಮಾನ್ಯ ಚರ್ಚೆಯನ್ನು ಮಾಡೋಣ. ಅದಕ್ಕೂ ಮೊದಲು ಧನವಿನಿಯೋಗ ವಿಧೇಯಕವನ್ನು ಅನುಮೋದನೆ ಮಾಡೋಣ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ಈಗ ನಾನು ಮಾತನಾಡುತ್ತೇನೆ. ಇದು ಏಕೋ ಸರಿಹೋಗುತ್ತಿಲ್ಲ.

**ಸಭಾಪತಿಯವರು:-**ನೀವು ಸರಿಯಾಗಿ start ಮಾಡಲಿಲ್ಲ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ಈ ಬಾರಿ ನಾನು ಮುಖ್ಯಮಂತ್ರಿಯಾಗಿ ಆರನೆಯ ಆಯವ್ಯಯವನ್ನು ಮಂಡಿಸಿದ್ದೇನೆ. ಈ ಆರೂ ಆಯವ್ಯಯಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ನಾವು ಆರ್ಥಿಕ ಶಿಸ್ತನ್ನು ಕಾಪಾಡಿದ್ದೇವೆ. ಏಕೆಂದರೆ ನಾವು ಸಾಲವನ್ನು ಮಾಡಿದ್ದೇವೆ, ರಾಜ್ಯವು ಆರ್ಥಿಕವಾಗಿ ದಿವಾಳಿಯಾಗಿದೆ, ಅಭಿವೃದ್ಧಿಗೆ ದುಡ್ಡೇ ಇಲ್ಲ, ಸಾಲವನ್ನು ತೆಗೆದುಕೊಂಡು ಬರುತ್ತಿದ್ದಾರೆ ಇದನ್ನು ಬಿಟ್ಟರೆ ಬೇರೆ ಅಭಿವೃದ್ಧಿಯನ್ನು ಏನೂ ಮಾಡುತ್ತಿಲ್ಲ ಎಂಬುದಾಗಿ ಕೆಲವರು ಹೇಳುತ್ತಿದ್ದಾರೆ. ಈ ಎಲ್ಲಾ ಹೇಳಿಕೆಗಳು ಕೂಡ ಆಧಾರರಹಿತವಾದವು ಹಾಗೂ ರಾಜಕೀಯ ದುರುದ್ದೇಶದಿಂದ ಕೂಡಿದ್ದಾಗಿವೆ. Last year’s budget was also largely appreciated in this state. ಅರ್ಥ ಶಾಸ್ತ್ರಜ್ಞರು, ಮಾಧ್ಯಮದವರು, ಟಿ.ವಿ.ವಾಹಿನಿಗಳು, ಸಂಘ-ಸಂಸ್ಥೆಗಳು, ರೈತರು, ಬಡವರು, ದಲಿತರು,

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಹಿಂದುಳಿದವರು, ಅಲ್ಪಸಂಖ್ಯಾತರು ಎಲ್ಲರೂ ಕೂಡ ಕಳೆದ ವರ್ಷದ ಹಾಗೂ ಪ್ರಸಕ್ತ ಸಾಲಿನ ಆಯವ್ಯಯಗಳನ್ನು ಮೆಚ್ಚಿಕೊಂಡಿದ್ದಾರೆ.

ಮಾನ್ಯ ಹೊರಟ್ಟಿರವರೇ, ನಾನು ಮಂಡಿಸಿರುವ ಆಯವ್ಯಯವನ್ನು ನೋಡಿದ್ದೀರಲ್ಲವೇ? Editorialಗಳು ಹೇಗೆ ಬಂದಿವೆ, ಅರ್ಥ ಶಾಸ್ತ್ರಜ್ಞರು, ಮಾಧ್ಯಮದವರುಗಳು ಯಾವ ರೀತಿಯಾಗಿ ಅಭಿಪ್ರಾಯವನ್ನು ಹೇಳಿದ್ದಾರೆ; ಟಿ.ವಿ.ಚಾನೆಲ್‌ಗಳಲ್ಲಿ ಯಾವ ರೀತಿಯಾಗಿ ಚರ್ಚೆಯಾಗಿದೆ, ವಾಚಕರ ವಾಣಿಯಲ್ಲಿ ಏನು ಬಂದಿದೆ ಇವುಗಳೆಲ್ಲವನ್ನೂ ಸಹ ನೋಡಿದ್ದಾರೆ. ನಾವು ಮಂಡಿಸಿರುವ ಆಯವ್ಯಯದ ಬಗ್ಗೆ ಒಳ್ಳೆಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ ಎಲ್ಲರಿಗೂ ಈ ಸಂದರ್ಭದಲ್ಲಿ ನಾನು ಧನ್ಯವಾದಗಳನ್ನು ಹೇಳಲಿಚ್ಛಿಸುತ್ತೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ಕುಟ್ಟುವುದರ ಮೂಲಕ ಹರ್ಷ ವ್ಯಕ್ತಪಡಿಸಿದರು)**

2018-19 ನೇ ಸಾಲಿನ ಒಟ್ಟು ಖರ್ಚು 2,09,181 ಕೋಟಿ ರೂಪಾಯಿಗಳು. 2017-18 ನೇ ಸಾಲಿನಲ್ಲಿ 1,86,561 ಕೋಟಿ ರೂಪಾಯಿಗಳಷ್ಟು ಖರ್ಚಾಗಿದೆ. ಅಂದರೆ ಕಳೆದ ಹಾಗೂ ಪ್ರಸಕ್ತ ಸಾಲಿನ ಆಯವ್ಯಯಗಳ ಗಾತ್ರಗಳನ್ನು ಹೋಲಿಸಿ ನೋಡಿದಾಗ ಶೇಕಡಾ 12.12 ರಷ್ಟು growth ಆಗಿದೆ. ಅಂದರೆ ಸುಮಾರು 22,600 ಕೋಟಿ ರೂಪಾಯಿಗಳಷ್ಟು ಜಾಸ್ತಿಯಾಗಿದೆ. ಈ ವರ್ಷವೂ ಕೂಡ Fiscal Responsibility Act, 2002 ರಲ್ಲಿ ಹೇಳಿರುವ ಮಾನದಂಡಗಳಿಗೆ ಅನುಗುಣವಾಗಿ ಈ ಸಾಲಿನ ಆಯವ್ಯಯ ಇದೆ. ಕಳೆದ ಐದು ವರ್ಷಗಳಲ್ಲಿಯೂ ಸಹ ನಿಗದಿತ ಮಾನದಂಡಗಳಿಗೆ ಅನುಗುಣವಾಗಿಯೇ ಆಯವ್ಯಯ ಇತ್ತು. Fiscal Responsibility Act ರಲ್ಲಿ ಹೇಳುವ ಪ್ರಕಾರ revenue surplus ಇರಬೇಕು. All the five years, there is revenue surplus. ಕಳೆದ ವರ್ಷ 137 ಕೋಟಿ ರೂಪಾಯಿಗಳಷ್ಟು revenue surplus ಇತ್ತು. ಆದರೆ ಪ್ರಸಕ್ತ ಸಾಲಿನಲ್ಲಿ ಇದಕ್ಕಿಂತ ಸ್ವಲ್ಪ ಜಾಸ್ತಿಯಾಗಿದೆ. ಮುಂದಿನ ವರ್ಷಕ್ಕೆ 127 ಕೋಟಿ ರೂಪಾಯಿಗಳಗಿಂತ revenue surplus ಜಾಸ್ತಿ ಎಂಬುದಾಗಿ ನಾವು ಹೇಳಿಕೊಂಡಿದ್ದೇವೆ. ಕಳೆದ ಐದೂ ವರ್ಷಗಳಲ್ಲಿ revenue surplus ಇದೆ. Fiscal Responsibility Act ನಲ್ಲಿ ಆರೋಗ್ಯಕರವಾದ ಆರ್ಥಿಕ ಪರಿಸ್ಥಿತಿ ಹೇಗಿರಬೇಕು ಎಂಬುದರ ಬಗ್ಗೆ ಹೇಳಿದ್ದಾರೆ. ಶೇಕಡಾ ಮೂರಕ್ಕಿಂತ ಕಡಿಮೆ ವಿತ್ತೀಯ ಕೊರತೆ ಇರಬೇಕು.

(265) 23-02-2018 ಸಿಎಸ್/ಎಕೆ/ 4.20

ಶ್ರೀ ಸಿದ್ದರಾಮಯ್ಯ(ಮುಂದು):-

ವಿತ್ತೀಯ ಕೊರತೆ(fiscal deficit) ಶೇಕಡ 3 ಕ್ಕಿಂತ ಕಡಿಮೆ ಇರಬೇಕು. G.S.D.P. (Gross State Domestic Product) ಯ ಶೇಕಡ 3ಕ್ಕಿಂತ ಕಡಿಮೆ ಇರಬೇಕು. ನಮ್ಮ ರಾಜ್ಯದ್ದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶೇಕಡ 3ಕ್ಕಿಂತ ಕಡಿಮೆ ಇದೆ. ಈ ವರ್ಷ 2017-18ನೇ ಸಾಲಿಗೆ ವಿತ್ತೀಯ ಕೊರತೆ ಶೇಕಡ 2.54% ಇತ್ತು. ಮುಂದಿನ ವರ್ಷ 2018-19ಕ್ಕೆ 2.49% ಇದೆ. That means to say, ನಮ್ಮ ರಾಜ್ಯದ ವಿತ್ತೀಯ ಕೊರತೆ ಶೇಕಡ 3ಕ್ಕಿಂತ ಕಡಿಮೆ ಇದೆ. ವಿತ್ತೀಯ ಹೊಣೆಗಾರಿಕೆ ಕಾಯಿದೆಯಲ್ಲಿ ಒಂದು ರಾಜ್ಯ ಎಷ್ಟು ಸಾಲವನ್ನು ಮಾಡಬಹುದು ಎನ್ನುವುದನ್ನು ಹೇಳಿದ್ದಾರೆ. ಅದರ ಪ್ರಕಾರ ವಿತ್ತೀಯ ಕೊರತೆಯು ಆಂತರಿಕ ಉತ್ಪನ್ನದ 25% ಅನ್ನು ಮೀರಬಾರದು. ಈ ವರ್ಷ ನಮ್ಮ ರಾಜ್ಯದ ವಿತ್ತೀಯ ಕೊರತೆಯು 19.2,% ಇದ್ದು, ಮುಂದಿನ ವರ್ಷ 20.36%, ಅಂದರೆ ಶೇಕಡ 25ಕ್ಕಿಂತ ಒಳಗೆ ಇದೆ. ಈ ಮೂರು ಮಾನದಂಡಗಳನ್ನು ಮೀರದೇ ನಾವು ಮಾನದಂಡದ ಒಳಗೆ ಇರುವಾಗ ಸರ್ಕಾರ ಸಾಲ ಮಾಡಿ ದಿವಾಳಿ ಆಗಿದೆ ಎಂದು ಹೇಗೆ ಹೇಳಲಿಕ್ಕೆ ಸಾಧ್ಯವಾಗುತ್ತದೆ?

ಮಾನ್ಯ ಸಭಾಪತಿಯವರೆ, ನಮ್ಮ ರಾಜ್ಯದ ಜಿಡಿಪಿ ಈ ವರ್ಷ 14,08,694 ಕೋಟಿ ಇದೆ. ಮುಂದಿನ ವರ್ಷ 2018-19ನೇ ಸಾಲಿಗೆ ರೂ.13,10,879 ಕೋಟಿ ಇದೆ. ಇದರಲ್ಲಿ ಕೂಡ 25% ಇರಬೇಕೆಂದಿದೆ. ನಮ್ಮ ದೇಶದಲ್ಲಿ ಈಗಾಗಲೇ ನಾಲ್ಕು ರಾಜ್ಯಗಳು ಮುಂದಿನ ಸಾಲಿನ ಆಯವ್ಯಯವನ್ನು ಮಂಡನೆ ಮಾಡಿವೆ, ನಮ್ಮ ರಾಜ್ಯ 5ನೇಯದ್ದು. ಕೇರಳ ರಾಜ್ಯದಲ್ಲಿ 2017-18ನೇ ಸಾಲಿಗೆ ರಾಜ್ಯದ ಹೊಣೆಗಾರಿಕೆ ಎಷ್ಟಿತ್ತು ಎಂದರೆ 2,07,027 ಕೋಟಿ, ಇದು ನಮಗಿಂತ ಚಿಕ್ಕ ರಾಜ್ಯ. ಮುಂದಿನ ವರ್ಷ 2018-19ನೇ ಸಾಲಿಗೆ ಅವರ ಹೊಣೆಗಾರಿಕೆ 2,37,266 ಕೋಟಿ ರೂಪಾಯಿಗಳು. Fiscal Responsibility Act ನಲ್ಲಿ ವಿತ್ತೀಯ ಕೊರತೆಯು ಆಂತರಿಕ ಉತ್ಪನ್ನದ 25% ಕ್ಕಿಂತ ಕಡಿಮೆ ಇರಬೇಕೆಂದಿದ್ದರೂ ಸಹ ಈ ರಾಜ್ಯದಲ್ಲಿ ಶೇಕಡ 30.7 ರಷ್ಟಿದೆ. ಇನ್ನು ರಾಜಸ್ತಾನ ರಾಜ್ಯದಲ್ಲಿ ಭಾರತೀಯ ಜನತಾ ಪಕ್ಷದ ಸರ್ಕಾರ ಅಧಿಕಾರದಲ್ಲಿದೆ. ಇಲ್ಲಿ ಈ ವರ್ಷ 2017-18ನೇ ಸಾಲಿಗೆ 2,78,141 ಕೋಟಿ ರೂಪಾಯಿಗಳ ಹೊಣೆಗಾರಿಕೆ ಇತ್ತು. ಮುಂದಿನ ವರ್ಷ 2018-19ನೇ ಸಾಲಿಗೆ 3,08,034 ಕೋಟಿ ರೂಪಾಯಿಗಳಿವೆ. ಅಂದರೆ ಈ ಜಿಡಿಪಿ 32.76% ಇದೆ. ಉತ್ತರಪ್ರದೇಶದಲ್ಲಿ ಈಗ ಹೆಚ್ಚು ಪ್ರಚಾರ ಚರ್ಚೆ ನಡೆಯುತ್ತಿದೆ. ಅಲ್ಲಿ ಕಾವಿ ಹಾಕಿಕೊಂಡವರು ಮುಖ್ಯಮಂತ್ರಿಗಳಾಗಿದ್ದಾರೆ. ಇಲ್ಲಿ ಈ ವರ್ಷ 2017-18ನೇ ಸಾಲಿಗೆ 4,14,094 ಕೋಟಿ ರೂಪಾಯಿಗಳ ಹೊಣೆಗಾರಿಕೆ ಇದೆ. ಮುಂದಿನ ವರ್ಷ 2018-19ನೇ ಸಾಲಿಗೆ 4,43,363 ಕೋಟಿ ರೂಪಾಯಿಗಳಿವೆ. ಇದರ ವಿತ್ತೀಯ ಕೊರತೆಯು ಆಂತರಿಕ ಉತ್ಪನ್ನದ 29.78 % ಇದೆ. ಗುಜರಾತಿನಲ್ಲಿ, ಈ ವರ್ಷ 2017-18ನೇ ಸಾಲಿಗೆ 2,14,688 ಕೋಟಿ ರೂಪಾಯಿಗಳ ಹೊಣೆಗಾರಿಕೆ ಇದೆ. ಮುಂದಿನ ವರ್ಷ 2018-19ನೇ ಸಾಲಿಗೆ 2,38,702 ಕೋಟಿ ರೂಪಾಯಿಗಳಿವೆ. ಈ ನಾಲ್ಕು ರಾಜ್ಯಗಳು ಕೂಡ ಈಗಾಗಲೇ ಮುಂದಿನ ವರ್ಷದ ಆಯವ್ಯಯವನ್ನು ಮಂಡನೆ ಮಾಡಿವೆ. ಗುಜರಾತಿನಲ್ಲಿ ಜಿಡಿಪಿ 25% ಗಿಂತ ಕಡಿಮೆ 15.96% ಇದೆ. ಇನ್ನುಳಿದ ಕೇರಳ, ರಾಜಸ್ತಾನ್ ಮತ್ತು ಉತ್ತರಪ್ರದೇಶ 3 ರಾಜ್ಯಗಳು 25% ಅನ್ನು ದಾಟಿವೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ನಮ್ಮ ರಾಜ್ಯದ ಆಂತರಿಕ ಉತ್ಪನ್ನವು ಈ ವರ್ಷ 14,08,694 ಕೋಟಿ ರೂಪಾಯಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದೆ. ಅದರಲ್ಲಿ ಈ ವರ್ಷದ ಹೊಣೆಗಾರಿಕೆ 2,42, 420 ಕೋಟಿ ರೂಪಾಯಿಗಳದ್ದು ವಿತ್ತೀಯ ಕೊರತೆ ಆಂತರಿಕ ಉತ್ಪನ್ನದ 19.2% ಇದೆ. ಮುಂದಿನ ವರ್ಷ 2018-19ನೇ ಸಾಲಿಗೆ ಹೊಣೆಗಾರಿಕೆ 2,86,780 ಕೋಟಿ ರೂಪಾಯಿಗಳಾಗಿದ್ದು, ವಿತ್ತೀಯ ಕೊರತೆ ಆಂತರಿಕ ಉತ್ಪನ್ನದ 20.36% ಇದೆ. ಇದರಿಂದ ನಮ್ಮ ರಾಜ್ಯದಲ್ಲಿ Fiscal Responsibility Act ಉಲ್ಲಂಘನೆ ಆಗಿಲ್ಲ. ನಮ್ಮ ಸರ್ಕಾರ ಯದ್ವಾತದ್ವಾ ಸಾಲವನ್ನು ಕೂಡ ಮಾಡಿಲ್ಲ. ಹಿಂದೆ ನಮ್ಮ ರಾಜ್ಯದಲ್ಲಿ ಭಾರತೀಯ ಜನತಾ ಪಕ್ಷದ ಆಡಳಿತ ಇದ್ದಾಗ 2009-10ನೇ ಸಾಲಿನಲ್ಲಿ 25.83% ಜಿಡಿಪಿ ಇತ್ತು, 2010-11ನೇ ಸಾಲಿನಲ್ಲಿ 24.99% ಜಿಡಿಪಿ ಇತ್ತು. 2011-12ನೇ ಸಾಲಿನಲ್ಲಿ 24.47% ಜಿಡಿಪಿ ಇತ್ತು. 2012-13ನೇ ಸಾಲಿನಲ್ಲಿ 22.69% ಜಿಡಿಪಿ ಇತ್ತು. 2009-10ನೇ ಸಾಲಿನಲ್ಲಿ ಮಾತ್ರ ಅವರು ಸಹ 25% ದಾಟಿ ಹೋಗಿದ್ದರು. ನಮ್ಮ ಪಕ್ಷ ಮಾತ್ರ 2013 ರಿಂದ ಇಲ್ಲಿಯವರೆಗೆ ಎಂದೂ 25% ಜಿಡಿಪಿಯನ್ನು ದಾಟಿರುವುದಿಲ್ಲ. 25% ಜಿಡಿಪಿ ಎಲ್ಲಿಯೂ ದಾಟಿಲ್ಲ. ಹಾಗಂದ ಮೇಲೆ ನಾವು ಆರ್ಥಿಕ ಶಿಸ್ತನ್ನು ಬಹಳ ಅಚ್ಚುಕಟ್ಟಾಗಿ ನಿರ್ವಹಣೆ ಮಾಡಿದ್ದೇವೆ. ನಮ್ಮ ರಾಜ್ಯದ ಹಣಕಾಸಿನ ಸ್ಥಿತಿ ಸುಸ್ಥಿತಿಯಲ್ಲಿದೆ. ನಮ್ಮ ರಾಜ್ಯ ಸಾಲದ ಭಾರದಿಂದ ಕುಸಿದು ಹೋಗಿದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಕಳೆದ 5 ವರ್ಷಗಳಲ್ಲಿ Fiscal Responsibility Act ಅನ್ನು ನಾವು ಸರಿಯಾಗಿ ನಿರ್ವಹಣೆ ಮಾಡಿದೆ.

ಇನ್ನೂ ಕೇಂದ್ರ ಸರ್ಕಾರದ ಹೊಣೆಗಾರಿಕೆ ಎಷ್ಟಿದೆ ಎಂದು ಹೇಳುವುದಾದರೆ 2017-18ನೇ ಸಾಲಿಗೆ ವಿತ್ತೀಯ ಕೊರತೆ ಆಂತರಿಕ ಉತ್ಪನ್ನದ 50.1% ಇದೆ. ಮುಂದಿನ ವರ್ಷಕ್ಕೆ 48.8% ಇದೆ.

(266)/23-2-2018/ಎಲ್‌ಎಂ/ಆರ್‌ಎಸ್/4-30

**ಶ್ರೀ ಸಿದ್ದರಾಮಯ್ಯ(ಮುಂದು):-** ಅವರು ಮುಂದಿನ ವರ್ಷಕ್ಕೆ ಅಂದಾಜು ಮಾಡಿಕೊಂಡಿರುವುದು 48.8%. ಕರ್ನಾಟಕದ ಅಂಕಿ-ಸಂಖ್ಯೆಯನ್ನು ಈಗಾಗಲೇ ಹೇಳಿದ್ದೇನೆ. 2023-24ನೇ ಸಾಲಿಗೆ 50% ನಿಂದ 40% ಗೆ ಇಳಿಸುತ್ತೇವೆ ಎಂದು ಇವರು ಒಂದು ಟಾರ್ಗೆಟ್ ಇಟ್ಟುಕೊಂಡಿದ್ದಾರೆ. ಅವರು ಎಷ್ಟು ಸಾಲವಾದರೂ ಮಾಡಬಹುದು, ಸಾಲ ಮಾಡುವುದರಲ್ಲಿ ಕೇಂದ್ರ ಸರ್ಕಾರ ಇಡೀ ಜಗತ್ತಿಗೆ ಮಾದರಿಯಾಗಿದೆ ಎಂದು ಹೇಳಬಹುದು. ನಾವು ಜಿಡಿಪಿ ಯಲ್ಲಿ 19.2% ಇದ್ದರೆ ಸರ್ಕಾರ ದಿವಾಳಿಯಾಗಿದೆ ಎಂದು ಹೇಳುತ್ತಾರೆ. Can anybody believe this? Is it not misleading? Is it not a politically motivated statement? ರಾಜಕೀಯವಾಗಿ ದುರುದ್ದೇಶದಿಂದ ಸಾಕಷ್ಟು ಸಾಲ ಮಾಡಿದ್ದಾರೆ ಎಂದು ಹೇಳುತ್ತಾರೆ. ಮಾಜಿ ಪ್ರಧಾನ ಮಂತ್ರಿಗಳಾಗಿದ್ದ ಮಾನ್ಯ ಮನಮೋಹನ ಸಿಂಗ್‌ರವರು ಬಂದಿದ್ದರು, ಅವರು Reserve Bank Governor ಆಗಿದ್ದರು, ಸ್ವತ: Economist, ಹಣಕಾಸು ಇಲಾಖೆಯ ಮಂತ್ರಿಗಳಾಗಿದ್ದರು, ವರ್ಲ್ಡ್ ಬ್ಯಾಂಕ್‌ನಲ್ಲಿ ಇದ್ದವರು, ಪ್ರಧಾನ ಮಂತ್ರಿಗಳಾಗಿದ್ದವರು. ಅವರು ಒಂದು ಸಾರಿ ಇಲ್ಲಿಗೆ ಬಂದಾಗ ಹೇಳಿದರು; "Karnataka is financially best managed State".

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

This is not my statement and this is the statement made by Sri Manmohan Singh. ಆ ರೀತಿಯಲ್ಲಿರುವಾಗ, ಹಣಕಾಸಿನ ಪರಿಸ್ಥಿತಿ ಕೆಟ್ಟಿದೆ ಎಂದು ಎಲ್ಲಿದೆ? ಸಹಿಸಿಕೊಳ್ಳಲು ಆಗದೆ ಇರುವವರು, ಹೊಟ್ಟೆಕಿಚ್ಚಿಗೆ ಹೇಳುವುದು.

**ಶ್ರೀ ಬಸವರಾಜ ಶಿವಲಿಂಗಪ್ಪನ ಹೊರಟ್ಟಿ:-** ಮಾನ್ಯ ಸಭಾಪತಿಗಳೆ, ಮಾನ್ಯ ಮುಖ್ಯಮಂತ್ರಿಗಳ ಮಾತನಾಡುವ ಸ್ಟೈಲ್ ಚೆನ್ನಾಗಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಮುಖ್ಯಮಂತ್ರಿಗಳ body language ಚೆನ್ನಾಗಿದೆ ಎಂದು ಮಾನ್ಯ ಹೊರಟ್ಟಿಯವರು ಹೇಳುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಹೊರಟ್ಟಿಯವರೆ, ನೀವು ಈ ಕಡೆ ಬನ್ನಿ, ನಿಮಗೂ ಇನ್ನೂ ಚೆನ್ನಾಗಿ ಹೇಳಿಕೊಡುತ್ತೇನೆ.

**ಸಭಾಪತಿಯವರು:-** ಏಕೋ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಎಲ್ಲರನ್ನೂ ಕರೆಯುತ್ತಿದ್ದಾರೆ. ಮಾನ್ಯ ಯತ್ನಾಳ್‌ರವರು ಬೇರೆ ಏನೋ ಚಿಂತನೆ ಮಾಡುತ್ತಿದ್ದಾರೆ ಅವರಿಗೆ ತಾವು ಏನೋ ತೊಂದರೆ ಕೊಡುವ ಹಾಗೆ ಕಾಣುತ್ತಿದೆ.

**ಶ್ರೀ ಸಿದ್ದರಾಮಯ್ಯ(ಮುಖ್ಯ ಮಂತ್ರಿಗಳು):-** ಮಾನ್ಯ ಸಭಾಪತಿಗಳೆ, ಮಾಹಿತಿಗಾಗಿ ಇದೆಲ್ಲವನ್ನು ಹೇಳುತ್ತಿದ್ದೇನೆ. ದೇಶದಲ್ಲಿ GDP growth ಎಷ್ಟು ಎಂದರೆ 2013-14ರಲ್ಲಿ 6.4%, 2014-15ರಲ್ಲಿ 7.4%, 2015-15ರಲ್ಲಿ 2.6%, 2016-17ರಲ್ಲಿ 7.1%, 2017-18ರಲ್ಲಿ 6.6% ಈ ಸಾಲಿನದ್ದು, because of demonitization. ನಮ್ಮ ರಾಜ್ಯದ್ದು 2013-14ರಲ್ಲಿ 9.6%, 2014-15ರಲ್ಲಿ 6.7%, 2015-16ರಲ್ಲಿ 8.2%, 2016-17ರಲ್ಲಿ 7.5% ಈ ವರ್ಷಕ್ಕೆ ಅಂದರೆ 2017-18ಕ್ಕೆ 8.5% The average growth of GDP in five years is 8.3%. ನಮ್ಮ ದೇಶದ average 7.1%. ಇದನ್ನು ನೋಡಿದರೆ ನಾವೇ ಉತ್ತಮವಾಗಿದ್ದೇವೆ. ದೇಶದ ಜಿಡಿಪಿ 7.1%, ಎರಡು ವರ್ಷ ಭೀಕರವಾದ ಬರಗಾಲವಿದ್ದರೂ, ಕರ್ನಾಟಕದ ಜಿಡಿಪಿ ಸರಾಸರಿ 8.3%. 2015-16 ಮತ್ತು 2016-17ರಲ್ಲಿ ಭೀಕರವಾದ ಬರಗಾಲ ಬಂತು. ನಾನು ನನ್ನ ಚಿಕ್ಕ ವಯಸ್ಸಿನಿಂದ ಇಷ್ಟೊಂದು ಭೀಕರ ಬರಗಾಲವನ್ನು ನೋಡೇ ಇರಲಿಲ್ಲ. ಮಾನ್ಯ ಸಭಾಪತಿಯವರು ಬಹುಶಃ ನೋಡಿಲ್ಲ ಅನ್ನಿಸುತ್ತದೆ.

**ಸಭಾಪತಿಯವರು:-** ನಾನು ಇಷ್ಟೊಂದು ಬರಗಾಲವನ್ನು ನೋಡಿರಲಿಲ್ಲ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಗಳೆ, ಇಷ್ಟೊಂದು ಬರಗಾಲವಿದ್ದರೂ ನಮ್ಮ ಆಂತರಿಕ ಉತ್ಪನದ ಬೆಳವಣಿಗೆ ಸರಾಸರಿ 8.1%. ಅಂದರೆ ಒಂದು ಪರ್ಸೆಂಟ್ National Average ಗಿಂತ ಜಾಸ್ತಿ. ಇದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವತ್ತು ನಮ್ಮಲ್ಲಿ ಇರುವಂತಹ ಆರ್ಥಿಕ ಪರಿಸ್ಥಿತಿ. ಪ್ರತಿ ವರ್ಷ ಬಜೆಟ್ ಗಾತ್ರ ಬೆಳವಣಿಗೆಯಾಗುತ್ತಿದೆ. 2012-13ರಲ್ಲಿ ಬಜೆಟ್ ಗಾತ್ರ ಒಂದು ಲಕ್ಷ ಎರಡು ಸಾವಿರ ಕೋಟಿ ರೂ.ಗಳಷ್ಟು ಆಗಿತ್ತು. 2018-19ಕ್ಕೆ ಎರಡು ಲಕ್ಷ ಒಂಬತ್ತು ಸಾವಿರದ ನೂರಾ ಎಂಬತ್ತೊಂದು ಕೋಟಿ ರೂ.ಗಳಾಗಿದೆ. ಒಂದು ಲಕ್ಷ ಏಳು ಸಾವಿರ ಕೋಟಿ ರೂ.ಗಳಗಿಂತ ಹೆಚ್ಚು ಜಾಸ್ತಿಯಾಗಿದೆ. ಬಜೆಟ್ ಗಾತ್ರವು ಬೆಳವಣಿಗೆಯಾಗಿದೆ, ಅಭಿವೃದ್ಧಿಯೂ ಆಗಿದೆ. ಎಲ್ಲ ಆದ್ಯತಾ ವಲಯಗಳಿಗೆ ಹಣವನ್ನು ಒದಗಿಸಲಾಗಿದೆ.

ನೀರಾವರಿಗಾಗಿ ಹಿಂದಿನ ಸರ್ಕಾರದಲ್ಲಿ ಕೇವಲ 18,000 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿತ್ತು. ನಮ್ಮ ಸರ್ಕಾರದಲ್ಲಿ 58,393 ಕೋಟಿ ರೂ.ಗಳನ್ನು allocate ಮಾಡಿ, ಅದರಲ್ಲಿ 44,542 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಎಸ್.ಸಿ.ಪಿ/ಟಿಎಸ್‌ಪಿ ಯಲ್ಲಿ ಹಿಂದಿನ ಸರ್ಕಾರದವರು 21,000 ಅಥವಾ 22,000 ಕೋಟಿ ರೂ.ಗಳನ್ನು ಖರ್ಚು ಮಾಡಿದರು. ನಮ್ಮ ಕಾಲದಲ್ಲಿ ಜನಸಂಖ್ಯೆಗೆ ಅನುಗುಣವಾಗಿ 88,395 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ.

ಲೋಕೋಪಯೋಗಿ ಇಲಾಖೆ, ಗ್ರಾಮೀಣಾಭಿವೃದ್ಧಿ ಇಲಾಖೆ, ಇಂಧನ ಇಲಾಖೆ, ನೀರಾವರಿ ಇಲಾಖೆ ಹೀಗೆ ಎಲ್ಲಾ ಇಲಾಖೆಗಳಲ್ಲಿ ಬೆಳವಣಿಗೆಯಾಗಿದೆ. ಕುಡಿಯುವ ನೀರನ್ನು ಒದಗಿಸಲಾಗಿದೆ.

ತೋಟಗಾರಿಕಾ ಇಲಾಖೆಗೆ 'the best State in Horticulture' ಎನ್ನುವ ಪ್ರಶಸ್ತಿ ಬಂದಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಪ್ರಶಸ್ತಿಗಳು ಬಂದಿವೆ. ಸಾರಿಗೆ ಇಲಾಖೆಯಲ್ಲಿ 205 ಪ್ರಶಸ್ತಿಗಳು ಬಂದಿವೆ. ಗ್ರಾಮೀಣಾಭಿವೃದ್ಧಿ ಇಲಾಖೆಗೆ 4 ಪ್ರಶಸ್ತಿಗಳು ನಾಲ್ಕು ವರ್ಷ ನಿರಂತರವಾಗಿ ಬಂದಿವೆ.

2013ರಲ್ಲಿ ಬಂಡವಾಳ ಹೂಡಿಕೆಯಲ್ಲಿ ನಾವು 11ನೇ ಸ್ಥಾನದಲ್ಲಿದ್ದೆವು. ಕಳೆದ ವರ್ಷ ಮತ್ತು ಈ ವರ್ಷ ನಾವು ದೇಶದಲ್ಲಿಯೇ ಮೊದಲನೇ ಸ್ಥಾನದಲ್ಲಿದ್ದೇವೆ. ರಾಜ್ಯದ ಬೆಳವಣಿಗೆಯಾಗಿದೆ, ಬಡವರ ರಕ್ಷಣೆಯೂ ಆಗಿದೆ. ಜನರಲ್ಲಿ ಸಾಮಾಜಿಕ ಮತ್ತು ಆರ್ಥಿಕ ಶಕ್ತಿಯನ್ನು ತುಂಬಿದ್ದೇವೆ.

ರೈತರ ಸಾಲ ಮನ್ನಾ ಮಾಡಲಾಗಿದೆ. ಕೃಷಿ ಹೊಂಡಗಳನ್ನು ನಿರ್ಮಿಸಲಾಗಿದೆ. ಬಡ್ಡಿ ರಹಿತವಾಗಿ 3 ಲಕ್ಷದವರೆಗೆ ಸಾಲವನ್ನು ಪಡೆಯಲು ಅನುಕೂಲ ಮಾಡಿಕೊಟ್ಟಿದ್ದೇವೆ. ಆತ್ಮಹತ್ಯೆ ಮಾಡಿಕೊಂಡವರಿಗೆ 5 ಲಕ್ಷ ರೂ.ಗಳ ಪರಿಹಾರ, ಅವರ ಕುಟುಂಬದವರಿಗೆ 2000 ರೂ.ಗಳ ಮಾಶಾಸನ, ಅವರ ಮಕ್ಕಳಿಗೆ ವಿದ್ಯಾಭ್ಯಾಸ, ಆರೋಗ್ಯ ರಕ್ಷಣೆ ಕೊಡಲಾಗುತ್ತಿದೆ. ಇದರ ಜೊತೆಗೆ "ಅನ್ನಭಾಗ್ಯ, ಕ್ಷೀರಭಾಗ್ಯ, ಪಶುಭಾಗ್ಯ, ಶಾದಿ ಭಾಗ್ಯ, ಮೈತ್ರಿ, ಮನಸ್ವಿನಿ, ವಿದ್ಯಾಸಿರಿ, ಕ್ಷೀರಧಾರೆ, ಅನಿಲ ಭಾಗ್ಯ, ಇಂದಿರಾ ಕ್ಯಾಂಟೀನ್, ಆರೋಗ್ಯ ಭಾಗ್ಯ, ಮಾತೃಪೂರ್ಣ" ಈ ಯೋಜನೆಗಳನ್ನು ಜಾರಿ ಮಾಡಿದ್ದೇವೆ. ಇನ್ನು ಅನೇಕ ಹೊಸ ಕಾರ್ಯಕ್ರಮಗಳನ್ನು ಜಾರಿ ಮಾಡಿದ್ದೇವೆ. ಇವತ್ತು ಯಾರೂ ಹಸಿವಿನಿಂದ ಮಲಗುವ ಹಾಗೆ ಇಲ್ಲ, ಮಕ್ಕಳು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪೌಷ್ಠಿಕಾಂಶವಿಲ್ಲದೆ ನರಳುವ ಹಾಗೆ ಇಲ್ಲ. ಮಕ್ಕಳಿಗೆ ಉಚಿತವಾಗಿ ಪಠ್ಯಪುಸ್ತಕಗಳನ್ನು ಕೊಡಲಾಗುತ್ತಿದೆ, ಸಮವಸ್ತ್ರ, ಬಿಸಿಯೂಟ, ಬಿಸಿ ಹಾಲು, ಮೊಟ್ಟೆ, ಶೂ, ಸಾಕ್ಸ್ ಇಷ್ಟೆಲ್ಲಾ ಕೊಡಲಾಗುತ್ತಿದೆ. ಇದು ಅಲ್ಲದೆ ಮುಂದಿನ ವರ್ಷಕ್ಕೆ ಎಲ್ಲಾ ಮಕ್ಕಳಿಗೆ ಉಚಿತ ಬಸ್‌ಪಾಸ್. ಹೆಣ್ಣು ಮಕ್ಕಳಿಗೆ ಕಾಲೇಜು ಶಿಕ್ಷಣದಿಂದ Post Graduation ವರೆಗೆ ಉಚಿತ ಶಿಕ್ಷಣ ನೀಡಲಾಗುವುದು.

ಒಣಭೂಮಿ ವ್ಯವಸಾಯ ಮಾಡುವ ರೈತರಿಗೆ ಒಂದು ಹೆಕ್ಟೇರ್‌ಗೆ ಕನಿಷ್ಠ 5000 ರಿಂದ 10,000 ರೂ.ಗಳವರೆಗೆ " ರೈತ ಬೆಳಕು" ಕಾರ್ಯಕ್ರಮದ ಮೂಲಕ ಸುಮಾರು ಮೂರುವರೆ ಸಾವಿರ ಕೋಟಿ ರೂ.ಗಳನ್ನು ಈ ವರ್ಷದ ಆಯವ್ಯಯದಲ್ಲಿ ಮೀಸಲಿಡಲಾಗಿದೆ.

**(267) 23–02–2018 (04–40) BSD-RN**

ಶ್ರೀ ಸಿದ್ದರಾಮಯ್ಯ (ಮುಂದು)

ಹಿಂದೆ ಯಾವ ಸರ್ಕಾರವೂ ಈ ಕೆಲಸಗಳನ್ನು ಮಾಡಿರಲಿಲ್ಲ. ಇಷ್ಟೊಂದು ಕಾರ್ಯಕ್ರಮಗಳನ್ನು ಮಾಡಿದ್ದು, ಮಾನ್ಯ ಹೊರಟ್ಟಿಯವರು ಆತ್ಮವಂಚನೆ ಮಾಡಿಕೊಳ್ಳದೇ ಹೇಳಿದರೆ ನಾನು ಹೇಳಿದಂತೆ ಹೇಳುತ್ತಾರೆ. ಮಾನ್ಯ ಯತ್ನಾಳ್ ರವರು ಆತ್ಮವಂಚನೆ ಮಾಡಿಕೊಳ್ಳದೇ ಹೇಳಿಬಿಡುತ್ತಾರೆ. ಇಷ್ಟೊಂದು ಕೆಲಸ ಯಾವ ಕಾಲದಲ್ಲಿಯೂ ಮಾಡಿರಲಿಲ್ಲ. ಈಗ ಹೊರಗೆ ಹೋಗಿ ಸ್ವಲ್ಪ ರಸ್ತೆಗಳನ್ನು ನೋಡಿಕೊಂಡು ಬರಲಿ. ಬೆಂಗಳೂರು ನಗರಕ್ಕೆ 110 ಹಳ್ಳಿಗಳನ್ನು ಸೇರಿಸಿಬಿಟ್ಟಿದ್ದರು. ಮಾನ್ಯ ಹೊರಟ್ಟಿಯವರು ಆಗ ಸಚಿವರಾಗಿದ್ದರು. ಆ ಹಳ್ಳಿಗಳಿಗೆ ಕುಡಿಯುವ ನೀರು, ರಸ್ತೆ ಮತ್ತು ಒಳಚರಂಡಿ ವ್ಯವಸ್ಥೆ ಯಾವುದನ್ನೂ ಕೊಡಲಿಲ್ಲ. ಮಾನ್ಯ ಶರವಣ ರವರು ಬಸವನಗುಡಿಯಲ್ಲಿ ವಾಸವಾಗಿದ್ದಾರೆ, ಅವರು ಹಳೆಯ ಬೆಂಗಳೂರಿನಲ್ಲಿ ವಾಸವಾಗಿರುವುದರಿಂದ ಅವರಿಗೆ ಗೊತ್ತಾಗುವುದಿಲ್ಲ. ಅವರು ಬಸವನಗುಡಿ ಬಿಟ್ಟು ಆಚೆಗೆ ಹೋಗುವುದಿಲ್ಲ. ಚಿನ್ನದಂಗಡಿ ಮನೆ – ಚಿನ್ನದಂಗಡಿ–ಮನೆಗೆ ಮಾತ್ರ ಓಡಾಡುತ್ತಾರೆ.

ಶ್ರೀ ಟಿ.ಎ. ಶರವಣಃ– ಮಾನ್ಯ ಸಭಾಪತಿಯವರೇ, ಅವರ ತಪ್ಪು ಮುಚ್ಚಿಕೊಳ್ಳಲು ಇಷ್ಟು ಮಾತ್ರವೇ ಅವರು ಹೇಳಬೇಕು.

ಶ್ರೀ ಸಿದ್ದರಾಮಯ್ಯಃ– ಮಾನ್ಯ ಸಭಾಪತಿಯವರೇ, ಸಾಮಾನ್ಯವಾಗಿ ಆರ್ಯ–ವೈಶ್ಯರೆಲ್ಲಾ ಇದೇ ರೀತಿ ಇರುತ್ತಾರೆ. ನಾನು ಮೈಸೂರಿನ ಇರ್ವಿನ್ ರಸ್ತೆ, ಅಶೋಕ ರಸ್ತೆ ಮತ್ತು ಸಯ್ಯಾಜಿ ರಾವ್ ರಸ್ತೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಈ ಜನಾಂಗದವರು ಇದ್ದರು. ಮಾನ್ಯ ಶರವಣ ರವರು ಮೈಸೂರನ್ನು ನೋಡಿದ್ದಾರೆಯೇ?

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಟಿ.ಎ. ಶರವಣಃ- ಮಾನ್ಯ ಸಭಾಪತಿಯವರೇ, ಅವರು ಹೇಳುವುದನ್ನು ನಾನು ಒಪ್ಪುತ್ತೇನೆ. ಆದರೆ ನಾನು ಇರುವುದು ಯಾರ ಜೊತೆಯಲ್ಲಿ? ಇಡೀ ರಾಜ್ಯವನ್ನು ಸಂಚಾರ ಮಾಡುವ ಮಾನ್ಯ ದೇವೇಗೌಡರ ಜೊತೆಯಲ್ಲಿರುವ ಶೆಟ್ಟಿಗೌಡ ಆಗಿದ್ದೇನೆ.

ಶ್ರೀ ಸಿದ್ಧರಾಮಯ್ಯಃ- ಹಾಗಾದರೆ ಅವರು ಶೆಟ್ಟಿಗೌಡರೇ? ಅಂದರೆ ಆರ್ಯ-ವೈಶ್ಯರಿಗೆ ನಾಮ ಹಾಕಿದರು.

ಶ್ರೀ ಟಿ.ಎ. ಶರವಣಃ- ನಾನು ಸೇವೆ ಮಾಡುವುದಕ್ಕೆ ಬಂದಿದ್ದೇನೆ.

ಶ್ರೀ ಸಿದ್ಧರಾಮಯ್ಯಃ- ಮಾನ್ಯ ಸಭಾಪತಿಯವರೇ, ನಮ್ಮ ಹುಣಸೂರಿನಲ್ಲಿ ಒಬ್ಬ ಶೆಟ್ಟಿಗೌಡ ಎಂದು ಇದ್ದನು. ಈಗ ಆತ ಸತ್ತು ಹೋಗಿದ್ದಾನೆ. ನಮ್ಮ ಪಾರ್ಟಿಯ ಕಾರ್ಯಕರ್ತನೇ ಆಗಿದ್ದನು. ಮಾನ್ಯ ಶರವಣ ರವರು ಶೆಟ್ಟಿಗೌಡ ಯಾವಾಗ ಆದರು? ಇರಲಿ, ಅವರು ಏನಾದರೂ ಆಗಲಿ, ಸಂತೋಷ. ಮಾನ್ಯ ಸಭಾಪತಿಯವರೇ, ಇಷ್ಟೆಲ್ಲಾ ಕೆಲಸ ಮಾಡಿ, ಆ ಕೆಲಸಗಳನ್ನು ಈ ವರ್ಷವೂ ಮುಂದುವರೆಸಿ, ಇದರ ಜೊತೆಗೆ ಹೊಸ ಕಾರ್ಯಕ್ರಮಗಳನ್ನು ಮಾಡಿದ್ದೇವೆ. ನೀರಾವರಿ, ಇಂಧನ, ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ, ಸಮಾಜ ಕಲ್ಯಾಣ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ , ಕೃಷಿ ಇಲಾಖೆ ಸೇರಿದಂತೆ ಎಲ್ಲಾ ಇಲಾಖೆಗಳಿಗೆ ಹಣವನ್ನು ಕಡಿತಗೊಳಿಸಿಲ್ಲ. ಎಲ್ಲಾ ಕಾರ್ಯಕ್ರಮಗಳು ಮುಂದುವರೆಯುತ್ತಿವೆ. ಬೆಂಗಳೂರಿನಲ್ಲಿ 198 ಇಂದಿರಾ ಕ್ಯಾಂಟೀನ್‌ಗಳನ್ನು ಮಾಡಿದ್ದು, ಈಗ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ 247 ಅಥವಾ 250 ಇಂದಿರಾ ಕ್ಯಾಂಟೀನ್‌ಗಳನ್ನು ಮಾಡುತ್ತಿದ್ದೇವೆ. ಕರ್ನಾಟಕದಲ್ಲಿ 15 ಲಕ್ಷ ಮನೆಗಳನ್ನು ಕಟ್ಟುತ್ತೇವೆ ಎಂದು ಹೇಳಿದ್ದು, ಈಗಾಗಲೇ 14.10 ಲಕ್ಷ ಮನೆಗಳನ್ನು ಕಟ್ಟಿದ್ದೇವೆ. ಮಾರ್ಚ್ ಒಳಗೆ 15 ಲಕ್ಷಕ್ಕಿಂತ ಹೆಚ್ಚು ಮನೆಗಳನ್ನು ಕಟ್ಟುತ್ತೇವೆ. ಅದರಂತೆ ನುಡಿದಂತೆ ನಡೆದಿದ್ದೇವೆ. ನಮ್ಮ ಪ್ರನಾಳಿಕೆಯಲ್ಲಿ ಹೇಳಿದ್ದ ಭರವಸೆಗಳನ್ನು ಬಜೆಟ್ ಮೂಲಕ ಕಾರ್ಯಗತ ಮಾಡಿದ್ದೇವೆ. ಇಷ್ಟು ಮಾಡಿ ಈ ವರ್ಷ ಸರ್ಕಾರಿ ನೌಕರರಿಗೆ 6ನೇ ವೇತನ ಆಯೋಗ ಮಾಡಿದ್ದೇವೆ. ನಮ್ಮ ರಾಜ್ಯದಲ್ಲಿ 6-7 ವರ್ಷಗಳಿಗೆ ಒಮ್ಮೆ ಆಯೋಗವನ್ನು ಮಾಡುತ್ತೇವೆ. ಅದೇ ರೀತಿ ಕೇಂದ್ರ ಸರ್ಕಾರದಲ್ಲಿ 10 ವರ್ಷಗಳಿಗೊಮ್ಮೆ ವೇತನ ಪರಿಷ್ಕರಣೆಯ ಆಯೋಗವನ್ನು ಮಾಡುತ್ತಾರೆ. 2012ರಲ್ಲಿ ವೇತನ ಆಯೋಗದ ಶಿಫಾರಸ್ಸನ್ನು ಜಾರಿಗೆ ಕೊಟ್ಟಿದ್ದು, 2018ಕ್ಕೆ ಮಾಡಿದ್ದೇವೆ. ಸರ್ಕಾರಿ ನೌಕರರ ಒತ್ತಡ ಇತ್ತು. ಅದಕ್ಕೆ ಶ್ರೀ ಶ್ರೀನಿವಾಸ ಮೂರ್ತಿಯವರ ನೇತೃತ್ವದಲ್ಲಿ ಒಂದು ಆಯೋಗವನ್ನು ಮಾಡಿದ್ದೇವೆ. ಅವರು ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯಲ್ಲಿ 30% ಹೆಚ್ಚು ಮಾಡಬೇಕೆಂದು ಹೇಳಿದ್ದು, ಅದನ್ನು ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿದ್ದೇವೆ. ಇದು 1/4/2018ರಿಂದ ಜಾರಿಗೆ ಬರುತ್ತದೆ. ಅದಕ್ಕೆ ಸುಮಾರು ರೂ.10,508 ಕೋಟಿಗಳಾಗುತ್ತದೆ. ಇದರ ಜೊತೆಗೆ ಜೂನ್‌ನಲ್ಲಿ ಸಾಲ ಮನ್ನಾ ಮಾಡಿದ್ದು, ಬಜೆಟ್‌ನಲ್ಲಿ ಪ್ರಾವಿಜನ್ ಮಾಡಿಕೊಂಡಿರಲಿಲ್ಲ. ರೂ.8,165 ಕೋಟಿ ಸಾಲ ಮನ್ನಾ ಮಾಡಿದ್ದೇವೆ. 22,27,506 ರೈತರಿಗೆ ಮನ್ನಾ ಮಾಡಿದ್ದೇವೆ. ರಾಷ್ಟ್ರೀಕೃತ ಮತ್ತು ಶೆಡ್ಯೂಲ್ ಬ್ಯಾಂಕುಗಳಿಂದ ಕೊಟ್ಟಿರುವ ಸಾಲ ಮನ್ನಾ ಮಾಡಬೇಕೆಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಪ್ರಧಾನ ಮಂತ್ರಿಗಳಿಗೆ ಒತ್ತಾಯ ಮಾಡಲು ನಿಯೋಗವನ್ನು ಕರೆದುಕೊಂಡು ಹೋಗಿದ್ದೆನು. ಅವರು ಏನು ಮಾಡಿದರೂ ಸಾಲ ಮನ್ನಾ ಮಾಡಲಿಲ್ಲ. ನಾನು ಸಾಲ ಮನ್ನಾ ಮಾಡಿದ ನಂತರ ಗೇಲಿ ಮಾಡಿದರು. ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲಕ ಮಂತ್ರಿಗಳಾದ ಶ್ರೀ ಜವಡೇಕರ್ ರವರು ' ಮಾನ್ಯ ಸಿದ್ಧರಾಮಯ್ಯನವರು ರೂ.8,165 ಕೋಟಿ ಸಾಲ ಮನ್ನಾ ಮಾಡಿ, ಲಾಲಿಪಪ್ ಕೊಟ್ಟಿದ್ದಾರೆ' ಎಂದು ಹೇಳಿದರು. ಇದು ರೈತರಿಗೆ ಅವಮಾನ. ರೈತರ ಸಾಲ ಮನ್ನಾ ಮಾಡಲು ಮಾನ್ಯ ಅರುಣ್ ಜೇಟ್ಲಿರವರು ' ಒಂದು ಪೈಸೆ ಕೊಡುವುದಿಲ್ಲ' ಎಂದು ಹೇಳಿದರು. ರಿಸರ್ವ್ ಬ್ಯಾಂಕ್‌ನ ಶ್ರೀ ಊರ್ಜಿತ್ ಪಟೇಲ್‌ರವರು ' ಸಾಲ ಮನ್ನಾ ಮಾಡಿದರೆ ದೇಶದ ಆರ್ಥಿಕ ಪರಿಸ್ಥಿತಿ ಹಾಳಾಗಿಬಿಡುತ್ತದೆ' ಎಂದು ಹೇಳಿದರು. ಆದರೆ ಕೈಗಾರಿಕೋದ್ಯಮಿಗಳಿಗೆ ಸಾಲ ಮನ್ನಾ ಮಾಡಿದರು. NPA (Non Performing Assets) ಎಂಬ ಪದವನ್ನು ಬಳಸಿ, ಆ ರೀತಿ ಡಿಕ್ಲೇರ್ ಮಾಡಿಬಿಡುತ್ತಾರೆ. ಈ ರೀತಿ ಹೇಳಿದರೆ ಯಾರಿಗೂ ಗೊತ್ತಾಗುವುದಿಲ್ಲವಲ್ಲ!

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಃ- ಮಾನ್ಯ ಸಭಾಪತಿಯವರೇ, ಅವರು ' ಸಾಲ ಮನ್ನಾ ಎನ್ನುವ ಕೆಟ್ಟ ಆರ್ಥಿಕ ನಿರ್ಧಾರ ಎಂದಿದ್ದರೂ ಕಾರ್ಪೋರೇಟ್ ಕಂಪನಿಗಳಿಗೆ ಸುಮಾರು ರೂ.15 ಲಕ್ಷ ಕೋಟಿಗಳಿಗಿಂತ ಹೆಚ್ಚು ಸಾಲ ಮನ್ನಾ ಮತ್ತು ತೆರಿಗೆ ವಿನಾಯಿತಿ ಮಾಡಿದ್ದಾರೆ' ಎಂದು ಬಂದಿದೆ. ನಾನು ಮಾತನಾಡಲು ಅವಕಾಶ ಕೊಡಲಿಲ್ಲ.

ಶ್ರೀ ಸಿದ್ಧರಾಮಯ್ಯಃ- 2010ರ ಡಿಸೆಂಬರ್ ತಿಂಗಳಲ್ಲಿ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಯಡಿಯೂರಪ್ಪನವರಿಗೆ ಮಾನ್ಯ ಉಗ್ರಪ್ಪನವರು ಇದೇ ಸದನದಲ್ಲಿ ರೈತರ ಸಾಲವನ್ನು ಮನ್ನಾ ಮಾಡಿ ಎಂದು ಕೇಳಿದಾಗ ' ಸಾಲ ಮನ್ನಾ ಮಾಡಲು ಹಣವನ್ನು ಎಲ್ಲಿಂದ ತರಲಿ? ನಾನೇನೂ ನೋಟ್ ಪ್ರಿಂಟ್ ಮಾಡುವ ಮಿಷನ್ ಇಟ್ಟುಕೊಂಡಿದ್ದೇನೆಯೇ?' ಎಂದು ಇದೇ ಜಾಗದಲ್ಲಿ ನಿಂತು ಉತ್ತರ ಹೇಳಿದ್ದಾರೆ. ಆದರೆ ಈಗ ವೀರಾವೇಶದಿಂದ ರೈತರ ಸಾಲ ಮನ್ನಾ ಮಾಡಿ ಎಂದು ಕೇಳುತ್ತಾರೆ. ಇದು ಯಾವ ರೀತಿ ಎಂದು ನನಗೆ ಗೊತ್ತಿಲ್ಲ. ಇದಕ್ಕೆ ಏನೆಂದು ಹೇಳುವುದು? ಇದಕ್ಕೆ Hypocrisy ಎನ್ನುತ್ತಾರೆಯೇ? ಇವತ್ತು ರೈತರಿಗೆ , ಬಡವರಿಗೆ, ದಲಿತರಿಗೆ, ಮಹಿಳೆರಿಗೆ, ಅಲ್ಪಸಂಖ್ಯಾತರಿಗೆ, ವಿದ್ಯಾರ್ಥಿಗಳಿಗೆ ಅನೇಕ ಅನುಕೂಲಗಳನ್ನು ಮಾಡಿದ್ದೇವೆ. ಈ ತಿಂಗಳ 27, 28ನೇ ತಾರೀಖುಗಳಂದು 1.50 ಲಕ್ಷ ವಿದ್ಯಾರ್ಥಿಗಳಿಗೆ ಲ್ಯಾಪ್‌ಟ್ಯಾಪ್‌ಗಳನ್ನು ಉಚಿತವಾಗಿ ಕೊಡುತ್ತಿದ್ದೇವೆ. ಈಗಾಗಲೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ಕೊಟ್ಟಿದ್ದೇವೆ. ಅನಿಲ ಭಾಗ್ಯವನ್ನು ಯೋಜನೆಯಲ್ಲಿ 30 ಲಕ್ಷ ಫಲಾನುಭವಿಗಳಿಗೆ irrespective of caste, creed and religion ಒದಗಿಸುತ್ತಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

268/23.02.2018/4.50/ಹೆಚ್‌ವಿಃವಿಕೆ

**ಶ್ರೀ ಸಿದ್ಧರಾಮಯ್ಯ(ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, ಒಂದು ಕೋಟಿ 40 ಲಕ್ಷ ಕುಟುಂಬಗಳಿಗೆ health coverage ಅನ್ನು ನೀಡಲಾಗಿದೆ. It's a unique programme in the Country. ಇಷ್ಟೆಲ್ಲ ಹೊಸ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಅನುಷ್ಠಾನಕ್ಕೆ ತಂದಿದೆ. ಈ ಎಲ್ಲ ಕಾರ್ಯಕ್ರಮಗಳು ಆಯವ್ಯಯದಲ್ಲಿ ಮುಂದುವರೆದಿವೆ. 'ಅನಿಲ ಭಾಗ್ಯ' 'health coverage', 'ವಿದ್ಯಾರ್ಥಿಗಳಿಗೆ ಬಸ್‌ನಲ್ಲಿ ಉಚಿತ ಪ್ರಯಾಣ, ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ, ರೈತರ ವರಮಾನಕ್ಕೆ ಬೆಂಬಲ ನೀಡುವುದು ಇವೆಲ್ಲವೂ ನಮ್ಮ ಸರ್ಕಾರದ ಹೊಸ ಕಾರ್ಯಕ್ರಮಗಳಾಗಿವೆ. ಇದರ ಜೊತೆಗೆ ವಿತ್ತೀಯ ಶಿಸ್ತನ್ನು ಕಾಪಾಡಿಕೊಂಡಿದ್ದೇವೆ. ಪ್ರತಿ ವರ್ಷವೂ ತೆರಿಗೆ ಬೆಳವಣಿಗೆ ಶೇಕಡಾ 10ರಷ್ಟು, ಶೇಕಡಾ 12ರಷ್ಟು, ಶೇಕಡಾ 14ರಷ್ಟು ಮತ್ತು ಶೇಕಡಾ 15ರಷ್ಟು ಕಂಡು ಬಂದಿದೆ. ಕರ್ನಾಟಕವನ್ನು ಆರ್ಥಿಕವಾಗಿ ಅಭಿವೃದ್ಧಿಗೊಳಿಸಿದ್ದೇವೆ, ದುರ್ಬಲ ವರ್ಗದವರಿಗೆ ರಕ್ಷಣೆಯನ್ನು ಕೊಟ್ಟಿದ್ದೇವೆ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಶಕ್ತಿ ಕೊಟ್ಟಿದ್ದೇವೆ. ಕರ್ನಾಟಕ ರಾಜ್ಯ ಇಡೀ ದೇಶದಲ್ಲಿ ಮುಂಚೂಣಿಯಲ್ಲಿರಬೇಕೆನ್ನುವ ಪ್ರಯತ್ನದಲ್ಲಿ ದೃಢವಾಗಿರುವ ಹೆಜ್ಜೆಗಳನ್ನಿಟ್ಟಿದ್ದೇವೆ. ಮುಂದಿನ ದಿನಗಳಲ್ಲಿ 'ನವ ಕರ್ನಾಟಕ' ನಿರ್ಮಾಣವಾಗಬೇಕು. ಇಡೀ ದೇಶದಲ್ಲಿ ಎಲ್ಲ ಕ್ಷೇತ್ರಗಳಲ್ಲಿ ನಮ್ಮ ರಾಜ್ಯ ನಂ.1 ಸ್ಥಾನದಲ್ಲಿರಬೇಕು ಎನ್ನುವ ನಿಟ್ಟಿನಲ್ಲಿ ಈ ಆಯವ್ಯಯ ಪೂರಕವಾಗಿದೆ. ಈ Budget sanctity ಇಲ್ಲ ಎಂದ ಕೂಡಿಲ್ಲವೆಂದು ಹೇಳಿದ್ದಾರೆ. Sanctity ಇರುವ ಬಜೆಟ್ ಯಾವುದು, sanctity ಇಲ್ಲದ ಬಜೆಟ್ ಯಾವುದು, ಯಾವಾಗ ಬಜೆಟ್ ಮಂಡನೆ ಮಾಡಿದರೆ sanctity ಬರುತ್ತದೆ ಎಂದು ಸಂವಿಧಾನದಲ್ಲಿ ಹೇಳಿದ್ದಾರೆಯೇ? ಯಾರಿಗೆ ಸಂವಿಧಾನ ಗೊತ್ತಿಲ್ಲ ಅವರು ಈ ರೀತಿ ಮಾತನಾಡುತ್ತಾರೆ. ಮಾನ್ಯ ಜಗದೀಶ್ ಶೆಟ್ಟರ್‌ರವರು 2013ರಲ್ಲಿ ಆಯವ್ಯಯವನ್ನು ಮಂಡನೆ ಮಾಡಿದ್ದಾರೆ. ಆಗ ಅವರು ಮಂಡನೆ ಮಾಡಿರುವ ಬಜೆಟ್‌ಗೆ sanctity ಇತ್ತು, sanctity ಇಲ್ಲವೆಂದು ಹೇಳಬೇಕೆ? ಸುಮ್ಮನೆ ಏನೋ ಮಾತನಾಡುತ್ತಾರೆ.

ಸನ್ಮಾನ್ಯ ಸಭಾಪತಿಯವರೇ, ಬಸವ ಕಲ್ಯಾಣದಲ್ಲಿ 'ಅನುಭವ ಮಂಟಪ' ಸ್ಮಾರಕವನ್ನು ಕಟ್ಟುವುದಕ್ಕೆ ಗೋ.ರು.ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಲಾಗಿತ್ತು. ಅನುಭವ ಮಂಟಪ ಆ ಕಾಲಕ್ಕೆ Parliament ರೀತಿಯಲ್ಲಿ ಇತ್ತು. ಜಗತ್ತಿಗೆ ಪ್ರಜಾಪ್ರಭುತ್ವ ಕಲ್ಪನೆಯನ್ನು ಕೊಟ್ಟವರು ಬಸವಣ್ಣನವರು. ಅವರ ಕಾರ್ಯಕ್ಷೇತ್ರವಾದ ಬಸವ ಕಲ್ಯಾಣದಲ್ಲಿ ಆ ಸ್ಮಾರಕವನ್ನು ಕಟ್ಟುವ ಕಾರ್ಯವನ್ನು ಮುಂದಿನ ವರ್ಷದಿಂದ ಪ್ರಾರಂಭ ಮಾಡಲಾಗುತ್ತದೆ. ಇದನ್ನು ಆಯವ್ಯಯದಲ್ಲಿ ಉಲ್ಲೇಖ ಮಾಡುವುದಕ್ಕೆ ಸಾಧ್ಯವಾಗಿರಲಿಲ್ಲ. ಆದ್ದರಿಂದ ಇದನ್ನು ಸದನದಲ್ಲಿ ಹೇಳುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ಮಾನ್ಯ ಸಭಾಪತಿಯವರೇ, ಪ್ರತಿ ವರ್ಷ ಆಯವ್ಯಯವನ್ನು ಮಂಡನೆ ಮಾಡಿದಂತಹ ಸಂದರ್ಭದಲ್ಲಿ ಪ್ರತಿಯೊಂದು ಇಲಾಖೆಯ ಬೇಡಿಕೆ ಮೇಲೆ ಚರ್ಚೆ ಮಾಡಿ ಅದಕ್ಕೆ ಒಪ್ಪಿಗೆ ಕೊಡಬೇಕಾಗುತ್ತದೆ. ಆದರೆ, ಈಗ ನಾವು 2,09,00,181 ಕೋಟಿ ರೂಪಾಯಿಗಳ ಆಯವ್ಯಯ ಗಾತ್ರಕ್ಕೆ ಸದನದ ಒಪ್ಪಿಗೆಯನ್ನು ಕೇಳುತ್ತಿಲ್ಲ, ಮುಂದಿನ ನಾಲ್ಕು ತಿಂಗಳುಗಳಿಗೆ ಅಂದರೆ, ಏಪ್ರಿಲ್, ಮೇ, ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ ಸರ್ಕಾರದ ಕಾರ್ಯಕ್ರಮಗಳಿಗೆ ವೆಚ್ಚ ಮಾಡಲು ಸದನದ ಒಪ್ಪಿಗೆ ಬೇಕಾಗುತ್ತದೆ. ಅದನ್ನು ಪಡೆದುಕೊಳ್ಳುವುದಕ್ಕಾಗಿಯೇ 'ಧನ ವಿನಿಯೋಗ ಮಸೂದೆ'ಯನ್ನು ಮಂಡನೆ ಮಾಡಲಾಗಿದೆ. ಅದಕ್ಕೆ ಈ ಸದನ ಸರ್ವಾನುಮತದಿಂದ ಒಪ್ಪಿಗೆ ಕೊಡಬೇಕೆಂದು ಮಾನ್ಯ ಸದಸ್ಯರಲ್ಲಿ ಮನವಿ ಮಾಡುತ್ತಿದ್ದೇನೆ. ಆಯವ್ಯಯದ ಮೇಲಿನ ಭಾಷಣವನ್ನು ನಾನು ಸ್ವಲ್ಪ ಮೊಟಕು ಮಾಡಿದ್ದೇನೆ.

**ಸಭಾಪತಿಯವರು:-** ಸ್ವಲ್ಪವೇ ಹೇಳಿ ಮುಗಿಸುತ್ತೇನೆಂದು ತಾವು ಹೇಳಿದ್ದೀರಿ.

**ಶ್ರೀ ಸಿದ್ದರಾಮಯ್ಯ:-** ಸನ್ಮಾನ್ಯ ಸಭಾಪತಿಯವರೇ, ಸ್ವಲ್ಪ ಮಾತ್ರವೇ ಹೇಳಿ ಮುಗಿಸಿದ್ದೇನೆ. ಇಲ್ಲದಿದ್ದರೆ ಬಜೆಟ್ ಮೇಲಿನ ಭಾಷಣಕ್ಕೆ ಸುಮಾರು 2-3 ಗಂಟೆಗಳ ಕಾಲಾವಕಾಶ ಬೇಕಾಗುತ್ತಿತ್ತು. ಭಾರತೀಯ ಜನತಾ ಪಕ್ಷದ ಸದಸ್ಯರು ಸಹ ಈ ಸದನದಲ್ಲಿ ಇರಬೇಕಾಗಿತ್ತು ಅವರು ಏಕೆ ಸಭಾತ್ಯಾಗ ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಅವರಿಗೆ ಒಳ್ಳೆಯದನ್ನು ಕೇಳುವ ಮನಸ್ಸಿಲ್ಲ ಮತ್ತು ಸತ್ಯ ಸಂಗತಿಯನ್ನು ಕೇಳುವುದು ಅವರಿಗೆ ಇಷ್ಟವಾಗುವುದಿಲ್ಲ. ಸತ್ಯ ಯಾವಾಗಲೂ ಕಹಿಯಾಗಿರುತ್ತದೆ. ಸತ್ಯ ಸಂಗತಿಯನ್ನು ಕೇಳಬಾರದೆಂದು ಭಾರತೀಯ ಜನತಾ ಪಕ್ಷದ ಸದಸ್ಯರು ತಕರಾರು ತೆಗೆದು ಸದನದಿಂದ ಹೊರಗೆ ಹೋಗಿದ್ದಾರೆ. ಕೆಳ ಮನೆಯಲ್ಲಿಯೂ ಭಾರತೀಯ ಜನತಾ ಪಕ್ಷದ ಸದಸ್ಯರು ಇದೇ ರೀತಿ ಮಾಡಿದರು. ಜೆ.ಡಿ.(ಎಸ್) ಪಕ್ಷದವರು ಮಾತ್ರ ಕುಳಿತುಕೊಂಡಿದ್ದಾರೆ. ಅವರುಗಳು ಎದ್ದು ಹೋಗುವಂತಿಲ್ಲ.

**ಶ್ರೀ ಟಿ.ಎ.ಶರವಣ:-** ಸನ್ಮಾನ್ಯ ಸಭಾಪತಿಯವರೇ, ನಮ್ಮನ್ನು walkout ಮಾಡಿ ಎಂದು ಕೇಳಿಕೊಂಡಿದ್ದರು, ಅದಕ್ಕೆ ಒಪ್ಪಿಕೊಳ್ಳದೇ ನಾವು ಸದನದಲ್ಲಿಯೇ ಕುಳಿತುಕೊಂಡಿದ್ದೇವೆ. ಹೋಗಿ ಎಂದು ಹೇಳಿದರು. ನಾವು ಹೋಗಲಿಲ್ಲ.

**ಶ್ರೀ ಸಿದ್ದರಾಮಯ್ಯ:-** ಜೆ.ಡಿ.(ಎಸ್) ಪಕ್ಷದ ಸದಸ್ಯರು ಎಲ್ಲಿಗೆ ಹೋಗುತ್ತಾರೆ, ಸದನದಲ್ಲಿ ಕುಳಿತುಕೊಳ್ಳಬೇಕು.

ಸನ್ಮಾನ್ಯ ಸಭಾಪತಿಯವರೇ, ತಾವು ಬಹಳ ತಾಳ್ಮೆಯಿಂದ ನಮ್ಮ ಮಾತುಗಳನ್ನು ಕೇಳಿದ್ದೀರಿ. ನಮ್ಮ ಮಾತುಗಳನ್ನು ಕೇಳುವುದಕ್ಕಿಂತ ಹೆಚ್ಚಾಗಿ ಭಾರತೀಯ ಜನತಾ ಪಕ್ಷದ ಸದಸ್ಯರುಗಳ ಮಾತುಗಳನ್ನು ಬಹಳ ತಾಳ್ಮೆಯಿಂದ ಕೇಳಿದ್ದೀರಿ, ಅದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಈ ಸದನದ ಎಲ್ಲ ಗೌರವಾನ್ವಿತ ಸದಸ್ಯರು ಧನ ವಿನಿಯೋಗ ಮಸೂದೆಗೆ ಒಪ್ಪಿಗೆಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತಾ, ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಈಗ ಮಾತನಾಡುವಂತಹ ಸದಸ್ಯರು ಆಯವ್ಯಯದ ಮೇಲೆ ಭಾಷಣವನ್ನು ಮಾಡುವಂತಿಲ್ಲ. ಕೇವಲ ಸ್ಪಷ್ಟೀಕರಣವನ್ನು ಮಾತ್ರ ಕೇಳಬಹುದಾಗಿದೆ. ಈಗ ಮೊದಲಿಗೆ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು 5 ರಿಂದ 8 ನಿಮಿಷಗಳೊಳಗೆ ತಮ್ಮ ಮಾತುಗಳನ್ನು ಮುಗಿಸಬೇಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವಂತಹ ದಾಖಲೆಯ 13ನೇ ಆಯವ್ಯಯದ ಮೇಲೆ ಮಾತನಾಡಲು ನಾನು ಸಾಕಷ್ಟು ತಯ್ಯಾರಿ ಮಾಡಿಕೊಂಡಿದ್ದೆ. ಅವರು ವಿರೋಧ ಪಕ್ಷದ ನಾಯಕರಾಗಿದ್ದಾಗ ಮಾತನಾಡಿದ್ದ ನಡವಳಿಕೆಗಳನ್ನು ಸಹ ನಾನು ತೆಗೆದುಕೊಂಡು ಬಂದಿದ್ದೇನೆ.

ಈ ಸಾಲಿನ ಆಯವ್ಯಯ 2,09,00,181 ಕೋಟಿ ರೂಪಾಯಿಗಳ ಬೃಹತ್ ಗಾತ್ರದ್ದಾಗಿದ್ದು, 170 ಪುಟಗಳನ್ನು ಒಳಗೊಂಡಿದ್ದು, ಅದನ್ನು ಮಾನ್ಯ ಮುಖ್ಯಮಂತ್ರಿಗಳು 4 ಗಂಟೆ 10 ನಿಮಿಷಗಳ ಕಾಲ ಓದಿ ಮಂಡನೆ ಮಾಡಿದ್ದಾರೆ. ಇವೆಲ್ಲವೂ ದಾಖಲೆಯಾಗಿದೆ. ಅದೇ ರೀತಿಯಲ್ಲಿ 2,86,790 ಕೋಟಿ ರೂಪಾಯಿಗಳ ಸಾಲವೂ ದಾಖಲೆಯಾಗಿದೆ.

**ಶ್ರೀ ಸಿದ್ಧರಾಮಯ್ಯ:–** ಅದನ್ನು ನಾನೇ ಹೇಳಿದ್ದೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಹೇಳಿರುವ ಅಂಕಿಅಂಶಗಳನ್ನೇ ನಾನು ಹೇಳುತ್ತಿರುವುದು. ಪ್ರಾಸಂಗಿಕವಾಗಿ ಎರಡು ವಿಚಾರಗಳನ್ನು ಹೇಳುತ್ತಾ, ನಂತರ ಸ್ಪಷ್ಟೀಕರಣವನ್ನು ಕೇಳುತ್ತೇನೆ. ಏಕೆಂದರೆ, ಬಜೆಟ್ ಮೇಲಿನ ಚರ್ಚೆಗೆ sanctity ಉಳಿಯಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅದಕ್ಕೆ ಅದರದೇ ಆಗಿರುವ ಘನತೆ ಗೌರವವಿದೆ.

ಸನ್ಮಾನ್ಯ ಸಭಾಪತಿಯವರೇ, ಅವರು ಆಡಿರುವಂತಹ ಮಾತುಗಳನ್ನು ಬಹಳ ಪ್ರೀತಿಯಿಂದ ಅವರ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಖಂಡಿತವಾಗಿಯೂ ಇದನ್ನು ವಿರೋಧವೆಂದು ಅವರು ತಿಳಿದುಕೊಳ್ಳಬಾರದು. 26ನೇ ಫೆಬ್ರವರಿ 2009 ರಂದು  ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿ ಬಜೆಟ್ ಮಂಡನೆ ಮಾಡಿದಂತಹ ಸಂದರ್ಭದಲ್ಲಿ ಅವರು ಸಾಲದ ಘೋಷಣೆಯನ್ನು ಮಾಡಿರುತ್ತಾರೆ. ಮಂಡನೆಯಾದ ಬಜೆಟ್‌ನ ಮೇಲೆ ಈಗಿನ ಮುಖ್ಯಮಂತ್ರಿಗಳು ಆಗ ವಿರೋಧ ಪಕ್ಷದ ನಾಯಕರಾಗಿ ಮಾತನಾಡುತ್ತಿದ್ದ ಸಂದರ್ಭದಲ್ಲಿ;

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"........2008-09ಕ್ಕೆ ಸುಮಾರು 65 ಸಾವಿರ ಕೋಟಿ ರೂಪಾಯಿಗಳಷ್ಟು ಸಾಲವಾಗಿದೆ. ಈಗ ನಾವು 6 ಕೋಟಿಯಷ್ಟು ಜನರಿದ್ದೇವೆ. ಸಾಲ ತೆಗೆದುಕೊಳ್ಳಬಾರದೆಂದು ನಾನು ಹೇಳುವುದಿಲ್ಲ. ಆದರೆ, ನಮ್ಮ ಸಾಲ ಯಾವ ರೀತಿಯಲ್ಲಿ ಇರಬೇಕೆಂದರೆ,** *It should be on the basis of the affordability, not on the basis of the availability. That is the agreed principle under the student management of the finances affordability.* **ಸಾಲ ಸಿಗುತ್ತದೆಂದು ಸಾಲ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.** *Available* **ಸಾಲ ನನಗೆ ಸಿಗುತ್ತದೆ. ನನಗೆ ಸಾಮರ್ಥ್ಯವಿದೆ ಅದಕ್ಕೋಸ್ಕರ ಸಾಲವನ್ನು ಎಷ್ಟು ಬೇಕಾದರೂ ತೆಗೆದುಕೊಳ್ಳುವೆನೆಂದು ಸಾಲವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ, ನಮ್ಮ ಸಾಮರ್ಥ್ಯ ಎಷ್ಟಿದೆಯೋ; ಎಷ್ಟು ಕೊಡುವುದಕ್ಕೆ ಆಗುತ್ತದೆಯೋ; ನಮ್ಮ ಅಭಿವೃದ್ಧಿಗಳನ್ನು ನೋಡಿಕೊಂಡು ಅಭಿವೃದ್ಧಿ ಕೆಲಸಗಳಿಗೆ ಇಷ್ಟು.............ತೆಗೆದುಕೊಂಡ ಸಾಲಗಳನ್ನು ಬೇರೆ ಯಾವುದೋ ಕೆಲಸಗಳಿಗೆ ಖರ್ಚು ಮಾಡಬಾರದು. ಅದನ್ನು** *asset creation* **ಗೆ ಮಾತ್ರ ಮಾಡಬೇಕು" ಎಂದು ಹೇಳಿದ್ದಾರೆ.**

ಇದರ ಬಗ್ಗೆ ಅವರು ಯಾವ ಸ್ಪಷ್ಟೀಕರಣವನ್ನು ಕೊಡುತ್ತಾರೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. Asset creation ಗೆ ಎಷ್ಟು ಹಣ ಹೋಗಿದೆ ಎನ್ನುವುದರ ಬಗ್ಗೆಯೂ ಅವರು ಸ್ಪಷ್ಟೀಕರಣವನ್ನು ನೀಡಬೇಕಾಗಿದೆ.

**ಶ್ರೀ ಸಿದ್ದರಾಮಯ್ಯಃ-** ಸನ್ಮಾನ್ಯ ಸಭಾಪತಿಯವರೇ, I stand by it, no clarification. ನಾನು ಅವತ್ತು ಹೇಳಿರುವುದು ಸರಿಯಿದೆ. ಇವತ್ತೂ ಸಹ ನಾನು ಅದೇ ನಿಲುವನ್ನೇ ಪ್ರತಿಪಾದಿಸುತ್ತೇನೆ. ನಾವು ಸಾಲ ತೆಗೆದುಕೊಂಡು ಆಸ್ತಿ ನಿರ್ಮಾಣ ಮಾಡಬೇಕು. ಸಾಲ ತೆಗೆದುಕೊಂಡು ಸಾಲ ತೀರಿಸಬಾರದು. ಸಾಲ ತೆಗೆದುಕೊಂಡು ಸಂಬಳ ಕೊಡುವುದಕ್ಕೆ ಹೋಗಬಾರದು ಎನ್ನುವ ಮಾತುಗಳನ್ನು ಹೇಳಿದ್ದೇನೆ. ಇವತ್ತಿಗೂ ಸಹ ನಾವು ಸಾಲ ಮಾಡಿರುವುದು capital expenditure ಮಾಡುವುದಕ್ಕಾಗಿಯೇ ಹೊರತು, not for the revenue expenditure.

**Sri K.T.SRIKANTEGOWDA:-** Sir, I need clarification about the asset creation. ಇದರಿಂದ ಎಷ್ಟರ ಮಟ್ಟಿಗೆ asset creation ಆಗುತ್ತಿದೆ ಎನ್ನುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳಬೇಕಾಗಿದೆ.

**ಶ್ರೀ ಸಿದ್ದರಾಮಯ್ಯಃ-** ಸನ್ಮಾನ್ಯ ಸಭಾಪತಿಯವರೇ, Asset creation ಎಂದರೇನು?

**ಶ್ರೀ ಕೆ.ಟಿ.ಶ್ರೀಕಂಠೇಗೌಡಃ-** ಸನ್ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತುಗಳನ್ನು ಮುಗಿಸಿಬಿಡುತ್ತೇನೆ. ನಂತರ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ನೀಡಲಿ. ಲೋಕಸಭೆಯಲ್ಲಿ ಇದೇ ರೀತಿ ಸಾಲದ ಬಗ್ಗೆ ಪ್ರಸ್ತಾಪವಾದಾಗ, ಅಂದಿನ ಪ್ರಧಾನಮಂತ್ರಿಗಳಾಗಿದ್ದ ಮಾನ್ಯ ಜವಹರಲಾಲ್ ನೆಹರುರವರು ಎದ್ದು ನಿಂತು;

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

> **"ದೊಡ್ಡ ದೊಡ್ಡ ಡ್ಯಾಂಗಳನ್ನು ಕಟ್ಟುವುದು ಸಾರ್ವಜನಿಕ ವಲಯಗಳಲ್ಲಿ ಕಾರ್ಖಾನೆಗಳನ್ನು ಸ್ಥಾಪನೆ ಮಾಡುವುದು, ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು, ಆಹಾರೋತ್ಪಾದನೆಗೆ ಒತ್ತು ಕೊಡುವುದು ಇವೆಲ್ಲವೂ ಆಧುನಿಕ ದೇವಾಲಯಗಳಂತೆ. ನಾವು ಆಯವ್ಯಯದಲ್ಲಿ ತೊಡಗಿಸುವಂತಹ ಹಣ ಅವುಗಳಿಗೆ ನೇರವಾಗಿ ಹೋಗಬೇಕು"** ಎನ್ನುವ ಮಾತುಗಳನ್ನು ಹೇಳಿದ್ದರು.

269/23.2.2018/ಪಿಕೆ/ವಿಕೆ/5.00

ಶ್ರೀ ಕೆ.ಟಿ.ಶ್ರೀಕಂಠೇಗೌಡ(ಮುಂದುವರೆದಿದೆ):-

ಮಾನ್ಯ ಮುಖ್ಯಮಂತ್ರಿಗಳು ತಮ್ಮ 5 ವರ್ಷಗಳ ಆಡಳಿತಾವಧಿಯಲ್ಲಿ, ನೀರಾವರಿಗೆ ಸಂಬಂಧಪಟ್ಟಂತೆ ಮೇಕೆದಾಟು ಯೋಜನೆಯನ್ನು ಕೈಗೆತ್ತಿಕೊಳ್ಳುತ್ತೇವೆ, ಸರ್ವೆ ಮಾಡಿಸುತ್ತೇವೆ, estimate ಮಾಡಿಸುತ್ತೇವೆ ಎಂದು ಹೇಳಿದ್ದರು.

**ಶ್ರೀ ಸಿದ್ಧರಾಮಯ್ಯ:-** ಸರ್ವೇ ಮಾಡಿ ಭಾರತ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದೇವೆ. Estimate ಮಾಡಿ, DPR (Detailed Project Report) ಮಾಡಿ ಕಳುಹಿಸಿದ್ದೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಈಗ ನಮಗೆ 14.75 ಟಿಎಂಸಿ ಅಡಿ ನೀರು ಹೆಚ್ಚುವರಿಯಾಗಿ ಸಿಕ್ಕಿದೆ. ನಮ್ಮ ನೀರನ್ನು ಮತ್ತು ಕಾಮಗಾರಿ ಕೆಲಸಗಳನ್ನು ಕೈಗೆತ್ತಿಕೊಳ್ಳಲು ಯಾವುದೇ ರೀತಿಯ ಅಡ್ಡಿ-ಆತಂಕ ಇಲ್ಲ. ನೀರಾವರಿ ಯೋಜನೆಗಳ ವಿಚಾರದಲ್ಲಾದರೂ ನೀವು ಗಮನಹರಿಸಿ. ಈಗ ಕುಡಿಯುವ ನೀರಿಗೆ ಸಂಬಂಧಪಟ್ಟಂತೆ ಸುಪ್ರೀಂ ಕೋರ್ಟ್ 4.25 ಟಿಎಂಸಿ ನೀರನ್ನು ಕೊಟ್ಟಿದೆ. ಬೆಂಗಳೂರಿಗೆ ಕುಡಿಯವುದಕ್ಕೂ ನೀರು ಬೇಕು, ವಿದ್ಯುಚ್ಛಕ್ತಿಯೂ ಬೇಕು. ನಮ್ಮಲ್ಲಿರುವ ಕನ್ನಂಬಾಡಿ ಕಟ್ಟೆ ಇರಲಿ, ಕಬಿನಿ ಜಲಾಶಯವಿರಲಿ ಅಥವಾ ಹೇಮಾವತಿ ಜಲಾಶಯ ಇರಲಿ, ಈ ಮೂಲಗಳಿಂದ 740 ಟಿಎಂಸಿ availability ಅನ್ನು ಇಟ್ಟುಕೊಂಡು ಸುಪ್ರೀಂ ಕೋರ್ಟ್ ಮತ್ತು ನ್ಯಾಯಾಧಿಕರಣ ತೀರ್ಮಾನ ಕೊಟ್ಟಿದೆ. ಆದರೆ ವಸ್ತು ಸ್ಥಿತಿ ಏನಾಗಿದೆ ಎಂದರೆ, ಕಳೆದ 25 ವರ್ಷಗಳಲ್ಲಿ 3 ವರ್ಷಗಳನ್ನು ಹೊರತುಪಡಿಸಿದರೆ 22 ವರ್ಷಗಳ ಅವಧಿಯಲ್ಲಿ 740 ಟಿಎಂಸಿ ನೀರು ಬಂದೇ ಇಲ್ಲ. ಶೇಕಡ 51.36 ಟಿಎಂಸಿ ನೀರಿನ shortfall ಇದೆ. ಸಂಗ್ರಹದಲ್ಲೇ 51.36 ಟಿಎಂಸಿಯ ಕೊರತೆ ಇದೆ. ಆದರೆ ತಮಿಳುನಾಡಿನವರು ಪದೇ ಪದೇ ನೀರು ಬಿಡಿ ಎಂದು ಕೇಳುತ್ತಾರೆ, ಅಲ್ಲದೇ ಉಸ್ತುವಾರಿ ಸಮಿತಿಯನ್ನೂ ಮಾಡಬೇಕು ಎಂದು ಕೇಳುತ್ತಿದ್ದಾರೆ. ಕುಡಿಯುವ ನೀರು, ವಿದ್ಯುತ್ ಉತ್ಪಾದನೆ ಹಾಗೂ ತಮಿಳುನಾಡಿಗೆ ಬಿಡಬೇಕಾದ ನೀರಿನ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು ಮೇಕೆದಾಟು ಯೋಜನೆಯನ್ನು ಕೈಗೆತ್ತಿಕೊಳ್ಳುವ ಸಂಬಂಧ ಏನಾದರೂ ಮಾಡಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿದ್ಯುಕ್ತವಾಗಿ ಈ ಬಜೆಟ್‌ನಲ್ಲಿ ಸೇರಿಸುವ ಕೆಲಸಕ್ಕೆ ಮುಂದಾಗಬೇಕು ಎನ್ನುವುದು ನನ್ನ ಮೊದಲನೆ ಆಗ್ರಹವಾಗಿದೆ.

ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಶಿಕ್ಷಣ ಸಚಿವರಲ್ಲಿ ಒಂದು ಪ್ರಶ್ನೆ ಕೇಳಿದ್ದೆ. ಈ ಕುರಿತು ಟಿವಿಯಲ್ಲಿ ಚರ್ಚೆಯಾಯಿತು. ಇವತ್ತು ರಾಜ್ಯದಲ್ಲಿ ಕನ್ನಡ ಶಾಲೆಗಳು, ಸರ್ಕಾರಿ ಶಾಲೆಗಳು ಮುಚ್ಚಿ ಹೋಗುತ್ತಿವೆ. ಇವುಗಳಿಗೆ ಕಾಯಕಲ್ಪ ಕೊಡಬೇಕು ಎಂಬ ಬಗ್ಗೆ ಪತ್ರಿಕೆಗಳಲ್ಲೂ ಚರ್ಚೆಯಾಯಿತು. ಈ ರಾಜ್ಯದ ಸರ್ಕಾರಿ ಶಾಲೆಗಳ 19 ಸಾವಿರ ಕೊಠಡಿಗಳಲ್ಲಿ ಮಕ್ಕಳು ಕುಳಿತುಕೊಳ್ಳುವುದಕ್ಕೆ ಆಗುತ್ತಿಲ್ಲ. ಅಂತಹ ಕೊಠಡಿಗಳು ಬಿದ್ದು ಹೋಗಿವೆ ಅಥವಾ ಬೀಳುವ ಸ್ಥಿತಿಯಲ್ಲಿವೆ. ಈ ಸ್ಥಿತಿ ಇರುವುದನ್ನು ಮಾನ್ಯ ಸಚಿವರೂ ಕೂಡ ಒಪ್ಪಿಕೊಂಡಿದ್ದಾರೆ. ಆದರೆ ನಿಮ್ಮ ಬಜೆಟ್‌ನಲ್ಲಿ ಸರ್ಕಾರಿ ಶಾಲೆಗಳನ್ನು ಉಳಿಸಿಕೊಳ್ಳುವ, ಪುನರ್ನಿರ್ಮಾಣ ಮಾಡುವ ಮತ್ತು ಮೂಲ ಸೌಕರ್ಯಗಳನ್ನು ಒದಗಿಸಿ ಕೊಡುವ ಅಥವಾ ಕೊಠಡಿಗಳನ್ನು ನಿರ್ಮಾಣ ಮಾಡುವ ಪ್ರಸ್ತಾಪ ಆಗಲೇ ಇಲ್ಲ. ನಮ್ಮ ಮಂಡ್ಯದ ಶಾಲೆಗಳಲ್ಲಿ ಸುಮಾರು 790 ಕೊಠಡಿಗಳಲ್ಲಿ ಮಕ್ಕಳು ಕುಳಿತುಕೊಳ್ಳುವುದಕ್ಕೆ ಆಗದೇ ಇರುವ ಪರಿಸ್ಥಿತಿ ಇದೆ. ದಯಮಾಡಿ ತಾವೇನಾದರೂ ಸರ್ಕಾರಿ ಶಾಲೆಗಳನ್ನು ಉಳಿಸಿಕೊಳ್ಳುವ ದಿಸೆಯಲ್ಲಿ, ಮಕ್ಕಳು ಕುಳಿತು ಪಾಠ ಕೇಳು ದಿಸೆಯಲ್ಲಿ ಗಂಭೀರವಾಗಿ ಯೋಚನೆ ಮಾಡಬೇಕು.

ಮಾನ್ಯ ಮುಖ್ಯಮಂತ್ರಿಗಳು ಮೈಸೂರಿನಿಂದ ಬಂದಿದ್ದಾರೆ. ನಾನು ಕೂಡ ಮೈಸೂರು ಕಡೆಯವನೇ ಆಗಿದ್ದೇನೆ. ಅಲ್ಲಿ ಕಸದ ಸಮಸ್ಯೆ ಬೆಂಗಳೂರಿಗಿಂತ ಜಾಸ್ತಿಯಾಗುತ್ತಿದೆ. ನಂಜನಗೂಡಿಗೆ ಹೋಗುವ ರಸ್ತೆಯಲ್ಲಿ ಆ ಕಸವನ್ನೇನು ಹಾಕುತ್ತಾರೋ ಅದರಿಂದ ಸುಮಾರು 3-4 ಕಿ.ಮೀ ಸುತ್ತ ವಾಸ ಮಾಡುವ ಜನರು ಮೂಗು ಮುಚ್ಚಿಕೊಂಡು ಜೀವನ ಮಾಡಬೇಕಾದ ಸ್ಥಿತಿ ಇದೆ. ಈ ಜನರ ಕಷ್ಟ ಹೇಳತೀರದಾಗಿದೆ. ಮೈಸೂರಿನ ಕಡೆಯಿಂದ ಬಂದಿರುವ ಮುಖ್ಯಮಂತ್ರಿಗಳಾದ ನೀವು ಈ ಸಮಸ್ಯೆಗೆ ಪರಿಹಾರ ಒದಗಿಸಿ ಕೊಡದೇ ಹೋದರೆ ಇನ್ಯಾರನ್ನು, ಯಾವಾಗ, ಯಾರಿಗೆ ಕೇಳೋಣ? ನಂಜನಗೂಡಿಗೆ ಹೋಗುವಾಗ ಸಿಗುವ ರಿಂಗ್ ರೋಡ್ ಸರ್ಕಲ್‌ನಲ್ಲಿ ಮೈಸೂರಿನ ಎಲ್ಲಾ ಕಸ ಸುರಿದು ಅಲ್ಲಿ ನಿವಾಸಿಗಳು ವಾಸ ಮಾಡದೇ ಇರುವ ಸ್ಥಿತಿ ಇದೆ. ಅದರ ವಾಸನೆ 3-4 ಕಿ.ಮೀ.ವರೆಗೂ ಹೊಡೆಯುತ್ತದೆ. ನೀವು ಬಹುಶಃ ಆಸಕ್ತಿ ವಹಿಸಿ ಈ ಬಜೆಟ್‌ನಲ್ಲಿ ಒಂದು ಕಾರ್ಯಕ್ರಮವನ್ನು ರೂಪಿಸಿ ಆ ಕಸವನ್ನು ವಿಲೇವಾರಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಆಗ್ರಹಿಸುತ್ತೇನೆ. ಈ ಕೆಲಸ ಈಗಾಗಲೇ ಆಗಬೇಕಾಗಿತ್ತು. ಆದರೆ ಆಗಲಿಲ್ಲ.

ಮಾನ್ಯ ಸಭಾಪತಿಯವರೇ, ನಾನು ನೇರವಾಗಿ clarification ಕೇಳಬಯಸುತ್ತೇನೆ. 6ನೇ ವೇತನ ಆಯೋಗದ ಬಗ್ಗೆ ತಾವು ಹೇಳಿದ್ದರೂ ಆ ಕುರಿತು ಸ್ಪಷ್ಟವಾದ, ನಿಖರವಾದ ನಿರ್ಧಾರ ಆಗಿಲ್ಲ. ಕ್ಯಾಬಿನೆಟ್‌ನಲ್ಲಿ ಮಾಡುತ್ತೇವೆ ಎಂದು ಹೇಳಿದ್ದೀರಿ, ದಯವಿಟ್ಟು ಮಾಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ಧರಾಮಯ್ಯ:-** 6ನೇ ವೇತನ, it will come into effect from 1st April 2018.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಯಾರಾದರೂ ಮನೆ ಬಾಡಿಗೆಯನ್ನು ದಿನೇ ದಿನೇ ಕೆಳಗೆ ಇಳಸುತ್ತಾರೆಯೇ? ಮನೆ ಬಾಡಿಗೆ ಮೇಲಕ್ಕೇರುತ್ತಾ ಹೋಗುತ್ತದೆ. ಆದರೆ ನಮ್ಮ ದುರಂತ ಎಂದರೆ, 6ನೇ ವೇತನ ಆಯೋಗದಲ್ಲಿ ಶೇಕಡ 6ರಷ್ಟು ಮನೆ ಬಾಡಿಗೆ ಪ್ರಮಾಣವನ್ನು ಕೆಳಗೆ ಇಳಿಸಿದ್ದಾರೆ. ಬೆಂಗಳೂರು, ಮೈಸೂರು ಇಂತಹ ನಗರಗಳಲ್ಲಿ ಯಾರು ಮನೆ ಬಾಡಿಗೆ ಇಳಸುತ್ತಾರೆ ಎನ್ನುವುದು ನನಗೆ ಅರ್ಥವಾಗಲಿಲ್ಲ. ರಿಯಲ್ ಎಸ್ಟೇಟ್ ಕಡಿಮೆ ಆಗಿರಬಹುದು, ಆದರೆ ಮನೆ ಬಾಡಿಗೆ ಕಡಿಮೆಯಾಗಿಲ್ಲ. ಬಾಡಿಗೆ ಮನೆಗೆ ಹೋದರೆ ವರ್ಷಕ್ಕೆ ಶೇಕಡ 10ರಷ್ಟು ಬಾಡಿಗೆ ಹೆಚ್ಚು ಕೊಡಬೇಕು ಎನ್ನುವ ಅಗ್ರಿಮೆಂಟ್ ಮಾಡಿಕೊಳ್ಳಬೇಕಾಗುತ್ತದೆ. ಅಂದರೆ 5 ವರ್ಷಕ್ಕೆ ಶೇಕಡ 50 ಆಗುತ್ತದೆ. ದುರಂತ ಎಂದರೆ, ಕಳೆದ ವೇತನ ಆಯೋಗದಲ್ಲಿ ಇದಕ್ಕಿಂತಲೂ ಕಡಿಮೆ ಮನೆ ಬಾಡಿಗೆ ಮಾಡಿದ್ದಾರೆ. ನಮ್ಮ ನೌಕರರು ಸಂಬಳ ತೆಗೆದುಕೊಂಡು ಹೋಗಿ ಜೀವನ ಮಾಡುತ್ತಾರೆ. ಬಾಡಿಗೆ ಕೊಟ್ಟು, ಕರೆಂಟ್‌ಗೆ ದುಡ್ಡು ಕೊಟ್ಟು, ಹಾಲಿಗೆ ದುಡ್ಡು ಕೊಟ್ಟು ನಾವು ಬದುಕಬೇಕಲ್ಲವೇ? ಬಾಡಿಗೆ ದರ ಕಡಿಮೆ ಮಾಡುವುದು ಎಲ್ಲಾದರೂ ಉಂಟೇ?

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಶ್ರೀಕಂಠೇಗೌಡರೇ, ನೀವು ಯಾವ ಬಾಡಿಗೆ ಮನೆಯಲ್ಲಿದ್ದೀರಿ? ಸುಮ್ಮನೆ ಏಕೆ ಹೇಳುತ್ತೀರಿ? ನನ್ನನ್ನು ಬಿಟ್ಟು ಬಾಡಿಗೆ ಮನೆಯಲ್ಲಿ ವಾಸ ಮಾಡುವವರು ಎಂದು ಹೇಳಬೇಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ನಾನು ನೌಕರರ ಪ್ರತಿನಿಧಿ, ಆ ಸಮುದಾಯದ ಪರವಾಗಿ ಮಾತನಾಡುತ್ತಿದ್ದೇನೆ.

**ಶ್ರೀ ಸಿದ್ಧರಾಮಯ್ಯ:-** ನಾನು ನಿಮ್ಮ ಮನೆ ನೋಡಿದ್ದೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಇಲ್ಲಾ ಸರ್, ನೀವು ನಮ್ಮ ಮನೆಗೆ ಒಂದು ದಿನ ಕೂಡ ಬಂದಿಲ್ಲ.

**ಶ್ರೀ ಸಿದ್ಧರಾಮಯ್ಯ:-** ನಿಮ್ಮ ಊರಿಗೆ ಬಂದಿದ್ದೇನೆ, ಮನೆ ನೋಡಿದ್ದೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮೈಸೂರಿನಲ್ಲಿ ನಾನು ಬಾಡಿಗೆ ಮನೆಯಲ್ಲಿದ್ದೇನೆ. ಮಾನ್ಯ ಸಭಾಪತಿಯವರೇ, 5ನೇ ವೇತನ ಆಯೋಗದಲ್ಲಿ ಎಷ್ಟು ಹೆಚ್‌ಆರ್‌ಎ ಕೊಟ್ಟಿದ್ದರೋ ಕನಿಷ್ಠ ಅಷ್ಟನ್ನಾದರೂ ಮುಂದುವರೆಸಬೇಕಾಗುತ್ತದೆ. ಹೆಚ್‌ಆರ್‌ಎ ಕಡಿಮೆ ಮಾಡಿದ್ದನ್ನು ಇತಿಹಾಸದಲ್ಲೂ ನಾನು ಕೇಳಿಲ್ಲ. ಈಗ ಇರುವ ಹೆಚ್‌ಆರ್‌ಎ ಅನ್ನು ಹಾಗೆಯೇ maintain ಮಾಡಬೇಕು. ನಮ್ಮ ನೌಕರರು, ಶೇಕಡ 30 ರಷ್ಟೇನು ಜಾಸ್ತಿ ಮಾಡಬೇಕು ಎಂದು ಹೇಳುತ್ತಿದ್ದಾರೋ ಆ ಪ್ರಮಾಣವನ್ನು ಶೇಕಡ 45 ಕ್ಕಾದರೂ ಏರಿಸಬೇಕು, ಈಗಾಗಲೇ ಕೇಂದ್ರ ಸರ್ಕಾರಿ ನೌಕರರ ಮತ್ತು ನಮ್ಮ ಸಂಬಳದ ನಡುವೆ ಶೇಕಡ 69ರಂದು

ವ್ಯತ್ಯಾಸ ಇದೆ, ಇನ್ನು ಮೂರು ತಿಂಗಳಲ್ಲಿ ಹೊಸ ವೇತನ ಆಯೋಗ ಬಂದರೆ ಈ ವ್ಯತ್ಯಾಸ ಶೇಕಡ 100ರಷ್ಟು ಆಗುತ್ತದೆ ಎನ್ನುವ ಆತಂಕದಲ್ಲಿದ್ದಾರೆ. ಆ ಆತಂಕವನ್ನು ದೂರ ಮಾಡಬೇಕು.

ಮಾನ್ಯ ಸಭಾಪತಿಯವರೇ, ಹಿಂದಿನ ಸರ್ಕಾರಗಳು ಶಾಲೆಗಳನ್ನು ಅನುದಾನದ ವ್ಯಾಪ್ತಿಗೆ ಪರಿಗಣಿಸುವ ಸಮಯವನ್ನು 1985 ರಿಂದ 1990ರ ತನಕ ಎಂದು ಮಾಡಿದ್ದವು. ನಾವು ತಮ್ಮನ್ನು, 2-3 ವರ್ಷದ ಅವಧಿಯನ್ನು ವಿಸ್ತರಣೆ ಮಾಡಬೇಕೆಂದು ಮನವಿ ಮಾಡಿದೆವು. ತಾವು ಅದಕ್ಕೆ ಸ್ಪಂದಿಸಲಿಲ್ಲ. ದುರಂತ ಏನೆಂದರೆ, ಹಿಂದಿನ ಸರ್ಕಾರಗಳು ಅನುದಾನಕ್ಕೆ ಒಳಪಡಿಸಿದ ಶಾಲೆಗಳ ಸಂಬಂಧ ಇರುವ ನೂರಾರು ಕಡತಗಳು ಆರ್ಥಿಕ ಇಲಾಖೆಯಲ್ಲಿ ಹಾಗೆಯೇ ಬಾಕಿ ಇದೆ. ಆಡಳಿತ ಮಂಡಳಿಯವರು, ಗ್ರ್ಯಾಂಟ್ ಕೊಟ್ಟಿಲ್ಲ ಎಂದು ಸಿಬ್ಬಂದಿಗೆ ಸಂಬಳ ಕೊಡುವುದಿಲ್ಲ. ಅವರು ತಮ್ಮ ಹೆಂಡತಿ ಮೈಮೇಲೆ ಇರುವಂತಹ ಒಡವೆಗಳನ್ನು ಅಡವಿಟ್ಟು ಜೀವನ ಮಾಡುವ ಪರಿಸ್ಥಿತಿಗೆ ತಲುಪಿದ್ದಾರೆ. ಅನುದಾನಕ್ಕೆಂದು ಇಲ್ಲಿಗೆ ಫೈಲ್ ತೆಗೆದುಕೊಂಡು ಬಂದು ಕುಳಿತುಕೊಂಡಿದ್ದಾರೆ. ಇಂತಹ 71 ಕಡತಗಳು ಆರ್ಥಿಕ ಇಲಾಖೆಯಲ್ಲಿವೆ. ಇವರು ಕೆಲಸ ಮಾಡುವ ಶಾಲೆಗಳು ಏನು ಪ್ರಾರಂಭವಾಗಿತ್ತೋ ಅದೇ ಅವಧಿಯಲ್ಲಿ ಪ್ರಾರಂಭವಾದ ಇತರ ಶಾಲೆಗಳ ಸಿಬ್ಬಂದಿಯವರು ಸಾವಿರಾರು ರೂಪಾಯಿಗಳ ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ಆದರೆ ಇವರಿಗೆ ಮ್ಯಾನೇಜ್‌ಮೆಂಟ್‌ನವರೂ ಸಂಬಳ ಕೊಡುವುದಿಲ್ಲ, ಸರ್ಕಾರ ಕೂಡ ವೇತನ ಕೊಡದೇ ಹೋದರೆ ಅವರು ಹೇಗೆ ಬದುಕಬೇಕು? ಆರ್ಥಿಕ ಇಲಾಖೆಯವರು ಬಾಕಿ ಇರುವ 71 ಕಡತಗಳ clarification ಗೆಂದು ಮುಖ್ಯಮಂತ್ರಿಯವರಿಗೆ ಬರೆದಿದ್ದಾರೆ. ತಾವು ಒಪ್ಪಿಗೆ ಕೊಟ್ಟರೆ ಅವರಿಗೆ ಅನುದಾನ ಬಿಡುಗಡೆ ಮಾಡುತ್ತಾರೆ. ಆಗ ಅವರು ಉಸಿರಾಡುವುದಕ್ಕೆ ಸಾಧ್ಯವಾಗುತ್ತದೆ. ಮೇಷ್ಟ್ರುಗಳು ಸಂಬಳ ಇಲ್ಲದೇ ಪಾಠ ಮಾಡುತ್ತಿರುವ ದುರಂತದ ಸಂದರ್ಭದಲ್ಲಿದ್ದಾರೆ. ಮಾನ್ಯ ಸಭಾಪತಿಯವರೇ, ವೇತನ ತಾರತಮ್ಯದ ಬಗ್ಗೆ ನಾವೆಲ್ಲ ಹತ್ತಾರು ವರ್ಷಗಳಿಂದ ಹೋರಾಟ ಮಾಡುತ್ತಾ ಬಂದಿದ್ದೇವೆ. ಸರ್ಕಾರ ಕುಮಾರ್‌ನಾಯಕ್ ಅವರ ನೇತೃತ್ವದಲ್ಲಿ ರಚನೆ ಮಾಡಿದ್ದ ಸಮಿತಿಯ ವರದಿ ಬಂತು. ಆ ವರದಿಯಲ್ಲಿ, ಪ್ರೌಢ ಶಾಲಾ ಸಹ ಶಿಕ್ಷಕರಿಗೆ, ಮುಖ್ಯ ಶಿಕ್ಷಕರಿಗೆ, ಪದವಿಪೂರ್ವ ಕಾಲೇಜಿನ ಉಪನ್ಯಾಸಕರು ಮತ್ತು ಪ್ರಾಚಾರ್ಯರ ವೇತನದಲ್ಲಿ ತಾರತಮ್ಯ ಇದೆ ಎಂದು ಒಪ್ಪಲಾಗಿದೆ. ಈ ತಾರತಮ್ಯವನ್ನು ಸರಿಪಡಿಸಬೇಕೆಂದು ನಾವು 18 ದಿನಗಳ ಕಾಲ ಆಹೋರಾತ್ರಿ ಧರಣಿ ಮಾಡಿದಾಗ ತಾವು, ಒಂದು Special Increment ಕೊಟ್ಟು, Ex-gratia ಕೊಟ್ಟು, ಮುಂದಿನ ವೇತನ ಆಯೋಗದಲ್ಲಿ ಇದನ್ನು ಸರಿಪಡಿಸಿಕೊಡುತ್ತೇವೆ ಎನ್ನುವ ಮಾತು ಕೊಟ್ಟಿರಿ. ಆದರೆ ಅದು ಇದುವರೆಗೂ ಸರಿಹೋಗಲಿಲ್ಲ. ಈಗ ಶಿಕ್ಷಣ ಇಲಾಖೆಯ ಮೂಲಕ ಮತ್ತೊಂದು increment ಗೆಂದು ಒಂದು ಕಡತ ತಮ್ಮ ಮುಂದೆ ಬಂದಿದೆ. ತಾವು increment ಕೊಡುವುದಾದರೆ ನಮ್ಮಲಿರುವ 30 ವರ್ಷಗಳ ತಾರತಮ್ಯ ನಿವಾರಣೆ ಆದ ಹಾಗಾಗುತ್ತದೆ. ಶಿಕ್ಷಣ ಇಲಾಖೆಯ savings ನಲ್ಲಿ ಇನ್ನೊಂದು increment ಗೆಂದು ಮಾನ್ಯ ತನ್ವೀರ್‌ಸೇಠ್‌ರವರು ತಮಗೆ ಒಂದು ಕಡತ ಕಳುಹಿಸಿದ್ದಾರೆ. ತಾವು ಇದಕ್ಕಾದರೂ ಸ್ಪಂದಿಸಬೇಕು. ನಾವು

ಶಿವರಾತ್ರಿಯನ್ನು "ಕರಾಳ ಶಿವರಾತ್ರಿ" ಎಂದು ಪ್ರತಿಭಟನೆ ಮಾಡಿದೆವು. ಪರೀಕ್ಷೆ ನಡೆಸುವ ಅಥವಾ ಪಾಠ ಮಾಡುವ ಕೆಲಸವನ್ನು ಬಿಟ್ಟು ಧರಣಿ ಮಾಡಿದರೆ ತಪ್ಪಾಗುತ್ತದೆ ಎಂದು ಕಪ್ಪುಪಟ್ಟಿ ಕಟ್ಟಿಕೊಂಡು ಈ ಕೆಲಸಗಳನ್ನು ಮಾಡಿದೆವು. ಈಗೇನು 2ನೇ ಪಿಯುಸಿ ಪರೀಕ್ಷೆ ಬರುತ್ತದೆಯೋ ಆಗ ಶಿಕ್ಷಕರು ಕಪ್ಪುಪಟ್ಟಿ ಕಟ್ಟಿಕೊಂಡು ಕೆಲಸ ಮಾಡುವವರಿದ್ದಾರೆ. ಕೆಲವರು ಪರೀಕ್ಷೆಯನ್ನು boycott ಮಾಡಬೇಕೆಂದು ಕೇಳಿಕೊಂಡರು, ಆದರೆ ನಾವು ಅದನ್ನು ಒಪ್ಪಲಿಲ್ಲ. ಮೌಲ್ಯಮಾಪನವನ್ನು ಬಹಿಷ್ಕಾರ ಮಾಡದ ಹಾಗೆ ನಾವು ನೋಡಿಕೊಳ್ಳಬೇಕು ಅಲ್ಲವೇ? ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕು. 6ನೇ ವೇತನ ಆಯೋಗದಲ್ಲಿ ತಾರತಮ್ಯವನ್ನು ಸರಿ ಮಾಡಿಕೊಡುತ್ತೇವೆ ಎಂದು ತಾವೇ ಹೇಳಿದ್ದೀರಿ. ಇಲ್ಲವೇ, ಇನ್ನೊಂದು increment ಕೊಡುತ್ತೇವೆ ಎಂದು ಹೇಳಿದ್ದಿರಿ. ಆ increment ಆದರೂ ಕೊಟ್ಟು ಇರುವ ತಾರತಮ್ಯವನ್ನು ನಿವಾರಣೆ ಮಾಡಬೇಕು.

ಮಾನ್ಯ ಸಭಾಪತಿಯವರೇ, ಈ ರಾಜ್ಯದಲ್ಲಿ pay-scale ಇಲ್ಲದೇ ಇರುವ ಹುದ್ದೆ ಎಂದರೆ ಅದು ಪದವಿಪೂರ್ವ ಪ್ರಿನ್ಸಿಪಾಲರ ಹುದ್ದೆ. ಎಲ್ಲರಿಗೂ pay-scale ಇದೆ ಆದರೆ, ಇವರಿಗೆ ಇವರದ್ದೇ ಆದ pay-scale ಇಲ್ಲ. ನಾನು ಬಹಳ ಸಲ, ಈ ಕಾಲೇಜುಗಳಲ್ಲಿ ಇವರನ್ನು In-charge Principal ಎಂದು ಮಾಡಿಬಿಡಿ ಎನ್ನುವ ಮಾತನ್ನು ಹೇಳಿದ್ದೇನೆ. In-charge Principal ಎಂದು ಪರಿಗಣಿಸಿದರೆ 10-15-20-25 ವರ್ಷಗಳ time bound ಬರುತ್ತದೆ. ದುರಂತ ಎಂದರೆ though as a senior lecturer and promoted as a Principal he is getting lesser salary than a Junior Lecturer. ಒಬ್ಬ ಕಿರಿಯ ಉಪನ್ಯಾಸಕ ತೆಗೆದುಕೊಳ್ಳುವ ಸಂಬಳಕ್ಕಿಂತ ಕಡಿಮೆ ಸಂಬಳವನ್ನು ಪ್ರಿನ್ಸಿಪಾಲ್ ಆಗಿರುವ ಈ ಸೀನಿಯರ್ ಉಪನ್ಯಾಸಕ ತೆಗೆದುಕೊಳ್ಳುತ್ತಿದ್ದಾನೆ. ಈ ರೀತಿಯ ದುರಂತ ಉಂಟೇ? ಏಕೆಂದರೆ ಆತನಿಗೆ 10-15-20-25 ವರ್ಷಗಳ time bound ಸಿಗುತ್ತಿಲ್ಲ. ಪ್ರಿನ್ಸಿಪಾಲರ direct recruitment ಮಾಡಬೇಕೆಂದು ಒಂದು ಆದೇಶವನ್ನೂ ಹೊರಡಿಸಿದ್ದೀರಿ. ಅವರಿಗೆ pay-scale fix ಮಾಡದೇ direct recruitment ನ ಪ್ರಶ್ನೆಯೇ ಬರುವುದಿಲ್ಲ. ಆ ಪ್ರಿನ್ಸಿಪಾಲರ scale ಕೊಡಬೇಕೆಂದೇ ಒಂದು ಸಾವಿರ ರೂಪಾಯಿಗಳ Ex-gratia ಕೊಡುತ್ತಿದ್ದೀರಿ. ಆ ex-gratia ವನ್ನು ಮುಂದುವರೆಸಬೇಕು ಮತ್ತು ಪ್ರಿನ್ಸಿಪಾಲರಿಗೆ pay-scale ನಿಗದಿ ಮಾಡುವ ಕೆಲಸ ಆಗಬೇಕು. ಆಗ ಬಹಳ ಖುಷಿಯಿಂದ ಪಾಠ ಮಾಡಲು ಸಮರ್ಥರು ಬರುತ್ತಾರೆ. ಖಾಸಗಿ ಪಿ.ಯು. ಕಾಲೇಜಿಗೆ ಪ್ರಿನ್ಸಿಪಾಲರಾಗಿ ಹೋದರೆ 2 ಲಕ್ಷ ಸಂಬಳ ಕೊಡುತ್ತಾರೆ. ಆದರೆ ನಮ್ಮಲ್ಲಿ Lecturers ಗಿಂತಲೂ ಕಡಿಮೆ ಸಂಬಳ ತೆಗೆದುಕೊಳ್ಳುತ್ತಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡರೆ, ನಾನು, 5 ನಿಮಿಷ ಮಾತನಾಡಿ ಎಂದು ಹೇಳಿದಾಗ ತಾವು, 10 ನಿಮಿಷ ಮಾತನಾಡುತ್ತೇನೆ ಎಂದು ಹೇಳಿದಿರಿ. ಆದರೆ ನೀವು ಮಾತನಾಡಲು ಪ್ರಾರಂಭ ಮಾಡಿ 14 ನಿಮಿಷಗಳಾಗಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಬಜೆಟ್ ಮೇಲೆ ಒಂದೆರಡು ಗಂಟೆ ಮಾತನಾಡುವುದಕ್ಕೆ ಅವಕಾಶ ಕೊಡದೇ ಹೋದರೂ ಈಗ ಕನಿಷ್ಠ 15 ನಿಮಿಷಗಳನ್ನಾದರೂ ಕೊಡಬೇಕಾಗುತ್ತದೆ. ಶಿಕ್ಷಕರು ಅನುಭವಿಸುತ್ತಿರುವ ಕಷ್ಟವನ್ನಾದರೂ ಹೇಳಿಕೊಳ್ಳಬೇಕು ಅಲ್ಲವೇ?

**ಸಭಾಪತಿಯವರು:-** ನೀವು, 10 ನಿಮಿಷ ಮಾತನಾಡುತ್ತೇನೆ ಎಂದು ಭಾಷಣ ಶುರು ಮಾಡಿದಿರಿ, ಆದರೆ 14 ನಿಮಿಷವಾಗಿದೆ. ಹೀಗೆ ಮಾಡಿದರೆ ನಾನು voting ಗೆ ಹೋಗುತ್ತೇನೆ ಅಷ್ಟೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಕೇವಲ ಒಂದು ನಿಮಿಷ ಅಷ್ಟೇ ಮಾತನಾಡುತ್ತೇನೆ. 1985 ರಿಂದ 1995ರ ಅವಧಿಯಲ್ಲಿ ಪ್ರಾರಂಭವಾದ ಅನುದಾನರಹಿತ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಿದಾಗ ನಾನು, ಮಾನ್ಯ ಮರಿತಿಬ್ಬೇಗೌಡರು ಹಾಗೂ ಇತರ ಶಾಸಕರು ಆ ಅವಧಿಯನ್ನು 2-3 ವರ್ಷಗಳ ಕಾಲ ವಿಸ್ತಾರ ಮಾಡಿ ಎಂದು ಕೇಳಿದಾಗ, ಮಾಡುತ್ತೇವೆ ಎಂದು ಹೇಳಿದ್ದಿರಿ.

**ಶ್ರೀ ಸಿದ್ಧರಾಮಯ್ಯ:-** ಹಾಗೆ ಹೇಳಿಲ್ಲ, ಪರಿಶೀಲನೆ ಮಾಡೋಣ ಎಂದು ಹೇಳಿದ್ದೆ.

270/23-2-2018/ಡಿಎಸ್-ಬಿಎನ್ಎಸ್/5.10

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಈಗ ಅವಕಾಶ ಇರುವಾಗ ಎರಡು-ಮೂರು ವಿಷಯಗಳ ಬಗ್ಗೆ ಘೋಷಣೆ ಮಾಡಿಬಿಡಿ. ಕಳೆದ 25 ವರ್ಷಗಳಿಂದ 'ಡಿ' ಗ್ರೂಪ್ ನೌಕರರು ನೇಮಕಾತಿಯಾಗಿದ್ದಾರೆ. ಕಡತ ಆರ್ಥಿಕ ಇಲಾಖೆಗೆ ಬಂದಿದೆ. 'ಡಿ' ಗ್ರೂಪ್ ನೌಕರರು 138 ಜನರು ಮಾತ್ರ ಉಳಿದುಕೊಂಡಿದ್ದಾರೆ. ಆಮೇಲೆ 'ಡಿ' ಗ್ರೂಪ್ ನೌಕರರನ್ನು ಹೊರ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಂಡಿದ್ದಾರೆ. ಹಳೆ ಪದ್ಧತಿಯಲ್ಲಿ ನೇಮಕಾತಿಯಾದವರು 'ಡಿ' ಗ್ರೂಪ್ ನೌಕರರು 138 ಜನರು ಇದ್ದಾರೆ. ಅವರದೊಂದು ಅನುಮೋದನೆ ಕೊಡಬೇಕಾಗಿದೆ. ವೇತನ ತಾರತಮ್ಯ, Grant-in-Aid ನಲ್ಲಿ ಉಳಿದಿರುವಂತಹ ಕಡತಗಳ ವಿಲೇವಾರಿ, ಮೂರು ವರ್ಷಗಳ ಅನುದಾನ ಕೊಡುವಂಥದ್ದು, 'ಡಿ' ಗ್ರೂಪ್ ನೌಕರರ ಸಮಸ್ಯೆಗಳನ್ನು ಇತ್ಯರ್ಥ ಮಾಡಬೇಕು. ವೇತನ ಆಯೋಗ ಮತ್ತು ಮೇಕೆದಾಟು, ವಿಶೇಷವಾಗಿ ಮೈಸೂರಿನ garbage ಸಮಸ್ಯೆ, ಸರ್ಕಾರಿ ಶಾಲೆಗಳ ದುರಸ್ತಿಗೆ ಮಹತ್ವ ಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಇಷ್ಟು ಕೆಲಸಗಳನ್ನು ಮಾಡಿಬಿಟ್ಟರೆ ನಾನು ಸ್ವಲ್ಪ ಸಮಾಧಾನವಾಗಿ ಉಸಿರಾಡಬಹುದು. ಧನ್ಯವಾದಗಳು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಬಸನಗೌಡ ಪಾಟೀಲ್ ಯತ್ನಾಳ್‌ರವರೇ, ತಾವು ಐದು ನಿಮಿಷ ಮಾತನಾಡಿ. Clarification ಕೇಳಿ ಬಜೆಟ್ ಮೇಲೆ ಭಾಷಣ ಇಲ್ಲ.

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್):-** ಮಾನ್ಯ ಸಭಾಪತಿಯವರೇ, ಈ ಬಜೆಟ್‌ನ್ನು ಪರ್ಯಾಲೋಚಿಸುವುದರ ಬಗ್ಗೆ ತಾವು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ಆದರೆ ನಾನು ಆರ್ಥಿಕ ತಜ್ಞನೂ ಅಲ್ಲ, ಆರ್ಥಿಕ ವಿಚಾರದಲ್ಲಿ ಮಾತನಾಡುವಷ್ಟು ಬುದ್ಧಿವಂತನೂ ಅಲ್ಲ. ನಾನು ಮಾತನಾಡುವಂತಹ ಉದ್ದೇಶವೇನೆಂದರೆ, ಈ ಬಜೆಟ್ ಮೇಲೆ ವಿಸ್ತೃತವಾಗಿ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕೊಡಬೇಕಾಗಿತ್ತು. ಆದರೆ ಅದು ನಿಮ್ಮ ತಪ್ಪು ಎಂದು ನಾನು ಹೇಳುವುದಿಲ್ಲ. ಇವತ್ತೇನು ಶಾಸಕರುಗಳ ಗೈರು ಹಾಜರಾತಿ, ಶಾಸಕರುಗಳು ಸಕ್ರಿಯವಾಗಿ ಪಾಲ್ಗೊಳ್ಳದಿರುವುದರಿಂದ ಶಾಸಕರುಗಳಿಲ್ಲದೆ ಬಿಕೋ ಎನ್ನುತ್ತಿದೆ ಎಂದು ಸಾಕಷ್ಟು ಪತ್ರಿಕೆಗಳಲ್ಲಿ ಚರ್ಚೆಯಾಗುತ್ತಿದೆ. 28ನೇ ತಾರೀಖಿನವರೆಗೆ ಇರುವಂತಹ ಅಧಿವೇಶನವನ್ನು 23ನೇ ತಾರೀಖಿಗೆ ಮೊಟಕುಗೊಳಿಸುವಂತಹ ಅನಿವಾರ್ಯ ಸ್ಥಿತಿ ಬಂದಿದೆ.

ಮಾನ್ಯ ಸಭಾಪತಿಯವರೇ, ಇತ್ತೀಚಿನ ವರ್ಷಗಳಲ್ಲಿ ಪೂರ್ಣ ಪ್ರಮಾಣದ ಐದು ವರ್ಷ ಮುಖ್ಯಮಂತ್ರಿಗಳಾಗಿ, ಬಹುಶಃ ದಿವಂಗತ ದೇವರಾಜು ಅರಸು ರವರ ನಂತರ ಹೆಚ್ಚು ಕಾಲ ಮುಖ್ಯಮಂತ್ರಿಯಾದಂತಹ ಕೀರ್ತಿ ಇವತ್ತು ಸನ್ಮಾನ್ಯ ಸಿದ್ಧರಾಮಯ್ಯನವರಿಗೆ ಸಲ್ಲುತ್ತಿದೆ.

(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರೆಲ್ಲರೂ ಮೇಜು ಕುಟ್ಟಿ ಸ್ವಾಗತಿಸಿದರು)

ಅದರ ಜೊತೆಗೆ 13 ಸಲ ಬಜೆಟ್‌ನ್ನು ಮಂಡಿಸಿದ ಸಾಧನೆ ಕೂಡ ಅವರಿಗೆ ಇದೆ. ಅವರಿಗೆ ನಾನು ವೈಯಕ್ತಿಕವಾಗಿ ಅಭಿನಂದನೆಗಳನ್ನು ಹೇಳಬೇಕಾಗುತ್ತದೆ. ಏಕೆಂದರೆ, ನಾನು ಯಾವುದೇ ಪಕ್ಷಕ್ಕೆ ಸೀಮಿತನಾಗದಿರುವಂತಹ ಒಬ್ಬ ಪಕ್ಷೇತರ ಸದಸ್ಯ. ನಾನು ನಂಬಿದ ಪಕ್ಷ ಟಿಕೆಟ್ ಕೊಡದೆ ಮುಗಿಸಬೇಕು ಎಂದು ಕೆಲವು ನಾಯಕರ ಕುತಂತ್ರದಿಂದ ನಾನು ರಾಜಕೀಯವಾಗಿ ನನ್ನ ಕತೆ ಮುಗಿಯಿತು ಎನ್ನುವ ಸಮಯದಲ್ಲಿ ಮತ್ತೆ ವಿಜಯಪುರ, ಬಾಗಲಕೋಟೆ ಜಿಲ್ಲೆಯ ಜನ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಇಡೀ ಕರ್ನಾಟಕದ 25 ಜನ ಸದಸ್ಯರುಗಳಲ್ಲಿ ಅತೀ ಹೆಚ್ಚು ಮತಗಳಿಂದ ಆಯ್ಕೆ ಮಾಡಿ ಮತ್ತೊಂದು ರಾಜಕೀಯ ಪುನರ್ಜನ್ಮ ಕೊಟ್ಟಿದ್ದಾರೆ. ಅದರಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಪಂಚಾಯಿತಿ ಸದಸ್ಯರು, ಸ್ಥಳೀಯ ಸಂಸ್ಥೆಯ ಮತದಾರರು ನನಗೆ ಮತ ಹಾಕಿರುವುದರಿಂದ ನಾನು ಇಲ್ಲಿಗೆ ಬಂದಿದ್ದೇನೆ.

ಮಾನ್ಯ ಸಭಾಪತಿಯವರೇ, ಇವತ್ತು ಈ ಸರ್ಕಾರದ ಕೊನೆಯ ಅಧಿವೇಶನದ ಕೊನೆಯ ದಿನ. ಯಾವಾಗಲೂ ಯಾವುದೇ ಒಂದು ಕೊನೆಯ ಅಧಿವೇಶನ ಇದ್ದಾಗ ಆರೋಗ್ಯಕರವಾದ ಚರ್ಚೆ, ಆತ್ಮೀಯತೆ, ಸರ್ಕಾರದಲ್ಲಿರುವಂತಹ ಮುಖ್ಯಮಂತ್ರಿಗಳು, ಮಂತ್ರಿಗಳು ಮಾಡಿರುವಂತಹ ಒಳ್ಳೆಯ ಕೆಲಸಗಳನ್ನು ನಾವು ಸ್ಮರಣೆ ಮಾಡಿಕೊಂಡು ಅವರಿಗೆ ಅಭಿನಂದನೆ ಸಲ್ಲಿಸುವುದರ ಮೂಲಕ ಎಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಡವಿದ್ದೇವೆ ಎಂದು ಹೇಳುವಂತಹ ವೇದಿಕೆಯಾಗಬೇಕಾಗಿತ್ತೇ ಹೊರತು ಕೊನೆಯ ಘಳಿಗೆಯವರೆಗೂ, ಕೊನೆಯ ನಿಮಿಷದವರೆಗೂ ಕೇವಲ ರಾಜಕೀಯ ಉದ್ದೇಶದಿಂದಲೇ ವಿಧಾನ ಮಂಡಲ ದುರುಪಯೋಗ ಮಾಡಿಕೊಂಡಿರುವುದು ನಿಜಕ್ಕೂ ಒಳ್ಳೆಯ ಪ್ರಜಾತಂತ್ರ ವ್ಯವಸ್ಥೆಯ ರೀತಿಯಲ್ಲ ಎನ್ನುವುದು ನನ್ನ ವೈಯಕ್ತಿಕ ಭಾವನೆ. ಇವತ್ತು ಮುಖ್ಯಮಂತ್ರಿಗಳು ಐದು ವರ್ಷ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅನೇಕ ತಪ್ಪುಗಳು ಕೂಡ ಆಗಿರುತ್ತವೆ. ಯಾವುದೇ ಒಂದು ಸರ್ಕಾರ, ಯಾವುದೇ ಒಬ್ಬ ವ್ಯಕ್ತಿ ಪರಿಪೂರ್ಣ ಇರುವುದಿಲ್ಲ. ಆದರೆ ಒಳ್ಳೆಯ ಕೆಲಸ ಮಾಡಿದಾಗಲೂ ಕೂಡ ಅವರು ಹೋಗುವಾಗ, ಮುಂದೆ ಯಾರ ಸರ್ಕಾರ ಬರುತ್ತದೆ ಎಂದು ಈ ರಾಜ್ಯದ ಜನರು ತೀರ್ಮಾನ ಮಾಡುತ್ತಾರೆ. ಹಿಂದೆ ನಾನು ಲೋಕಸಭೆ ಸದಸ್ಯನಿದ್ದಾಗ, ಕೇಂದ್ರದಲ್ಲಿ ಸಚಿವನಾಗಿದ್ದಾಗ ನಮ್ಮಲ್ಲಿ ಬಹಳ overconfidence ಇತ್ತು. N.D.A. (National Democratic Alliance) ಸರ್ಕಾರ ಇದ್ದಾಗ ಮಾನ್ಯ ಅಟಲ್ ಬಿಹಾರಿ ವಾಜಪೇಯಿರವರು ಕೊನೆಯ ಸಂಸದೀಯ ಪಕ್ಷ ಸಭೆ ಕರೆದಾಗ ನಾವು ಐದು ವರ್ಷ ಪೂರ್ತಿಯಾಗಿ ಸರ್ಕಾರ ನಡೆಸೋಣ ಎನ್ನುವ ಮಾತನ್ನು ಹೇಳಿದರು. ಆದರೆ ಕೆಲವು ಜನರಿಗೆ ಏನೋ ಭಾರತ ಪ್ರಕಾಶಿಸುತ್ತಿದೆ, feel good factor. ಬಹಳಷ್ಟು ದೇಶದಲ್ಲಿ ನಮ್ಮ ಬಗ್ಗೆ ಒಳ್ಳೆಯ ಅಭಿಪ್ರಾಯ ಇದೆ, ನಾವು ಸುವರ್ಣ ಚತುಷ್ಪಥ ರಸ್ತೆ, ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ, ಸರ್ವ ಶಿಕ್ಷಣ ಅಭಿಯಾನ, ಇವುಗಳನ್ನೆಲ್ಲಾ ಮಾಡಿದ್ದೇವೆ. ಈ ರೀತಿ ಅತಿಯಾದ ನಂಬಿಕೆಯಿಂದ ಬರಗಾಲದ ಸಂದರ್ಭದಲ್ಲಿ ನಾವು ಚುನಾವಣೆಯನ್ನು ಎದುರಿಸಬೇಕಾಯಿತು. ನಾವೇ ಸಚಿವರಾಗಿದ್ದಾಗ ಹೇಳುತ್ತಿದ್ದೆವು, ಇನ್ನೂ ನಮಗೆ ಆರು ತಿಂಗಳು ಅವಕಾಶ ಇದೆ. ಇನ್ನು ನಾವು ಒಳ್ಳೆಯ ಕೆಲಸ ಮಾಡಬಹುದು ಎಂದು ಇದ್ದಾಗಲೂ ಕೂಡ overconfidence ಮತ್ತು ಬಹಳ ಅತಿಯಾದ ಆತ್ಮ ವಿಶ್ವಾಸದಿಂದ ಸರ್ಕಾರ ಬಿದ್ದು ಹೋಯಿತು. ಸರ್ಕಾರ ಬರಲಿಲ್ಲ, ಮತ್ತೊಮ್ಮೆ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಪ್ರಧಾನ ಮಂತ್ರಿಯಾಗಬೇಕಾಗಿತ್ತು, ಆಗಲಿಲ್ಲ. ಇದು ನಮ್ಮ ದೇಶದ ದುರಂತ. ಅದರ ಬದಲು U.P.A. (United Progressive Alliance) ಸರ್ಕಾರ ಬಂತು. U.P.A. ಸರ್ಕಾರದವರು ನಾವು ಮೂರೂವರೆ ಲಕ್ಷ ಕೋಟಿ ಸಾಲ ಮನ್ನಾ ಮಾಡಿದ್ದೇವೆ, ದೇಶದಲ್ಲಿ ಭೂಸ್ವಾಧೀನದಲ್ಲಿ ದೊಡ್ಡ ಪರಿವರ್ತನೆಯನ್ನು ನಾವು ತಂದಿದ್ದೇವೆ. MGNREGA (Mahatma Gandhi National Rural Employment Guarantee Act) ತೆಗೆದುಕೊಂಡು ಬಂದಿದ್ದೇವೆ. ಈ ರೀತಿ ಅನೇಕ ಕ್ರಾಂತಿಕಾರಕ ಕೆಲಸ ಮಾಡಿದ್ದೇವೆಂದು U.P.A. ಸರ್ಕಾರದವರು ಬಹಳ overconfident ಆದರು. ಜನ ಅವರನ್ನು ತಿರಸ್ಕಾರ ಮಾಡಿದರು. ಇವತ್ತು ಆಡಳಿತದಲ್ಲಿರುವಂಥವರೆಲ್ಲರೂ ತಿಳಿದುಕೊಳ್ಳಬೇಕು, ಜನರ mood ಈ 15 ದಿವಸಗಳಲ್ಲಿ ಏನಿರುತ್ತದೆಯೋ ಗೊತ್ತಾಗುವುದಿಲ್ಲ. ಈ ದೇಶದಲ್ಲಿ, ರಾಜ್ಯದಲ್ಲಿ ಬಹಳಷ್ಟು ಒಳ್ಳೆಯ ಕೆಲಸ ಮಾಡಿದಂತಹ ಮುಖ್ಯಮಂತ್ರಿಗಳು ಸೋತಿರುವಂತಹ ಉದಾಹರಣೆಗಳಿವೆ. ಬಹಳಷ್ಟು ಒಳ್ಳೆಯ ಕೆಲಸ ಮಾಡಿದಂತಹ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸರ್ಕಾರಗಳು ಬಿದ್ದು ಹೋಗಿರುವಂಥದ್ದು ಇದೆ. ಆದರೆ, ನಾನು ಮಾನ್ಯ ಸಿದ್ಧರಾಮಯ್ಯನವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಈ ಐದು ವರ್ಷದಲ್ಲಿ ರೆಸಾರ್ಟ್ ಸಂಸ್ಕೃತಿ ಬರಲಿಲ್ಲ, ಶಾಸಕರು blackmail ಮಾಡುವಂತಹ ಸಂಸ್ಕೃತಿ ಬರಲಿಲ್ಲ.

(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರೆಲ್ಲರೂ ಮೇಜು ಕುಟ್ಟಿ ಸ್ವಾಗತಿಸಿದರು)

ಮಾನ್ಯ ಸಿದ್ಧರಾಮಯ್ಯನವರ ಬಗ್ಗೆ ಭಿನ್ನಮತ ಕೇಳಲಿಲ್ಲ. ಇದು ನಿಜಕ್ಕೂ ಅವರು ಮಾಡಿದಂತಹ ಸಾಧನೆ. ಇಲ್ಲಿ ಅನೇಕ ಸಚಿವರು ಇದ್ದಾರೆ. ಅವರು ಒಳ್ಳೆಯ ಕೆಲಸ ಮಾಡಿದ್ದಾರೆ. ಬಹಳ ಕ್ರಿಯಾಶೀಲರಾಗಿ, ತಮ್ಮ ಇಲಾಖೆಯನ್ನು ಬಹಳ ಒಳ್ಳೆಯ ರೀತಿಯಿಂದ ನಡೆಸಿದಂತಹ ಅನೇಕ ಸಚಿವರಿದ್ದಾರೆ.

**ಸಭಾಪತಿಯವರು**:- ಈಗ ತಮ್ಮ ಸಮಯ ಆಯಿತು, ಮುಗಿಸಿಬಿಡಿ.

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್)**:- ಮಾನ್ಯ ಸಭಾಪತಿಯವರೇ, ನಾನು ಇನ್ನು ಮುಗಿಸಿಲ್ಲ.

**ಸಭಾಪತಿಯವರು**:- ನಾನು ಕೊಟ್ಟ ಸಮಯ ಮುಗಿಯಿತು. ತಾವು ಪ್ರಾರಂಭ ಮಾಡಿ ಏಳು ನಿಮಿಷ ಆಯಿತು.

**ಶ್ರೀ ಎಂ.ಆರ್.ಸೀತಾರಾಂ**:- ಮಾನ್ಯ ಸಭಾಪತಿಯವರೇ, ಅವರು ಇನ್ನು ಎರಡು ನಿಮಿಷ ಮಾತನಾಡಲಿ.

(ಗೊಂದಲ)

**ಸಭಾಪತಿಯವರು**:- ನಿಮ್ಮನ್ನೆಲ್ಲಾ ಹೊಗಳುತ್ತಿದ್ದರೆ ಇನ್ನು ಸಮಯ ಕೊಡಬೇಕು, ಬಯ್ಯುತ್ತಿದ್ದರೆ ಸಮಯ ಕೊಡಬಾರದು. ಅದು ಹೇಗೆ ಸರಿಯಾಗುತ್ತದೆ? ಇನ್ನು ಯಾರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ.

**ಶ್ರೀ ಪುಟ್ಟಣ್ಣ**:- ಮಾನ್ಯ ಸಭಾಪತಿಯವರೇ, ಬಜೆಟ್ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

**ಸಭಾಪತಿಯವರು**:- ನಾನೇನೂ ಮಾಡುವುದಕ್ಕಾಗುವುದಿಲ್ಲ. I can't help it. ಎಲ್ಲರಿಗೂ ಅವಕಾಶ ಕೊಡುವುದಕ್ಕಾಗುವುದಿಲ್ಲ.

**ಶ್ರೀ ಪುಟ್ಟಣ್ಣ**:- ಮಾನ್ಯ ಸಭಾಪತಿಯವರೇ, ಬಜೆಟ್‌ನಲ್ಲೂ ಮಾತನಾಡಬೇಡಿ, ಇದರಲ್ಲೂ ಮಾತನಾಡಬೇಡಿ ಎಂದರೆ ಹೇಗೆ?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಬಸನಗೌಡ ಪಾಟೀಲ್ ಯತ್ನಾಳ್‌ರವರೇ, ಇನ್ನು ಎರಡು ನಿಮಿಷ ಮಾತನಾಡಿ. ಇದರಲ್ಲಿ ಭಾಷಣ ಮಾಡುವ ಹಾಗಿಲ್ಲ.

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಧನವಿನಿಯೋಗ ವಿಧೇಯಕದ ಬಗ್ಗೆ ಮಾತನಾಡಲಿ.

**ಶ್ರೀ ಪುಟ್ಟಣ್ಣ:-** ವಿಧೇಯಕದ ಬಗ್ಗೆ ಐದು ನಿಮಿಷ ಮಾತನಾಡುವುದು ಬೇಡವೇ?

**ಸಭಾಪತಿಯವರು:-** ಈಗ ಬಜೆಟ್ ಮೇಲೆ ಭಾಷಣ ಮುಗಿದಿದೆ. ಉಪ ಸಭಾಪತಿಯವರು clarification ಕೇಳುವುದಿದ್ದರೆ ಕೇಳಿ.

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್):-** ಮಾನ್ಯ ಸಭಾಪತಿಯವರೇ, ಕೊನೆಯ ದಿವಸವೂ ಈ ರೀತಿ ಮಾಡಿದರೆ ಹೇಗೆ?

**ಸಭಾಪತಿಯವರು:-** ಇದು ನಿಮಗೆ ಮಾತ್ರ ಕೊನೆಯ ಅಧಿವೇಶನವಲ್ಲ. ನನಗೂ ಕೊನೆಯ ಅಧಿವೇಶನವಾಗಿದೆ. I can't help it. I have to go by tradition. ತಾವು ಐದು ನಿಮಿಷ ಎಂದು ಹೇಳಿ ಇಪ್ಪತ್ತು ನಿಮಿಷ ಮಾತನಾಡುವುದಕ್ಕಾಗುವುದಿಲ್ಲ. ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್):-** ಮಾನ್ಯ ಸಭಾಪತಿಯವರೇ, ಕೊನೆಯ ದಿವಸವಾದರೂ ಒಳ್ಳೆಯ ನಿರ್ಣಯ ಮಾಡಿ. ಒಳ್ಳೆಯ ರೀತಿಯಲ್ಲಿ ನಗುತ್ತಾ ಎಲ್ಲರಿಗೂ ಅವಕಾಶ ಕೊಡಿ.

**ಸಭಾಪತಿಯವರು:-** ಉಪ ಸಭಾಪತಿಯವರೇ, ತಾವು ಮಾತನಾಡಿ.

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್):-** ಮಾನ್ಯ ಸಭಾಪತಿಯವರೇ, ಇದು ಸರಿಯಲ್ಲ. ನಾನು ಇನ್ನು ಸರ್ಕಾರದ ವೈಫಲ್ಯದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

**ಸಭಾಪತಿಯವರು:-** Clarification ಕೇಳುವುದು ಅಷ್ಟೆ, ಬಜೆಟ್ ಬಗ್ಗೆ ಭಾಷಣ ಇಲ್ಲ. ಬಜೆಟ್ ಮೇಲಿನ ಭಾಷಣ ಮುಗಿದಿದೆ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿರುವುದರ ಮೇಲೆ clarification ಕೇಳುತ್ತೇನೆ ಎಂದು ಉಪ ಸಭಾಪತಿಯವರು ಹೇಳಿದ್ದಾರೆ. ಎಲ್ಲರಿಗೂ ಅವಕಾಶ ಕೊಡುವುದಕ್ಕಾಗುವುದಿಲ್ಲ. ದಯವಿಟ್ಟು ಕ್ಷಮಿಸಿ. Clarification ಎಂದು 15-20 ನಿಮಿಷ ಮಾತನಾಡಿದರೆ ಹೇಗೆ? ಉಪ ಸಭಾಪತಿಯವರೇ, ತಾವು ಕೇಳಿ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:- ಮಾನ್ಯ ಸಭಾಪತಿಯವರೇ, ನಾನು ಯಾವಾಗಲೂ ಭಾಷಣ ಮಾಡುವುದಿಲ್ಲ. ನಾನು ಮಾತನಾಡುವುದಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ(ಉಪ ಸಭಾಪತಿಯವರು):-** ಮಾನ್ಯ ಸಭಾಪತಿಯವರೇ, ಕಳೆದ ಎರಡು ಆಯವ್ಯಯದಲ್ಲೂ ಕೂಡ ನಾನು ಈ ಸದನದಲ್ಲಿ ಎರಡು ಪ್ರಮುಖ ವಿಚಾರಗಳ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಬಹಳವಾಗಿ ಒತ್ತಾಯ ಮಾಡಿದ್ದೇನೆ. ಎರಡು ಆಯವ್ಯಯದಲ್ಲೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಭರವಸೆಯನ್ನು ಕೊಟ್ಟರು. ಈ ಸಲ ನನಗೆ ಆ ವಿಷಯದ ಬಗ್ಗೆ ಬಹಳ ನಿರಾಸೆಯಾಗಿದೆ. ಈ ಸಲ ಖಂಡಿತವಾಗಿಯೂ ಮಾನ್ಯ ಮುಖ್ಯಮಂತ್ರಿಗಳು ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಈ ಸರ್ಕಾರದ ಐದು ವರ್ಷದ ಅವಧಿಯಲ್ಲಿ ಸುಮಾರು ನೂರು ಪಾಲಿಟೆಕ್ನಿಕ್ ಕಾಲೇಜುಗಳನ್ನು ಈ ರಾಜ್ಯದಲ್ಲಿ ತೆರದಿದ್ದಾರೆ.

(271) 23-02-2018 bkp-bns 5-20

**ಉಪ ಸಭಾಪತಿಯವರು(ಮುಂದು. .)**

ಮೈಸೂರಿನಲ್ಲಿ ಸಿ.ಪಿ.ಸಿ. ಸಂಜೆ ಪಾಲಿಟೆಕ್ನಿಕ್ ಕಾಲೇಜನ್ನು ಪ್ರಾರಂಭ ಮಾಡಿದರೆ, ಅಲ್ಲಿ ಕೆಲಸ ಮಾಡುವಂತಹ ಬಹಳಷ್ಟು ಮಂದಿ ನೌಕರರಿಗೆ ಅನುಕೂಲವಾಗುತ್ತದೆ. ಸರ್ಕಾರಿ ಸಂಜೆ ಪಾಲಿಟೆಕ್ನಿಕ್ ಮೈಸೂರಿನಲ್ಲಿ ಇರುವುದಿಲ್ಲ. ಸಿ.ಪಿ.ಸಿ. ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಸಂಜೆ ಕಾಲೇಜನ್ನು ಪ್ರಾರಂಭ ಮಾಡುವುದರಿಂದ ಅಧಿಕವಾದ ಖರ್ಚು ಏನೂ ಬರುವುದಿಲ್ಲ. Faculty ಯನ್ನು ಮಾತ್ರ ನೇಮಕ ಮಾಡಬೇಕಾಗುತ್ತದೆ ಎಂದು ನಾವು ಬಹಳವಾಗಿ ಒತ್ತಾಯ ಮಾಡಿದ್ದೇವೆ. ಇನ್ನೊಂದು ಪ್ರಮುಖ ಅಂಶ ಏನೆಂದರೆ, ಇವತ್ತು ರಾಜ್ಯದ 4 ಕಂದಾಯ ವಿಭಾಗದಲ್ಲಿಯೂ ಕೂಡ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತಾಲಯವನ್ನು ಎರಡು ಕಡೆ ಮಾಡಲಾಗಿದೆ. ಆದರೆ, 8 ಜಿಲ್ಲೆಗಳಿಗೂ ಸೇರಿದಂತೆ ಮೈಸೂರು ವಿಭಾಗದಲ್ಲಿ ಬಹಳಷ್ಟು ಶಿಕ್ಷಣ ಸಂಸ್ಥೆಗಳು ತುಂಬಾ ಸಂಖ್ಯೆಯಲ್ಲಿವೆ. ಬಹಳ ಕೆಲಸದ ಒತ್ತಡ ಇದೆ. ಆದರೆ, ಮೈಸೂರಿನಲ್ಲಿ ಸಾರ್ವಜನಿಕ ಶಿಕ್ಷಣ ಆಯುಕ್ತಾಲಯವನ್ನು ತೆರೆಯಬೇಕೆನ್ನುವ ಬೇಡಿಕೆ ಬಹಳ ವರ್ಷಗಳಿಂದ ಇದೆ. ತಾವು ಕಳೆದ ವರ್ಷದ ಬಜೆಟ್‌ನಲ್ಲಿ ಮುಂದಿನ ಬಾರಿ ಖಂಡಿತವಾಗಿಯೂ ಘೋಷಣೆ ಮಾಡುತ್ತೇವೆಂದು ಹೇಳಿದ್ದೀರಿ. ಈ ಒಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತಾಲಯ ಮೈಸೂರಿನಲ್ಲಿ ಆದಲ್ಲಿ 8 ಜಿಲ್ಲೆಗಳಲ್ಲಿ ಇರುವಂತಹ ಶಿಕ್ಷಣ ಸಂಸ್ಥೆಗಳ ಆಡಳಿತ ವ್ಯವಸ್ಥೆಗೆ ಒಂದು ಉತ್ತಮವಾದ ವ್ಯವಸ್ಥೆ ಸಿಕ್ಕುತ್ತದೆ. ಒಂದು ವೇಗ ಸಿಕ್ಕುತ್ತದೆ. ಬಹಳಷ್ಟು ಅನುಕೂಲವಾಗುತ್ತದೆ. ವಿದ್ಯಾರ್ಥಿಗಳಿಗೆ ಮತ್ತು ಎಲ್ಲಾ ನೌಕರ ಬಂಧುಗಳಿಗೆ ಅನುಕೂಲವಾಗುತ್ತದೆ. ದಯಮಾಡಿ ತಮ್ಮ ಅವಧಿಯಲ್ಲಿ ಈ ಬಗ್ಗೆ ಈ ದಿನವೇ ಮೈಸೂರು ವಿಭಾಗದಲ್ಲಿ ಮೈಸೂರು ಸಾರ್ವಜನಿಕ ಶಿಕ್ಷಣ ಆಯುಕ್ತಾಲಯ ಮತ್ತು ಸಿ.ಪಿ.ಸಿ. ಪಾಲಿಟೆಕ್ನಿಕ್‌ನಲ್ಲಿ ಸಂಜೆ ಪಾಲಿಟೆಕ್ನಿಕ್ ಕಾಲೇಜುಗಳನ್ನು ನಡೆಯುವಂತಹದ್ದನ್ನು ತಾವು ಘೋಷಣೆ ಮಾಡಬೇಕೆಂದು ಮಾನ್ಯ ಸಭಾಪತಿಯವರ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಶ್ರೀಯುತ ಪುಟ್ಟಣ್ಣನವರು ಒಂದೆರಡು ನಿಮಿಷ ಮಾತನಾಡಿ. clarification ಮಾತ್ರ ಕೇಳಬೇಕು. ಆದರೆ, ಬಜೆಟ್ ಮೇಲೆ ಭಾಷಣ ಇಲ್ಲ. You can ask any clarification.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ತಮ್ಮ ಎದುರುಗಡೆಯೇ ಕಳೆದ ಮೂರು ತಿಂಗಳ ಹಿಂದೆ ಚರ್ಚೆಯಾಗಿದೆ. ಗ್ರಾಮ ಪಂಚಾಯಿತಿಯಗಳ ಹಂತದಲ್ಲಿ ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳ ಹೆಸರಿನಲ್ಲಿ ಸ್ವಲ್ಪ ಸ್ಕೂಲ್‌ಗಳನ್ನು ಮಾಡಿ ಎಂದು ಮಾನ್ಯ ಶಿಕ್ಷಣ ಸಚಿವರಾದ ಶ್ರೀಯುತ ತನ್ವೀರ್ ಸೇಠ್ ರವರಿಗೆ ಹೇಳದಂತಹ ಸಂದರ್ಭದಲ್ಲಿ ಅವರು ಈ ಬಗ್ಗೆ ಒಪ್ಪಿಕೊಂಡಿದ್ದರು. ಆ ಸಂಬಂಧ ಮಾನ್ಯ ಸಚಿವರು 100 ಪಬ್ಲಿಕ್ ಶಾಲೆಗಳನ್ನು ತೆರೆಯುತ್ತೇವೆಂದು ಹೇಳಿದ್ದಾರೆ. ಅದಕ್ಕೆ ಮಾನ್ಯ ಸಚಿವರಿಗೆ ಅಭಿನಂದನೆಗಳು. ಆದರೆ ಇಲ್ಲಿ ಏನಾಗಿದೆ ಎಂದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾರಂಭ ಮಾಡುವಂತಹ ಈ ಒಂದು ಶಾಲೆಗೆ 5 ಲಕ್ಷ ರೂಪಾಯಿಗಳನ್ನು ಇಡುತ್ತೇವೆಂದು ಹೇಳಿದ್ದಾರೆ. ಒಂದು ಶಾಲೆಗೆ 5 ಲಕ್ಷ ರೂಪಾಯಿಗಳು ಏನೇನು ಸಾಲದು. 1ನೇ ತರಗತಿಯಿಂದ 12ನೇ ತರಗತಿಯವರೆಗೆ ನೀವು ಪ್ರಾರಂಭ ಮಾಡುವುದು ಒಳ್ಳೆಯ ವಿಚಾರವಾಗಿದೆ. ಇದು ಒಳ್ಳೆಯ concept. ನಾವು ಸಹ ಅದನ್ನೇ ಹೇಳುತ್ತೇವೆ. ಈ ನಿಟ್ಟಿನಲ್ಲಿ ಕೆಲಸ ಮಾಡಿದ್ದೀರಿ. ಖಾಸಗಿ ಶಾಲೆಗಳು ಸಹ ನಿಲ್ಲುತ್ತವೆ. ದಯಮಾಡಿ ಒಂದು ಶಾಲೆಗೆ ಕನಿಷ್ಠ ಎಂದರೆ 2 ಕೋಟಿ ರೂಪಾಯಿಗಳನ್ನು ಕೊಡಬೇಕು. ಎರಡು ಕೋಟಿ ರೂಪಾಯಿಗಳಲ್ಲಿ ಶಾಲೆಗಳನ್ನು ಮಾಡಿದರೆ ಅಲ್ಲಿ ಒಳ್ಳೆಯ ಶಾಲೆಗಳು ಬರುತ್ತವೆ. ಮಕ್ಕಳು ಸಹ ಅಲ್ಲಿಗೆ ಬಂದು ಓದುತ್ತಾರೆ, ಮತ್ತು ಗುಣಮಟ್ಟವೂ ಹೆಚ್ಚಾಗುತ್ತದೆ. ಆದ್ದರಿಂದ, ಈ ವಿಚಾರದಲ್ಲಿ ಈ ಒಂದು ಕೆಲಸ ಮಾಡಬೇಕು.

ಇನ್ನು NEET (National Eligibility cum Entrance Test) ಪರೀಕ್ಷೆ ಬಂದಿರುವುದು ತಮಗೆಲ್ಲಾ ಗೊತ್ತಿರುವ ವಿಚಾರ. P.U.C. ಪರೀಕ್ಷೆಯಲ್ಲಿ ನಮ್ಮ ಕರ್ನಾಟಕದಲ್ಲಿ ಏನು ಪರೀಕ್ಷೆ ನಡೆಸುತ್ತೇವೆ, ಆ ಸಂಬಂಧ ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಾರೆ. ಆದರೆ, NEET ಪರೀಕ್ಷೆ ಬರೆಯಲಿಕ್ಕೆ ನಮ್ಮ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಯಾವುದೇ ರೀತಿಯಾದಂತಹ ತರಗತಿಗಳನ್ನು ನಡೆಸುತ್ತಿಲ್ಲ. ಅಂದರೆ ಮಕ್ಕಳನ್ನು ತರಬೇತಿಗೊಳಿಸುತ್ತಿಲ್ಲ. ಖಾಸಗಿ ಕಾಲೇಜುಗಳಲ್ಲಿ ಓದುತ್ತಿರುವಂತಹ ಮಕ್ಕಳಿಗೆ NEET ಪರೀಕ್ಷೆಗೂ ಕೂಡ ಅಲ್ಲಿನ ವಿದ್ಯಾರ್ಥಿಗಳನ್ನು ತಯಾರು ಮಾಡುತ್ತಾರೆ. NEET ಪರೀಕ್ಷೆಯನ್ನು ಹೇಗೆ ಬರೆಯಬೇಕು, ಯಾವ ರೀತಿಯಲ್ಲಿ ಪ್ರಶ್ನೆ ಪತ್ರಿಕೆ ಬರುತ್ತದೆ ಎಂದು ಎಲ್ಲಾ ವಿಚಾರದಲ್ಲಿ ವಿದ್ಯಾರ್ಥಿಗಳನ್ನು ತಯಾರು ಮಾಡುತ್ತಾರೆ. ಅದಕ್ಕೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಸರ್ಕಾರಿ ಕಾಲೇಜುಗಳಿಗೆ ಬಡ ಮತ್ತು ಮಧ್ಯಮ ವರ್ಗದವರ ಮಕ್ಕಳು ಬರುತ್ತಿದ್ದು, ಅವರಿಗೆ NEET ಪರೀಕ್ಷೆಯನ್ನು ಎದುರಿಸಲಿಕ್ಕೆ ಕಷ್ಟವಾಗುತ್ತದೆ. ಆದ್ದರಿಂದ, ಅವರಿಗೆ NEET ಪರೀಕ್ಷೆಯನ್ನು ಎದುರಿಸಲಿಕ್ಕೆ ಅಗತ್ಯ ತರಬೇತಿಯನ್ನು ಕೊಡುವಲ್ಲಿ ಏನಾದರೊಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವ್ಯವಸ್ಥೆಯನ್ನು ಮಾಡಬೇಕು. ಇದನ್ನು ಈ ವರ್ಷದಿಂದಲೇ ಪ್ರಾರಂಭ ಮಾಡುವಂತಹ ವ್ಯವಸ್ಥೆ ಮಾಡಬೇಕು. ಏಕೆಂದರೆ, NEET ಪರೀಕ್ಷೆ ಎನ್ನುವುದು ಅತ್ಯಂತ ಪ್ರಮುಖವಾದುದಾಗಿದೆ. ಇಷ್ಟು percentage ಎಂದು ಹೇಳಿ cut off percentage ನಿಗದಿ ಮಾಡುತ್ತಾರೆ. ಅದರ ಮೇಲೆ ಬಂದವರಿಗೆ ಮಾತ್ರ ಪ್ರವೇಶಾವಕಾಶ ಮಾಡಿಕೊಡುತ್ತಾರೆ. ಅದರ ಕೆಳಗಡೆ ಬಂದವರಿಗೆ ಯಾರಿಗೂ ಪ್ರವೇಶಾವಕಾಶವನ್ನು ಕೊಡುವುದಿಲ್ಲ. ಏಕೆಂದರೆ, ಖಾಸಗಿ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳೊಂದಿಗೆ ಇವರು ಫೈಟ್ ಮಾಡಲಿಕ್ಕೆ ಆಗುವುದಿಲ್ಲ. ಏಕೆಂದರೆ, ಆ ಮಕ್ಕಳಿಗೆ ಈ NEET ಪರೀಕ್ಷೆಗೆ ಹೇಗೆ ತಯಾರಾಗಬೇಕೆನ್ನುವುದೇ ಗೊತ್ತಿರುವುದಿಲ್ಲ. ಆದ್ದರಿಂದ, ಈ ವಿಚಾರ ಅತ್ಯಂತ ಪ್ರಮುಖವಾದ ವಿಚಾರವಾಗಿದ್ದು, ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ಜೊತೆಗೆ 2019-20ನೇ ಸಾಲಿಗೆ ಇಂಜಿನೀಯರಿಂಗ್ ವಿದ್ಯಾಭ್ಯಾಸಕ್ಕೂ ಸಹ ಒಂದು ವ್ಯವಸ್ಥೆ ಬರುತ್ತದೆ ಎಂದು ಹೇಳುತ್ತಿದ್ದಾರೆ. ದಯವಿಟ್ಟು ಅದಕ್ಕೂ ಕೂಡ ಕೋರ್ಸ್‌ಗಳನ್ನು ಮಾಡಲಿಕ್ಕೆ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ಇದು ಈ ಸರ್ಕಾರಕ್ಕೆ ಕೊನೆಯ ಅಧಿವೇಶನವಾಗಿದೆ. ಈ ನಮ್ಮ ಶಿಕ್ಷಣ ಇಲಾಖೆಗೆ ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀಮಾನ್ ಕಿಮ್ಮನೆ ರತ್ನಾಕರ್‌ರವರು ಇದ್ದರು. ಅವರು ತುಂಬಾ ಚೆನ್ನಾಗಿ ಈ ಶಿಕ್ಷಣ ಇಲಾಖೆಯನ್ನು ನಡೆಸಿದರು. ನಾವು ಏನೇ ಟೀಕೆ ಮಾಡಿದರೂ ಕೂಡ, ವಿಷಯಾಧಾರಿತವಾಗಿ ನಾವು ಏನೇ ವಿರೋಧ ಮಾಡಿದರೂ ಸಹ ಅದನ್ನು ಪ್ರಜಾಪ್ರಭುತ್ವ ರೀತಿಯಲ್ಲಿ ಅದನ್ನು ಸ್ವೀಕಾರ ಮಾಡಿ, ನಮಗೆ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಿದರು. ಅವರ ನಂತರ ಶ್ರೀಯುತ ತನ್ವೀರ್ ಸೇಠ್ ರವರು ಬಂದರು. ಅವರು ಸಹ ಅದೇ ರೀತಿಯಲ್ಲಿ ನಡೆದುಕೊಂಡಿದ್ದಾರೆ. ಮತ್ತೆ ಶ್ರೀಯುತ ಬಸವರಾಜ ರಾಯರೆಡ್ಡಿಯವರು ಸಹ ಅದೇ ರೀತಿ ನಡೆದುಕೊಂಡಿದ್ದಾರೆ. ನಮ್ಮಲ್ಲಿ ಬಹಳಷ್ಟು ಸಮಸ್ಯೆಗಳಿದ್ದು, ಅವುಗಳಲ್ಲಿ ಕೆಲವು ಸಮಸ್ಯೆಗಳು ನಿವಾರಣೆಯಾಗಿವೆ, ಮತ್ತೆ ಕೆಲವು ಸಮಸ್ಯೆಗಳು ಹಾಗೆಯೇ ಉಳಿದುಕೊಂಡಿವೆ. ಈ ನಿಟ್ಟಿನಲ್ಲಿ ಈ ಸಚಿವರುಗಳಿಗೆ ವಿಶೇಷವಾಗಿ ಅಭಿನಂದಿಸುತ್ತೇನೆ.

ಇನ್ನು ಮಾನ್ಯ ಮುಖ್ಯಮಂತ್ರಿಗಳು ನಮ್ಮಗಳ ವಿಷಯವನ್ನು ಪರಿಗಣನೆಗೆ ತೆಗೆದುಕೊಂಡಿದ್ದಾರೆ. ನಾನು ಈ ಸದನಕ್ಕೆ ಬಂದು ಸುಮಾರು 16 ವರ್ಷಗಳಾಗಿದ್ದು, ಈ ಅವಧಿಯಲ್ಲಿ, ನಮ್ಮ ಶಿಕ್ಷಣ ಕ್ಷೇತ್ರದ ಸಮಸ್ಯೆಗಳಿಗೆ ಸಂಬಂಧಪಟ್ಟ ಹಾಗೆ ಸುಮಾರು 7 ಗಂಟೆಗಳ ಕಾಲ ಸಭೆ ಮಾಡಿದ ಮುಖ್ಯಮಂತ್ರಿಯನ್ನು ನಾನು ನೋಡಿಯೇ ಇರಲಿಲ್ಲ. ಪ್ರಪ್ರಥಮ ಬಾರಿಗೆ ನಮ್ಮೆಲ್ಲರನ್ನೂ ಕರೆದು ಎರಡು ದಿವಸಗಳಲ್ಲಿ 7 ಗಂಟೆಗಳ ಕಾಲ ಸಭೆಯನ್ನು ಮಾಡಿದರು. ಆದ್ದರಿಂದ, ಅಂದಿನ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಏನು ಒಪ್ಪಿಕೊಂಡಿದ್ದರು, ಆ ಕೆಲಸಗಳನ್ನು ಮಾಡಿಕೊಡಿ ಎಂದು ನಾವು ಮನವಿ ಮಾಡಿಕೊಳ್ಳುತ್ತೇವೆ. ನಮ್ಮೆಲ್ಲರನ್ನು ಮರ್ಯಾದೆಯಿಂದ ಕೂರಿಸಿ, ಶಿಕ್ಷಣ ಇಲಾಖೆಯಲ್ಲಿನ ಎಲ್ಲಾ ಸಮಸ್ಯೆಗಳನ್ನು ಕೇಳಿದಿರಿ. ಆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಮಸ್ಯೆಗಳಿಗೆ ಮಾಡಿಕೊಡಬೇಕಾದ ಕೆಲಸಗಳನ್ನು ಮಾಡಿಕೊಡಿ ಎಂದು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇವೆ.

ಮಾನ್ಯ ಸಭಾಪತಿಯವರೇ, ನಾನು ಇನ್ನು ಒಂದು ನಿಮಿಷದಲ್ಲಿ ಮುಗಿಸುತ್ತೇನೆ. ನಮ್ಮ ಆಸೆ ಏನೆಂದರೆ, ಮುಖ್ಯಮಂತ್ರಿಗಳಾದ ತಾವು ಮತ್ತೆ ಬರಬೇಕೆನ್ನುವುದು ನಮ್ಮೆಲ್ಲರ ಆಸೆಯಾಗಿದೆ. ಮುಖ್ಯಮಂತ್ರಿಗಳು ಸಹ ಮತ್ತೆ ಮುಖ್ಯಮಂತ್ರಿಯಾಗಿ ಬರುತ್ತೇನೆಂದು ಹೇಳುತ್ತಿರುತ್ತಾರೆ. ಏಕೆಂದರೆ, ಬಹಳಷ್ಟು ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಏಕೆಂದರೆ, ಮಾನ್ಯ ಸಭಾಪತಿಯವರು 5 ನಿಮಿಷದ ಮೇಲೆ ಮಾತನಾಡುವಂತಿಲ್ಲವೆಂದು ಹೇಳುತ್ತಾರೆ. ಆಗುವುದಿಲ್ಲವೆಂದು ಹೇಳಿದಾಗ ನಾವು ನಮ್ಮ ಭಾಷಣವನ್ನು ನಿಲ್ಲಿಸಲೇಬೇಕು. ಆದರೆ, "ಹುಟ್ಟಿಕ್ಕಿದವಳಿಗಿಂತ ಬೊಟ್ಟುಕ್ಕಿದವಳು ಮೇಲು" ಎಂದು ಆಗಾಗ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿರುತ್ತಾರೆ. ಈ ರೀತಿಯಲ್ಲಿ ಡೈಲಾಗ್‌ಗಳನ್ನು ಹೇಳುತ್ತಿರುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು 5 ವರ್ಷಗಳಲ್ಲಿ ಬಹಳಷ್ಟು ಒಳ್ಳೆಯ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ.

ಆದರೆ, ಇತ್ತೀಚಿನ ಸಮಯದಲ್ಲಿ ಅಂದರೆ ಇನ್ನುಳಿದ 2-3 ತಿಂಗಳ ಅವಧಿ ಅತ್ಯಂತ ಪ್ರಮುಖ ಘಟ್ಟವಾಗಿರುತ್ತದೆ. ಇದುವರೆವಿಗೂ ಮುಖ್ಯಮಂತ್ರಿಗಳು ಏನೇ ಮಾಡಿರಬಹುದು. ಮಗುವಿಗೆ ಸ್ನಾನ ಮಾಡಿಸಿ, ದೃಷ್ಟಿಯಾಗಬಾರದು ಎಂದು ಮುಖಕ್ಕೆ ಒಂದು ಕಪ್ಪುಚುಕ್ಕೆ (ದೃಷ್ಟಿ ಬೊಟ್ಟು) ಇಡುತ್ತಾರೆ. ಇತ್ತೀಚೆಗೆ ಕೆಲವು ಘಟನೆಗಳನ್ನು ನೋಡುತ್ತಿರುತ್ತೀರಿ. ಕೆಲವು ಶಾಸಕರಾಗಿರಬಹುದು ಅಥವಾ ಶಾಸಕರ ಮಕ್ಕಳಾಗಿರಬಹುದು, ಮಂತ್ರಿಗಳಾಗಿರಬಹುದು. ಅವರುಗಳ ಬಗ್ಗೆ negative ಆಗಿ ಬರುತ್ತಿದೆ. ರಾಜ್ಯದ ಜನತೆಗೆ negative message ಹೋಗುತ್ತಿದೆ. ಮಾನ್ಯ ಮುಖ್ಯಮಂತ್ರಿಗಳ ಹಿತೈಷಿಯಾಗಿ ನಾನು ನೇರವಾಗಿ ಹೇಳಲಿಕ್ಕೆ ಬಯಸುತ್ತೇನೆ. ಈ ರೀತಿಯ ಘಟನೆಗಳು ಸರಿಯಾದುದಲ್ಲ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಸರಿಯಾದ ರೀತಿಯಲ್ಲಿ ನಿಭಾಯಿಸಬೇಕು. ಡಿ.ಕೆ.ರವಿಯವರ ಕೇಸ್ ಬಂತು, ಡಿವೈಎಸ್‌ಪಿ. ಗಣಪತಿಯವರ ಕೇಸ್ ಬಂತು. ಆಗ ಗಣಪತಿಯವರ ಕೇಸ್ ಸಲುವಾಗಿ ಶ್ರೀಯುತ ಜಾರ್ಜ್‌ರವರು ರಾಜೀನಾಮೆ ಕೊಟ್ಟರು.

**ಶ್ರೀ ಕೆ.ಜೆ.ಜಾರ್ಜ್(ಬೆಂಗಳೂರು ನಗರಾಭಿವೃದ್ಧಿ, ಬಿಬಿಎಂಪಿ, ಬಿಡಿಎ, ಜಲಮಂಡಳಿ, ಬಿಎಂಆರ್‌ಸಿಎಲ್, ಬಿಎಂಆರ್‌ಡಿಎ, ನಗರ ಯೋಜನೆ ಸಚಿವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನನಗೆ ಮಾತನಾಡಲಿಕ್ಕೆ ಅವಕಾಶ ಕೊಡಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾನು ಪೂರ್ಣಗೊಳಿಸುವವರೆಗೂ ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಬೇಕು.

**ಸಭಾಪತಿಯವರು:-** ಪುಟ್ಟಣ್ಣನವರು ಒಂದು ನಿಮಿಷ ಎಂದು ಹೇಳಿ ಹೊಸ ವಿಷಯವನ್ನು ಶುರು ಮಾಡಿದ್ದೀರಿ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಪುಟ್ಟಣ್ಣ:-** ಡಿವೈಎಸ್‌ಪಿ. ಶ್ರೀಯುತ ಗಣಪತಿಯವರ ಪ್ರಕರಣ ಬಂದ ತಕ್ಷಣವೇ ಶ್ರೀಯುತ ಜಾರ್ಜ್‌ರವರು ರಾಜೀನಾಮೆ ಕೊಟ್ಟರು. ಅದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಅದು ಅವರ ಒಳ್ಳೆಯ ತೀರ್ಮಾನ. ಇತ್ತೀಚೆಗೆ ಏನು ಬರುತ್ತಿದೆ. . .

**ಸಭಾಪತಿಯವರು:-** ಆ ವಿಷಯದ ಚರ್ಚೆ ಈಗ ಏತಕ್ಕೆ?

**ಶ್ರೀ ಕೆ.ಜೆ.ಜಾರ್ಜ್(ಬೆಂಗಳೂರು ನಗರಾಭಿವೃದ್ಧಿ, ಬಿಬಿಎಂಪಿ, ಬಿಡಿಎ, ಜಲಮಂಡಳಿ, ಬಿಎಂಆರ್‌ಸಿಎಲ್, ಬಿಎಂಆರ್‌ಡಿಎ, ನಗರ ಯೋಜನೆ ಸಚಿವರು):-** ಮಾನ್ಯ ಸಭಾಪತಿಯವರೇ, ಶ್ರೀಯುತ ಪುಟ್ಟಣ್ಣನವರು ಡಿ.ಕೆ.ರವಿಯವರ ಕೇಸ್ ಅನ್ನು ಹೇಳಿದರು. ಶ್ರೀಯುತ ಡಿ.ಕೆ. ರವಿಯವರ ವಿಚಾರ ಹೇಳಬೇಕೆಂದರೆ, it is for the first time in the history of India, ಯಾರೇ ಒಬ್ಬರು ಆತ್ಮಹತ್ಯೆ ಮಾಡಿಕೊಂಡ 7 ದಿವಸಗಳ ಒಳಗಡೆ ಅದನ್ನು ವಿಚಾರಣೆ ಮಾಡಲಿಕ್ಕೆ ಮುಖ್ಯಮಂತ್ರಿಗಳು C.B.I. (Central Bureau of Investigation) ಗೆ ಕೊಟ್ಟಿದ್ದಾರೆ. ಕೊಟ್ಟ ಮೇಲೆ ಅದನ್ನು C.B.I. ನವರು ಅದನ್ನು ವಿಚಾರಣೆ ಮಾಡಿದರು. ಆದರೆ, ಯಾರಾದರೂ C.B.I. ನ ವರದಿಯನ್ನು ಇಲ್ಲಿಯವರೆಗೆ ಓದಿದ್ದೀರಾ? ಯಾರು ಓದಲಿಲ್ಲ. ಅಂದು ಈ ಸದನ, ಆ ಸದನ ಮತ್ತು ವಿಧಾನಸೌಧದ ಮುಂಭಾಗದಲ್ಲಿ ಧರಣಿ ಮಾಡಿ ಎಲ್ಲಾ ನಮ್ಮ ಟಿ.ವಿ.ಯವರು ನಮ್ಮನ್ನೆಲ್ಲಾ accuse ಮಾಡಿ, ಎಲ್ಲವನ್ನೂ ಮಾಡಿದ್ದಾರೆ. ಯಾರಾದರೂ ಇದುವರೆವಿಗೂ C.B.I. ರಿಪೋರ್ಟ್ ನೋಡಿದ್ದಾರೆಯೇ? C.B.I. ನವರು ತನಿಖೆ ಮಾಡಿದ ಮೇಲೆ ನನ್ನನ್ನು ಕರೆಸಲೇ ಇಲ್ಲ. ಆದರೆ, ಆ ಒಂದು ರಿಪೋರ್ಟ್‌ನಲ್ಲಿ ಒಂದು ಪ್ಯಾರಾವನ್ನು ನಮೂದಿಸಿದ್ದರು. ಅಂದಿನ ಗೃಹ ಸಚಿವರಾಗಲಿ, ಅವರ ಯಾವುದೇ Firm ಆಗಲಿ, ಇದರಲ್ಲಿ ಭಾಗಿಯಾಗಿಲ್ಲವೆಂದು Clean Chit ಅನ್ನು ಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ಇವತ್ತು ಗಣಪತಿ ವಿಚಾರವಾಗಿ ಹೇಳುತ್ತಿದ್ದಾರೆ. ಡಿವೈಎಸ್‌ಪಿ. ಗಣಪತಿಯವರಿಗೆ ಯಾರಾದರೂ ಸಹಾಯ ಮಾಡಿದ್ದಾರೆಂದರೆ ನಾನು ಸಹಾಯ ಮಾಡಿದ್ದೇನೆ. ನನ್ನ ಕಾಲದಲ್ಲಿ ಅವರಿಗೆ Executive post ಅನ್ನು ಕೊಟ್ಟಿದ್ದೇನೆ. ಅಂದು C.B.I. ನವರು Accused No.2 (ಗಣಪತಿ) ಅವರ ಮೇಲೆ prosecution ಮಾಡುವುದಕ್ಕೆ permission ಕೇಳಿದರು. ನಾನು ಗೃಹ ಮಂತ್ರಿಯಾಗಿ ಕ್ಯಾಬಿನೆಟ್‌ಗೆ ತೆಗೆದುಕೊಂಡು ಹೋಗಿ ಅವರ ಮೇಲೆ prosecution ಮಾಡುವುದಕ್ಕೆ ಅನುಮತಿಯನ್ನು ಕೊಡಲಿಲ್ಲ. ನನಗೆ ಡಿವೈಎಸ್‌ಪಿ. ಗಣಪತಿಯವರ ಮೇಲೆ ಸೇಡು ಇದ್ದರೆ, ಅವರ ಮೇಲೆ prosecution ಮಾಡುವುದಕ್ಕೆ ಅನುಮತಿ ಕೊಟ್ಟಿದ್ದರೆ ಗಣಪತಿಯವರಿಗೆ ಪ್ರಮೋಷನ್ ಬರುತ್ತಿರಲಿಲ್ಲ, ಮತ್ತೇನೂ ಬರುತ್ತಿರಲಿಲ್ಲ. ಇವತ್ತು C.B.I. ನವರು ಗಣಪತಿಯವರ ವಿಚಾರವಾಗಿ ತನಿಖೆ ಮಾಡುತ್ತಿದ್ದಾರೆ. ಅದರ ರಿಪೋರ್ಟ್ ಬರಲಿ. ಅವರ ಸಾವು ಯಾವ ರೀತಿಯಲ್ಲಿ ಆಗಿದೆ, ಏತಕ್ಕೆ ಸಾವು ಆಗಿದೆ, ಮತ್ತು ಈ ಬಗ್ಗೆ ಸುಪ್ರೀಂ ಕೋರ್ಟ್‌ನವರು ಏನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದ್ದಾರೆಂದರೆ, 'nature of death, if any by whom', ಎಂದು ಹೇಳಿದ್ದಾರೆ. ಯಾರೂ ಸಹ ನನ್ನ ಹೆಸರನ್ನು ಹೇಳಿಲ್ಲ. ನನ್ನನ್ನು accuse ಮಾಡಿಲ್ಲ. ಮತ್ತೆ, ನೀವು ಪುನ: ನಿಂತುಕೊಂಡು ಡಿವೈಎಸ್‌ಪಿ. ಗಣಪತಿ ಮತ್ತು ಡಿ.ಕೆ.ರವಿಯವರ ಪ್ರಕರಣಗಳನ್ನು ಹೇಳಿದರೆ ಹೇಗೆ? ಈ ವಿಚಾರವನ್ನು ಎದುರಿಸಲಿಕ್ಕೆ ನಾನು ತಯಾರಾಗಿದ್ದೇನೆ, ಸತ್ಯಾಂಶ ಹೊರಗಡೆ ಬರಬೇಕೆಂದು ಕಾಯುತ್ತಿದ್ದೇನೆ. C.B.I. ನವರು ರಿಪೋರ್ಟ್ ಕೊಟ್ಟಿದ್ದಾರೆ.

(ಗೊಂದಲ)

**ಸಭಾಪತಿಯವರು:-** ಸಾಕು, ಅದರ ಬಗ್ಗೆ ಚರ್ಚೆ ಇಲ್ಲ.

**(272) 23.02.2018 05.30 ಎಸ್‌ವಿ-ಕೆಎಸ್**

**ಶ್ರೀ ಪುಟ್ಟಣ್ಣ :-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಜಾರ್ಜ್ ಅವರ ಮೇಲೆ ಆಪಾದನೆ ಮಾಡುತ್ತಿಲ್ಲ. ನಾನು ಹೇಳುತ್ತಿರುವುದೇನೆಂದರೆ ಮಾನ್ಯ ಜಾರ್ಜ್ ಅವರು ರಾಜೀನಾಮೆಯನ್ನು ನೀಡಿ ಒಳ್ಳೆಯದನ್ನೇ ಮಾಡಿದ್ದಾರೆ. ಈ ಮೂರು ತಿಂಗಳುಗಳ ಅವಧಿಯನ್ನು ಸರಿಯಾಗಿ ನಿಭಾಯಿಸಿ ಎಂದಷ್ಟೆ ಹೇಳುತ್ತಿದ್ದೇನೆ.

**ಶ್ರೀ ಕೆ.ಜೆ.ಜಾರ್ಜ್ (ಬೆಂಗಳೂರು ಅಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಆ ಪ್ರಕರಣದ ಬಗ್ಗೆ ಸಿ.ಬಿ.ಐ. ನೀಡಿರುವ ತನಿಖಾ ವರದಿಯನ್ನು ಯಾರೂ ಓದಿಲ್ಲ. ಓದಿದ್ದರೆ ಬಹುಶಃ ಈ ರೀತಿಯಾಗಿ ಹೇಳುತ್ತಿರಲಿಲ್ಲ.

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೆ, ಎಷ್ಟು ಹೊತ್ತು ಚರ್ಚೆ ಮಾಡುತ್ತೀರಿ? ದಯವಿಟ್ಟು ಮುಕ್ತಾಯ ಮಾಡಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಜಾರ್ಜ್ ಅವರು ಇದರಲ್ಲಿ ಭಾಗಿಯಾಗಿದ್ದಾರೆಂದಾಗಲೀ ಅಥವಾ ಅವರು ಆಪಾದಿತರು ಎಂದಾಗಲೀ ಹೇಳುತ್ತಿಲ್ಲ. ಇನ್ನುಳಿದ ಮೂರು ತಿಂಗಳ ಅವಧಿಯಲ್ಲಿ....

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣ ಅವರು ಇನ್ನೊಂದು ಮಾತನ್ನು ಹೇಳಿದರು. ಎಂ.ಎಲ್.ಎ. ಅವರ ಮಗ ಎಂದು ಹೇಳಿದರು. ಅವರು ಎಂ.ಎಲ್.ಎ. ಅವರ ಮಗ ಇರಲಿ ಅಥವಾ ಮಂತ್ರಿಗಳ ಮಗ ಇರಲಿ, ಸರ್ಕಾರದವರು ಅವರ ಮೇಲೆ ನಿರ್ದಾಕ್ಷಿಣ್ಯವಾದ ಕ್ರಮ ತೆಗೆದುಕೊಂಡು ಅವರನ್ನು ನಮ್ಮ ಪಕ್ಷದಿಂದ ಉಚ್ಛಾಟನೆ ಮಾಡಿದ್ದೇವೆ. ಈಗ ಅವರು ಜೈಲಿನಲ್ಲಿದ್ದಾರೆ. ಇಲ್ಲಿಯ ತನಕ ಇಂತಹ ಕ್ರಮವನ್ನು ಯಾವ ಸರ್ಕಾರದವರು ತೆಗೆದುಕೊಂಡಿದ್ದಾರೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣ ಅವರೆ, ಬಜೆಟ್ ಮೇಲೆ ಚರ್ಚೆ ಮಾಡಿ ಎಂದರೆ ನೀವು ಕಾನೂನು ಮತ್ತು ಸುವ್ಯವಸ್ಥೆಯ ಬಗ್ಗೆ ಚರ್ಚೆ ಮಾಡುತ್ತಿದ್ದೀರಿ. ಒಂದು ನಿಮಿಷ, ಒಂದು ನಿಮಿಷ ಎಂದು ನೀವು ಹೇಳುತ್ತಲೇ, ಮಾತು ಮುಂದುವರೆಸುತ್ತಿದ್ದೀರಿ. ಮುಗಿಸಿಬಿಡಿ. ಸಾಕು.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಜಾರ್ಜ್ ಅವರ ಮೇಲೆ ಆಪಾದನೆ ಮಾಡುತ್ತಿಲ್ಲ. ನಾನು ಮುಖ್ಯಮಂತ್ರಿಯವರಿಗೆ ಹೇಳುವುದಿಷ್ಟೆ. ಅನಿರೀಕ್ಷಿತವಾಗಿ ಏನೇನು ಘಟನೆಗಳು ಎದುರಾಗುತ್ತವೆ ಎಂದು ಹೇಳಲಿಕ್ಕಾಗುವುದಿಲ್ಲ. ಅವು ಎದುರಾದ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಆಯಾ ಕ್ಷಣಕ್ಕೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಂಡಿರುವ ಬಗ್ಗೆ ಒಂದು message ಅನ್ನು ಕೊಡದೆ ಹೋದರೆ, ಅವರು ಏನೇ ಒಳ್ಳೆಯ ಕೆಲಸಗಳನ್ನು ಮಾಡಿದ್ದರೂ ಹಾಗೂ ಹಲವಾರು ಭಾಗ್ಯಗಳನ್ನು ನೀಡಿದ್ದರೂ ಸಹ ಅವು ಗಣನೆಗೆ ಬರುವುದಿಲ್ಲ. ಆ ದೃಷ್ಟಿಯಿಂದ ಒಳ್ಳೆಯದನ್ನೇ ಬಯಸುತ್ತೇವೆಯೇ ಹೊರತು negative ಆಗಿ ಏನೂ.....

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ಮುಗಿಸುತ್ತೇನೆ ಎಂದು ಹೇಳುತ್ತಲೇ ಇನ್ನೂ ಮಾತನಾಡುತ್ತಲೇ ಇದ್ದೀರಲ್ಲ. ಹೇಳಿದ್ದನ್ನೇ ಹೇಳುತ್ತಿದ್ದೀರಿ. ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಇನ್ನು ಮೂರು ತಿಂಗಳ ಸರ್ಕಾರದ ಅವಧಿಯು ಬಹಳ crucial ಆಗಿದ್ದು, ಮುಖ್ಯಮಂತ್ರಿಯವರು ಯಾವುದಕ್ಕೂ ನಿಧಾನ ಮಾಡಬಾರದು. ನಮಗೆ ಬಹಳ ಸಹಕಾರ ಕೊಟ್ಟಂತಹ ಮಾನ್ಯ ಮುಖ್ಯಮಂತ್ರಿಯವರನ್ನು ಹಾಗೂ ಸಚಿವ ಸಂಪುಟದ ಎಲ್ಲಾ ಮಾನ್ಯ ಸಚಿವರನ್ನು ತಮ್ಮ ಮೂಲಕ ಅಭಿನಂದಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಆಯವ್ಯಯದ ಮೇಲೆ ಬಹಳಷ್ಟು ಮಾತನಾಡಬೇಕೆಂದಿದ್ದೆನು. ಆದರೆ ಆಗಲಿಲ್ಲ. ಮಾನ್ಯ ಮುಖ್ಯಮಂತ್ರಿಯವರಿಂದ ಒಂದೆರಡು ಸ್ಪಷ್ಟೀಕರಣವನ್ನು ಕೇಳಬಯಸುತ್ತೇನೆ.

2001ರಲ್ಲಿ ರಾಜ್ಯ ಯೋಜನಾ ಮಂಡಳಿಯನ್ನು ಪುನರ್ ರಚನೆ ಮಾಡಲಾಯಿತು. ಆ ಮಂಡಳಿಯಲ್ಲಿ 13 ಜನ ಸದಸ್ಯರಿದ್ದು, ಅದರಲ್ಲಿ 2001ರಿಂದ ಇಲ್ಲಿಯವರೆವಿಗೂ ಉತ್ತರ ಕರ್ನಾಟಕವನ್ನು ಪ್ರತಿನಿಧಿಸುವವರು ಯಾರೂ ಇಲ್ಲ. ಅದನ್ನು ದಯಮಾಡಿ ಮಾನ್ಯ ಮುಖ್ಯಮಂತ್ರಿಯವರು ಗಮನಿಸಬೇಕು. ನಾನು ಎಲ್ಲಾ ಮಾಹಿತಿಯನ್ನು ಪಡೆದುಕೊಂಡೇ ಇದನ್ನು ಹೇಳುತ್ತಿದ್ದೇನೆ.

ಹುಬ್ಬಳ್ಳಿ-ಧಾರವಾಡದಲ್ಲಿ ನಿವೃತ್ತ ಪಿಂಚಣಿದಾರರ ಬಾಕಿ ರೂ.138 ಕೋಟಿ ಇದ್ದು, ಇದನ್ನು ಎರಡು-ಮೂರು ಬಾರಿ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರಲಾಗಿದೆ. ಆ ಪಿಂಚಣಿದಾರರು ನನಗೆ "ಇಷ್ಟೆಲ್ಲಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತನಾಡುತ್ತೀರಿ, ನಮ್ಮದೊಂದು ಕೆಲಸ ಮಾಡಿಕೊಡುತ್ತಿಲ್ಲ" ಎಂದು ಬೈಯುತ್ತಾರೆ. ಮಾನ್ಯ ಮುಖ್ಯಮಂತ್ರಿಯವರು 'ಕೊಡುತ್ತೇವೆ' ಎಂದು ಹೇಳುತ್ತಾರೆ. ಆದ್ದರಿಂದ ಅದನ್ನು ಯಾವಾಗ ಕೊಡಲಾಗುವುದೆಂದು ಸ್ಪಷ್ಟ ಪಡಿಸಬೇಕು.

ನಿನ್ನೆ New Pension Scheme (NPS) ನ ಬಗ್ಗೆ ಚರ್ಚೆಯಾದ ಸಂದರ್ಭದಲ್ಲಿ ಮಾನ್ಯ ಕೃಷಿ ಸಚಿವರು ತಮ್ಮ ಪರವಾಗಿ ಉತ್ತರವನ್ನು ಕೊಟ್ಟು, ಅದರಲ್ಲಿರುವ ದೋಷಗಳನ್ನು ಸರಿಪಡಿಸಲಾಗುವುದೆಂದು ಹೇಳಿದರು. ಆದರೆ ಹಳೆಯ ಪಿಂಚಣಿ ಯೋಜನೆಯನ್ನೇ ಮುಂದುವರೆಸಬೇಕೆಂದು ನಾವೆಲ್ಲಾ ಸಲಹೆ ಕೊಟ್ಟೆವು. ಹಳೆಯ ಪಿಂಚಣಿ ಯೋಜನೆಯನ್ನು ಮುಂದುವರೆಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಕ್ರಮ ಕೈಗೊಳ್ಳಬೇಕು.

ಕಾಲ್ಪನಿಕ ವೇತನದ ಬಗ್ಗೆ ನನ್ನ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದ್ದು, ಅದರಲ್ಲಿ ಸುಮಾರು ನಾಲ್ಕು ತಿಂಗಳುಗಳ ಕಾಲ ಅಧ್ಯಯನ ಮಾಡಿ ವರದಿಯನ್ನು ಸಲ್ಲಿಸಲಾಯಿತು. ನಂತರ ಮಾನ್ಯ ಉನ್ನತ ಶಿಕ್ಷಣ ಸಚಿವರು ಅಧಿಕಾರಿಗಳೂ ಸೇರಿದಂತೆ ಮತ್ತೊಂದು ಸಮಿತಿಯನ್ನು ರಚಿಸಿತು. ನಂತರ ಸಮಿತಿಯ ವತಿಯಿಂದ ಕೂಲಂಕಷವಾಗಿ ಚರ್ಚಿಸಿ ಮತ್ತೊಂದು ವರದಿಯನ್ನು ಕೊಟ್ಟಿದ್ದೇವೆ. ಕೊಟ್ಟ ನಂತರ ಈಗ ಮಾನ್ಯ ತನ್ವೀರ್ ಸೇಠ್‌ರವರು ಇನ್ನೊಂದು ಸಮಿತಿಯನ್ನು ಮಾಡುತ್ತೇವೆಂದು ಕೆಳಮನೆಯಲ್ಲಿ ಉತ್ತರವನ್ನು ಕೊಟ್ಟರು. ಹಾಗಾದರೆ ನಾವು ಇಷ್ಟೆಲ್ಲಾ ಅಧ್ಯಯನ ಮಾಡಿ ವರದಿಯನ್ನು ನೀಡಿದ್ದು ಏಕೆ?

**ಶ್ರೀ ತನ್ವೀರ್ ಸೇಠ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)**:- ಮಾನ್ಯ ಸಭಾಪತಿಯವರೇ, ಇನ್ನೊಂದು ಸಮಿತಿಯನ್ನು ರಚಿಸುವುದಲ್ಲ. ಮಾನ್ಯ ಉನ್ನತ ಶಿಕ್ಷಣ ಸಚಿವರು ಈಗಾಗಲೇ ಅದನ್ನು ಸಮಿತಿಯಲ್ಲಿ ಚರ್ಚಿಸಲಾಗುತ್ತಿದ್ದು, ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**:- ಮಾನ್ಯ ಸಭಾಪತಿಯವರೇ, ಮಾನ್ಯ ತನ್ವೀರ್ ಸೇಠ್ ಅವರು ಪತ್ರಿಕೆಯಲ್ಲಿ ಬಂದಿರುವ ವರದಿಯನ್ನು ಓದಲಿ.

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ಪತ್ರಿಕೆಯಲ್ಲಿ ಬಂದಿರುವುದರ ಬಗ್ಗೆ ಮಾತನಾಡುವುದು ಬೇಡ. ನಾನು ಸದನದಲ್ಲಿ ಏನು ಮಾತನಾಡಿದ್ದೇನೆಯೋ ಅದನ್ನು ಕೇಳಲಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**:- ಮಾನ್ಯ ಸಭಾಪತಿಯವರೇ, ನಾವು 13 ಜನ ಸದಸ್ಯರು ಸೇರಿ ಸುಮಾರು ಎಂಟು ತಿಂಗಳುಗಳ ಕಾಲ ಅಧ್ಯಯನವನ್ನು ಮಾಡಿ, ಅಧಿಕಾರಿಗಳೊಂದಿಗೆ ಚರ್ಚಿಸಿ ವರದಿಯನ್ನು ನೀಡಿದ್ದೇವೆ. ಈಗ ಅದನ್ನು ಜಾರಿಗೆ ತರಬೇಕಲ್ಲವೆ? ಇಲ್ಲವಾದಲ್ಲಿ ನಮಗೆ ಏನು ಮರ್ಯಾದೆ ಇರುತ್ತದೆ? ನಮ್ಮ ಮೇಲೆ ವಿಶ್ವಾಸವಿಲ್ಲ ಎಂದ ಮೇಲೆ ಸಮಿತಿಯನ್ನು ಏಕೆ ಮಾಡಬೇಕು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅದೇ ವಿಚಾರಕ್ಕೆ ಸಂಬಂಧಪಟ್ಟ ಹಾಗೇ..

**ಸಭಾಪತಿಯವರು:–** ಮಾನ್ಯ ಮಟ್ಟೂರ ಅವರೇ, ನೀವು ಮಾತನಾಡುವುದಕ್ಕೆ ಎದ್ದರೆ, ನಂತರ ಮಾನ್ಯ ಉಗ್ರಪ್ಪನವರು ಸಹ ಮಾತನಾಡಲು ಏಳುತ್ತಾರೆ. ಮಾನ್ಯ ಮುಖ್ಯಮಂತ್ರಿಯವರು ಬೇಗ ಮುಗಿಸಿ ಎಂದು ಹೇಳುತ್ತಿದ್ದಾರೆ. ತಾವು ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಬಸವರಾಜ ಹೊರಟ್ಟಿ;–** ಮಾನ್ಯ ಸಭಾಪತಿಯವರೆ, first grade college ಗಳಿಗೆ, ಅನುದಾನ ರಹಿತ ಕಾಲೇಜು ಶಿಕ್ಷಕರುಗಳಿಗೆ, 1987 ರಿಂದ 1995 ರವರೆವಿಗೆ increment and pension ಕೊಟ್ಟಿರುವುದಿಲ್ಲ. ಮಾನ್ಯ ಉನ್ನತ ಶಿಕ್ಷಣ ಸಚಿವರು ಮುಖ್ಯಮಂತ್ರಿಗಳು ಒಪ್ಪಿಗೆಯನ್ನು ನೀಡಿದ ತಕ್ಷಣ ಗ್ರಾಂಟ್ ಅನ್ನು ಕೊಡುತ್ತೇವೆಂದು ಹೇಳಿದರು.

ಮಾನ್ಯ ಸಭಾಪತಿಯವರೇ, ನಾನು ಇದುವರೆವಿಗೆ ಕೇಳಿದ ಎಲ್ಲಾ ಅಂಶಗಳನ್ನು ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟ ಪಡಿಸಬೇಕೆಂದು ಕೋರುತ್ತೇನೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರು Pay commission and HRA (House Rent Allowance) ಬಗ್ಗೆ ಪ್ರಸ್ತಾಪ ಮಾಡಿದರು. ಹಿಂದೆ ಇದ್ದಂತಹ HRA ಗಿಂತ ಕಡಿಮೆಯಂತೂ ಬರುವುದಿಲ್ಲ. ಬಹುಶಃ ಅವರು ವರದಿಯನ್ನು ಸಂಪೂರ್ಣವಾಗಿ ಗಮನಿಸಿರುವುದಿಲ್ಲವೆಂದೆನಿಸುತ್ತದೆ. ವೇತನ ಆಯೋಗದ ಅವಧಿಯನ್ನು ಇನ್ನೂ ಮೂರು ತಿಂಗಳ ಮಟ್ಟಿಗೆ ವಿಸ್ತರಿಸಲಾಗಿದೆ. ಮತ್ತೊಂದು ವರದಿಯನ್ನು ಅವರು ಸಲ್ಲಿಸಬೇಕಾಗಿದೆ. ಕುಮಾರನಾಯಕ್ ಸಮಿತಿಯ ವರದಿಯನ್ನು ವೇತನ ಆಯೋಗಕ್ಕೆ refer ಮಾಡಲಾಗಿದೆ. ಆಯೋಗದವರು ಎರಡನೆಯ ವರದಿಯನ್ನು ನೀಡುವಾಗ ಏನು ಶಿಫಾರಸ್ಸು ಮಾಡುತ್ತಾರೆಂದು ನೋಡಬೇಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಶಿಕ್ಷಣ ಇಲಾಖೆಯಿಂದ ಒಂದು additional increment file, ಮಾನ್ಯ ಮುಖ್ಯಮಂತ್ರಿಯವರ ಬಳಿಗೆ ಬಂದಿದೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಅದನ್ನು ಪರಿಶೀಲಿಸುತ್ತೇನೆ. ಮೇಕೆದಾಟು ಯೋಜನೆಯ ಬಗ್ಗೆ ಈಗಾಗಲೇ DPR (Detailed Project Report) ಮಾಡಲಾಗಿದೆ. ಇದರಿಂದ ತಮಿಳುನಾಡಿಗೆ ಅನಾನುಕೂಲವೇನೂ ಆಗುವುದಿಲ್ಲ. ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ತಮಿಳುನಾಡಿನ ಬಿಳಿಗುಂಡ್ಲುವಿನಲ್ಲಿ 177.25 ಟಿ.ಎಂ.ಸಿ. ನೀರು ಇರಬೇಕು. ಮೊದಲು 192 ಟಿ.ಎಂ.ಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇತ್ತು. ಈಗ 14.75 ಟಿ.ಎಂ.ಸಿ. ನೀರು ನಮಗೆ ಉಳಿತಾಯವಾಗುತ್ತದೆ. ಮೊದಲು ನಮ್ಮ ರಾಜ್ಯಕ್ಕೆ ಒಟ್ಟು 270 ಟಿ.ಎಂ.ಸಿ ನೀರು ಹಂಚಿಕೆಯಾಗಿದ್ದು, ಈಗ 284.75 ಟಿ.ಎಂ.ಸಿ. ಇದೆ. ನಮಗೆ ಅವರು ಕೊಡಬೇಕಾಗಿರುವಂಥದ್ದು 177.25 ಟಿ.ಎಂ.ಸಿ., deficient ಇಲ್ಲದೆ ಇದ್ದಾಗ normal year ನಲ್ಲಿ ಅದು ಕೊಡಲೇಬೇಕು. ಇದೊಂದು ರೀತಿ balancing reservoir ಇದ್ದ ಹಾಗೆ. ನಾವೂ ಸ್ವಲ್ಪ ಬಳಸಿಕೊಂಡು ಪ್ರವಾಹ ಬಂದಂತಹ ಸಂದರ್ಭದಲ್ಲಿ ಹರಿದು ಹೋಗುವ ನೀರನ್ನು ಆ ರೀತಿ ಮಾಡಬಹುದು. ಈಗಾಗಲೇ ನಾವು ಅದನ್ನು DPR ಮಾಡಿ Central Water Commission (CWC) ಗೆ ಕಳುಹಿಸಿದ್ದೇವೆ. ಅವರು permission ಕೊಟ್ಟ ಮೇಲೆ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ.

ಮಾನ್ಯ ಸದಸ್ಯರು ಮೈಸೂರಿನ garbage ಬಗ್ಗೆ ಪ್ರಸ್ತಾಪಿಸಿದ್ದಾರೆ. ಆಯವ್ಯಯದ ಕುರಿತು ಮಾತನಾಡುವ ಬದಲು, garbage ಬಗ್ಗೆ ಮಾತನಾಡಿದ್ದಾರೆ. ಇದಕ್ಕೆ ಏನು ಹೇಳುವುದು?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಅದಕ್ಕೆ grant ನೀಡುವ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆನು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಮೈಸೂರಿಗೆ ಹೇಳದೆಯೇ ಅನುದಾನವನ್ನು ಕೊಡುತ್ತೇನೆ. ಇಲ್ಲಿ ಹೇಳಬಾರದೆಂದು ಹೇಳಿರಲಿಲ್ಲ.

(273) 23.02.2018 05.40 ಕೆಜಿ.ಕೆಎಸ್

**ಶ್ರೀ ಸಿದ್ದರಾಮಯ್ಯ (ಮುಂದು):-** ಮಾನ್ಯ ಬಸನಗೌಡ ಆರ್.ಪಾಟೀಲ್ (ಯತ್ನಾಳ್) ರವರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಬಹಳ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅವುಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಮಾಡೋಣ. ಆ ಮೇಲೆ ಮಾನ್ಯ ಪುಟ್ಟಣ್ಣನವರು ನಮ್ಮವರೇ, he is my well-wisher. Even Sri K.T. Srikantegowda is also my well-wisher.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯ ಮಂತ್ರಿಯವರು ಮತ್ತು ನಾವು ಒಂದೇ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರವರು ಹೇಳಿದ ರೀತಿ ನಾವು, ಅವರು ಒಂದೇ. ಆದರೆ, ಮಾನ್ಯ ಶ್ರೀಕಂಠೇಗೌಡರು ಯಾವ ರೀತಿ ಎಂದರೆ, ಒಂದು ಗುಣ್ಣಿ ಅವರೆಕಾಳು ತಿನ್ನಬೇಡಿ ಎನ್ನುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಮಗೆ ಎಲ್ಲವನ್ನು ಮಾನ್ಯ ಮುಖ್ಯಮಂತ್ರಿಯವರೇ ಹೇಳಿಕೊಟ್ಟಿದ್ದಾರೆ. ಅವರು ನಮ್ಮ ಗುರುಗಳು.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿ):-** ಮಾನ್ಯ ಸಭಾಪತಿಯವರೇ, ಹಾಗಾದರೆ, ನಾನು ಕೆಟ್ಟಿದ್ದನ್ನು ಹೇಳಿಕೊಟ್ಟರೆ ಮಾನ್ಯ ಶ್ರೀಕಂಠೇಗೌಡರು ಕಲಿತುಕೊಳ್ಳುತ್ತಾರೆಯೇ? Sri Basavaraj S Horatti is a good friend of mine. ಅವರು ಬಹಳ ವರ್ಷಗಳಿಂದ ಇದ್ದಾರೆ. ಮಾನ್ಯ ಹೊರಟ್ಟಿಯವರು ಹೇಳಿರುವಂತಹ ವಿಚಾರಗಳಲ್ಲಿನ ಕೆಲವನ್ನು ಶಿಕ್ಷಣ ಮಂತ್ರಿಯವರು ಮಾಡುತ್ತಾರೆ. ಮತ್ತೆ, corporation employees ನವರ pension ಅನ್ನು ಕೊಡುವುದಕ್ಕೆ ಆರ್ಥಿಕ ಇಲಾಖೆಗೆ ತಿಳಿಸಿದ್ದೇನೆ. ಆದಷ್ಟು ಬೇಗ ಅದನ್ನು ಬಿಡುಗಡೆ ಮಾಡಿಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಇಲ್ಲಿಗೆ ನಾಲ್ಕು ವರ್ಷ ಆಯಿತು. ಇನ್ನು ಈ ಕೆಲಸ ಆಗಿರುವುದಿಲ್ಲ. ಅವರು ನಮ್ಮನ್ನು ಬೈಯುತ್ತಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಅದನ್ನು ತಕ್ಷಣವೇ ಬಿಡುಗಡೆ ಮಾಡಿಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ 138 ಕೋಟಿ ರೂಪಾಯಿಗಳು ದೊಡ್ಡದೆ?

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಇದು ದೊಡ್ಡದೇನಲ್ಲ. ಈ ಶಿಕ್ಷಕರ ಕ್ಷೇತ್ರದಿಂದ ಮತ್ತು ಪದವೀಧರರ ಕ್ಷೇತ್ರದಿಂದ ಬರುವವರಿಗೆ, ಹಣ ಎಂದರೆ ಅವರಿಗೆ ಲೆಕ್ಕ ಇಲ್ಲವೆಂದು ಹೇಳುತ್ತಾರೆ.

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್):-** ಮಾನ್ಯ ಸಭಾಪತಿಯವರೇ, ವಿಧಾನ ಪರಿಷತ್ತಿನಲ್ಲಿ ಏನಾಗಿದೆ ಎಂದರೆ, ಬರೀ ಶಿಕ್ಷಣ ಇಲಾಖೆಯ ಬಗ್ಗೆ ಮಾತ್ರ ಪ್ರಸ್ತಾಪ ಮಾಡುವುದೇ ಆಗಿದೆ. ಇಲ್ಲಿ ಬೇರೆ ಯಾವುದೇ ವಿಷಯಗಳೂ ಪ್ರಸ್ತಾಪ ಆಗುತ್ತಿಲ್ಲ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, demands ಮೇಲೆ ಬಂದಾಗ ಅವುಗಳನ್ನು ವಿವರವಾಗಿ ಚರ್ಚೆ ಮಾಡೋಣ. Education Department ಮೇಲೆ ಬಂದಾಗ, ಅವುಗಳನ್ನು ಪ್ರಸ್ತಾಪ ಮಾಡೋಣ.

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರದ್ದು ಒಂದರೆಡು ಬಹಳ relevant point ಗಳನ್ನು ಪ್ರಸ್ತಾಪ ಮಾಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರವರು ಹೇಳಿರುವಂತಹ, ಮೈಸೂರಿನ C.P.C Polytechnic ನಲ್ಲಿ evening classes ಪ್ರಾರಂಭ ಮಾಡುವಂತಹ ಅಂಶವನ್ನು ಬಹಳ ಗಂಭೀರವಾಗಿ ಪರಿಶೀಲನೆ ಮಾಡುತ್ತೇನೆ. ಮತ್ತೆ ಮಾನ್ಯ ಸದಸ್ಯರು ಎಲ್ಲಾ ಕಡೆಯೂ ಆಯುಕ್ತಾಲಯ ಇದೆ. ಅದಕ್ಕೆ ಮೈಸೂರು ವಿಭಾಗಕ್ಕೆ ಒಂದು ಆಯುಕ್ತಾಲಯ ಮಾಡಿ ಎಂದು ಹೇಳಿದ್ದಾರೆ. ಅದನ್ನು ಅವರು ಬಹಳ ದಿವಸಗಳಿಂದ ಹೇಳುತ್ತಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇನೆ. ಆ ಮೇಲೆ 2006 ರಲ್ಲಿ ಬಂದ ಹೊಸ pension ಬಗ್ಗೆ ಹೇಳಿದ್ದಾರೆ. 2006 ರಲ್ಲಿ New Pension Scheme (NPS) ಬಂದಿದೆ. ಅದು ಬಂದು ಇಲ್ಲಿಗೆ 12 ವರ್ಷ ಆಗಿದೆ. ಈಗ ಪುನಃ ವಾಪಸ್ಸು ಹಳೆಯ pension ಪದ್ಧತಿಗೆ ಹೋಗಿ ಎಂದು ಹೇಳಿದ್ದಾರೆ. ಅದು ಅಂತಹ ಸಾಧುವಾದಂತಹ ಸಲಹೆ ಅಲ್ಲ. ಅದಕ್ಕೆ ಅದನ್ನು ನೋಡೋಣ.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಯವರೇ, ಅದರಲ್ಲಿ ಏನಾದರೂ defects ಇದ್ದರೆ ಸರಿಮಾಡಿ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ಆಯಿತು.

**ಶ್ರೀ ಕೆ.ಟಿ.ಶ್ರೀಕಂಠೇಗೌಡರು:-** ಮಾನ್ಯ ಸಭಾಪತಿಯವರೇ, notional increment ಕಮಿಟಿ ವರದಿ..

(ಗೊಂದಲ)

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, public schools.....

(ಗೊಂದಲ)

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೆಲ್ಲರೂ ಹೇಳಿರುವಂತಹ ಸಲಹೆಗಳನ್ನು ನಾವು ಒಪ್ಪಿಕೊಂಡಿದ್ದೇವೆ ಹಾಗೂ ಅವರು ಹೇಳಿರುವಂತಹ ಎಲ್ಲ ಸಲಹೆಗಳಿಗೂ ನಮ್ಮ ಸಹಮತ ಇದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ..

**ಸಭಾಪತಿಯವರು:-** ಮಾನ್ಯ ಯಾತ್ನಾಳ್‌ರವರು ಆಗಲೇ ಹೇಳಿದಂತೆ, ಶಿಕ್ಷಣ ಇಲಾಖೆಯ ಬಗ್ಗೆ ವಿಷಯ ಪ್ರಾರಂಭವಾದರೆ, ಅದು ಮುಗಿಯುವುದೇ ಇಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಕಳೆದ 5 ವರ್ಷಗಳಿಂದ ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿ ಸರ್ಕಾರವನ್ನು ನಡೆಸಿಕೊಂಡು ಬಂದಿದ್ದಾರೆ. ವಿರೋಧ ಪಕ್ಷದವರಾದ ನಾವು ಅವರಿಗೆ ಸಾಕಷ್ಟು ಸಹಕಾರವನ್ನು ಕೊಟ್ಟಿದ್ದೇವೆ. ಆದರೆ, ನಾವು ಕೆಲವು ವಿಚಾರಗಳಲ್ಲಿ ವಿರೋಧ ಮಾಡಿದ್ದೇವೆ. ಒಟ್ಟಾರೆ ಮಾನ್ಯ ಸಿದ್ದರಾಮಯ್ಯನವರು ರಾಜ್ಯದಲ್ಲಿ 5 ವರ್ಷಗಳ ಕಾಲ ಉತ್ತಮ ಆಡಳಿತ ನಡೆಸಿಕೊಂಡು ಬಂದಿದ್ದಾರೆ. ಅದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇದ್ದೆ ಇರುತ್ತದೆ. ವಿರೋಧ ಪಕ್ಷದ ನಾವು assembly ಯಲ್ಲಿ ಅವರ ಹೊಡೆತಕ್ಕೆ ತಡೆದುಕೊಂಡಿಲ್ಲ. ಅದೊಂದು advantage ಅವರಿಗೆ ಇತ್ತು. ಒಟ್ಟಾರೆ ಉತ್ತಮವಾದಂತಹ ಕೆಲಸಗಳನ್ನು ಮಾಡಿದ್ದಾರೆ. ಮುಂದೆ ಹೊಸ ಸರ್ಕಾರ ಬಂದ ಮೇಲೆ ನಾವು ಅವರು ಸಿಗುವುದಿಲ್ಲ. ನಾವು ಇಲ್ಲಿಯವರೆಗೆ ಮಾಡಿದಂತಹ ಕೆಲಸ ಕಾರ್ಯಗಳಿಗೆ ಅವರು ಎಲ್ಲಾ ರೀತಿಯಲ್ಲಿಯೂ ಸಾಕಷ್ಟು ಸಹಕಾರವನ್ನು ಪ್ರಾಮಾಣಿಕವಾಗಿ ಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರಿಗೆ ಮತ್ತು ಈ ಸರ್ಕಾರಕ್ಕೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಶ್ರೀ ಶ್ರೀಕಂಠೇಗೌಡರು:–** ಮಾನ್ಯ ಸಭಾಪತಿಯವರೇ, ಇದು ಸರ್ಕಾರಕ್ಕೆ ಬೀಳ್ಕೊಡಿಗೆ ಸಮಾರಂಭ ಆಗಿದೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಈಗ..

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಯವರೇ, ವಿಧೇಯಕಗಳು ಮುಗಿದ ಮೇಲೆ ಧನ್ಯವಾದಗಳನ್ನು ಹೇಳಬೇಕು.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ನಾನು ಧನ್ಯವಾದಗಳನ್ನು ಹೇಳಲು ನಿಂತುಕೊಂಡಿಲ್ಲ. ಮಾನ್ಯ ಸಭಾಪತಿಯವರೇ, ತಾವು ಮುಂದುವರಿಸಿ. ಹಾಗಾದರೆ, ಮತಕ್ಕೆ ಹಾಕಿ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ನೇ ಸಾಲಿನ ಕರ್ನಾಟಕ ಧನವಿನಿಯೋಗ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.</u>
<u>ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.</u>

<u>ಖಂಡ 2 ರಿಂದ 3</u>

**ಸಭಾಪತಿಯವರು:–** "ಖಂಡ 2 ರಿಂದ 3 ಈ ವಿಧೇಯಕದ ಭಾಗವಾಗಿರುತ್ತದೆ"

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

(ಖಂಡ 2 ರಿಂದ 3 ವಿಧೇಯಕಕ್ಕೆ ಸೇರಿಸಲಾಯಿತು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

<u>ಖಂಡ 1 ಇತ್ಯಾದಿ</u>

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ಪೀಠಿಕೆ ಮತ್ತು ಶೀರ್ಷಿಕೆಗಳು ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.</u>**

(ಮೊದಲನೆಯ ಖಂಡ, ಪೀಠಿಕೆ ಮತ್ತು ಶೀರ್ಷಿಕೆಗಳು ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**<u>ಪ್ರಸ್ತಾವದ ಅಂಗೀಕಾರ</u>**

**ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ನೇ ಸಾಲಿನ ಕರ್ನಾಟಕ ಧನವಿನಿಯೋಗ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ನೇ ಸಾಲಿನ ಕರ್ನಾಟಕ ಧನವಿನಿಯೋಗ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.</u>**

ಆ) **<u>ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, 2018</u>**

**<u>ಪರ್ಯಾಲೋಚನಾ ಪ್ರಸ್ತಾವ</u>**

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ನೇ ಸಾಲಿನ ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**<u>ಪ್ರಸ್ತಾವವನ್ನು ಮಂಡಿಸಲಾಯಿತು.</u>**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ನೇ ಸಾಲಿನ ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಪರ್ಯಾಲೋಚಿಸುವುದು"

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.</u>

<u>ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.</u>

<u>ಖಂಡ 2 ರಿಂದ 3ರವರೆಗೆ</u>

**ಸಭಾಪತಿಯವರು:-** "ಖಂಡ 2 ರಿಂದ 3 ಈ ವಿಧೇಯಕದ ಭಾಗವಾಗಿರುತ್ತದೆ"

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

(ಖಂಡ 2 ರಿಂದ 3 ವಿಧೇಯಕಕ್ಕೆ ಸೇರಿಸಲಾಯಿತು)

<u>ಖಂಡ 1 ಇತ್ಯಾದಿ</u>

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ಪೀಠಿಕೆ ಮತ್ತು ಶೀರ್ಷಿಕೆಗಳು ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.</u>**

(ಮೊದಲನೆಯ ಖಂಡ, ಪೀಠಿಕೆ ಮತ್ತು ಶೀರ್ಷಿಕೆಗಳು ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**<u>ಪ್ರಸ್ತಾವದ ಅಂಗೀಕಾರ</u>**

**ಶ್ರೀ ಸಿದ್ಧರಾಮಯ್ಯ (ಮುಖ್ಯ ಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ನೇ ಸಾಲಿನ ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ನೇ ಸಾಲಿನ ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಅಂಗೀಕರಿಸುವುದು"

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.</u>**

(274)23.02.2018-5.50-ಎಂವಿ-ಜಿಆರ್

**<u>ಇ) ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಿಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ, 2018</u>**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಸಿದ್ಧರಾಮಯ್ಯ (ಮುಖ್ಯಮಂತ್ರಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ನೇ ಸಾಲಿನ ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಿಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ನೇ ಸಾಲಿನ ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಿಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.

ಖಂಡ 2 ರಿಂದ 3ರವರೆಗೆ

**ಸಭಾಪತಿಯವರು:-** "ಖಂಡ 2 ರಿಂದ 3 ಈ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 3 ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಿದ್ಧರಾಮಯ್ಯ (ಮುಖ್ಯಮಂತ್ರಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ನೇ ಸಾಲಿನ ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಿಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ನೇ ಸಾಲಿನ ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಿಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**14. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ, ನಿಯಮ 72ರ ಮತ್ತು 330ರ ಸೂಚನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಮಂಡನೆ**

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಪ್ರಸಕ್ತ 134ನೇ ಅಧಿವೇಶನಕ್ಕೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳಿಂದ ಬಂದಿರುವ ಚುಕ್ಕೆ ಗುರುತಿಲ್ಲದ ಒಟ್ಟು 225 ಪ್ರಶ್ನೆಗಳಿಗೆ ಹಾಗೂ 18 ಲಿಖಿತ ಪ್ರಶ್ನೆಗಳಿಗೆ ಬಂದಿರುವ ಉತ್ತರಗಳನ್ನು ಮತ್ತು ನಿಯಮ 72ರ ಸೂಚನೆಗಳಿಗೆ ಬಂದಿರುವ 29 ಹಾಗೂ 330ರ ಸೂಚನೆಗಳಿಗೆ ಬಂದಿರುವ 07 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರಗಳನ್ನು ಲಗತ್ತಿಸಲಾಗಿದೆ)

**ಸಭಾಪತಿಯವರು:-** ಮಂಡಿಸಲಾಯಿತು.

**15. ಸಭಾಪತಿಯವರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಉತ್ತರಗಳ ಮಂಡನೆ**

**ಅ) ಅನುಚ್ಛೇದ 371(ಜೆ) ಅಡಿಯಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ**

- - -

**ಶ್ರೀ ಎಂ.ಆರ್.ಸೀತಾರಾಂ(ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಕೆ.ಬಿ.ಶಾಣಪ್ಪನವರು ದಿನಾಂಕಃ23.02.2018ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಸಿದ ವಿಷಯಕ್ಕೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಆ) ಖಾಸಗಿ ಸಂಸ್ಥೆಗಳ ಜೊತೆಗೆ ದತ್ತಾಂಶ ಹಂಚಿಕೆ ಮಾಹಿತಿ ತಂತ್ರಜ್ಞಾನ ಕಾಯಿದೆ-2000ದ ಉಲ್ಲಂಘನೆ ಬಗ್ಗೆ.**

- - -

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಆರ್.ಸೀತಾರಾಂ(ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳಾದ ಶ್ರೀಯುತ ಅರುಣ ಶಹಾಪುರ್, ಪುಟ್ಟಣ್ಣ, ಎಸ್.ವಿ.ಸಂಕನೂರ ಮತ್ತು ಅಮರನಾಥ ಪಾಟೀಲ್‌ರವರು ದಿನಾಂಕ:23.02.2018ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಸಿದ ವಿಷಯಕ್ಕೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**16. ಕಾವೇರಿ ಹಾಗೂ ಮಹದಾಯಿ ನದಿ ನೀರಿನ ಹಂಚಿಕೆಯ ಬಗ್ಗೆ ಕೇಂದ್ರಕ್ಕೆ ಸರ್ವಪಕ್ಷಗಳ ನಿಯೋಗ ತೆಗೆದುಕೊಂಡು ಹೋಗುವ ಬಗ್ಗೆ.**

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸುಪ್ರೀಂ ಕೋರ್ಟ್‌ನ ತೀರ್ಪು ಬಂದ ಮೇಲೆ, ತಮಿಳುನಾಡಿನ ಸರ್ಕಾರ ಮಾನ್ಯ ಪ್ರಧಾನ ಮಂತ್ರಿಗಳ ಬಳಿಗೆ ಸರ್ವಪಕ್ಷ ನಿಯೋಗವನ್ನು ಕರೆದುಕೊಂಡು ಹೋಗುತ್ತಿದ್ದಾರೆ. ಆರು ವಾರಗಳಲ್ಲಿ ಹಿಂದಿನ ರೀತಿಯ ಮ್ಯಾನೇಜ್‌ಮೆಂಟ್ ಕಮಿಟಿ ಮಾಡಿ ಎಂದು ತಮಿಳುನಾಡಿನವರು ಕೇಳುತ್ತಿದ್ದಾರೆ. ಮೊನ್ನೆಯ ದಿವಸ ಮಾನ್ಯ ಮಾದೇಗೌಡರ ಅಧ್ಯಕ್ಷತೆಯಲ್ಲಿ ಹಿತರಕ್ಷಣಾ ಸಮಿತಿಯ ಸಭೆ ಆಯಿತು. ಅವರು ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡುವಂತೆ ನನಗೆ ಸೂಚನೆಯನ್ನು ಸಹ ನೀಡಿದ್ದರು. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೋರಿಕೊಳ್ಳುವುದೇನೆಂದರೆ, ತಾವು ದಯಮಾಡಿ ಎಲ್ಲಾ ಸರ್ವಪಕ್ಷ ನಿಯೋಗವನ್ನು ಕಾವೇರಿ ಮತ್ತು ಮಹದಾಯಿಗೆ ಸಂಬಂಧಪಟ್ಟಂತೆ ಕರೆದುಕೊಂಡು ಹೋಗುವುದು, ಅಲ್ಲಿ ಆರು ವಾರಗಳಲ್ಲಿ ಪರಿಶೀಲನಾ ಸಮಿತಿ ಆದರೆ ಸಾಕು ಅನ್ನುವಂಥದ್ದಕ್ಕೆ, ಈ ಹಿಂದಿನ ತೀರ್ಮಾನವನ್ನು ಸುಪ್ರೀಂ ಕೋರ್ಟ್ ಕೈಬಿಟ್ಟಿದೆ. ಅಂದರೆ, ಮ್ಯಾನೇಜ್‌ಮೆಂಟ್ ಕಮಿಟಿಯೇ ಬೇಕು ಮತ್ತು ಅದರ ಕೀ ಬೇಕು ಎಂದು ಹಠ ಹಿಡಿದಿಲ್ಲ. ಹಾಗಾಗಿ ಆ ವಿಚಾರದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳಿಗೆ ನಮ್ಮ ರಾಜ್ಯದಿಂದಲ್ಲೂ ಸರ್ವಪಕ್ಷಗಳ ನಿಯೋಗವನ್ನು ಕೊಂಡೊಯ್ಯುದು, ಕಾವೇರಿ ನದಿ ಮತ್ತು ಮಹದಾಯಿ ನದಿ ನೀರಿನ ಬಗ್ಗೆ ತಾವು ಮತ್ತೊಮ್ಮೆ ಮನವಿ ಮಾಡುವ ಮತ್ತು ಬೆಳಕು ಚೆಲ್ಲುವ ಕೆಲಸವನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:-** ಕಾವೇರಿ ನದಿ ನೀರಿನ ಬಗ್ಗೆ ಸುಪ್ರೀಂ ಕೋರ್ಟ್‌ನ ತೀರ್ಪು ಬಂದ ಮೇಲೆ ತಮಿಳುನಾಡಿನವರು ಮಾನ್ಯ ಪ್ರಧಾನ ಮಂತ್ರಿಯವರ ಬಳಿಗೆ ಸರ್ವಪಕ್ಷಗಳ ನಿಯೋಗ ಹೋಗುತ್ತಿದ್ದಾರೆ, ಅದಕ್ಕೆ ತಾವು ಹೋಗಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸುಪ್ರೀಂ ಕೋರ್ಟ್‌ನಲ್ಲಿ ಜಡ್ಜ್‌ಮೆಂಟ್ ಆಗಿದೆ. ನಾವು ಮಾನ್ಯ ಸುಪ್ರೀಂ ಕೋರ್ಟ್‌ಗೆ ಮನವಿಯನ್ನು ಸಲ್ಲಿಸಿದ್ದೆವು, ಅದು partly allow ಆಗಿದೆ.

ಕರ್ನಾಟಕ ರಾಜ್ಯಕ್ಕೆ 14.75 ಟಿ.ಎಂ.ಸಿ., ನೀರು ಹೆಚ್ಚಿಗೆ ಸಿಕ್ಕಿದೆ. ಮೊದಲು 270 ಟಿಎಂಸಿ ನೀರು ಇತ್ತು, ಈಗ ಅದು 284.75 ಟಿ.ಎಂ.ಸಿ., ನೀರು ಸಿಕ್ಕಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಈ ಹಿಂದೆ ಮ್ಯಾನೇಜ್‌ಮೆಂಟ್ ಕಮಿಟಿ ಮಾಡಬೇಕೆಂದು ಮಧ್ಯಂತರ ಆದೇಶವನ್ನು ಕೊಟ್ಟಿದ್ದರು. ಆಗ ಮಾಜಿ ಪ್ರಧಾನಮಂತ್ರಿಗಳಾದ ಮಾನ್ಯ ಹೆಚ್.ಡಿ.ದೇವೇಗೌಡರು ಧರಣಿ ಮಾಡಿದಾಗ ಮತ್ತು ತಾವೆಲ್ಲರೂ ಹೇಳಿದಾಗ ಅದನ್ನು ಕೈಬಿಟ್ಟಿದ್ದರು. ಈಗ ಮತ್ತೆ ಯಾವುದಾದರೂ ಒಂದು ಕಮಿಟಿಯನ್ನು ಮಾಡಿ ಎಂದು ಹೇಳಿದೆ. ಈಗ ತಮಿಳುನಾಡಿನ ಎಲ್ಲಾ ಪಕ್ಷದವರು ಸೇರಿಕೊಂಡು, ಈ ಹಿಂದಿನ ಮಾದರಿಯ ಮ್ಯಾನೇಜ್‌ಮೆಂಟ್ ಕಮಿಟಿ ಮಾಡಬೇಕೆಂದು ಹಠ ಹಿಡಿದುಕೊಂಡು ಮಾನ್ಯ ಪ್ರಧಾನ ಮಂತ್ರಿಗಳ ಬಳಿಗೆ ನಿಯೋಗ ಹೋಗುತ್ತಿದ್ದಾರೆ, ತಾವು ಅದರ ಬಗ್ಗೆ ಅಂದರೆ ಮ್ಯಾನೇಜ್‌ಮೆಂಟ್ ಕಮಿಟಿಗೆ ಸಂಬಂಧಿಸಿದಂತೆ ನಿಯೋಗ ಕರೆದುಕೊಂಡು ಹೋಗಬೇಕು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾವು ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಅದರ ಬಗ್ಗೆ ಒತ್ತಾಯ ಮಾಡೋಣ.

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಮಹದಾಯಿ ಬಗ್ಗೆಯೂ ಸಹ ಮಾನ್ಯ ಪ್ರಧಾನ ಮಂತ್ರಿಗಳ ಬಳಿಗೆ ನಿಯೋಗವನ್ನು ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿದ್ದರು. ದಯವಿಟ್ಟು ಮಹದಾಯಿ ಬಗ್ಗೆ ಮಾನ್ಯ ಪ್ರಧಾನ ಮಂತ್ರಿಗಳ ಬಳಿಗೆ ನಿಯೋಗವನ್ನು ಕರೆದುಕೊಂಡು ಹೋಗಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾನು ಕಳೆದ ತಿಂಗಳು 27ರಂದು ಎಲ್ಲಾ ಪಕ್ಷಗಳ ಸಭೆಯನ್ನು ಕರೆದಿದ್ದೆ. ಆ ಸಭೆ ನಡೆದಂತಹ ಸಂದರ್ಭದಲ್ಲಿ, ಎಲ್ಲಾ ಪಕ್ಷಗಳ ನಿಯೋಗವನ್ನು ಕರೆದುಕೊಂಡು ಹೋಗಬೇಕೆಂದು ತೀರ್ಮಾನ ಮಾಡಿದ್ದೇವೆ ಹಾಗೂ 29ನೇ ತಾರೀಖಿನಂದು ಎಲ್ಲಾ ಪಕ್ಷಗಳ ನಿಯೋಗ ಬರುತ್ತೇವೆ, ನಮಗೆ ಒಂದು ಅಪಾಯಿಂಟ್‌ಮೆಂಟ್ ನೀಡಿ ಎಂದು ಮಾನ್ಯ ಪ್ರಧಾನ ಮಂತ್ರಿಗಳಿಗೆ ಪತ್ರವನ್ನು ಬರೆದಿದ್ದೇನೆ. ಮಾನ್ಯ ಸದಸ್ಯರಾದ ಯತ್ನಾಳ್‌ರವರೆ, ಇದುವರೆವಿಗೂ ಸರ್ವ ಪಕ್ಷಗಳ ನಿಯೋಗದ ಭೇಟಿಗೆ ಮಾನ್ಯ ಪ್ರಧಾನ ಮಂತ್ರಿಗಳು ಅಪಾಯಿಂಟ್‌ಮೆಂಟ್ ಕೊಟ್ಟಿಲ್ಲ. ಮಾನ್ಯ ಪ್ರಧಾನ ಮಂತ್ರಿಗಳು ಅಪಾಯಿಂಟ್‌ಮೆಂಟ್ ಕೊಡದೆ, ನಾವುಗಳೇ ಹೋಗಿ ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೆ? In the meanwhile, ಮಹದಾಯಿ ನದಿ ನೀರಿಗೆ ಸಂಬಂಧಿಸಿದಂತೆ argument ಶುರುವಾಗಿದೆ. ಅವರ ಕಡೆಯ ವಾದ ಮತ್ತು ನಮ್ಮ ಕಡೆಯ ವಾದವೆಲ್ಲಾ ಮುಗಿದಿದೆ. ಆಗಸ್ಟ್ 20ನೇ ತಾರೀಖಿನ ಒಳಗಡೆ ಜಡ್ಜ್‌ಮೆಂಟ್ ಕೊಡಲೇಬೇಕು. ಏಕೆಂದರೆ ಅಲ್ಲಿಯವರೆವಿಗೂ ಮಾತ್ರ ದಿನಾಂಕವನ್ನು ವಿಸ್ತರಿಸಿದ್ದಾರೆ, ಟ್ರಿಬ್ಯುನಲ್ ಅವಧಿ ಒಂದು ವರ್ಷ. ನಮಗೆ ತೀರ್ಪು ಬರುತ್ತದೆ ಮತ್ತು ನಮಗೆ ನ್ಯಾಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಿಗುತ್ತದೆ ಎಂಬ ವಿಶ್ವಾಸ ನನಗೆ ಇದೆ. But, in the mean while, appointment ಕೊಟ್ಟರೆ, All Party Delegation ಅನ್ನು ಕರೆದುಕೊಂಡು ಹೋಗುವುದಕ್ಕೆ ನಾನು ತಯಾರಿದ್ದೇನೆ. ಮಹದಾಯಿಗೆ ಸಂಬಂಧಿಸಿದಂತೆ ಎಷ್ಟು ಪತ್ರಗಳನ್ನು ಬರೆದಿದ್ದೇನೆ ಎಂದರೆ, ಮಾನ್ಯ ಪ್ರಧಾನ ಮಂತ್ರಿಗಳಿಗೆ, ಗೋವಾ ರಾಜ್ಯದ ಮುಖ್ಯಮಂತ್ರಿಗಳಿಗೆ ಮತ್ತು ಮಹಾರಾಷ್ಟ್ರ ರಾಜ್ಯದ ಮುಖ್ಯಮಂತ್ರಿಗಳಿಗೆ ನಾನು ಪತ್ರ ಬರೆದಿದ್ದೇನೆ. ಏನು ಮಾಡಿದರು ಕೂಡ ಅವರು ಒಪ್ಪಿಕೊಳ್ಳುತ್ತಿಲ್ಲ. ಈಗ ಟ್ರಿಬ್ಯುನಲ್‌ನವರೇ ಈ ವಿಷಯವನ್ನು ಮಾತುಕತೆ ಮೂಲಕ ಇತ್ಯರ್ಥಪಡಿಸಿಕೊಳ್ಳಿ ಎಂದರು ಕೂಡ ಅವರು ಒಪ್ಪುತ್ತಿಲ್ಲ. ಮಾನ್ಯ ಪ್ರಧಾನ ಮಂತ್ರಿಗಳನ್ನು ಒಪ್ಪಿಸಿ ಎಂದು ಭಾರತೀಯ ಜನತಾ ಪಾರ್ಟಿಯವರಿಗೆ ಹೇಳಿದರೆ ಅವರು ಸಹ ಒಪ್ಪಿಸುತ್ತಿಲ್ಲ. ಮಾನ್ಯ ಪ್ರಧಾನ ಮಂತ್ರಿಗಳು ಸಹ ಮಧ್ಯಸ್ಥಿಕೆ ವಹಿಸುವುದಕ್ಕೆ ಒಪ್ಪಿಲ್ಲ. ಈಗಲೂ ಸಹ ಪತ್ರವನ್ನು ಬರೆದಿದ್ದೇನೆ. ಮಾನ್ಯ ಪ್ರಧಾನ ಮಂತ್ರಿಗಳು ಈಗ ಕರೆದರೂ ಸಹ ನಾವು ಹೋಗುವುದಕ್ಕೆ ತಯಾರಿದ್ದೇವೆ. ಮಾನ್ಯ ಸಭಾಪತಿಯವರೇ, ಈಗ ನಿಮ್ಮದು ಎಲ್ಲಾ ಮುಗಿಯಿತೆ?

**ಸಭಾಪತಿಯವರು**:- ನಾನು ಮೊದಲು ಒಂದೆರಡು ಮಾತುಗಳನ್ನು ಆಡುತ್ತೇನೆ, ಆಮೇಲೆ ತಾವು ಮಾತನಾಡಿ.

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು)**:- ಮಾನ್ಯ ಸಭಾಪತಿಯವರೇ, ಒಂದೆರಡು ವಿಧೇಯಕಗಳು ಬಾಕಿ ಇವೆ.

**ಸಭಾಪತಿಯವರು**:- ಇಷ್ಟು ಹೊತ್ತಿನ ನಂತರ ಯಾವ ವಿಧೇಯಕಗಳು, ಈ ರೀತಿಯಾದರೆ ಹೇಗೆ? ನೀವು ನನ್ನ ಕಷ್ಟವನ್ನು ಸಹ ಅರ್ಥ ಮಾಡಿಕೊಳ್ಳಿ.

**ಶ್ರೀ ಟಿ.ಬಿ.ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳ ಮತ್ತು ಸಣ್ಣ ನೀರಾವರಿ ಸಚಿವರು)**:- ಮಾನ್ಯ ಸಭಾಪತಿಯವರೇ, ಒಂದೆರಡು ಸಣ್ಣ ವಿಧೇಯಕಗಳಿವೆ, ಈ ವಿಧೇಯಕಗಳು ಕೆಳಮನೆಯಲ್ಲಿ ಪಾಸ್ ಆಗಿವೆ. ತಾವು ದಯವಿಟ್ಟು ಈ ಸತ್ಯಸಾಯಿ ವಿಧೇಯಕವನ್ನು ಮಾಡಬೇಕು. ಇವುಗಳಿಗೆ ಐದು ನಿಮಿಷದ ಮೇಲೆ ಆಗುವುದಿಲ್ಲ. ಏಕೆಂದರೆ ಇದು ಕೊನೆಯ ಅಧಿವೇಶನ.

**ಶ್ರೀ ಸಿದ್ದರಾಮಯ್ಯ**:- ಮಾನ್ಯ ಸಭಾಪತಿಯವರೇ, ಇವುಗಳು ಸಣ್ಣ ವಿಧೇಯಕಗಳು, ನಾನು ಏನು ಮಾತನಾಡುವುದಿಲ್ಲ, ನೀವುಗಳೆ ಮಾತನಾಡಿ. ಇವುಗಳು simple ವಿಧೇಯಕಗಳು.

**ಸಭಾಪತಿಯವರು**:- ಈಗ ಮೂರು ವಿಧೇಯಕಗಳ ಬಗ್ಗೆ ಕೇಳುತ್ತಿದ್ದಾರೆ. ಅವುಗಳು simple ಇರಬಹುದು ಅಥವಾ complicated ಇರಬಹುದು. ಆದರೆ, ಮಾನ್ಯ ಮುಖ್ಯಮಂತ್ರಿಗಳು ಇರುತ್ತೇನೆಂದು ಮಾತನ್ನು ಕೊಟ್ಟರೆ, ನಾನು ವಿಧೇಯಕಗಳನ್ನು ತೆಗೆದುಕೊಳ್ಳುತ್ತೇನೆ. ಏಕೆಂದರೆ, ನಾನು ನಿಮಗೆ ವಂದನಾರ್ಪಣೆಯನ್ನು ಹೇಳಬೇಕು ಹಾಗು ನಾನು ಕಳೆದ ಎಂಟು ವರ್ಷಗಳಿಂದ ಈ ಸಭೆಯ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ಇದು ನನ್ನ ಸೇವೆಯ ಬಹುಪಾಲು ಕೊನೆಯ ದಿವಸ. ನನ್ನ ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸುವುದಕ್ಕೆ ನನಗೆ ಒಂದು ಅವಕಾಶಬೇಕು. ನೀವು ವಿಧೇಯಕಗಳು ಎಂದು ಸುಮಾರು ಏಳೂವರೆಯವರೆವಿಗೂ ಕುಳಿತುಕೊಂಡರೆ, ಮಾನ್ಯ ಮುಖ್ಯಮಂತ್ರಿಗಳು ಇಲ್ಲದೇ ಹೋದರೆ, ನಾನು ಯಾರ ಹತ್ತಿರ ಮಾತನಾಡುವುದು. ತಾವುಗಳು ನನ್ನ ಭಾವನೆಗಳನ್ನು ಸಹ ಸ್ವಲ್ಪ ಅರ್ಥ ಮಾಡಿಕೊಳ್ಳಿ. ನಾನು ಅದಕ್ಕೆ ಭೋಜನಕ್ಕೆ ಮುಂಚೆ ಎಷ್ಟು ವಿಧೇಯಕಗಳನ್ನು squeeze in ಮಾಡಬೇಕೋ, ಅಷ್ಟನ್ನು ಮಾಡಿದ್ದೇನೆ. ತಾವು ಸರ್ಕಾರಿ ಮುಖ್ಯ ಸಚೇತಕರನ್ನು ಕೇಳಿ, ಅವರಿಗೆ ಪದೇ ಪದೇ ಚೀಟಿಯನ್ನು ಕಳುಹಿಸಿದೆ. ಮಾನ್ಯ ಶಿಕ್ಷಣ ಸಚಿವರನ್ನು ಕರೆದುಕೊಂಡು ಬನ್ನಿ, ಅವರ ಇಲಾಖೆಯ ಮೂರು ವಿಧೇಯಕಗಳಿವೆ, ಅದನ್ನು ಮಾಡಿಕೊಡುತ್ತೇನೆಂದು. ಆದರೆ, ಅವರು ಬರಲಿಲ್ಲ, ಅದಕ್ಕೆ ನಾನು ಏನು ಮಾಡಲಿ? ಅವರು ಸದನಕ್ಕೆ ಬರಲಿಲ್ಲ. ಅವರು ಮಾನ್ಯ ಸಭಾನಾಯಕರನ್ನು ಕೇಳಲಿ. ಈಗ ಬೆಳಗಿನ ವಿಷಯದ ಬಗ್ಗೆ ಚರ್ಚೆ ಬೇಡ. ಮಾನ್ಯ ಮುಖ್ಯಮಂತ್ರಿಗಳು ಇರುತ್ತೇನೆಂದು ಮಾತು ಕೊಟ್ಟರೆ, ಮೂರು ವಿಧೇಯಕಗಳೇನು, ಮೂವತ್ತು ವಿಧೇಯಕಗಳನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾನು ಒಂದು ಸಭೆಗೆ ಹೋಗಬೇಕು.

**ಸಭಾಪತಿಯವರು:-** ಹಾಗಾದರೆ ಎರಡು ಕೆಲಸಗಳು ಆಗುವುದಿಲ್ಲ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನನಗೆ ನಿಮ್ಮ ಮಾತುಗಳನ್ನು ಕೇಳಬೇಕೆಂಬ ಆಸಕ್ತಿ ಇದೆ.

(275)23.02.2018-06.00-ಎಲ್‌ಎಲ್/ಜಿಆರ್

**ಸಭಾಪತಿಯವರು:-** ನನ್ನ ಭಾವನೆಗಳಿಗೆ ಬೆಲೆಯಿಲ್ಲ. ತಮ್ಮ ವಿಧೇಯಕಗಳೇ ತಮಗೆ ಬಹಳ ಪ್ರಮುಖವಾಗಿವೆ. ನಾನು ವಿಧೇಯಕಗಳನ್ನು ಮಂಡನೆ ಮಾಡಲು ಬಹಳ ಪ್ರಯತ್ನ ಮಾಡಿದ್ದೇನೆ. ಅದಕ್ಕಾಗಿ, ನಿನ್ನೆಯ ದಿವಸದಿಂದಲೂ ಕೂಡ ನಾನು ಈ ಸದನದಲ್ಲಿ ಬಹಳ ಹೊತ್ತು ಕುಳಿತಿದ್ದೇನೆ. ನಿನ್ನೆಯ ದಿವಸ ಸಾಯಂಕಾಲ ವಿಧೇಯಕಗಳು ಯಾವುದಾದರೂ ಇದ್ದರೆ ತನ್ನಿ ಎಂದು ಹೇಳಿ ಕಳುಹಿಸಿದ್ದೆನು. ಆದರೆ, ಯಾವ ಸಚಿವರೂ ಕೂಡ ಬಂದಿರುವುದಿಲ್ಲ. ನನ್ನ ಕಷ್ಟವನ್ನೂ ತಾವು ಸ್ವಲ್ಪ ಅರ್ಥಮಾಡಿಕೊಳ್ಳಿ. ಇವತ್ತಿನ ದಿವಸ ಮಧ್ಯಾಹ್ನ ಭೋಜನ ಸಮಯವನ್ನು ಮುಂದಕ್ಕೆ ಹಾಕಿಕೊಂಡು ಕಾದು ಕುಳಿತಿದ್ದೆನು. ಆದರೂ ಯಾವ ಸಚಿವರು ಬಂದಿರುವುದಿಲ್ಲ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ತಾವು ತಮ್ಮ ಭಾವನೆಗಳನ್ನು ಈ ಸದನದಲ್ಲಿ ವ್ಯಕ್ತಪಡಿಸಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಈ ವಿಧೇಯಕಗಳ ಬಗ್ಗೆ ವಿರೋಧ ಪಕ್ಷದ ಸದಸ್ಯರು ಚರ್ಚೆ ಮಾಡದೇ, ವಿಧೇಯಕಗಳನ್ನು ಪಾಸ್ ಮಾಡುತ್ತಾರೆಂದು ಹೇಳಿದ್ದಾರೆ. ಆದುದರಿಂದ, ತಾವುಗಳು ವಿಧೇಯಕಗಳನ್ನು ಮಂಡನೆ ಮಾಡಬಹುದು.

**ಸಭಾಪತಿಯವರು:-** ಹಾಗಾದರೆ, ಮೂರು ವಿಧೇಯಕಗಳನ್ನು ಕೊಡಿ. **(ಗೊಂದಲ)** ವಿಧೇಯಕಗಳು ರೆಡಿ ಇಲ್ಲದೇ ಇದ್ದರೆ ನಾವು ಏನು ಮಾಡುವುದಕ್ಕೆ ಬರುವುದಿಲ್ಲ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಆ ಮೂರು ವಿಧೇಯಕಗಳು ರೆಡಿಯಾಗಿವೆ.

**ಸಭಾಪತಿಯವರು:-** ಆ ಮೂರು ವಿಧೇಯಕಗಳು ತಮ್ಮ ಬಳಿ ರೆಡಿ ಇದ್ದರೆ ಸಾಲದು. ನಮ್ಮ ಕಛೇರಿಯಲ್ಲಿ ರೆಡಿ ಇರಬೇಕು.

**17. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಶ್ರೀ ಸತ್ಯ ಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯ ವಿಧೇಯಕ, 2018**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ನೇ ಸಾಲಿನ ಶ್ರೀ ಸತ್ಯ ಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯ ವಿಧೇಯಕ, ಮೇಲಿನ ಪ್ರಸ್ತಾವನೆಯನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ:

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ನೇ ಸಾಲಿನ ಶ್ರೀ ಸತ್ಯ ಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯ ವಿಧೇಯಕ, ಅನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖಂಡ 2 ರಿಂದ 62 ರವರೆಗೆ

**ಸಭಾಪತಿಯವರು:-** "ಖಂಡ 2 ರಿಂದ 62 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 62 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ:

"ಮೊದಲನೆಯ ಖಂಡ. ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ. ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಮಂತ್ರಿಗಳು):-** ಮಾನ್ಯ ಸಭಾಪತಿಯವರೇ, "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ನೇ ಸಾಲಿನ ಶ್ರೀ ಸತ್ಯ ಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ:

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ನೇ ಸಾಲಿನ ಶ್ರೀ ಸತ್ಯ ಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯ ವಿಧೇಯಕ, 2018 ಅನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ವಿಧೇಯಕ, 2018**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ನೇ ಸಾಲಿನ ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ವಿಧೇಯಕದ ಮೇಲಿನ ಪ್ರಸ್ತಾವನೆಯನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ:

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ನೇ ಸಾಲಿನ ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ವಿಧೇಯಕ, 2018 ಅನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

ಖಂಡ 2 ರಿಂದ 48 ರವರೆಗೆ

**ಸಭಾಪತಿಯವರು:-** "ಖಂಡ 2 ರಿಂದ 48 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 48 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ:

"ಮೊದಲನೆಯ ಖಂಡ. ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ. ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಸ್ತಾವದ ಅಂಗೀಕಾರ**

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಮಂತ್ರಿಗಳು):–** ಮಾನ್ಯ ಸಭಾಪತಿಯವರೇ, "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ನೇ ಸಾಲಿನ ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ:

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ನೇ ಸಾಲಿನ ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**ಇ) ಅಮಿಟಿ ವಿಶ್ವವಿದ್ಯಾಲಯ ವಿಧೇಯಕ, 2018**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018 ರ ಅಮಿಟಿ ವಿಶ್ವವಿದ್ಯಾಲಯ ವಿಧೇಯಕದ ಮೇಲಿನ ಪ್ರಸ್ತಾವನೆಯನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ:

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018 ರ ಅಮಿಟಿ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

ಖಂಡ 2 ರಿಂದ 61 ರವರೆಗೆ

**ಸಭಾಪತಿಯವರು:–** "ಖಂಡ 2 ರಿಂದ 61 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 61 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖಂಡ 1 ಇತ್ಯಾದಿ

**ಸಭಾಪತಿಯವರು**:- ಪ್ರಸ್ತಾವ ಏನೆಂದರೆ:

"ಮೊದಲನೆಯ ಖಂಡ. ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ. ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಮಂತ್ರಿಗಳು)**:- ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಅಮಿಟಿ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು**:- ಪ್ರಸ್ತಾವ ಏನೆಂದರೆ:

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಅಮಿಟಿ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**ಶ್ರೀ ಬಸವರಾಜ ರಾಯರೆಡ್ಡಿ**:- ಮಾನ್ಯ ಸಭಾಪತಿಯವರೇ, ಉಡುಪಿ ಲಾರ್ಡ್ ಕೃಷ್ಣ ವಿಶ್ವವಿದ್ಯಾಲಯ ವಿಧೇಯಕ ಇದೆ.

**ಸಭಾಪತಿಯವರು**:- ಮತ್ತೊಂದು ವಿಧೇಯಕ ಇದೆಯೇ? ತಾವು ಚೀಟಿಯಲ್ಲಿ ಕೊಟ್ಟಂತಹ ಮೂರು ವಿಧೇಯಕಗಳನ್ನು ಮಂಡನೆ ಮಾಡಿದ್ದೇನೆ. ನನ್ನ ಹತ್ತಿರ ಯಾವುದೇ ವಿಧೇಯಕಗಳು ಇರುವುದಿಲ್ಲ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ, ರಾಜ್ಯದ ಜನ ವಿಧೇಯಕಗಳ ಮೇಲೆ ಯಾವುದೇ ಚರ್ಚೆ ನಡೆಸದೇ ಮಂಡನೆ ಮಾಡಿ ಅಂಗೀಕಾರ ಮಾಡುತ್ತಿದ್ದಾರೆಂದು ಮಾತನಾಡಿಕೊಳ್ಳುವ ರೀತಿ ಈ ಸದನದಲ್ಲಿ ವಿಧೇಯಕಗಳನ್ನು ಅಂಗೀಕಾರ ಮಾಡುತ್ತಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(276)23.02.2018/ವೈಎಲ್-ಎಂಡಿ/6.10

**ಈ) ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2018**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಟಿ.ಬಿ.ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:- ಪ್ರಸ್ತಾವ ಏನೆಂದರೆ;**

**"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 19 ರವರೆಗೆ**

**ಸಭಾಪತಿಯವರು:-** "ಖಂಡ 2 ರಿಂದ 19 ರವರೆಗೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 19 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು.)**

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

**"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗು ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಟಿ.ಬಿ.ಜಯಚಂದ್ರ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರುಃ-** ಪ್ರಸ್ತಾವ ಏನೆಂದರೆ;

> **“ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು”**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮುಸೂದೆಗೆ ಒಪ್ಪಿಗೆ ನೀಡಲಾಯಿತು**

**ಸಭಾಪತಿಯವರು:-** ಮಾನ್ಯ ಸಭಾನಾಯಕರೆ, ಎಲ್ಲಾ ವಿಧೇಯಕಗಳು ಇಲ್ಲಿಗೆ ಮುಗಿದವೆ?

**ಸಭಾ ನಾಯಕರು:-** ಮಾನ್ಯ ಸಭಾಪತಿಯವರೇ, ನಾಡಪ್ರಭು ಕೆಂಪೇಗೌಡ ಪರಂಪರೆ ತಾಣದ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2018 ಮತ್ತು ಬನವಾಸಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2018 ಇವೆರಡು ಮಾತ್ರ ಬಾಕಿ ಇವೆ.

**ಸಭಾಪತಿಯವರು:-** ಇಷ್ಟು ಸಮಯವಾದರೂ ಮಾನ್ಯ ಮುಖ್ಯಮಂತ್ರಿಗಳು ವಿಧಾನ ಪರಿಷತ್ತಿನ ಸದನಕ್ಕೆ ಹಾಜರಾಗಲಿಲ್ಲ. ನಾನು ಸದನವನ್ನು adjourn ಮಾಡುತ್ತೇನೆ. ಬೇರೆ ಏನು ಮಾತನಾಡುವ ಅವಶ್ಯಕತೆ ಇಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ಇದರಲ್ಲಿ ಏನು ಆಸಕ್ತಿ ಇರುವಂತೆ ಕಾಣುತ್ತಿಲ್ಲ ಎಂದು ನನಗೆ ಅನಿಸುತ್ತಿದೆ.

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ನಾಡಪ್ರಭು ಕೆಂಪೇಗೌಡ ಪರಂಪರೆ ತಾಣದ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2018 ಮತ್ತು ಬನವಾಸಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2018 ಬಾಕಿ ಉಳಿದಿದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೇ, ಮೊದಲೇ ಈ ರಾಜ್ಯದ ಜನ ವಿಧೇಯಕದ ಮೇಲೆ ಚರ್ಚೆ ಮಾಡದೆ, ಅನುಮೋದಿಸುತ್ತಾರೆ ಎಂದು ಮಾತನಾಡಿಕೊಳ್ಳುತ್ತಿದ್ದಾರೆ. ಅನಿವಾರ್ಯ ಕಾರಣದಿಂದ ಈಗಾಗಲೇ 3 ವಿಧೇಯಕವನ್ನು ಅನುಮೋದಿಸಲಾಗಿದೆ. ಎಷ್ಟು ವಿಧೇಯಕವನ್ನು ಚರ್ಚೆ ನಡೆಸದೆ ಅನುಮೋದಿಸುತ್ತೀರಿ? ಇದರಿಂದ ರಾಜ್ಯದ ಜನತೆಗೆ ಏನು ಸಂದೇಶ ಹೋಗುತ್ತದೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಜಗತ್ ವಿಶ್ವವಿದ್ಯಾಲಯ ವಿಧೇಯಕ, 2018ನ್ನು ಅನುಮೋದಿಸಬೇಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಈಗ ಅನುಮೋದನೆಗೊಂಡಿರುವ ವಿಧೇಯಕಗಳು ಸಾಕು. ಉಳಿದಿರುವುದನ್ನು ಮುಂದಿನ ದಿನಗಳಲ್ಲಿ ಮಾಡೋಣ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಆ ರೀತಿ ಮಾಡಿಕೊಳ್ಳಬಹುದು. ಆದರೆ,......

**ಸಭಾಪತಿಯವರು:-** ಮಾತನಾಡುವುದು ಸಾಕು.

**ಉ) ಬನವಾಸಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2018**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕಾಗೋಡು ತಿಮ್ಮಪ್ಪ(ಕಾನೂನು ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಬನವಾಸಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:- ಪ್ರಸ್ತಾವ ಏನೆಂದರೆ;**

**"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಬನವಾಸಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚಿಸುವುದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 41 ರವರೆಗೆ**

**ಸಭಾಪತಿಯವರು:-** "ಖಂಡ 2 ರಿಂದ 41 ರವರೆಗೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 41 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು.)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**<u>ಖಂಡ 1 ಇತ್ಯಾದಿ</u>**

**ಸಭಾಪತಿಯವರುಃ–** ಪ್ರಸ್ತಾವ ಏನೆಂದರೆ;

**"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."**

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗು ಅಧಿನಿಯಮಗೊಳಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)**

**<u>ಪ್ರಸ್ತಾವದ ಅಂಗೀಕಾರ</u>**

**ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಬನವಾಸಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರುಃ–** ಪ್ರಸ್ತಾವ ಏನೆಂದರೆ;

**"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಬನವಾಸಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಅಂಗೀಕರಿಸುವುದು"**

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು</u>**

**<u>ಊ) ನಾಡಪ್ರಭು ಕೆಂಪೇಗೌಡ ಪರಂಪರೆ ತಾಣದ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2018</u>**

**<u>ಪರ್ಯಾಲೋಚನಾ ಪ್ರಸ್ತಾವ</u>**

**ಶ್ರೀ ಕಾಗೋಡು ತಿಮ್ಮಪ್ಪ(ಕಾನೂನು ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ನಾಡಪ್ರಭು ಕೆಂಪೇಗೌಡ ಪರಂಪರೆ ತಾಣದ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**<u>ಪ್ರಸ್ತಾವವನ್ನು ಮಂಡಿಸಲಾಯಿತು</u>**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:- ಪ್ರಸ್ತಾವ ಏನೆಂದರೆ;**

**“ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ನಾಡಪ್ರಭು ಕೆಂಪೇಗೌಡ ಪರಂಪರೆ ತಾಣದ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚಿಸುವುದು”**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 41 ರವರೆಗೆ**

**ಸಭಾಪತಿಯವರುಃ-** “ಖಂಡ 2 ರಿಂದ 41 ರವರೆಗೆ ವಿಧೇಯಕದ ಭಾಗವಾಗಿರುತ್ತದೆ”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 41 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು.)**

**ಖಂಡ 1 ಇತ್ಯಾದಿ**

**ಸಭಾಪತಿಯವರುಃ-** ಪ್ರಸ್ತಾವ ಏನೆಂದರೆ;

**“ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.”**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗು ಅಧಿನಿಯಮಗೊಳಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ನಾಡಪ್ರಭು ಕೆಂಪೇಗೌಡ ಪರಂಪರೆ ತಾಣದ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರುಃ-** ಪ್ರಸ್ತಾವ ಏನೆಂದರೆ;

**“ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ನಾಡಪ್ರಭು ಕೆಂಪೇಗೌಡ ಪರಂಪರೆ ತಾಣದ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಅಂಗೀಕರಿಸುವುದು”**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(277)/23.02.2018/6.20/ಎಸ್‌ಕೆ-ಎಂಡಿ.

**ಖ) ಜಗತ್ ವಿಶ್ವವಿದ್ಯಾಲಯ ವಿಧೇಯಕ, 2018**

**ಪರ್ಯಾಲೋಚನಾ ಪ್ರಸ್ತಾಪ**

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಜಗತ್ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:- ಪ್ರಸ್ತಾವ ಏನೆಂದರೆ;**

**"ಕರ್ನಾಟಕ ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಜಗತ್ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸುವುದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 61**

**ಸಭಾಪತಿಯವರುः-** "ಖಂಡ 2 ರಿಂದ 61 ರವರೆಗೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 61 ನ್ನು ವಿಧೇಯಕಕ್ಕೆ ಸೇರಿಸಲಾಯಿತು.)**

**ಖಂಡ 1 ಇತ್ಯಾದಿ**

**ಸಭಾಪತಿಯವರುः-** ಪ್ರಸ್ತಾವ ಏನೆಂದರೆ;

**"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗು ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಸ್ತಾವದ ಅಂಗೀಕಾರ**

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು)**:- ಮಾನ್ಯ ಸಭಾಪತಿಯವರೇ, ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಜಗತ್ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

> **"ಕರ್ನಾಟಕ ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಜಗತ್ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸುವುದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಸಭಾಪತಿಯವರು:-** ಗೌರವಾನ್ವಿತ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಂತ್ರಿ ಮಂಡಲದ ಎಲ್ಲಾ ಸದಸ್ಯರು ಹಾಗೂ ಸದನದ ಎಲ್ಲಾ ಗೌರವಾನ್ವಿತ ಸದಸ್ಯರು ದಯಮಾಡಿ ನನ್ನ ಒಂದೆರಡು ಮಾತುಗಳನ್ನು ಕೇಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**18. ಸಾರಾಂಶ**

**ಸಭಾಪತಿಯವರು:-** ಕರ್ನಾಟಕ ವಿಧಾನ ಪರಿಷತ್ತಿನ 134ನೇ ಅಧಿವೇಶನದಲ್ಲಿ ದಿನಾಂಕ: 05.02.2018 ರಿಂದ 09.02.2018ರವರೆಗೆ ಮತ್ತು ದಿನಾಂಕ: 16.02.2018ರವರೆಗೆ ಒಟ್ಟು 11 ದಿನಗಳು ಕಾರ್ಯಕಲಾಪಗಳನ್ನು ನಡೆಸಲಾಗಿರುತ್ತದೆ.

ಕಳೆದ ಅಧಿವೇಶನದಿಂದೀಚೆಗೆ ನಿಧನರಾದ ಗಣ್ಯರಿಗೆ ಸದನವು ಸಂತಾಪವನ್ನು ವ್ಯಕ್ತಪಡಿಸಿತು.

ಸಭೆಯ ಮುಂದಿಡಲಾಗುವ ಕಾಗದಪತ್ರಗಳ ಮೊದಲನೆಯ, ಎರಡನೆಯ, ಮೂರನೆಯ ಹಾಗೂ ನಾಲ್ಕನೆಯ ಪಟ್ಟಿಗಳನ್ನು ಹಾಗೂ ರಾಷ್ಟ್ರಪತಿಯವರಿಂದ/ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯಲ್ಲಿ ಮಂಡಿಸಲಾಯಿತು.

2017-18ನೇ ಸಾಲಿನ 24 ವರದಿಗಳಲ್ಲಿ ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿಯ 86, 87, 88, 89, 90, 91, 92 ಹಾಗೂ 93ನೇ ವರದಿಗಳನ್ನು ಹಾಗೂ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿಯ 46ನೇ ವರದಿಯನ್ನು ಮಂಡಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶೂನ್ಯ ವೇಳೆಯ 39 ಸೂಚನೆಗಳ ಪೈಕಿ 11 ಸೂಚನೆಗಳಿಗೆ ಉತ್ತರಿಸಲಾಯಿತು ಹಾಗೂ 01 ಸೂಚನೆಗೆ ಉತ್ತರವನ್ನು ಸದನದಲ್ಲಿ ಮಂಡಿಸಲಾಯಿತು.

ಪ್ರಸ್ತುತ ಅಧಿವೇಶನದಲ್ಲಿ 1499 ಪ್ರಶ್ನೆಗಳನ್ನು ಸ್ವೀಕರಿಸಿದ್ದು, ಆ ಪೈಕಿ 135 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಅಂಗೀಕರಿಸಲಾಗಿದ್ದು, 122 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 11 ಪ್ರಶ್ನೆಗಳಿಗೆ ಉತ್ತರವನ್ನು ಮಂಡಿಸಲಾಯಿತು. ಲಿಖಿತ ಮೂಲಕ ಉತ್ತರಿಸುವ ಒಟ್ಟು 1364 ಪ್ರಶ್ನೆಗಳ ಪೈಕಿ, 658 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರವನ್ನು ಮಂಡಿಸಲಾಯಿತು. ನಿಯಮ 72 ರಡಿಯಲ್ಲಿ ಒಟ್ಟು 103 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 2 ಸೂಚನೆಗಳು ಸದನದಲ್ಲಿ ಚರ್ಚೆಯಾಗಿರುತ್ತದೆ. ನಿಯಮ 330 ರಡಿಯಲ್ಲಿ 38 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, 02 ಸೂಚನೆಗಳ ಉತ್ತರಗಳ ಬಗ್ಗೆ ಚರ್ಚೆಯಾಗಿರುತ್ತದೆ.

ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರೆ ಸೌಲಭ್ಯಗಳ ನಿಯಂತ್ರಣ) ವಿಧೇಯಕ, 2014, ಸಂಬಂಧವಾಗಿ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳಿಗೆ ಕಾಲ್ಪನಿಕ ವೇತನ ನಿಗದಿಪಡಿಸುವ ಕುರಿತು ಪುನರ್ ಪರಿಶೀಲಿಸಲು ರಚಿಸಲಾದ ವಿಶೇಷ ಸದನ ಸಮಿತಿಯ ವರದಿಯನ್ನು ಸದನಕ್ಕೆ ಮಂಡಿಸಲಾಯಿತು.

2017ನೇ ಸಾಲಿನ "ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕ"ಕ್ಕೆ ಸಂಬಂಧಪಟ್ಟಂತೆ ರಚಿಸಲಾದ ಪರಿಶೀಲನಾ ಸಮಿತಿ ವರದಿಯನ್ನು ಸದನದಲ್ಲಿ ದಿನಾಂಕ:19.02.2018ರಂದು ಮಂಡಿಸಲಾಯಿತು. ಭಾರತ ಸಂವಿಧಾನದ 151 (2)ನೇ ಅನುಚ್ಛೇದದ ಮೇರೆಗೆ, ಭಾರತ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ನೀಡಿರುವ 2016-17ನೇ ಹಾಗೂ 2017-18ನೇ ಸಾಲಿನ ಧನವಿನಿಯೋಗ ಲೆಕ್ಕಗಳ ಮತ್ತು ಹಣಕಾಸು ಲೆಕ್ಕಗಳನ್ನು (ಸಂಖ್ಯೆ:3, 7, 8 ಹಾಗೂ 9) ಸದನದಲ್ಲಿ ಮಂಡಿಸಲಾಯಿತು.

ನಿಯಮ 59 ರಡಿಯಲ್ಲಿ 3 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಅವುಗಳಲ್ಲಿ 2 ಸೂಚನೆಗಳು ನಿಯಮ 68 ರಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಲಾಗಿರುತ್ತದೆ. ಇನ್ನುಳಿದ 01 ಸೂಚನೆಯನ್ನು ತಿರಸ್ಕರಿಸಲಾಗಿದೆ. ನಿಯಮ 68ರಡಿಯಲ್ಲಿ ಸೂಚಿಸಲಾಗಿದ್ದ, 01 ಸೂಚನೆಗೆ ಉತ್ತರವನ್ನು ಸದನಕ್ಕೆ ಮಂಡಿಸಲಾಯಿತು.

ರಾಜ್ಯಪಾಲರ ಭಾಷಣದ ಮೇಲಿನ 7 ಗಂಟೆ 01 ನಿಮಿಷಗಳ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿ ಉತ್ತರವನ್ನು ನೀಡಿದ್ದು, ವಂದನಾ ನಿರ್ಣಯವನ್ನು ಅಂಗೀಕರಿಸಲಾಗಿರುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2018-19ನೇ ಸಾಲಿನ ಆಯವ್ಯಯಕ್ಕೆ ಸರ್ಕಾರದಿಂದ ಉತ್ತರಿಸಲಾಯಿತು. ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಒಟ್ಟು 15 ವಿಧೇಯಕಗಳಿಗೆ ವಿಧಾನ ಪರಿಷತ್ತು ತನ್ನ ಅಂಗೀಕಾರವನ್ನು ನೀಡಿರುತ್ತದೆ.

ಮಾನ್ಯ ಮುಖ್ಯಮಂತ್ರಿಗಳಿಗೆ, ಸಭಾನಾಯಕರಿಗೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಗೆ, ವಿರೋಧ ಪಕ್ಷದ ನಾಯಕರಿಗೆ, ಎಲ್ಲಾ ಮಂತ್ರಿ ವರ್ಗದವರಿಗೆ, ಮುಖ್ಯ ಸಚೇತಕರುಗಳು ಹಾಗೂ ವಿವಿಧ ಶಾಸಕಾಂಗ ಪಕ್ಷದ ನಾಯಕರುಗಳಿಗೆ, ಪತ್ರಿಕಾ ಹಾಗೂ ಮಾಧ್ಯಮ ವರದಿಗಾರರಿಗೆ, ಆಡಳಿತ ವರ್ಗಕ್ಕೆ, ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿ/ನೌಕರ ವರ್ಗದವರಿಗೆ ಮತ್ತು ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿ/ನೌಕರ ವರ್ಗದವರಿಗೆ ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಲು ಸಹಕರಿಸಿದ್ದಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ನನ್ನ ಮನಸ್ಸಿನಲ್ಲಿ ಒಂದೆರಡು ಭಾವನೆಯನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುವುದಕ್ಕೆ ಇಷ್ಟಪಡುತ್ತೇನೆ. ಗೌರವಾನ್ವಿತ ಸದಸ್ಯರೆ, ಎಂಟು ವರ್ಷಗಳ ಕೆಳಗೆ ಅಂದರೆ 2010ನೇ ಸಾಲಿನಿಂದ ಈ ಸದನದ ನಾನು ಸಭಾಪತಿಯಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ನಾನು ಈ ಸದನದ ಸದಸ್ಯನಾಗಿ ಕಳೆದ 29 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದೇನೆ. ನಾನೊಬ್ಬ ಸಾಮಾನ್ಯ ಸದಸ್ಯನಾಗಿ 1988ರಲ್ಲಿ ವಿಧಾನ ಪರಿಷತ್ತಿಗೆ ಬಂದು, ನನ್ನ ಪಕ್ಷದ ಗುಂಪಿನ ನಾಯಕನಾಗಿ ವಿರೋಧ ಪಕ್ಷದ ನಾಯಕನಾಗಿ ಭಾರತದ ಪ್ರಜಾಪ್ರಭುತ್ವದ ಇತಿಹಾಸದೊಳಗೆ ದಾಖಲೆಯ ಒಂದು ವಿಚಿತ್ರ ಘಟನೆ ನಡೆದಿದ್ದನ್ನು ಈ ಸದನದಲ್ಲಿ ನಾನು ನೆನಪಿಸಿಕೊಳ್ಳುತ್ತೇನೆ. ವಿಧಾನ ಸಭೆ ಮತ್ತು ವಿಧಾನ ಪರಿಷತ್ತು ಇವೆರಡಲ್ಲೂ ಒಂದೇ ರೀತಿಯ ಕಾನೂನು ಇದೆ. ವಿರೋಧ ಪಕ್ಷದ ನಾಯಕರು ಎಂದರೆ, ವಿರೋಧ ಪಕ್ಷದ ಅತೀ ದೊಡ್ಡ ಪಕ್ಷ ಯಾವುದಾಗಿರುತ್ತದೆಯೋ, ಆ ಪಕ್ಷದ ಒಬ್ಬ ಸದಸ್ಯರನ್ನು ವಿರೋಧ ಪಕ್ಷದ ನಾಯಕರಾಗಿ ನೇಮಿಸಲಾಗುತ್ತದೆ. ಆ ಸಂದರ್ಭದಲ್ಲಿ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾಗಿ ಅವತ್ತಿನ ಜೆಡಿಎಸ್ ಪಕ್ಷದಲ್ಲಿದ್ದ ಶ್ರೀ ಕೆ.ಹೆಚ್.ಶ್ರೀನಿವಾಸ್‌ರವರು ಇದ್ದರು. ನಾನು ಬಿಜೆಪಿ ಪಕ್ಷದ ನಾಯಕನಾಗಿ ಅಲ್ಲಿ ಕುಳಿತುಕೊಳ್ಳುತ್ತಿದ್ದೆ. ಯೋಗಾ-ಯೋಗಾವಾಗಿ ಎರಡೆರಡು ವರ್ಷಕ್ಕೊಮ್ಮೆ ನಮ್ಮ ಸದನ complexion ಬದಲಾವಣೆಯಾಗುತ್ತಿರುತ್ತದೆ. Complexion ಬದಲಾವಣೆಯಾದಂಥ ಸಂದರ್ಭದಲ್ಲಿ ಎರಡು ಪಕ್ಷಗಳಿಗೂ ಸಮಾನ ಸಂಖ್ಯೆ 12 ಬಂದಿತ್ತು. ಆಗ ನಾನು ನಮ್ಮ Rules of Procedure and Conduct of Business ನಲ್ಲಿನ ನಿಯಮಗಳನ್ನು ಅವತ್ತಿನ ಸಭಾಪತಿಯವರಿಗೆ ತೋರಿಸಿದೆ. ಎರಡು ಪಕ್ಷಗಳಿಗೂ ಸಮಾನ ಸಂಖ್ಯೆ ಬಂದರೆ, ಲಾಟರಿ ಮೂಲಕ ಅದನ್ನು ತೀರ್ಮಾನ ಮಾಡಬೇಕೆಂಬುದು ನಮ್ಮ Rules of Procedure and Conduct of Business ಪುಸ್ತಕದಲ್ಲಿದೆ. ನಾನು ಅದನ್ನು ಗಮನಿಸಿ ಅವತ್ತಿನ ಸಭಾಪತಿಯವರಿಗೆ ನೀಡಿದೆ. ಅದನ್ನು ನೋಡಿ ಅವತ್ತಿನ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಭಾಪತಿಯವರು ಲಾಟರಿ ಮಾಡಿದರು. ಆಗ ಲಾಟರಿಯಲ್ಲಿ ನಾನು ಗೆದ್ದೆ, ಜೆಡಿಎಸ್ ಪಕ್ಷದಲ್ಲಿದ ಕೆ.ಹೆಚ್.ಶ್ರೀನಿವಾಸ್‌ರವರು ಸೋತರು. ನಾನು ಅವತ್ತಿನ ದಿನ ವಿರೋಧ ಪಕ್ಷದ ನಾಯಕನಾಗಿ ಅಧಿಕಾರಿ ಸ್ವೀಕಾರ ಮಾಡಿದ್ದು, ನಾಲ್ಕು ವರ್ಷಗಳ ಕಾಲ ವಿರೋಧ ಪಕ್ಷದ ನಾಯಕನಾಗಿ ಕೆಲಸ ಮಾಡುವ ಅವಕಾಶ ಸಿಕ್ಕಿತ್ತು. ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ, ಶಾಸಕಾಂಗದ ಇತಿಹಾಸದಲ್ಲಿ ಈ ರೀತಿ ಲಾಟರಿ ಮೂಲಕ ಯಾರಾದರೂ ಯಾವುದಾದರೂ ಸ್ಥಾನವನ್ನು ಗಳಿಸಿದ್ದರೆ, ಅದು ನನ್ನ ಸೌಭಾಗ್ಯ ಅಥವಾ ಅದೃಷ್ಟವಾಗಿದೆ. ಸದನದಲ್ಲಿರುವ ತಾವೆಲ್ಲರೂ ಇದನ್ನು ಗಮನಿಸಬೇಕೆಂದು, ನಾನು ಈ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ತದನಂತರ ಸ್ವಾಭಾವಿಕವಾಗಿ ನನ್ನ ಪಕ್ಷ ಅಧಿಕಾರಕ್ಕೆ ಬಂದಾಗ ಸಚಿವನಾದೆ ಮತ್ತು Planning Board ನ Deputy Chairman ಆಗಿದ್ದೆನು. ಅದರ ಬಗ್ಗೆ ನಾನು ಈ ಸದನದಲ್ಲಿ ಉಲ್ಲೇಖ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಈ ಸದನಕ್ಕೆ ಸಂಬಂಧಪಟ್ಟ ಇನ್ನೊಂದು ಘಟನೆಯೇನೆಂದರೆ, 2010ನೇ ಸಾಲಿನಲ್ಲಿ ಸದನದಲ್ಲಿ ಸಭಾಪತಿಯವರ ಸ್ಥಾನ ಖಾಲಿಯಾಗಿತ್ತು. ಈ ಸಭಾಪತಿಯ ಸ್ಥಾನಕ್ಕೆ ನನ್ನ ಪಕ್ಷದಿಂದ ನನ್ನನ್ನು ಆಯ್ಕೆ ಮಾಡಿದಾಗ, ಆವೊತ್ತಿನ ದಿನ ತಾವೆಲ್ಲರೂ ಸರ್ವಾನುಮತದಿಂದ ನನ್ನನ್ನು ಸಭಾಪತಿಯಾಗಿ ಆಯ್ಕೆ ಮಾಡಿದಾಗ ಒಂದು ಮಾತನ್ನು ಹೇಳಿದ್ದೆ. ನಾನು ಭಾರತೀಯ ಜನತಾ ಪಕ್ಷದ ಸಾಮಾನ್ಯ ಸದಸ್ಯ ನಿಜ. ಆ ಸದಸ್ಯತ್ವವನ್ನು ಕಾಪಾಡಿಕೊಂಡು ಮುಂದುವರೆಸಿಕೊಂಡು ಹೋಗುತ್ತೇನೆ.

278)23.02.2018,TCH-AK,6.30

**ಸಭಾಪತಿಯವರು (ಮುಂದು)**

ಆದರೆ, ನಾನು ಈ ಕುರ್ಚಿ ಮೇಲೆ ಕುಳಿತಿರುವಷ್ಟು ದಿವಸ, ಪಕ್ಷದ ಯಾವುದೇ ಚಟುವಟಿಕೆಗಳಲ್ಲಿ ಭಾಗವಹಿಸುವುದಿಲ್ಲ. ನಾನು ಈ ಕುರ್ಚಿಗೆ ಗೌರವ ತರುವ ರೀತಿಯಲ್ಲಿ, ನನ್ನ ಆತ್ಮಕ್ಕೆ ಸಂತೋಷ ಮತ್ತು ಸಮಾಧಾನ ತರುವಂತಹ ರೀತಿಯಲ್ಲಿ ಪಕ್ಷಾತೀತವಾಗಿ ಆಡಳಿತ ಪಕ್ಷ, ವಿರೋಧಪಕ್ಷ ಎನ್ನುವುದನ್ನು ಮರೆತು ಕಾರ್ಯನಿರ್ವಹಿಸುತ್ತೇನೆ ಎನ್ನತಕ್ಕಂಥ ಮಾತನ್ನು ಆವೊತ್ತು ನಾನು ಅಧಿಕಾರ ಸ್ವೀಕಾರ ಮಾಡಿದ ದಿವಸ ಕುರ್ಚಿಯ ಮೇಲೆ ಕುಳಿತು ಆಡಿದ ಮೊದಲ ದಿನದ ಮಾತುಗಳು ನನಗಿನ್ನೂ ನೆನಪಿದೆ. ಹಾಗೆಯೇ, ಕಳೆದ 8 ವರ್ಷಗಳ ಕಾಲ ನಾನು ಸತತವಾಗಿ ಈ ಸದನದ ಸಭಾಪತಿಯಾಗಿ ಕಾರ್ಯನಿರ್ವಹಿಸಿದ್ದೇನೆ. ಈ ಕಾರ್ಯನಿರ್ವಹಿಸುವಂತಹ ಸಂದರ್ಭದಲ್ಲಿ, ಸಾಕಷ್ಟು ಬಾರಿ ಆಡಳಿತ ಪಕ್ಷಕ್ಕೆ ಮುಜುಗರ ಆಗುವಂತಹ ಸಂದರ್ಭಗಳು ಬಂದಿವೆ. ನಾನು ಸಭಾಪತಿಯಾದ ನಂತರ, ಮಾನ್ಯ ಸಿದ್ಧರಾಮಯ್ಯನವರು 4ನೇ ಮುಖ್ಯಮಂತ್ರಿಗಳಾಗಿ ಆಡಳಿತ ನಡೆಸಿದ್ದಾರೆ. ಈ ನಾಲ್ಕು ಜನ ಮುಖ್ಯಮಂತ್ರಿಗಳು, ಬಹುಶಃ ಖಾಸಗಿಯಾಗಿ ಮಾತನಾಡುವುದಾದರೆ, ಅದೊಂದು ಯಾವುದೋ ವಿಷಯದಲ್ಲಿ ನನಗೆ ಕೋಪ ಬಂದಿತ್ತು ಎಂದು ಅವರು ಹೇಳಬಹುದು. ಆದರೆ, ಸರ್ವೇಸಾಮಾನ್ಯವಾಗಿ ಅವರೆಲ್ಲರೂ ಸಹ ಸಮಾಧಾನ ಹೊಂದುವ ಹಾಗೆ ಕಾರ್ಯನಿರ್ವಹಿಸಿದ್ದೇನೆ ಎನ್ನತಕ್ಕಂಥ ವಿಶ್ವಾಸ ನನಗಿದೆ. ಹಾಗೆಯೇ, ಅದು ಸಭಾಪತಿಯವರ

ಕರ್ತವ್ಯವೆಂದು ನಾನು ಬಯಸಿದ್ದೇನೆ. ಏಕೆಂದರೆ, ವಿರೋಧ ಪಕ್ಷದಲ್ಲಿಯೂ ನಾನು ಕೆಲಸ ಮಾಡಿದ್ದೇನೆ. ಆಡಳಿತ ಪಕ್ಷದಲ್ಲಿಯೂ ಸಹ ಕೆಲಸ ಮಾಡಿದ್ದೇನೆ. ಈ ವೇದಿಕೆಯಲ್ಲಿ ವಿರೋಧ ಪಕ್ಷದವರು ಅವರ ಜವಾಬ್ದಾರಿಯನ್ನು ನಿರ್ವಹಿಸಲು ಅವಕಾಶಗಳು ಸಿಗುತ್ತವೆ. ಬೇರೆ ಎಲ್ಲೂ ಸಿಗುವುದಿಲ್ಲ. ಈ ವೇದಿಕೆಗಳಲ್ಲಿಯೇ ಅವರಿಗೆ ಹೆಚ್ಚು ಅವಕಾಶಗಳನ್ನು ಕೊಡುವಂತಹ ಪ್ರಯತ್ನವನ್ನು ನಾನು ಸ್ವಾಭಾವಿಕವಾಗಿ ಮಾಡಿದ್ದೇನೆ. ಆದರೆ, ಸರ್ಕಾರಕ್ಕೆ ಯಾವುದೇ ಮುಜುಗರ ತರುವಂತಹ ತೀರ್ಮಾನ ಅಥವಾ ಕೆಲಸವನ್ನು ನಾನು ಮಾಡಲಿಲ್ಲ. ಅಧಿವೇಶನ ಸುಗಮವಾಗಿ ನಡೆಯಬೇಕು ಮತ್ತು ಸರ್ಕಾರದ ಇಲಾಖೆಗಳು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸಬೇಕು ಎನ್ನುವಂತಹ ಕೆಲಸಗಳನ್ನು ನಾನು ನಿರ್ವಹಿಸಿಕೊಂಡು ಬಂದಿದ್ದೇನೆ. ಏಕೆಂದರೆ, ಬಹುಶಃ ವಿಧಾನ ಪರಿಷತ್ತಿನ ನನ್ನ ಸದಸ್ಯತ್ವದ ಅವಧಿ ಜೂನ್ ತಿಂಗಳವರೆಗೆ ಇದೆ. ಹೊಸ ಸರ್ಕಾರ ಬರುತ್ತದೆ. ಆ ಹೊಸ ಸರ್ಕಾರ ಬಂದ ನಂತರ, ಯಾವಾಗ ವಿಧಾನ ಪರಿಷತ್ತಿನ ಅಧಿವೇಶನವನ್ನು ಕರೆಯುತ್ತಾರೋ ನನಗೆ ಗೊತ್ತಿಲ್ಲ. ಸಭಾಪತಿಯಾಗಿ ಅಧಿವೇಶನದಲ್ಲಿ ಕರ್ತವ್ಯ ನಿರ್ವಹಿಸುವುದು ಇದೇ ಕೊನೆಯ ದಿನ ಇರಬಹುದು. ಈ ಕುರ್ಚಿಯ ಮೇಲೆ ಕುಳಿತುಕೊಳ್ಳುವ ಅವಕಾಶ ಇಂದು ಕೊನೆಯ ದಿವಸ ಇರಬಹುದು ಎಂದು ಹೇಳಿ, ನಾನು ನನ್ನ ಮನಸ್ಸಿನ ಭಾವನೆಗಳನ್ನು ವ್ಯಕ್ತ ಮಾಡುತ್ತಾ, ನಾನು ಸಂತೋಷ ಮತ್ತು ಸಮಾಧಾನದಿಂದ ಕೆಲಸ ಮಾಡಿದ್ದೇನೆ. ನಾನು ಆತ್ಮ ಸಂತೃಪ್ತಿಯನ್ನು ಹೊಂದಿದ್ದೇನೆ, ನನ್ನ ಮನಸ್ಸು ನೀನು ಒಳ್ಳೆಯ ಕೆಲಸ ಮಾಡಿರಬಹುದೆಂದು ಹೇಳುತ್ತಿದೆ. ಆದರೂ ಸಹ ನನ್ನಿಂದ ಯಾರಿಗಾದರೂ ಮುಜುಗರ ಆಗಿದ್ದರೆ, ಯಾರಿಗಾದರೂ ನಾನು ಕೋಪದಲ್ಲಿ ಮಾತನಾಡಿದ್ದರೆ, ಅದು ಮಾನವ ಸಹಜ. ಅದನ್ನು ದಯವಿಟ್ಟು ಕ್ಷಮಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇಲ್ಲಿ ನಾನು ಸಾಕಷ್ಟು ವಿಷಯಗಳನ್ನು ಹೇಳಬೇಕೆನ್ನಿಸಿದರೂ ಸಹ ಒಂದು ವಿಷಯವನ್ನು ಮಾತ್ರ ಹೇಳುತ್ತೇನೆ. ಮಾನ್ಯ ಸಿದ್ದರಾಮಯ್ಯನವರು ವಿಧಾನ ಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದಾಗ, ಅವರ ಸಮ್ಮುಖದಲ್ಲಿಯೇ ನಾಲ್ಕು ಜನ ಮಹನೀಯರುಗಳ ಫೋಟೋಗಳನ್ನು ಸದನದಲ್ಲಿ ಹಾಕಿಸಿದ್ದೆನು. ಆದರೆ, ಈ ಸದನದಲ್ಲಿ ಯಾವುದೇ ಫೋಟೋಗಳು ಇರಲಿಲ್ಲ. ಇನ್ನೆರಡು ಫೋಟೋಗಳನ್ನು ಅವರು ಮಾನ್ಯ ಮುಖ್ಯಮಂತ್ರಿಗಳಾದ ನಂತರ ಅವರ ಕೈಯಲ್ಲಿಯೇ ಉದ್ಘಾಟನೆ ಮಾಡಿಸಿ, ಒಟ್ಟು ಆರು ಫೋಟೋಗಳನ್ನು ನಾನು ಹಾಕಿಸಿದೆನು, ಇದು ಮೊದಲನೆಯ ಕಾರ್ಯವಾಗಿದೆ. ಇನ್ನು ಎರಡನೆಯದಾಗಿ, ಇಡೀ ಪ್ರಪಂಚವೇ ಮೆಚ್ಚುವಂತೆ ಹಾಗೂ ಎಲ್ಲರೂ ಮೆಚ್ಚುವ ಹಾಗೆ, ವಿಧಾನಸೌಧ ಮತ್ತು ವಿಕಾಸಸೌಧದ ಮಧ್ಯೆ ಮಹಾತ್ಮಗಾಂಧೀಜಿಯವರ ಒಂದು ದಿವ್ಯ ಪ್ರತಿಮೆಯನ್ನು ಸ್ಥಾಪನೆ ಮಾಡುವುದರಲ್ಲಿ ನಾನು ಯಶಸ್ವಿಯಾದೆನು. ಆದರೆ, ಆವೊತ್ತು ಸಹ ಹೇಳಿದ್ದೆನು, ಇವತ್ತಿನ ದಿವಸ ಮತ್ತೊಮ್ಮೆ ಹೇಳುತ್ತಿದ್ದೇನೆ ಇದರ ಸ್ಥಾಪನೆಗೆ ಸಾಕಷ್ಟು ತೊಂದರೆಗಳು ಬಂದವು. ಈ ಸದನದಲ್ಲಿ ಬೇರೆ ಬೇರೆ ವಿಷಯಗಳು ಬಂದಾಗ ಸಾಕಷ್ಟು ಬಾರಿ ಚರ್ಚೆಯಾಗುತ್ತದೆ. ನಮ್ಮ bureaucracy ಯಾವ ರೀತಿ ಸಾಮಾನ್ಯ ಜನರ ಭಾವನೆಗಳಿಗೆ ಸ್ಪಂದಿಸದೇ ತೊಂದರೆ ಕೊಡುತ್ತದೆ ಎನ್ನತಕ್ಕಂಥದ್ದನ್ನು ನಾನು ಪ್ರತಿ ಬಾರಿ ಹೇಳುತ್ತಿರುತ್ತೇನೆ. ಈ bureaucratic problems ಹತ್ತಲ್ಲ, ನೂರು ಬಂದರೂ ಸಹ ಮಾನ್ಯ ಮುಖ್ಯಮಂತ್ರಿಯವರಾದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶ್ರೀ ಸಿದ್ಧರಾಮಯ್ಯನವರ ಬೆಂಬಲದಿಂದ, ನಾನು ಕೇಳಿದಂತಹ ಎಲ್ಲಾ ಸಂಗತಿಗಳನ್ನು ಅವರು ಮಾಡಿಕೊಟ್ಟಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಮಾತಿಗೆ ಮಾನ್ಯ ಸದಸ್ಯರುಗಳು ಮೇಜು ಕುಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

ಕಾನೂನನ್ನು ಸಹ ಈ ವಿಧಾನಮಂಡಲದಲ್ಲಿ ಮಂಡಿಸುವುದಕ್ಕೆ ಅವರು ಸಹಮತ ವ್ಯಕ್ತಪಡಿಸಿ, ಪಾಸ್ ಮಾಡಿಕೊಟ್ಟಿದ್ದ ಕಾರಣಕ್ಕಾಗಿ, ಒಂದು ದಿವ್ಯವಾಗಿರತಕ್ಕಂಥ ಮಹಾತ್ಮ ಗಾಂಧೀಜಿಯವರ ಪುತ್ಥಳಿಯನ್ನು ವಿಧಾನಸೌಧ ಮತ್ತು ವಿಕಾಸಸೌಧದ ಮಧ್ಯೆ ಸ್ಥಾಪನೆ ಮಾಡಲು ಯಶಸ್ವಿಯಾದೆನು. ಇದೊಂದು ನನ್ನ ಜೀವನದಲ್ಲಿ ನಡೆಸಿದ ಅದ್ಭುತ ಕಾರ್ಯಗಳಲ್ಲಿ ಬಹಳ ದೊಡ್ಡದೆಂದು ಹೇಳಿ, ಈ ಸಂದರ್ಭದಲ್ಲಿ ಅದನ್ನು ನಾನು ಸ್ಮರಣೆ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಈ ರೀತಿಯಾಗಿ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಅದರಲ್ಲೂ ಬಹಳ ಪ್ರಮುಖವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಎಲ್ಲಾ ಮಾನ್ಯ ಸಚಿವರಿಗೆ ವಿರೋಧ ಪಕ್ಷದ ಎಲ್ಲಾ ನಾಯಕರಿಗೆ ಮತ್ತು ಸದಸ್ಯರಿಗೆ ಇವತ್ತಿನ ಈ ಗೌರವಾನ್ವಿತ ಸಭೆಯ ಎಲ್ಲಾ ಸದಸ್ಯರಿಗೆ ಹಾಗೂ ಹಿಂದಿನ ಎಲ್ಲಾ ಸದಸ್ಯರಿಗೆ ನನ್ನ ಮನಃಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಮಾತಿಗೆ ಮಾನ್ಯ ಸದಸ್ಯರುಗಳು ಮೇಜು ಕುಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

**ಶ್ರೀ ಸಿದ್ಧರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಸಭಾಪತಿಯವರೇ, ನನ್ನ ಎಲ್ಲಾ ಸಚಿವ ಸಹೋದ್ಯೋಗಿಗಳೇ, ಮಾನ್ಯ ವಿರೋಧಪಕ್ಷದ ಮುಖಂಡರೇ ಹಾಗೂ ಇತರೆ ಎಲ್ಲಾ ಮಾನ್ಯ ಸದಸ್ಯರುಗಳೇ, 23ನೇ ತಾರೀಖು ಇಂದು ಅಧಿವೇಶನಕ್ಕೆ ವಿದಾಯ ಹೇಳತಕ್ಕಂಥ ಕೊನೆಯ ದಿನವಾಗಿರುತ್ತದೆ. ಮಾನ್ಯ ಸಭಾಪತಿಯವರೇ, ತಾವು ಇನ್ನೂ ಜೂನ್ ತಿಂಗಳವರೆಗೆ ತಮ್ಮ ಸ್ಥಾನದಲ್ಲಿ ಇರುತ್ತೀರಿ. ಆದರೆ, ಮತ್ತೆ ನಾವು ಮೇ ತಿಂಗಳನಲ್ಲಿ renewal ಗೆ ಹೋಗಬೇಕು. ನಾವು 5 ವರ್ಷಗಳ ಪೂರ್ಣ ಅವಧಿಯನ್ನು ಮುಗಿಸುತ್ತಿದ್ದೇವೆ. ಬಹುಶಃ ದಿವಂಗತ ದೇವರಾಜ ಅರಸುರವರ ನಂತರ, ಈ 5 ವರ್ಷಗಳ ಪೂರ್ಣ ಅವಧಿಯನ್ನು ಮುಗಿಸತಕ್ಕಂಥ ಅವಕಾಶ ನನಗೆ ಸಿಕ್ಕಿದೆ.

**(ಈ ಹಂತದಲ್ಲಿ ಆಡಳಿತ ಪಕ್ಷದವರು ಮೇಜು ಕುಟ್ಟುವ ಮೂಲಕ ಮಾನ್ಯ ಮುಖ್ಯಂತ್ರಿಗಳಿಗೆ ಬೆಂಬಲ ವ್ಯಕ್ತಪಡಿಸಿದರು.)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದು ಕಾಕತಾಳೀಯ ಎಂಬಂತೆ ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ದೇವರಾಜ ಅರಸುರವರು ಮೈಸೂರು ಜಿಲ್ಲೆಯವರು. ನಾನೂ ಕೂಡ ಮೈಸೂರು ಜಿಲ್ಲೆಯವನೇ. ಅವರು ಹುಣಸೂರು ತಾಲ್ಲೂಕಿನವರು, ನಾನು ಮೈಸೂರು ತಾಲ್ಲೂಕಿನವನು. ಅವರು ಕಾಂಗ್ರೆಸ್ ಪಕ್ಷದಲ್ಲಿದ್ದರು. ನಾನೂ ಕೂಡ ಕಾಂಗ್ರೆಸ್‌ನಲ್ಲಿದ್ದೇನೆ. ಅವರು 1972 ರಿಂದ 1980ರವರೆಗೆ ಅಧಿಕಾರದಲ್ಲಿ ಇದ್ದರು. ನಾನು 2013 ರಿಂದ 2018ರವರೆಗೆ ಮುಖ್ಯಮಂತ್ರಿಯಾಗಿದ್ದೇನೆ. ಆದರೆ, ನಮ್ಮಿಬ್ಬರ ಕಾಲಘಟ್ಟಗಳು ಬೇರೆ ಬೇರೆಯಾಗಿವೆ. ಅವೊತ್ತಿನ ದಿನ ಸಾರ್ವಜನಿಕರು ನಮ್ಮನ್ನು ನೋಡತಕ್ಕಂಥ ಮತ್ತು ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸತಕ್ಕಂಥ ಅವಕಾಶಗಳು ಅಷ್ಟೊಂದು ಇರಲಿಲ್ಲ. ಈಗ ಇರುವಷ್ಟು electronic media ಆಗ ಇನ್ನೂ ಬಂದಿರಲಿಲ್ಲ. ಈಗ electronic media ಬಂದಿರುವುದರಿಂದ, ನಾವು ಬಹಳ ಎಚ್ಚರಿಕೆಯಿಂದ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಚರ್ಚೆಯಲ್ಲಿ ಭಾಗವಹಿಸಬೇಕು. ನಮ್ಮ ಮಾತುಗಳ ಮೇಲೆ ನಿಗಾ ಇಟ್ಟುಕೊಂಡು ಮಾತನಾಡಬೇಕು. ಇವತ್ತಿನ ದಿವಸ ಟಿ.ವಿ ಚಾನೆಲ್‌ಗಳು ಇರುವುದರಿಂದ, ಇಡೀ ರಾಜ್ಯದ ಜನ ನಮ್ಮನ್ನು ನೋಡುತ್ತಾರೆ. ನಾವು ಉಪಯೋಗಿಸುವಂತಹ ಪದ ಬಳಕೆ ಇವೆಯೆಲ್ಲ, ಅದನ್ನು ಯಾವತ್ತೂ ಕೂಡ ಎಚ್ಚರ ತಪ್ಪಿ ಮಾತನಾಡಬಾರದು ಅಥವಾ ರಾಜಕೀಯ ದುರುದ್ದೇಶದಿಂದ ಅಥವಾ ದ್ವೇಷ-ಅಸೂಯೆಗಳಿಂದ ಯಾರಿಗೂ ಕೂಡ ಪದಗಳನ್ನು ಬಳಸಬಾರದು. ನಾವು ಸಂಸದೀಯ ಪದಗಳನ್ನು ಬಳಸಬೇಕು. ನಾವು ಸಂಸದೀಯ ಪದಗಳನ್ನು ಬಳಸದಿದ್ದರೆ, ನಾವು ಮಾತನಾಡತಕ್ಕಂಥದ್ದು ಬೇರೆಯವರಿಗೆ ಅಗೌರವ ತರುವಂತೆ ಮಾತನಾಡಿದರೆ, ಅದರಿಂದ ಅಗೌರವ ಅವರಿಗೆ ಆಗುವುದಿಲ್ಲ, ನಮಗೇ ಅಗೌರವ ಆಗುತ್ತದೆ. ಆದ್ದರಿಂದ ಇದರ ಬಗ್ಗೆ ನಾವು ಸದಾ ಎಚ್ಚರದಿಂದಲೇ ಇರಬೇಕಾದುದು ಅತ್ಯಂತ ಅವಶ್ಯಕ. ನಾನು ಮುಖ್ಯಮಂತ್ರಿ ಆದಾಗಿನಿಂದಲೂ ಕೂಡ, ನೀವು ವಿಧಾನಪರಿಷತ್ತಿನ ಸಭಾಪತಿಯವರಾಗಿ ಕೆಲಸ ಮಾಡಿದ್ದೀರಿ. ಆದರೆ, ಉಪ ಸಭಾಪತಿಗಳು ಬದಲಾವಣೆ ಆಗಿದ್ದಾರೆ. ಈಗ ಉಪ ಸಭಾಪತಿಯವರ ಸ್ಥಾನದಲ್ಲಿ ಶ್ರೀ ಮರಿತಿಬ್ಬೇಗೌಡರವರು ಇದ್ದಾರೆ, ಶ್ರೀ ಪುಟ್ಟಣ್ಣನವರು ಉಪ ಸಭಾಪತಿಯಾಗಿದ್ದರು. ಅದಕ್ಕಿಂತ ಹಿಂದೆ ನೀವೇ ಇದ್ದಿರಾ?

**ಸಭಾಪತಿಯವರು:-** ಇಲ್ಲ, ಹಿಂದೆ ಶ್ರೀಮತಿ ವಿಮಲಾಗೌಡ ರವರು ಉಪ ಸಭಾಪತಿಯಾಗಿದ್ದರು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಹೌದು. ಪಾಪ, ಅವರು ತೀರಿಕೊಂಡಿದ್ದಾರೆ. ನನಗೆ ಮಾಹಿತಿ ಇರುವ ಪ್ರಕಾರ, ಕಳೆದ 5 ವರ್ಷಗಳ ಅವಧಿಯಲ್ಲಿ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಅಧಿವೇಶನದಲ್ಲಿ, ವಿಧಾನ ಪರಿಷತ್ತಿನ ಅಧಿವೇಶನವು ಒಂದು ದಿನ ಹೆಚ್ಚಿಗೆ ನಡೆದಿರಬಹುದು ಎಂದುಕೊಂಡಿದ್ದೇನೆ. ಈ ಅವಧಿಯಲ್ಲಿ 2013-2018 ರವರೆಗೆ ವಿಧಾನ ಸಭೆ 244 ದಿನಗಳವರೆಗೆ ಅಧಿವೇಶನ ನಡೆದಿದೆ. ಇದಕ್ಕೆ ಹಿಂದಿನ 5 ವರ್ಷಗಳ ಆಡಳಿತದ ಅವಧಿಯಲ್ಲಿ 203 ದಿನಗಳು ಅಧಿವೇಶನ ನಡೆದಿದೆ. ವರ್ಷಕ್ಕೆ ಕನಿಷ್ಠ 60 ದಿನಗಳವರೆಗೆ ಅಧಿವೇಶನ ನಡೆಸಬೇಕೆಂದು ನಾವು ಕಾನೂನನ್ನು ಪಾಸ್ ಮಾಡಿಕೊಂಡಿದ್ದೇವೆ. 60 ದಿನಗಳ ಕಾಲ ಅಧಿವೇಶನವನ್ನು ನಡೆಸುವುದಕ್ಕೆ ಆಗಲಿಲ್ಲವೆಂದು ನಮಗೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೋವು ಇದೆ. 60 ದಿನಗಳವರೆಗೆ ಅಧಿವೇಶನ ನಡೆಸಲೇಬೇಕು. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಈ ವೇದಿಕೆ ಇದೆಯಲ್ಲ, ಇದಕ್ಕೆ ನಾವೆಲ್ಲರೂ ಜನಪ್ರತಿನಿಧಿಗಳಾಗಿ ಬರತಕ್ಕಂಥವರು. ನಾವು ಇಲ್ಲಿ ಜನರ ಭಾವನೆಗಳನ್ನು ವ್ಯಕ್ತ ಮಾಡಬೇಕು.

**(279)23.02.2018/ಎಂಎಂ/ಎಕೆ/6.40**

**ಶ್ರೀ ಸಿದ್ಧರಾಮಯ್ಯ (ಮುಖ್ಯಮಂತ್ರಿ) (ಮುಂದು):-**

ಜನರ ಸಮಸ್ಯೆಗಳನ್ನು, ಜನರ ಭಾವನೆಗಳನ್ನು ವಿರೋಧಪಕ್ಷದಲ್ಲಿದ್ದರು ಕೂಡ ವ್ಯಕ್ತ ಮಾಡಬೇಕು. ಆಡಳಿತ ಪಕ್ಷದಲ್ಲಿದ್ದರೆ ನಾವು ಕೂಡ ಜನರ ಭಾವನೆಗಳನ್ನು ವ್ಯಕ್ತ ಮಾಡಬೇಕು. ಸರ್ಕಾರ ನಡೆಸುವವರು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಟ್ರಸ್ಟಿಗಳಾಗಿ ಕೆಲಸ ಮಾಡಬೇಕು. ಬಹಳ ಮುಖ್ಯವಾಗಿ ಜನರು ವಿಶ್ವಾಸ, ನಿರೀಕ್ಷೆಗಳನ್ನು ಗಮನದಲ್ಲಿಟ್ಟುಕೊಂಡು ನಮಗೆ ಅಧಿಕಾರವನ್ನು ಕೊಟ್ಟಿದ್ದಾರೆ. ಆ ಅಧಿಕಾರವನ್ನು ಚಲಾಯಿಸುವಾಗ ಎಂದು ಹೇಳುವುದಿಲ್ಲ, ಜನ ಸೇವೆ ಮಾಡುವಾಗ ಬಹಳ ಜನಪರವಾದಂತಹ ನಿಲುವುಗಳನ್ನು ತಾಳಿಕೊಂಡು ಮಾಡಬೇಕಾದುದು ಅತ್ಯಂತ ಅವಶ್ಯಕ. ನಾವು ಆ ರೀತಿ ಮಾಡಿದ್ದೇವೆಂದು ಅಂದುಕೊಂಡಿದ್ದೇವೆ. 244 ಅಥವಾ 245 ದಿನ ಅಧಿವೇಶನ ನಡೆದಿರಬಹುದು. ಇಲ್ಲಿ ಒಂದು ದಿನ ಜಾಸ್ತಿ ಅಧಿವೇಶನ ನಡೆದಿದೆ ಎಂದು ತಿಳಿದುಕೊಂಡಿದ್ದೇನೆ. ಅಷ್ಟು ದಿನಗಳು ನೀವು ಸಭಾಪತಿಗಳಾಗಿ ಕೆಲಸ ಮಾಡಿದ್ದೀರಿ, ಸರ್ಕಾರಕ್ಕೆ ಎಲ್ಲಾ ರೀತಿಯ ಸಹಕಾರ, ಬೆಂಬಲವನ್ನು ಕೊಟ್ಟಿದ್ದೀರಿ. ವಿಧಾನ ಪರಿಷತ್ತಿನ ಕಾರ್ಯ ಕಲಾಪಗಳನ್ನು ಬಹಳ ಸುಗಮವಾಗಿ ನಡೆಸಿಕೊಟ್ಟಿದ್ದೀರಿ. ನೀವು ಕೂಡ ಜೂನ್ ಆದಮೇಲೆ ಚುನಾವಣಾ ರಾಜಕಾರಣದಿಂದ ವಿಮುಖರಾಗುತ್ತೀರಿ ಎಂದು ಅಂದುಕೊಂಡಿದ್ದೇನೆ. ಏಕೆಂದರೆ ಈಗಾಗಲೇ ಸಾಕಷ್ಟು ದೀರ್ಘಕಾಲ ಸಕ್ರಿಯವಾಗಿ ರಾಜಕೀಯದಲ್ಲಿ ಇದ್ದೀರಿ. ನಾವೆಲ್ಲ ನಮ್ಮ ಸರ್ಕಾರ ಇರುವಾಗಲೇ ನೀವು ಗವರ್ನರ್ ಆಗುತ್ತೀರಿ ಎಂದು ಅಂದುಕೊಂಡಿದ್ದೆವು. ಆದರೆ ಅದೇಕೋ ಆಗಲಿಲ್ಲ, ಮುಂದೆ ಆಗಬಹುದೇನೋ.

(ಈ ಹಂತದಲ್ಲಿ ಆಡಳಿತಪಕ್ಷದ ಸದಸ್ಯರೆಲ್ಲರೂ ಮೇಜು ಕುಟ್ಟಿ ಹರ್ಷವನ್ನು ವ್ಯಕ್ತಪಡಿಸಿದರು)

ಕೇಂದ್ರಸರ್ಕಾರಕ್ಕೆ ಇನ್ನೂ ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿ ಇದೆ. ಆ ಅವಧಿಯಲ್ಲಿ ಮಾಡಿದರೆ ಬಹಳ ಸಂತೋಷವಾಗುತ್ತದೆ. ಆದ್ದರಿಂದ ನಿಮಗೆ ಆ ಸ್ಥಾನ ಸಿಗಲಿ ಎಂದು ಆಶಿಸುತ್ತೇನೆ. ನೀವು ಮತ್ತು ಉಪಸಭಾಪತಿಗಳು ನಮ್ಮ ಸರ್ಕಾರಕ್ಕೆ ಎಲ್ಲ ರೀತಿಯ ಸಹಕಾರ, ಬೆಂಬಲವನ್ನು ಕೊಟ್ಟಿದ್ದೀರಿ. ಎಲ್ಲಾ ಸದಸ್ಯರಿಗೆ ಸಹಕಾರವನ್ನು ಕೊಟ್ಟಿದ್ದೀರಿ. ವಿರೋಧಪಕ್ಷದವರು ಕೂಡ ನಮ್ಮ ಸರ್ಕಾರಕ್ಕೆ ಟೀಕೆಗಳನ್ನು ಮಾಡಿರಬಹುದು, ಟೀಕೆಗಳನ್ನು ಮಾಡಲೇಬೇಕು. ಆದರೆ ಟೀಕೆಗಳನ್ನು ದುರುದ್ದೇಶದಿಂದ ಮಾಡಬಾರದು. ಟೀಕೆಗಳು ಹೇಗಿರಬೇಕೆಂದರೆ, ಆರೋಗ್ಯಕರವಾಗಿರಬೇಕು, constructive ಆಗಿರಬೇಕು. ಪ್ರಜಾಪ್ರಭುತ್ವದಲ್ಲಿ ಅದನ್ನು ಯಾವಾಗಲೂ ಸ್ವಾಗತ ಮಾಡಬೇಕು. ನಾವು ಪ್ರಜಾಪ್ರಭುತ್ವದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಂಬಿಕೆಯನ್ನಿಟ್ಟುಕೊಂಡಿರುವವರು. ಎಲ್ಲಕ್ಕಿಂತ ಮುಖ್ಯವಾಗಿ ಈ ದೇಶದ ಸಂವಿಧಾನಕ್ಕೆ ಗೌರವವನ್ನು ಕೊಡತಕ್ಕಂತಹವರು. ಪ್ರತಿಯೊಬ್ಬರೂ, ಅಧಿಕಾರದಲ್ಲಿರುವವರು, ಚುನಾಯಿತ ಪ್ರತಿನಿಧಿಗಳಾದವರು, ಇಲ್ಲಿ ಸದಸ್ಯರಾಗಿ ಬರುವವರೆಲ್ಲರೂ ಕೂಡ ಆ ಚೌಕಟ್ಟಿನೊಳಗೆ ಕೆಲಸ ಮಾಡಲೇಬೇಕಾಗುತ್ತದೆ. ಎಲ್ಲರೂ ಸಹಕಾರವನ್ನು ಕೊಟ್ಟಿದ್ದಾರೆ. ಮಾನ್ಯ ಬಸವರಾಜ ಹೊರಟ್ಟಿಯವರಂತೂ ಇಲ್ಲಿ ಇನ್ನೂ ಎಷ್ಟು ವರ್ಷ ಇರುತ್ತಾರೋ ನನಗೆ ಗೊತ್ತಿಲ್ಲ. ಈಗಾಗಲೇ ರೆಕಾರ್ಡ್ ಮಾಡಿ ಬಿಟ್ಟಿದ್ದಾರೆ. Guinness Book of World Records ಗೆ ಹೋಗಬಹುದೋ ಏನೋ ಗೊತ್ತಿಲ್ಲ. ನೋಡಿದರೆ ಇನ್ನೂ 2-3 term ಬರುವ ಹಾಗೆ ಕಾಣಿಸುತ್ತಾರೆ. ಆದ್ದರಿಂದ ನಿಮಗೆ ಸರ್ಕಾರದ ವತಿಯಿಂದ ನಾನು ಧನ್ಯವಾದಗಳನ್ನು ಹೇಳುವುದಕ್ಕೆ ಬಯಸುತ್ತೇನೆ.

(ಸದನದಲ್ಲಿ ನಗು)

(ಈ ಹಂತದಲ್ಲಿ ಆಡಳಿತಪಕ್ಷದ ಸದಸ್ಯರೆಲ್ಲರೂ ಮೇಜು ಕುಟ್ಟಿ ಹರ್ಷವನ್ನು ವ್ಯಕ್ತಪಡಿಸಿದರು)

ಉಪಸಭಾಪತಿಯವರಾದ ಶ್ರೀ ಮರಿತಿಬ್ಬೇಗೌಡರು ಕೆಲವು ಸಲ ಸ್ವಲ್ಪ ಕಠಿಣವಾಗಿ ಮಾತನಾಡುತ್ತಾರೆ. ಆದರೆ ಅವರ ಹೃದಯ ತುಂಬಾ ಒಳ್ಳೆಯದು, ಅವರನ್ನು ಬಹಳ ವರ್ಷಗಳಿಂದ ನೋಡುತ್ತಿದ್ದೇನೆ, ಅವರು ನಮ್ಮ ಜೊತೆಯಲ್ಲೇ ಇದ್ದವರು. ಇಲ್ಲಿದ್ದವರಲ್ಲಿ ಬಹಳ ಜನರು ನಮ್ಮ ಜೊತೆಯಲ್ಲಿದ್ದರು. ಹಾಗಾಗಿ ಅವರೆಲ್ಲರೂ ಇವತ್ತಿಗೂ ಬಹಳ ಆತ್ಮೀಯವಾಗಿ ಇದ್ದಾರೆ. ಅಲ್ಲಿ ಕುಳಿತುಕೊಂಡಿದ್ದರೂ ಆತ್ಮೀಯವಾಗಿ ಇರುತ್ತಾರೆ. ಎಲ್ಲೋ ಒಂದು ಕಡೆ ನಮ್ಮ ಮನುಷ್ಯ ಎಂಬುದು ಒಳಗಡೆ ಇರುತ್ತದೆ, ಅಲ್ಲವೇ ಶ್ರೀಕಂಠೇಗೌಡರೇ?

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ನೂರಕ್ಕೆ ನೂರರಷ್ಟು ನಿಜ.

**ಶ್ರೀ ಸಿದ್ಧರಾಮಯ್ಯ:-** ರಾಜಕಾರಣಕ್ಕೋಸ್ಕರ ವಿರೋಧ ಮಾಡುತ್ತಾರೆ ಅಷ್ಟೇ. ಮಾನ್ಯ ಬಸವರಾಜ ಹೊರಟ್ಟಿಯವರು ಯಾವತ್ತೇ ವಿರೋಧ ಮಾಡಿದರೂ ರಾಜಕಾರಣಕ್ಕೋಸ್ಕರ ವಿರೋಧ ಮಾಡುತ್ತಾರೆ ಹೊರತು, ಮನಃಪೂರ್ವಕವಾಗಿ ಯಾವತ್ತೂ ವಿರೋಧ ಮಾಡುವುದೇ ಇಲ್ಲ.

**ಶ್ರೀ ಕೆ.ಆರ್. ರಮೇಶ್ ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಅವರು implead ಮಾಡುತ್ತಿದ್ದಾರೆ. ಇಲ್ಲ ಎಂದಾದರೂ ಹೇಳಿ, ರೆಕಾರ್ಡ್‌ಗೆ ಹೋಗುವ ಉದ್ದೇಶಕ್ಕಾದರೂ ಇರಲಿ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ಎಲ್ಲಾ ಸದಸ್ಯರುಗಳು ಕೂಡ ಭಾರತೀಯ ಜನತಾ ಪಕ್ಷದಲ್ಲಿರಬಹುದು, ಜೆ.ಡಿ.ಎಸ್ ಪಕ್ಷದಲ್ಲಿರಬಹುದು, ಪಕ್ಷೇತರರಾಗಿರಬಹುದು, ಆಡಳಿತ ಪಕ್ಷದ ಮಾನ್ಯ ಸದಸ್ಯರುಗಳೆಲ್ಲರೂ ಕೂಡ ಸರ್ಕಾರಕ್ಕೆ ಎಲ್ಲ ರೀತಿಯ ಸಹಕಾರವನ್ನು ಕೊಟ್ಟಿದ್ದಾರೆ. ಆದರೆ ಕಲಾಪದ ಗುಣಮಟ್ಟ ದಿನೇ ದಿನೇ ಎತ್ತರಕ್ಕೆ ಹೋಗುತ್ತಿರಬೇಕು, ಆದರೆ ಅದು ಕುಸಿಯುತ್ತಿದೆ ಎನ್ನುವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭಾವನೆ ಸಾರ್ವಜನಿಕರಲ್ಲಿದೆ. ಕಲಾಪಗಳು ಎತ್ತರಕ್ಕೆ ಹೋಗಬೇಕು. ಆಗ ಮಾತ್ರ ಸಂಸದೀಯ ಪ್ರಜಾಪ್ರಭುತ್ವವನ್ನು ಯಶಸ್ಸುಗೊಳಿಸಲು ಸಾಧ್ಯವಾಗುತ್ತದೆ. ಅದು ಆಗಲಿ ಎಂದು ನಾನು ಆಶಿಸುತ್ತೇನೆ. ಏಕೆಂದರೆ, ಜನರಲ್ಲಿ ಈ ರೀತಿಯ ಒಂದು ಭಾವನೆ ಇದೆ. ಇದನ್ನು ತೊಡೆದು ಹಾಕುವ ಕೆಲಸವನ್ನು ಮಾಡಬೇಕಾಗುತ್ತದೆ. ವಿಧಾನ ಪರಿಷತ್ತಿನಲ್ಲಿ ಸದಸ್ಯರುಗಳನ್ನು ವಿಧಾನಸಭೆಗೆ ಹೋಲಿಕೆ ಮಾಡಿ ನೋಡಿದರೆ ಇಲ್ಲಿ ಹಾಜರಾತಿ ಚೆನ್ನಾಗಿರುತ್ತದೆ. ಸಮಯವನ್ನೂ ಉಪಯೋಗಿಸಿಕೊಳ್ಳುತ್ತಾರೆ. ಅಲ್ಲಿ ಅವರು ನೇರವಾಗಿ ಆಯ್ಕೆಯಾಗಿ ಬಂದಿರುವುದರಿಂದಲೋ ಅಥವಾ ಸಮಸ್ಯೆಗಳು ಜಾಸ್ತಿ ಇವೆಯೆಂದೋ ಅಲ್ಲಿ ಹಾಜರಾತಿ ಕಡಿಮೆ ಇರುತ್ತದೆ, ಅದು ಆಗಬಾರದು. ಏಕೆಂದರೆ, ನಾವೆಲ್ಲ ಗೆದ್ದು ಬರುವುದು ಇಲ್ಲಿಗೋಸ್ಕರವೇ. ಒಂದು ಸಲವಾದರೂ ಎಂ.ಎಲ್.ಎ ಆಗಬೇಕೆಂದು ಬಹಳ ವರ್ಷಗಳ ಕನಸು ಕಾಣುತ್ತೇವೆ. ನಾನು law practice ಮಾಡುವಾಗ ಜೀವನದಲ್ಲಿ ಒಂದು ಸಲ ಎಂ.ಎಲ್.ಎ ಆದರೆ ಸಾಕು ಎಂದು ಅಂದುಕೊಂಡಿದ್ದೆ. ಆದರೆ ನಾನು ಏಳು ಸಲ ಎಂ.ಎಲ್.ಎ ಆದೆ. 1983ರಲ್ಲಿ ಮೊದಲನೇ ಸಲ ಎಂ.ಎಲ್.ಎ ಆದೆ. ಅದಕ್ಕೂ ಮೊದಲು 1978ರಲ್ಲಿ ತಾಲ್ಲೂಕು ಬೋರ್ಡ್ ಸದಸ್ಯನಾಗಿದ್ದೆ. ಹೀಗೆ ಸತತವಾಗಿ 40 ವರ್ಷಗಳಿಂದ ರಾಜಕೀಯದಲ್ಲಿದ್ದೇನೆ. ವಿರೋಧಪಕ್ಷದಲ್ಲಿ, ಆಡಳಿತ ಪಕ್ಷದಲ್ಲಿ, ಮಂತ್ರಿಯಾಗಿ, ಉಪಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಪ್ರಸ್ತುತ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದೇನೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಮುಖ್ಯಮಂತ್ರಿಯವರೇ, ಮುಂದಕ್ಕೆ ಏನಾಗುತ್ತೀರಿ?

**ಶ್ರೀ ಸಿದ್ದರಾಮಯ್ಯ:-** ಮುಂದೆಯೂ ಪುನಃ ಮುಖ್ಯಮಂತ್ರಿಯಾಗಿ ನಾನೇ ಬರುವುದು.

(ಸದನದಲ್ಲಿ ನಗು)

ನೋಡಪ್ಪಾ ಶರವಣ, ಏನೇ ತಿಪ್ಪರಲಾಗ ಹಾಕಿದರೂ ನಿಮ್ಮ ಪಕ್ಷ ಅಧಿಕಾರಕ್ಕೆ ಬರುವುದಿಲ್ಲ, ಸುಮ್ಮನೆ ಏಕೆ ಭ್ರಮೆ, ಕನಸುಗಳನ್ನು ಏಕೆ ಕಾಣುತ್ತೀರಿ? ಮಾನ್ಯ ಶ್ರೀಕಂಠೇಗೌಡರೇ, ನಿಮ್ಮ ಆತ್ಮವನ್ನು ಮುಟ್ಟಿಕೊಂಡು ಹೇಳಿ, ಮುಂದೆ ನೀವು ಅಧಿಕಾರಕ್ಕೆ ಬರುತ್ತೀರಾ?

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಮುಖ್ಯಮಂತ್ರಿಯವರೇ, ನಾವು 100% ಬರುತ್ತೇವೆ. 10 ವರ್ಷದಿಂದ ಇಬ್ಬರನ್ನೂ ನೋಡಿ ಆಗಿದೆ, ಮುಂಬರುವ ಚುನಾವಣೆಯಲ್ಲಿ ಜೆ.ಡಿ.ಎಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕೆಂದು ಜನರು ತೀರ್ಮಾನ ಮಾಡಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ನಾನು ಮಾನ್ಯ ಶ್ರೀಕಂಠೇಗೌಡರೆ, ನಿಮಗಿಂತ ಜಾಸ್ತಿ ರಾಜ್ಯವನ್ನು ಸುತ್ತಿದ್ದೇನೆ. ಮಾನ್ಯ ಹೆಚ್.ಡಿ. ದೇವೇಗೌಡರನ್ನು ಬಿಟ್ಟರೆ ನಾನು ರಾಜ್ಯವನ್ನು ಹೆಚ್ಚು ಸುತ್ತಿದ್ದೇನೆ. 1994ರಿಂದ ಸತತವಾಗಿ ರಾಜಕೀಯ ಪಕ್ಷಗಳಿಗೆ campaign ಮಾಡುತ್ತಿದ್ದೇನೆ. ಈ ರಾಜ್ಯದ ಜನರ ನಾಡಿಮಿಡಿತ ನನಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗೊತ್ತಿದೆ. ಮಂತ್ರಿಯಾಗಿ, ವಿರೋಧಪಕ್ಷದಲ್ಲಿದ್ದು ಎಲ್ಲವನ್ನೂ ನೋಡಿದ್ದೇನೆ, ಮುಖ್ಯಮಂತ್ರಿಯಾಗಿ ನೋಡಿದ್ದೇನೆ. ಜನರು ನಮ್ಮ ಪಕ್ಷವನ್ನೇ ಅಧಿಕಾರಕ್ಕೆ ತರಲು ತೀರ್ಮಾನ ಮಾಡಿದ್ದಾರೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಮುಖ್ಯಮಂತ್ರಿಯವರೇ, ಜನರು ಬದಲಾವಣೆ ಕೇಳುತ್ತಿದ್ದಾರೆ.

**ಶ್ರೀ ಸಿದ್ಧರಾಮಯ್ಯ:-** ಯಾವ ಬದಲಾವಣೆಯನ್ನು ಕೇಳುತ್ತಿದ್ದಾರೆ? ಮಾಜಿ ಮುಖ್ಯಮಂತ್ರಿಯಾದ ಶ್ರೀ ಕುಮಾರಸ್ವಾಮಿಯವರು 20 ತಿಂಗಳು ಅಧಿಕಾರದಲ್ಲಿ ಇದ್ದರಲ್ಲ ಯಾವ ಬದಲಾವಣೆಯನ್ನು ತಂದರು? ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾದ ನಂತರದ ಚುನಾವಣೆಯಲ್ಲಿ ಜೆ.ಡಿ.ಎಸ್. ಪಕ್ಷ 59 ಸ್ಥಾನಗಳಿಂದ 29 ಸ್ಥಾನಗಳಿಗೆ ಕುಸಿಯಿತು. ಬದಲಾವಣೆ ಹೇಗೆ ಬರುತ್ತದೆ? ಅವೆಲ್ಲಾ ಆಗುವುದಿಲ್ಲ.

**ಶ್ರೀ ಟಿ.ಎ. ಶರವಣ:-** ಮಾನ್ಯ ಮುಖ್ಯಮಂತ್ರಿಯವರೇ, . .

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ಅವರು ಏನಾದರೂ ಹೇಳಿಕೊಳ್ಳಲಿ, 100 ಕ್ಕೆ 100 ನಾವೇ ಅಧಿಕಾರಕ್ಕೆ ಬರುತ್ತೇವೆ. ಅದರ ಬಗ್ಗೆ ಅನುಮಾನವೇ ಇಲ್ಲ. ವಿರೋಧಪಕ್ಷದಲ್ಲಿದ್ದುಕೊಂಡು ನೀವೆಲ್ಲಾ ನಮ್ಮ ಮೇಲೆ ಬಹಳ ಪ್ರೀತಿ ತೋರಿಸಿದ್ದೀರಿ, ಅಭಿಮಾನ ತೋರಿಸಿದ್ದೀರಿ, ಸಹಕಾರವನ್ನು ಕೊಟ್ಟಿದ್ದೀರಿ. ಮುಂದೆಯು ಕೂಡ ನಮ್ಮ ಸಂಬಂಧ ಅದೇ ರೀತಿ ಇರಲಿ. ಚುನಾವಣೆಯಾದ ಮೇಲೆ ನಾವಿಲ್ಲಿ, ನೀವು ಅಲ್ಲಿಯೇ. ಅದನ್ನು ಮಾಡೋಣ, ಮುಂದುವರೆಯೋಣ ಎಂದು ಹೇಳಿ ತಮಗೆ, ಶ್ರೀ ಮರಿತಿಬ್ಬೇಗೌಡರಿಗೆ ಮತ್ತು ಎಲ್ಲಾ ಸದಸ್ಯರಿಗೆ ಧನ್ಯವಾದಗಳನ್ನು ಹೇಳುತ್ತೇನೆ, ಮತ್ತೆ ಮೇ ತಿಂಗಳಿನಲ್ಲಿ ಮುಖಾಮುಖಿಯಾಗೋಣ.

**ಸಭಾಪತಿಯವರು:-** ಧನ್ಯವಾದಗಳು.

280/23.02.2018/ಕೆಹೆಚ್/ಆರ್ಎನ್/6-50

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಹೇಳಿದ ನಂತರ ಎರಡು ವಿಚಾರಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ನಾನು ವಿಧಾನ ಪರಿಷತ್ತಿಗೆ ಬಂದಾಗಿನಿಂದ ಇಲ್ಲಿಯವರೆಗೂ 13 ಜನ ಮಾನ್ಯ ಮುಖ್ಯಮಂತ್ರಿಯವರನ್ನು ಮತ್ತು 10 ಜನ ಸಭಾಪತಿಯವರನ್ನು ನೋಡಿದ್ದೇನೆ. ತಮ್ಮಷ್ಟು ಹೆಚ್ಚು ಅವಧಿಯವರೆಗೂ ಯಾರು ಇಲ್ಲವೆಂದು ಅನಿಸುತ್ತದೆ. ಮಾನ್ಯ ಕಲ್ಮಣ್‌ಕರ್‌ರವರು ಸಭಾಪತಿಯಾಗಿ ಇದ್ದರು, ಆದರೆ ಅವರು ತಮ್ಮಗಿಂತ ಮೂರ್ನಾಲ್ಕು ವರ್ಷ ಕಡಿಮೆ ಇದ್ದರು. ನಂತರ ಮಾನ್ಯ ಡಿ.ಮಂಜುನಾಥ್ ರವರು ಇದ್ದರು. ಹೀಗಾಗಿ ಇಡೀ ದೇಶದಲ್ಲಿಯಲ್ಲಿಯೇ ಬಹಳ ಮಾದರಿಯಾದಂತಹ ಸದನವಾಗಿದ್ದು, ಇದರ ಬಗ್ಗೆ ಹೋದಲ್ಲೆಲ್ಲಾ ಮಾತನಾಡುತ್ತಿರುತ್ತೇವೆ. ಆ ರೀತಿ ಈ ಸದನವು ನಡೆದುಕೊಂಡು ಬಂದಿದೆ. ಮಾನ್ಯ ಮುಖ್ಯಮಂತ್ರಿಯವರು ಆಗ ಕಲಾಪಗಳು ನಡೆದ ಹಾಗೆ ಈಗ ಕಲಾಪಗಳು ನಡೆಯುವುದಿಲ್ಲ ಎಂದು ಹೇಳಿದರು. ನಾನು ವಿಧಾನ ಪರಿಷತ್ತಿಗೆ ಮೊದಲು ಬಂದಾಗ ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಗುಂಡುರಾವ್‌ರವರು ಮುಖ್ಯಮಂತ್ರಿಯಾಗಿದ್ದಾಗ ಎಸ್.ವೆಂಕಟರಾಮ್‌ರವರು ಸುಮಾರು ಮೂರೂವರೆ ತಾಸು ಮಾತನಾಡುತ್ತಿದ್ದರು. ಅದೇ ರೀತಿ ಮಾನ್ಯ ರಾಜ್‌ಗೋಪಾಲ್‌ರವರು ಮೂರು ತಾಸು ಮಾತನಾಡುತ್ತಿದ್ದರು. ಮಾನ್ಯ ಎ.ಕೆ.ಸುಬ್ಬಯ್ಯನವರು ಸಹ ಬಹಳಷ್ಟು ಸಮಯ ಮಾತನಾಡುತ್ತಿದ್ದರು. ಆ ಸಂದರ್ಭದಲ್ಲಿ ಈ ರೀತಿಯಾಗುತ್ತಿತ್ತು. ಇವತ್ತಿನ ದಿವಸ ಏನಾಗುತ್ತಿದೆ ಎಂದರೆ, ಸದನದಲ್ಲಿ 'ಧಿಕ್ಕಾರ' ಎಂದು ಕೂಗುವಂತಹ ಪರಿಸ್ಥಿತಿಯನ್ನು ನೋಡಿ ನನಗೆ ಬಹಳ ನೋವುಂಟಾಗುತ್ತದೆ. ಇದನ್ನು ಸದನದಲ್ಲಿ ಎಷ್ಟೋ ಬಾರಿ ಹೇಳಿದ್ದೇನೆ. ಈ ರೀತಿಯಲ್ಲಿ ತಾವು ಇಷ್ಟು ವರ್ಷದಿಂದ ಸದನವನ್ನು ನಡೆಸಿಕೊಂಡು ಬಂದಿದ್ದೀರಿ. ಆ ಪೀಠದಲ್ಲಿ ಕುಳಿತುಕೊಂಡವರ ಪರಿಸ್ಥಿತಿ ಎಷ್ಟು ಕಷ್ಟವೆಂದು ನನಗೆ ಗೊತ್ತಿದೆ. ಏಕೆಂದರೆ ಆಡಳಿತ ಪಕ್ಷದ ಪರವಾಗಿ ಮಾತನಾಡಿದಾಗ ವಿರೋಧ ಪಕ್ಷದವರು ದೂರುತ್ತಾರೆ; ವಿರೋಧ ಪಕ್ಷದ ಪರವಾಗಿ ಮಾತನಾಡಿದಾಗ ಆಡಳಿತ ಪಕ್ಷದವರು ದೂರುತ್ತಾರೆ. ಆದ್ದರಿಂದ ಇದು ಬಹಳ ಕಷ್ಟದ ಕೆಲಸವಾಗುತ್ತದೆ. ಆದರೂ ಸಹ ಎಲ್ಲಾ ರೀತಿಯಿಂದ ಮಾನ್ಯ ಸದಸ್ಯರುಗಳಿಗೆ ಅವಕಾಶವನ್ನು ಕೊಟ್ಟಿದ್ದೀರಿ. ಕೆಲವೊಮ್ಮೆ ಅವಕಾಶವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದರಿಂದ ಒಂದೊಂದು ಬಾರಿ ತಪ್ಪು ಕಲ್ಪನೆಗಳು ಮೂಡುತ್ತದೆ. ಈ ಎಲ್ಲಾ ವಿಷಯದಲ್ಲೂ ಕೂಡ ತಾವು 8 ವರ್ಷಗಳ ಕಾಲ ಸದನವನ್ನು ನಡೆಸಿಕೊಂಡು ಬಂದಿದ್ದೀರಿ. ತಾವು ಎಲ್ಲಾ ಅವಕಾಶವನ್ನು ಪಡೆದುಕೊಂಡಿದ್ದೀರಿ. ಮಾನ್ಯ ವಿರೋಧ ಪಕ್ಷದ ನಾಯಕರಾಗಿ ಮತ್ತು ಮಾನ್ಯ ಸಭಾನಾಯಕರಾಗಿ ಕೆಲಸವನ್ನು ನಿರ್ವಹಿಸಿದ್ದೀರಿ ಹಾಗೂ ಈಗ ಸಭಾಪತಿಯಾಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೀರಿ. ಸಚಿವರಾಗಿ ಸಹ ಕೆಲಸವನ್ನು ನಿರ್ವಹಿಸಿದ್ದೀರಿ. ಜೀವನದಲ್ಲಿ ಇಂತಹ ಅವಕಾಶಗಳು ಎಲ್ಲರಿಗೂ ಸಿಗುವುದಿಲ್ಲ. ಅಂತಹ ಅವಕಾಶಗಳು ತಮಗೆ ದೊರತಿರುವುದಕ್ಕೆ ಇಡೀ ಸಮಾಜಕ್ಕೆ, ಸದನಕ್ಕೆ ಮತ್ತು ರಾಜ್ಯಕ್ಕೆ ಒಳ್ಳೆಯ ಮಾಹಿತಿಯನ್ನು, ಒಳ್ಳೆಯ ಭವಿಷ್ಯ ನಿರ್ಮಾಣಕ್ಕಾಗಿ ಸಲಹೆ ಸೂಚನೆಗಳನ್ನು ಕೊಡುವಂತಹ ಎಲ್ಲಾ ಯೋಗ್ಯತೆಯನ್ನು ತಾವು ಕಂಡುಕೊಂಡಿದ್ದೀರಿ. ಮಾನ್ಯ ಮುಖ್ಯಮಂತ್ರಿಯವರು ತಮ್ಮ ಬಗ್ಗೆ ಹಲವು ವಿಚಾರಗಳನ್ನು ಹೇಳಿದ್ದಾರೆ. ಇದು ನನ್ನ ಕಡೆಯ ಚುನಾವಣೆ. ಬರುವ ದಿನಗಳಲ್ಲಿ ನಾನು ಚುನಾವಣೆಯಲ್ಲಿ ನಿಲ್ಲುವುದಿಲ್ಲ ಎಂದು ತಾವು ಹೇಳಿದ್ದೀರಿ. ಆ ಹಿನ್ನೆಲೆಯಲ್ಲಿ ಬರುವಂತಹ ದಿನಗಳಲ್ಲಿ ಸಹ ತಮಗೆ ಆ ದೇವರು ಒಳ್ಳೆಯದನ್ನು ಮಾಡಲಿ. ಇಲ್ಲಿಯವರೆಗೆ ತಾವು ಎಲ್ಲರಿಗೂ ಎಲ್ಲಾ ರೀತಿಯಲ್ಲಿಯೂ ಮಾರ್ಗದರ್ಶನವನ್ನು ನೀಡಿದ್ದೀರಿ. ತಾವು ಕೊಟ್ಟಿರುವ ಮಾರ್ಗದರ್ಶನ ಮತ್ತು ಸಲಹೆ-ಸೂಚನೆಗಳಿಗೆ ಹಾಗೂ ತಾವು ಕೊಟ್ಟಿರುವಂತಹ ಅನೇಕ ಅನುಭವಗಳಿಗೆ ನಾವೆಲ್ಲಾ ಸದಸ್ಯರುಗಳು ಋಣಿಯಾಗಿದ್ದೇವೆ ಎಂದು ಇಡೀ ಸದನದ ಪರವಾಗಿ ಶುಭವನ್ನು ಕೋರಿ, ನನ್ನ ಮಾತನ್ನು ಮುಗಿಸುತ್ತೇನೆ.

**(ಈ ಹಂತದಲ್ಲಿ ಎಲ್ಲಾ ಸದಸ್ಯರುಗಳು ಮೇಜನ್ನು ಕುಟ್ಟಿ ಹರ್ಷವನ್ನು ವ್ಯಕ್ತಪಡಿಸಿದರು)**

**ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಈ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ, ನಂತರ 4ನೇ ಅಂಗದವರು ಈ ಪತ್ರಿಕೆಯವರು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇವರೆಲ್ಲರೂ ಪರಸ್ಪರ ಪೂರಕವಾಗಿ ಕೆಲಸವನ್ನು ಮಾಡಿದಾಗಲೇ ಪ್ರಜಾಪ್ರಭುತ್ವ ಯಶಸ್ವಿಯನ್ನು ಕಾಣುವುದಕ್ಕೆ ಸಾಧ್ಯವಾಗುತ್ತದೆ. ಶಾಸಕಾಂಗದಲ್ಲಿ ತಾವು ಕೆಲಸ ಮಾಡುವಂತಹವರು, ಕಾರ್ಯದರ್ಶಿಯವರಿಂದ ಹಿಡಿದು ಎಲ್ಲಾ ಕೆಲಸ ಮಾಡುವಂತಹವರು ಮತ್ತು ಎಲ್ಲಾ ಅಧಿಕಾರಿಗಳು, ಮಾಧ್ಯಮದವರು ಇವರೆಲ್ಲರೂ ಕೂಡ ನಮಗೆ ಸಹಕಾರವನ್ನು ಕೊಟ್ಟಿದ್ದಾರೆ. ಎಲ್ಲಾ ಅಧಿಕಾರಿಗಳಿಗೆ, ಮಾಧ್ಯಮದವರಿಗೆ, ವಿಧಾನ ಪರಿಷತ್ತಿನ ಸಚಿವಾಲಯದ ಎಲ್ಲಾ ಅಧಿಕಾರಿಗಳಿಗೆ ಇವರೆಲ್ಲರಿಗೂ ಧನ್ಯವಾದಗಳನ್ನು ಹೇಳುವುದಕ್ಕೆ ಬಯಸುತ್ತೇನೆ.

**ಸಭಾಪತಿಯವರು:-** ಧನ್ಯವಾದಗಳು.

**(ರಾಷ್ಟ್ರಗೀತೆಯೊಂದಿಗೆ ಸದನವು ಸಂಜೆ 6 ಗಂಟೆ 54 ನಿಮಿಷಕ್ಕೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟಿತು)**

- - - - - -

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"